ಶನಿವಾರ, ಆಗಸ್ಟ್ 13, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 224 | ಪುಟ 28
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ದುಡಿಯಬೇಕೆಂಬ ಛಲವಿರುವ ಹೆಣ್ಣುಮಕ್ಕಳ ರಟ್ಟೆಗೆ ಶಕ್ತಿ ತುಂಬುತ್ತಿದೆ ಬಾಗಲಕೋಟೆಯ ಚಾಮುಂಡೇಶ್ವರಿ ಮಹಿಳಾ ಒಕ್ಕೂಟ



ಚರ್ಚೆ ರಾಜಕೀಯ ಪಕ್ಷಗಳು ಉಚಿತ ಕೊಡುಗೆಗಳ ಭರವಸೆ ಕೊಡುವುದು ಸರಿಯೇ?

ಕೇರಳ: 'ಆಜಾದ್ ಕಾಶ್ಮೀರ' ಹೇಳಿಕೆ ವಿವಾದ 10

'ಪ್ರಧಾನಿ ಹುದ್ದೆ ಆಕಾಂಕ್ಷಿಯಲ್ಲ' 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
59,462 ▲	17,698 ▲	₹54,150 (ಬೆಂಗಳೂರು)	₹60,100 (ಬೆಂಗಳೂರು)	79.74 ▼

ಸಾಹಿತ್ಯ ಅಕಾಡೆಮಿ ಮಾಜಿ ಅಧ್ಯಕ್ಷ ಪ್ರೊ. ಎಂ.ಎಚ್. ಕೃಷ್ಣಯ್ಯ ನಿಧನ



ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಜಿ ಅಧ್ಯಕ್ಷರೂ ಆಗಿದ್ದ ವಿಮರ್ಶಕ ಪ್ರೊ. ಎಂ.ಎಚ್. ಕೃಷ್ಣಯ್ಯ (85) ಅವರು ಶುಕ್ರವಾರ ನಿಧನರಾದರು.

ಗಾಯತ್ರಿನಗರದ ಹರಿಶ್ಚಂದ್ರ ಘಾಟ್‌ನಲ್ಲಿ ಶನಿವಾರ (ಆಗಸ್ಟ್ 13) ಬೆಳಿಗ್ಗೆ 11 ಗಂಟೆಗೆ ಅಂತ್ಯಕ್ರಿಯೆ ನಡೆಸಲಾಗುವುದು ಎಂದು ಅವರ ಕುಟುಂಬದವರು ತಿಳಿಸಿದ್ದಾರೆ.

6ನೇ ಪುಟ ನೋಡಿ

ವಾಣಿಜ್ಯ ಉದ್ದೇಶಕ್ಕೆ ಬಳಸಿದರೆ ಶುಲ್ಕ: ರಾಜ್ಯ ಜಲನೀತಿ 2022ಕ್ಕೆ ಒಪ್ಪಿಗೆ

ಅಂತರ್ಜಲ ಬಳಕೆಗೆ ಮೀಟರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೈಗಾರಿಕೆ ಮತ್ತು ವಾಣಿಜ್ಯ ಉದ್ದೇಶಕ್ಕಾಗಿ ಅಂತರ್ಜಲ ಬಳಸಿದರೆ ಮೀಟರ್ ಆಧಾರಿತ ನೀರಿನ ಶುಲ್ಕ ವಿಧಿಸಲು ರಾಜ್ಯ ಸರ್ಕಾರ ಮುಂದಾಗಿದೆ.

ಶುಕ್ರವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ 'ರಾಜ್ಯ ಜಲನೀತಿ–2022'ಕ್ಕೆ ಒಪ್ಪಿಗೆ ನೀಡಲಾಗಿದೆ. ವಾಣಿಜ್ಯ ಉದ್ದೇಶ ಹಾಗೂ ಕೃಷಿಗೆ ಅಂತರ್ಜಲ ಬಳಕೆ ಕಡಿಮೆ ಮಾಡುವುದು, ಕುಡಿಯುವ ನೀರಿನ ಪೂರೈಕೆಗೆ ಆದ್ಯತೆ ನೀಡುವುದು ಹಾಗೂ ನೀರಿನ ಸಮರ್ಪಕ ಬಳಕೆ ಬಗ್ಗೆ ಜಾಗೃತಿ ಮೂಡಿಸುವುದು ಜಲನೀತಿಯ ಆಶಯವಾಗಿದೆ.

ಜಲಸಂಪನ್ಮೂಲ ನಿರ್ವಹಣೆ ಬಲಪಡಿಸಲು ಅಂತರ್ ವಿಭಾಗೀಯ ಪ್ರಾಧಿಕಾರ ರಚಿಸಲು ಸರ್ಕಾರ ಉದ್ದೇಶಿಸಿದೆ. ಸಚಿವ ಸಂಪುಟ ಸಭೆಯ ಬಳಿಕ ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಅವರು ಸುದ್ದಿಗೋಷ್ಠಿಯಲ್ಲಿ ಈ ಕುರಿತು ವಿವರ ನೀಡಿದರು.

ಜಲನೀತಿಯ ಪ್ರಮುಖ ಅಂಶಗಳು: ವೇಗವಾಗಿ ಬೆಳೆಯುತ್ತಿರುವ ಬೆಂಗಳೂರು ಮತ್ತು ಇತರ ನಗರ ಪ್ರದೇಶಗಳಿಗೆ ಕುಡಿಯುವ ನೀರನ್ನು ಒದಗಿಸುವ ಕಾರ್ಯಕ್ಕೆ ಹೊರಗಿನ, ಸ್ಥಳೀಯ ನೀರು, ಮೇಲ್ಮೈ ಮತ್ತು ಅಂತರ್ಜಲ, ಮೇಲ್ಭಾವಣಿ ಹಾಗೂ ತ್ಯಾಜ್ಯ ನೀರಿನ ನಿರ್ವಹಣೆಗೆ ಆದ್ಯತೆ.

6ನೇ ಪುಟ ನೋಡಿ

ಮುಂದೂಡಿದ ವಿಷಯಕ್ಕೆ ಒಪ್ಪಿಗೆ ಎಂದ ಮಾಧುಸ್ವಾಮಿ

'ಅಭಿವೃದ್ಧಿ ಆಕಾಂಕ್ಷಿ ತಾಲ್ಲೂಕು ಯೋಜನೆ'ಯ ವಿಷಯವನ್ನು ಸಚಿವ ಸಂಪುಟ ಸಭೆಯಲ್ಲಿ ಮುಂದೂಡಿದ್ದರೂ ಅನುಮೋದನೆ ನೀಡಿದ ಮಹತ್ವದ ಯೋಜನೆ ಎಂದು ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಅವರು ವಿವರಿಸಿದ ಘಟನೆ ನಡೆದಿದೆ.

'₹3,000 ಕೋಟಿ ವೆಚ್ಚದಲ್ಲಿ ಯೋಜನೆ'ಯನ್ನು ಜಾರಿ ಮಾಡಲು ಒಪ್ಪಿಗೆ ನೀಡಲಾಗಿದೆ. ನೀತಿ ಆಯೋಗ ಸೂಚಿಸಿರುವ 49 ಸೂಚಕಗಳನ್ನು ಅಳವಡಿಸಿ ಜಾರಿ ಮಾಡಲಾಗುವುದು. 93 ತಾಲ್ಲೂಕುಗಳಲ್ಲಿ ಶಿಕ್ಷಣ ಗುಣಮಟ್ಟ ವೃದ್ಧಿಸಲು, 100 ತಾಲ್ಲೂಕುಗಳಲ್ಲಿ ಆರೋಗ್ಯ ಸೇವೆಯನ್ನು ಬಲಪಡಿಸಲು ಮತ್ತು 102 ತಾಲ್ಲೂಕುಗಳಲ್ಲಿ ಮಕ್ಕಳ ಅಪೌಷ್ಟಿಕತೆ ನಿವಾರಿಸುವ ಯೋಜನೆ ಇದಾಗಿದೆ' ಎಂದು ಅವರು ಹೇಳಿದ್ದರು.

'ಸಭೆಯಲ್ಲಿ ಈ ವಿಷಯ ಮಂಡನೆಯಾದಾಗ ಇನ್ನಷ್ಟು ಮಾಹಿತಿ ಕೇಳಿದ ಮುಖ್ಯಮಂತ್ರಿ ಬೊಮ್ಮಾಯಿ ಅವರು ಮುಂದಿನ ಸಂಪುಟ ಸಭೆಯಲ್ಲಿ ಇದನ್ನು ತೆಗೆದುಕೊಳ್ಳೋಣ ಎಂದು ಸೂಚನೆ ನೀಡಿ, ಮುಂದೂಡಿದರು' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

₹40 ಸಾವಿರ ಕೋಟಿ ಹೂಡಿಕೆ

'ಕರ್ನಾಟಕ ಏರೋಸ್ಪೇಸ್ ಮತ್ತು ಡಿಫೆನ್ಸ್ ನೀತಿ–2022–27' ಕ್ಕೆ ಸಂಪುಟ ಒಪ್ಪಿಗೆ ನೀಡಿದೆ. ಇದರಿಂದ ಈ ಅವಧಿಯಲ್ಲಿ ₹40 ಸಾವಿರ ಕೋಟಿ ಬಂಡವಾಳ ಹೂಡಿಕೆ ಆಗಲಿದೆ. ರಕ್ಷಣಾ ಉಪಕರಣಗಳು, ಯುದ್ಧ ವಿಮಾನಗಳು, ರಕ್ಷಣಾ ತಂತ್ರಜ್ಞಾನ, ಬಾಹ್ಯಾಕಾಶ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಬಂಡವಾಳ ತೊಡಗಿಸುವವರಿಗೆ ಹಲವು ಬಗೆಯ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನೂ ಈ ನೀತಿಯಲ್ಲಿ ಪ್ರಕಟಿಸಲಾಗಿದೆ.


ಭಾರತದ ಶೇ 25 ರಷ್ಟು ವಿಮಾನ ಮತ್ತು ಬಾಹ್ಯಾಕಾಶ ನೌಕೆ ಉದ್ಯಮವು ಕರ್ನಾಟಕದಲ್ಲಿ ನೆಲೆಗೊಂಡಿದೆ. ರಕ್ಷಣಾ ಸೇವೆಗಳಿಗಾಗಿ ಎಲ್ಲ ವಿಮಾನಗಳು ಮತ್ತು ಹೆಲಿಕಾಪ್ಟರ್‌ಗಳ ಉತ್ಪಾದನೆ ಶೇ 67 ರಷ್ಟು ಇದ್ದು, ಅದನ್ನು ಇನ್ನೂ ಹೆಚ್ಚಿಸಲಾಗುವುದು. ಏರೋಸ್ಪೇಸ್ ಸಂಬಂಧಿತ ರಫ್ತಿನಲ್ಲಿ ಕರ್ನಾಟಕದ ಪಾಲು ಶೇ 65 ಇದ್ದು, ಆ ಪ್ರಮಾಣ ಹೆಚ್ಚಿಸಲಾಗುವುದು.

ಚಿನಕುರಳಿ

ಪ್ರಕಾಶ್ ಶೆಟ್ಟಿ



ವೇದಿಕೆಯಲ್ಲೇ ಸಲ್ಮಾನ್ ರಶ್ದಿಗೆ ಇರಿತ


ಸಲ್ಮಾನ್ ರಶ್ದಿ

ಷಟೌಕ್ವಾ (ಅಮೆರಿಕ): ಪಶ್ಚಿಮ ನ್ಯೂಯಾರ್ಕ್‌ನಲ್ಲಿ ಶುಕ್ರವಾರ ಆಯೋಜಿಸಿದ್ದ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಂಡಿದ್ದ ಖ್ಯಾತ ಲೇಖಕ ಸಲ್ಮಾನ್ ರಶ್ದಿ ಅವರಿಗೆ ಅಪರಿಚಿತ ವ್ಯಕ್ತಿಯೊಬ್ಬ ಚಾಕುವಿನಿಂದ ಇರಿದಿದ್ದಾನೆ.

ಷಟೌಕ್ವಾ ಇನ್‌ಸ್ಟಿಟ್ಯೂಟ್ ಆಯೋಜಿಸಿದ್ದ ಕಲೆ ಮತ್ತು ಸಾಹಿತ್ಯದ ಕಾರ್ಯಕ್ರಮದಲ್ಲಿ ಬೆಳಿಗ್ಗೆ 11 ಗಂಟೆಗೆ ಆಯೋಜಕರು ರಶ್ದಿ ಅವರನ್ನು ಭಾಷಣಕ್ಕೆ ಆಹ್ವಾನಿಸಿದರು. ರಶ್ದಿ ಅವರು ಕುರ್ಚಿಯ ಮೇಲೆ ಕುಳಿತುಕೊಳ್ಳುತ್ತಿದ್ದಂತೆಯೇ ವೇದಿಕೆಗೆ ನುಗ್ಗಿದ ಅಪರಿಚಿತ ವ್ಯಕ್ತಿ ಅವರಿಗೆ ಚಾಕುವಿನಿಂದ ಇರಿದನು. ತಕ್ಷಣವೇ ರಶ್ದಿ ನೆಲಕ್ಕೆ ಕುಸಿದುಬಿದ್ದರು. ಹಲ್ಲೆಕೋರನನ್ನು ಬಂಧಿಸಲಾಗಿದೆ.

ರಶ್ದಿ ಅವರ ಕುತ್ತಿಗೆಯ ಬಲಭಾಗ ಸೇರಿದಂತೆ ಹಲವೆಡೆ ಇರಿಯಲಾಗಿದೆ. ತಕ್ಷಣವೇ ಅವರನ್ನು ಹೆಲಿಕಾಪ್ಟರ್ ಮೂಲಕ ಸ್ಥಳೀಯ ಆಸ್ಪತ್ರೆಗೆ ಕರೆದೊಯ್ಯಲಾಯಿತು.

ಹಲವು ಬಾರಿ ಇರಿತ: 'ಸಲ್ಮಾನ್ ರಶ್ದಿ ಅವರಿಗೆ ಕುತ್ತಿಗೆ ಬಲಭಾಗವೂ ಸೇರಿದಂತೆ ಹಲವು ಬಾರಿ ಚಾಕುವಿನಿಂದ ಇರಿತದಿಂದಾದ ಗಾಯಗಳಾಗಿದ್ದು, ದಾಳಿ ನಡೆದ ನಂತರ ಅವರು ರಕ್ತದ ಮಡುವಿನಲ್ಲಿ ಬಿದ್ದಿದ್ದರು' ಎಂದು ಅವರಿಗೆ ಚಿಕಿತ್ಸೆ ನೀಡಲು ಸಹಾಯ ಮಾಡಿರುವ ವೈದ್ಯೆ ರೀಟಾ ಲ್ಯಾಂಡ್‌ಮ್ಯಾನ್ ಹೇಳಿದ್ದಾರೆ.

3Dನೇ ಪುಟ ನೋಡಿ

ಜುಲೈನಲ್ಲಿ ತಗ್ಗಿದ ಹಣದುಬ್ಬರ

ನವದೆಹಲಿ (ಪಿಟಿಐ): ಜುಲೈ ತಿಂಗಳಿನಲ್ಲಿ ದೇಶದಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇಕಡ 6.71ಕ್ಕೆ ಇಳಿಕೆಯಾಗಿದೆ. ಜೂನ್‌ನಲ್ಲಿ ಇದು ಶೇ 7.01ರಷ್ಟು ಇತ್ತು.

ಆಹಾರ ವಸ್ತುಗಳ ಬೆಲೆಯು ತಗ್ಗಿದ ಪರಿಣಾಮವಾಗಿ ಹಣದುಬ್ಬರ ಪ್ರಮಾಣವು ತುಸು ಇಳಿಕೆ ಕಂಡಿದೆ. ಹೀಗಿದ್ದರೂ, ಜುಲೈನಲ್ಲಿ ದಾಖಲಾಗಿರುವ ಪ್ರಮಾಣವು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ನಿಗದಿ ಮಾಡಿಕೊಂಡಿರುವ ಗರಿಷ್ಠ ಮಿತಿಗಿಂತ (ಶೇ 6) ಹೆಚ್ಚು.

ತರಕಾರಿ ಮತ್ತು ಅಡುಗೆ ಎಣ್ಣೆಗಳು ಸೇರಿದಂತೆ ಹಲವು ಉತ್ಪನ್ನಗಳ ಬೆಲೆಯಲ್ಲಿ ಇಳಿಕೆಯಾಗಿದ್ದರೂ, ಚಿಲ್ಲರೆ ಹಣದುಬ್ಬರ ದರವು ಗರಿಷ್ಠ ಮಟ್ಟಕ್ಕಿಂತ ಮೇಲೆಯೇ ಇರುವ ಕಾರಣ ಆರ್‌ಬಿಐ ರೆಪೊ ದರವನ್ನು ಇನ್ನಷ್ಟು ಹೆಚ್ಚಿಸುವ ಸಾಧ್ಯತೆ ಇದೆ. ಚಿಲ್ಲರೆ ಹಣದುಬ್ಬರ ದರವು ಹಿಂದಿನ ವರ್ಷದ ಜುಲೈನಲ್ಲಿ ಶೇ 5.59ರಷ್ಟು ಇತ್ತು.

> **ಮುಂದಿನ ಹಣಕಾಸು ನೀತಿ ಸಮಿತಿ ಸಭೆಯಲ್ಲಿ ಆರ್‌ಬಿಐ, ರೆಪೊ ದರವನ್ನು ಶೇ 0.10ರಿಂದ ಶೇ 0.35ರವರೆಗೆ ಹೆಚ್ಚಿಸುವ ಸಾಧ್ಯತೆ ಇದೆ**
> **ಅದಿತಿ ನಯ್ಯರ್,** ಐಸಿಆರ್‌ಎ ಸಂಸ್ಥೆಯ ಮುಖ್ಯ ಅರ್ಥಶಾಸ್ತ್ರಜ್ಞೆ

ಪಟ್ಟಿ 11

‘ಬಿಡಿಎ ಸರ್ಕಾರದ ಇಲಾಖೆ ಅಲ್ಲ’

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಕರ್ನಾಟಕ ಸರ್ಕಾರದ ಇಲಾಖೆ ಅಲ್ಲ. ಹಾಗಾಗಿ, ಬೆಂಗಳೂರಿನಲ್ಲಿ ಡಾ.ಶಿವರಾಮ ಕಾರಂತ ಬಡಾವಣೆಗೆ ಟೆಂಡರ್ ಅಧಿಸೂಚನೆ ಹೊರಡಿಸಲು ರಾಜ್ಯ ಸರ್ಕಾರದ ಆಡಳಿತಾತ್ಮಕ ಅನುಮೋದನೆ ಪಡೆಯುವ ಅಗತ್ಯ ಇಲ್ಲ ಎಂದು ಸುಪ್ರೀಂ ಕೋರ್ಟ್ ಘೋಷಿಸಿದೆ.

ಬಡಾವಣೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡಿರುವ ಸಂಪೂರ್ಣ ಭೂಮಿಗೆ ಆರು ವಾರಗಳ ಒಳಗೆ ಅರ್ಹತಾ ಪ್ರಮಾಣಪತ್ರಗಳನ್ನು ಪ್ರಾಧಿಕಾರ ನೀಡಬೇಕು ಎಂದು ನಿರ್ದೇಶನ ನೀಡಿರುವ ನ್ಯಾಯಪೀಠವು, ಒಂದು ವೇಳೆ ಈ ಬಗ್ಗೆ ಕ್ರಮ ಕೈಗೊಳ್ಳದಿದ್ದರೆ ಗಂಭೀರ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದೆ.

ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳಾದ ಅಬ್ದುಲ್ ಎಸ್.ನಜೀರ್ ಹಾಗೂ ಸಂಜೀವ್ ಖನ್ನಾ ಅವರನ್ನು ಒಳಗೊಂಡ ಪೀಠವು, ‘ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಕಾಯ್ದೆ 1976ರ ಸೆಕ್ಷನ್ 3 ಅಡಿಯಲ್ಲಿ ಪ್ರಾಧಿಕಾರವನ್ನು ರಚಿಸಲಾಗಿದೆ. ಇದು ಶಾಶ್ವತ ಉತ್ತರಾಧಿಕಾರ ಹೊಂದಿರುವ ಸಂಸ್ಥೆ. ಪ್ರಾಧಿಕಾರವು ಭೂ ಸ್ವಾಧೀನ ಮಾಡುವ, ವಿಲೇವಾರಿ ಮಾಡುವ ಅಧಿಕಾರ ಹೊಂದಿದೆ. ಅಲ್ಲದೆ, ಕಾಯ್ದೆಯಡಿ ಮಂಜೂರಾದ ಯೋಜನೆಗಳನ್ನು ಕಾರ್ಯಗತ ಮಾಡುವ ಅಧಿಕಾರವನ್ನು ಪ್ರಾಧಿಕಾರ ಹೊಂದಿದೆ’ ಎಂದು ಹೇಳಿದೆ.

ಟೆಂಡರ್ ಅಧಿಸೂಚನೆ ಹೊರಡಿಸಲು ರಾಜ್ಯ ಸರ್ಕಾರದ ಆಡಳಿತಾತ್ಮಕ ಅನುಮೋದನೆಗಾಗಿ ಪ್ರಾಧಿಕಾರವು ಪ್ರಸ್ತಾವನೆ ಸಲ್ಲಿಸುವುದು ಅನಗತ್ಯ. ಇಂತಹ ಪ್ರಸ್ತಾವನೆಗಳಿಗೆಅನುಮೋದನೆ ನೀಡುವುದು ಸರ್ಕಾರಕ್ಕೆ ಕೂಡಾ ಕಾನೂನಾತ್ಮಕವಾಗಿ ಕಡ್ಡಾಯ ಅಲ್ಲ ಎಂದು ಪೀಠ ಅಭಿಪ್ರಾಯಪಟ್ಟಿದೆ.

ಶಿವರಾಮ ಕಾರಂತ ಬಡಾವಣೆಯನ್ನು 17 ವಿವಿಧ ಗ್ರಾಮಗಳ ಸರ್ವೆ ನಂಬರ್‌ಗಳಲ್ಲಿ ಪರಿಷ್ಕೃತ ಅಂದಾಜು ವೆಚ್ಚದಲ್ಲಿ ರಚಿಸುವ ಯೋಜನೆಗೆ ರಾಜ್ಯ ಸರ್ಕಾರ ಜುಲೈ 8ರಂದು ಅನುಮೋದನೆ ನೀಡಿತ್ತು. ಒಟ್ಟು 3,546 ಎಕರೆ 12 ಗುಂಟೆಯಲ್ಲಿ ಬಡಾವಣೆ ರಚಿಸಲು ₹5,337 ಕೋಟಿ ಮೊತ್ತದ ಪರಿಷ್ಕೃತ ಅಂದಾಜಿಗೆ ಅನುಮೋದನೆ ನೀಡಲಾಗಿತ್ತು. ಈ ಯೋಜನೆಗೆ ಸರ್ಕಾರದ ಅನುಮೋದನೆಯ ಅಗತ್ಯ ಇಲ್ಲ ಎಂದೂ ಕೋರ್ಟ್ ಹೇಳಿದೆ.

‘231 ಕಟ್ಟಡಗಳನ್ನು ಸಕ್ರಮಗೊಳಿಸಿ’

ಬಡಾವಣೆಯೊಳಗೆ ಸಂಪರ್ಕ ಕಲ್ಪಿಸಲು ನಾಲ್ಕು ವಾರಗಳೊಳಗೆ 47 ಎಕರೆ 1.5 ಗುಂಟೆ ಜಾಗವನ್ನು ಸ್ವಾಧೀನಪಡಿಸಿಕೊಳ್ಳಬೇಕು ಎಂಬುದಾಗಿ ಪ್ರಾಧಿಕಾರಕ್ಕೆ ಸುಪ್ರೀಂ ಕೋರ್ಟ್ ಸೂಚಿಸಿತು.



ನಿವೃತ್ತ ನ್ಯಾಯಮೂರ್ತಿ ಎ.ವಿ. ಚಂದ್ರಶೇಖರ್ ಸಮಿತಿಯ ಶಿಫಾರಸಿನ ಮೇರೆಗೆ 231 ಕಟ್ಟಡಗಳನ್ನು ಸಕ್ರಮಗೊಳಿಸುವಂತೆ ಪೀಠ ಆದೇಶಿಸಿದೆ. ಸಮಿತಿಯ 19ನೇ ವರದಿಯನ್ನು ನ್ಯಾಯಾಲಯಕ್ಕೆ ವಕೀಲ ಸಂಜಯ್ ಎಂ. ನುಲಿ ಸಲ್ಲಿಸಿದರು.

ಪ್ರಾಧಿಕಾರವು ಯಾವ ನಿಯಮದಡಿ ಬಡಾವಣೆ ನಿರ್ಮಾಣ ಮಾಡಲು ಅನುಮೋದನೆ ಪಡೆಯಬೇಕು ಹಾಗೂ ಅಂತಹ ಪ್ರಸ್ತಾವನೆಗಳಿಗೆ ಅನುಮೋದನೆ ನೀಡಲು ಸರ್ಕಾರಕ್ಕೆ ಇರುವ ಶಾಸನಬದ್ಧ ಅಧಿಕಾರ ವ್ಯಾಪ್ತಿ ಬಗ್ಗೆ ವಿವರಣೆ ನೀಡುವಂತೆ ಕರ್ನಾಟಕ ಸರ್ಕಾರ ಹಾಗೂ ಬಿಡಿಎ ಪರ ವಕೀಲರಿಗೆ ಸುಪ್ರೀಂ ಕೋರ್ಟ್ ಜುಲೈ 28ರಂದು ಸೂಚನೆ ನೀಡಿತ್ತು. ಈ ಬಗ್ಗೆ ಸರ್ಕಾರ ಹಾಗೂ ಬಿಡಿಎ ವಕೀಲರು ಪ್ರತಿಕ್ರಿಯೆ ನೀಡಿದ್ದರು. ಆದರೆ, ಸರ್ಕಾರಕ್ಕೆ ಇರುವ ಶಾಸನಬದ್ಧ ಅಧಿಕಾರದ ಬಗ್ಗೆ ಪ್ರತಿಕ್ರಿಯೆ ನೀಡಿಲ್ಲ ಎಂಬುದನ್ನು ಪೀಠವು ಗಮನಿಸಿತು.

ಶಿವರಾಮ ಕಾರಂತ ಬಡಾವಣೆ ನಿರ್ಮಾಣಕ್ಕೆ ಸಂಬಂಧಿಸಿದಂತೆ 2018ಕ್ಕೆ ಸುಪ್ರೀಂ ಕೋರ್ಟ್ ನೀಡಿರುವ ಆದೇಶದ ಪಾಲನಾ ವರದಿಯನ್ನು ಪರಿಶೀಲಿಸಿದ ನ್ಯಾಯಪೀಠವು, ವಿವಿಧ ಬಡಾವಣೆಗಳಲ್ಲಿ 96 ಪರ್ಯಾಯ ನಿವೇಶನಗಳ ಹಂಚಿಕೆಗೆ ಸಂಬಂಧಿಸಿದ ಸಂಪೂರ್ಣ ವಿವರಗಳನ್ನು ನೀಡುವಂತೆ ಬಿಡಿಎಗೆ ಸೂಚಿಸಿತು.

ಆಗಸ್ಟ್ 8ರಂದು ಸಲ್ಲಿಸಿದ ವರದಿಯನ್ನು ಪರಿಶೀಲಿಸಿದ ನಂತರ ಪೀಠವು, ಈವರೆಗೆ ಕೇವಲ 53 ಸ್ವಾಧೀನ ಪ್ರಮಾಣಪತ್ರಗಳನ್ನು ನೀಡಲಾಗಿದೆ. ಸ್ವಾಧೀನಪಡಿಸಿಕೊಂಡ ಸಂಪೂರ್ಣ ಭೂಮಿಗೆ ಆರು ವಾರಗಳೊಳಗೆ ಅರ್ಹತಾ ಪ್ರಮಾಣಪತ್ರಗಳನ್ನು ನೀಡಬೇಕು ಎಂದೂ ನಿರ್ದೇಶನ ನೀಡಿತು.

ಪಿಇಎಸ್ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಗಳ ಜತೆ ವಿದೇಶಾಂಗ ಸಚಿವರ ಸಂವಾದ

‘ದೇಶದ ಹಿತಾಸಕ್ತಿಗೆ ತಕ್ಕಂತೆ ನಿರ್ಣಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಯಾವುದೇ ಜಾಗತಿಕ ಬಿಕ್ಕಟ್ಟಿನ ಸಂದರ್ಭದಲ್ಲಿ ದೇಶದ ಹಿತಾಸಕ್ತಿಯ ಅನುಗುಣವಾಗಿಯೇ ನಿರ್ಧಾರಗಳನ್ನು ಕೈಗೊಳ್ಳಲಾಗುತ್ತದೆ’ ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ಸಮರ್ಥಿಸಿಕೊಂಡರು.

ಪಿಇಎಸ್ ವಿಶ್ವವಿದ್ಯಾಲಯದಲ್ಲಿ ಶುಕ್ರವಾರ ನಡೆದ ಸಂವಾದ ಕಾರ್ಯಕ್ರಮದಲ್ಲಿ ರಷ್ಯಾ–ಉಕ್ರೇನ್ ಬಿಕ್ಕಟ್ಟು ಸೇರಿ ವಿವಿಧ ವಿಷಯಗಳ ಕುರಿತ ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ಉತ್ತರಿಸಿದ ಅವರು, ‘ಲೆಕ್ಕಾಚಾರ, ಅನುಭವ ಮತ್ತು ದೇಶದ ಹಿತಾಸಕ್ತಿ ಅನುಸಾರ ಕಾರ್ಯತಂತ್ರಗಳನ್ನು ರೂಪಿಸಿ ದೃಢವಾದ ನಿಲುವು ಕೈಗೊಂಡಿದ್ದೇವೆ. ಇದರಿಂದ, ನಮ್ಮ ಹಿತಾಸಕ್ತಿಗೆ ಯಾವುದೇ ರೀತಿಯಲ್ಲಿ ಧಕ್ಕೆಯಾಗಿಲ್ಲ’ ಎಂದು ಪ್ರತಿಪಾದಿಸಿದರು.

ವಿದೇಶಾಂಗ ಕಾರ್ಯದರ್ಶಿಯಾಗಿದ್ದ ಸಂದರ್ಭದಲ್ಲಿ ಯಾವ ರೀತಿಯ ಕಠಿಣ ಮತ್ತು ಸವಾಲಿನ ಕಾರ್ಯಗಳನ್ನು ಎದುರಿಸಬೇಕಾಯಿತು ಎನ್ನುವ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ನನಗೆ ಕೆಲಸವು ಸಂತೋಷ ನೀಡುತ್ತದೆ. ಹೀಗಾಗಿ, ಯಾವುದೇ ಪರಿಸ್ಥಿತಿಯನ್ನು ಒತ್ತಡ ಅಥವಾ ಸವಾಲು ಎಂದು ಪರಿಗಣಿಸುವುದಿಲ್ಲ. ಎಲ್ಲವನ್ನು ಕೆಲಸದ ಭಾಗವಾಗಿಯೇ ನೋಡಬೇಕು’ ಎಂದು ಕಿವಿಮಾತು ಹೇಳಿದರು.



ಪಿಇಎಸ್ ವಿಶ್ವವಿದ್ಯಾಲಯದಲ್ಲಿ ಶುಕ್ರವಾರ ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರು ‘ವೆಂಚರ್ ಲ್ಯಾಬ್’ ವೀಕ್ಷಿಸಿದರು. ಕುಲಾಧಿಪತಿ ಪ್ರೊ. ಎಂ.ಆರ್. ದೊರೆಸ್ವಾಮಿ, ಪ್ರೊ. ಸಿದ್ಧೇಶ್, ‘ವೆಂಚರ್ ಲ್ಯಾಬ್’ ಮುಖ್ಯಸ್ಥ ಪ್ರೊ. ಸುರೇಶ್ ನರಸಿಂಹಯ್ಯ, ಬಿಜೆಪಿ ಮುಖಂಡ ಅಶ್ವತ್ಥ ನಾರಾಯಣಗೌಡ ಇದ್ದರು. – ಪ್ರಜಾವಾಣಿ ಚಿತ್ರ

‘ಎಲೆಕ್ಟ್ರಾನಿಕ್ ಮತ್ತು ಇಂಧನ ಕ್ಷೇತ್ರಗಳಲ್ಲಿ ನಾವು ಸ್ವಾವಲಂಬನೆ ಸಾಧಿಸಬೇಕಾದ ಅಗತ್ಯ ಇದೆ. ಸ್ವಾತಂತ್ರ್ಯ ದೊರೆತು 75 ವರ್ಷಗಳಾದರೂ ನಾವು ಇತರ ದೇಶಗಳ ಮೇಲೆ ಅವಲಂಬನೆಯಾಗುವುದನ್ನು ತಪ್ಪಿಸಲು ವ್ಯವಸ್ಥಿತವಾದ ಯೋಜನೆಗಳನ್ನು ರೂಪಿಸಬೇಕಾಗಿದೆ. ಚಿಪ್‌ಗಳನ್ನು ಸಹ ಇಲ್ಲಿಯೇ ತಯಾರಿಸಬೇಕು’ ಎಂದರು.

‘ದೇಶದಲ್ಲಿ ಎಲ್ಲ ವಲಯಗಳಲ್ಲೂ ಆಮೂಲಾಗ್ರ ರೀತಿಯಲ್ಲಿ ಬದಲಾವಣೆಗಳಾಗುತ್ತಿದ್ದು, ಆತ್ಮವಿಶ್ವಾಸ ಹೆಚ್ಚುತ್ತಿದೆ. ಇದರಿಂದ, ಯೋಚನೆಗಳಲ್ಲೂ ಬದಲಾವಣೆಯಾಗಿವೆ. ಕ್ರಿಕೆಟ್ ತಂಡದಲ್ಲೂ ಈಗ ವೈವಿಧ್ಯತೆ ಇದೆ. ಗ್ರಾಮೀಣ ಪ್ರದೇಶದ ಯುವಕ ಸಹ ಭಾರತ ತಂಡವನ್ನು ಪ್ರತಿನಿಧಿಸುವ ಅವಕಾಶ ಸೃಷ್ಟಿಯಾಗಿದೆ’ ಎಂದು ಹೇಳಿದರು.

‘ಜಗತ್ತು ಈಗ ಭಾರತದತ್ತ ನೋಡುತ್ತಿದೆ. ನಾವು ಸಾಧಿಸಿದ ಪ್ರಗತಿಯೇ ಇದಕ್ಕೆ ಕಾರಣ. ಆದರೆ, ಸಾಧಿಸುವುದು ಸಾಕಷ್ಟಿದ್ದು, ಮಹತ್ವಾಕಾಂಕ್ಷೆಯನ್ನು ಹೊಂದಬೇಕಾಗಿದೆ. ಅತ್ಯುತ್ತಮ ಕೌಶಲ ಹೊಂದಿರುವ ಪ್ರತಿಭೆಗಳ ಸದ್ಬಳಕೆಯಾಗಬೇಕಾಗಿದೆ’ ಎಂದರು.

‘ವಿದೇಶಾಂಗ ನೀತಿಗಳು ಜನಸಾಮಾನ್ಯರ ಬದುಕಿನ ಮೇಲೆಯೂ ಅಗಾಧ ಪರಿಣಾಮಗಳನ್ನು ಬೀರುತ್ತವೆ. ಪೆಟ್ರೋಲ್ ದರಗಳಲ್ಲಿನ ವ್ಯತ್ಯಾಸಗಳೇ ಇದಕ್ಕೆ ಉತ್ತಮ ಉದಾಹರಣೆ. ಕೋವಿಡ್ ಎರಡನೇ ಅಲೆಯ ಸಂದರ್ಭದಲ್ಲಿ ಆಮ್ಲಜನಕ ತೀವ್ರ ಕೊರತೆ ಎದುರಾಯಿತು. ಆಗ ಕತಾರ್, ಸಿಂಗಾಪುರ್ ಸೇರಿ ವಿವಿಧ ದೇಶಗಳಿಂದ ತುರ್ತಾಗಿಯೇ ಆಮ್ಲಜನಕ ಆಮದು ಮಾಡಿಕೊಳ್ಳಲಾಯಿತು. ಈ ದೇಶಗಳ ಜತೆಗಿನ ಉತ್ತಮ ಸಂಬಂಧವೇ ಇದಕ್ಕೆ ಕಾರಣ’ ಎಂದು ವಿವರಿಸಿದರು.


ಪಿಇಎಸ್ ವಿಶ್ವವಿದ್ಯಾಲಯದ ಕುಲಾಧಿಪತಿ ಪ್ರೊ. ಎಂ.ಆರ್. ದೊರೆಸ್ವಾಮಿ, ಕುಲಪತಿ ಡಾ.ಜೆ. ಸೂರ್ಯಪ್ರಸಾದ್, ಸಹಕುಲಾಧಿಪತಿ ಪ್ರೊ. ಡಿ.ಜವಾಹರ್, ಕುಲಸಚಿವ ಡಾ.ಕೆ.ಎಸ್. ಶ್ರೀಧರ್ ಇದ್ದರು.

‘ವಿದೇಶಾಂಗ ಸಚಿವಾಲಯದಲ್ಲಿ ಇಂಟರ್ನ್‌ಶಿಪ್’

‘ವಿದೇಶಾಂಗ ಸಚಿವಾಲಯದಲ್ಲಿ ವಿದ್ಯಾರ್ಥಿಗಳಿಗೆ ಇಂಟರ್ನ್‌ಶಿಪ್ ಅವಕಾಶ ಇದೆ. ಎಲ್ಲ ವರ್ಗ ಮತ್ತು ಪ್ರದೇಶದವರಿಗೆ ಅವಕಾಶಗಳನ್ನು ನೀಡುವ ಉದ್ದೇಶದಿಂದ ಕೆಲವು ಬದಲಾವಣೆಗಳನ್ನು ಮಾಡಲಾಗಿದೆ’ ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ತಿಳಿಸಿದರು. ‘ಯುವಕರು ವಿದೇಶಾಂಗ ನೀತಿಗಳ ಬಗ್ಗೆ ಜ್ಞಾನ ಮತ್ತು ಅನುಭವ ಪಡೆದುಕೊಳ್ಳುವುದು ಅಗತ್ಯ’ ಎಂದು ಹೇಳಿದರು.

ವಿದ್ಯುತ್ ವ್ಯತ್ಯಯ ಇಂದು

ಪ್ರಜಾವಾಣಿ ವಾರ್ತೆ



ಬೆಂಗಳೂರು: ನಿರ್ವಹಣೆ ಕಾರ್ಯ ಕೈಗೊಂಡಿರುವುದರಿಂದ ನಗರದ ವಿವಿಧೆಡೆ ಆ.13ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ಸ್ಥಳಗಳು: ನಶಾ ಸ್ಕ್ವೊಯರ್, ಅಂಫಿನೋಲ್, ಕೆಎಸ್‌ಎಸ್‌ಐಡಿಸಿ ಕಾಂಪ್ಲೆಕ್ಸ್ ಎದುರು, ಸೈಬರ್ ಪಾರ್ಕ್, ಎಲ್ಲಿಯಾ ಆಫೀಸ್, ಐಕಲ್ ಇ-ಸಿಟಿ ಫೇಸ್-1, ಐಎಫ್‌ಐಎಂ ಕಾಲೇಜ್, ಯೋಕೊಗವಾ, ಇನ್ಫೊಸಿಸ್ ಕಾರ್ ಪಾರ್ಕಿಂಗ್, ರಾಮಕೃಷ್ಣ ಆಸ್ಪತ್ರೆ, ಆರ್. ಎಸ್. ಎಲೆಕ್ಟ್ರಾನಿಕ್ಸ್, ಎನ್‌ಟಿಟಿಐಎಫ್, ಜಿ-ಫುನಾಕ್, ಸಿ-ಡಾಟ್, ನೀಲಾದ್ರಿ ರಸ್ತೆ, ರಾಧಾ ರೀಜೆಂಟ್ ಹೋಟೆಲ್, ಪಂಜಾಬ್ ಬ್ಯಾಂಕ್, ಪ್ರದೂತ್, ಸೆಲೆಬ್ರಿಟಿ ಕ್ಲಾಸಿಕ್, ಸೆಲೆಬ್ರಿಟಿ ಸಿಗ್ನೆಚರ್, ಸೈಬರ್ ಪಾರ್ಕ್, ಇನ್ಫೊಟೆಕ್, ಇಟಿನ ಮಹಾವೀರ್ ಅಪಾರ್ಟ್‌ಮೆಂಟ್, ಎಚ್.ಸಿ.ಎಲ್. ಇ-ಸಿಟಿ ಫೇಸ್-1, ಸೈಮನ್ಸ್ ಇ-ಸಿಟಿ, ಸಿಂಬೊಸಿಸ್ ಇ-ಸಿಟಿ-1 ಮತ್ತು ಇನ್ಫೊಸಿಸ್ (ಇಎಚ್‌ಟಿ) ಪ್ರದೇಶ.

‘ಜಾಗತಿಕ ಮಟ್ಟದಲ್ಲಿ ಭಾರತ ನಗೆಪಾಟಲಿಗೀಡಾಗಿಲ್ಲ’

ಬೆಂಗಳೂರು: ‘ಜಾಗತಿಕ ಮಟ್ಟದಲ್ಲಿ ಭಾರತ ನಗೆಪಾಟಲಿಗೀಡಾಗಿಲ್ಲ. ಕ್ವಾಡ್ ದೇಶಗಳು, ಜಿ-7 ರಾಷ್ಟ್ರಗಳ ವೇದಿಕೆ, ಜಾಗತಿಕ ವಾತಾವರಣ ಕುರಿತ ಚರ್ಚೆ ಮುಂತಾದ ವೇದಿಕೆಗಳಲ್ಲಿ ಭಾರತಕ್ಕೆ ದೊರೆತ ಗೌರವಗಳೇ ಇದಕ್ಕೆ ಸಾಕ್ಷಿ’ ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ಸಮರ್ಥಿಸಿಕೊಂಡಿದ್ದಾರೆ.

‘ಜಾಗತಿಕ ನಾಯಕರು ಭಾರತದ ಬಗ್ಗೆ ಇರಿಸಿರುವ ನಿರೀಕ್ಷೆಗಳೇ ಭಾರತದ ವಿದೇಶಾಂಗ ನೀತಿಯ ಯಶಸ್ಸನ್ನು ತೋರಿಸುತ್ತವೆ. ಹಲವು ದೇಶಗಳು ಕೋವಿಡ್-19 ಕಾರಣದಿಂದ ತೀವ್ರ ಬಿಕ್ಕಟ್ಟು ಎದುರಿಸುತ್ತಿವೆ. ಆದರೆ, ಸವಾಲಿನ ನಡುವೆಯೇ ಭಾರತವು ತನ್ನದೇ ಆದ ರೀತಿಯಲ್ಲಿ ಸಮರ್ಥವಾಗಿ ನಿಭಾಯಿಸಿ, ಆರ್ಥಿಕತೆ ಕುಸಿತವನ್ನು ತಡೆಗಟ್ಟಿದೆ’ ಎಂದು ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು.

‘ರಾಜಕೀಯ ಆರೋಪ- ಚರ್ಚೆಗಳು ಏನೇ ಇದ್ದರೂ ವ್ಯಾಖ್ಯಾನಗಳ ಅಂತಿಮ ಪರೀಕ್ಷೆಯಾಗುವುದು ಜನತಾ ನ್ಯಾಯಾಲಯದಲ್ಲಿ. ದೇಶದ ಆರ್ಥಿಕತೆಯನ್ನು ಉತ್ತಮವಾಗಿ ನಿಭಾಯಿಸಲಾಗಿದೆ. ಇದಕ್ಕಾಗಿಯೇ ಎರಡು ಚುನಾವಣೆಗಳಲ್ಲಿ ಜನರು ಬೆಂಬಲಿಸಿದ್ದಾರೆ’ ಎಂದು ಜೈಶಂಕರ್ ಹೇಳಿದರು.

‘ಬೆಂಗಳೂರಿನ ಮೂಲಸೌಕರ್ಯ ಸಮಸ್ಯೆಗಳ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, ‘ಬೆಂಗಳೂರು ಜಾಗತಿಕ ಬ್ರ್ಯಾಂಡ್ ಆಗುತ್ತಿದೆ. ಮೂಲಸೌಕರ್ಯಗಳ ಸುಧಾರಣೆ ಎಂಬುದು ಮುಗಿಯದ ವಿದ್ಯಮಾನ’ ಎಂದರು.

‘ಹಲವಾರು ವಿದೇಶಿ ಕಂಪನಿಗಳು ಭಾರತಕ್ಕೆ ಬರಲು ಉತ್ಸುಕತೆ ತೋರುತ್ತಿವೆ. ಇದು ಭಾರತದ ಮೇಲಿಟ್ಟಿರುವ ವಿಶ್ವಾಸಕ್ಕೆ ಸಾಕ್ಷಿ. ಇದರ ಲಾಭ ಬೆಂಗಳೂರಿಗೂ ಆಗಲಿದೆ’ ಎಂದು ಹೇಳಿದರು.

‘ಮುಂದಿನ ತಿಂಗಳು ಅಮೆರಿಕ ಭೇಟಿ ಸಂದರ್ಭ ಬೆಂಗಳೂರಿನಲ್ಲಿ ಅಮೆರಿಕ ಕಾನ್ಸಲೇಟ್ ತೆರೆಯುವ ಕುರಿತು ಪ್ರಸ್ತಾಪಿಸಲಾಗುವುದು. ಕಾನ್ಸಲೇಟ್ ತೆರೆಯುವ ಬಗ್ಗೆ ಬೆಂಗಳೂರು ಹಾಗೂ ಹೈದರಾಬಾದ್ ನಡುವಿನ ಸ್ಪರ್ಧೆಯಲ್ಲಿ ಅಮೆರಿಕ 2006ರಲ್ಲಿ ಎರಡನೆಯದನ್ನೇ ಆಯ್ಕೆ ಮಾಡಿಕೊಂಡಿತ್ತು. ಅದು ಆ ದೇಶದ ನಿರ್ಧಾರ’ ಎಂದರು.

ಸಂಕ್ಷಿಪ್ತ ಸುದ್ದಿ

ಕೆಆರ್‌ಐಡಿಎಲ್ ಪರೀಕ್ಷೆ ಮುಂದಕ್ಕೆ

ಬೆಂಗಳೂರು: ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಯಮಿತದಲ್ಲಿ ಖಾಲಿ ಇರುವ ಹುದ್ದೆಗಳಿಗೆ ಆ.20, 21 ಹಾಗೂ 28ರಂದು ನಿಗದಿಯಾಗಿದ್ದ ಸ್ಪರ್ಧಾ ಪರೀಕ್ಷೆಗಳನ್ನು ಮುಂದೂಡಲಾಗಿದೆ.

ಇದೇ ದಿನಾಂಕಗಳಂದು ಎಸ್‌ಎಸ್‌ಸಿ ಹಾಗೂ ಆರ್‌ಬಿಐ ಪರೀಕ್ಷೆಗಳು ನಡೆಯುತ್ತಿರುವ ಕಾರಣ ಅಭ್ಯರ್ಥಿಗಳ ಹಿತಾಸಕ್ತಿ ಗಮನದಲ್ಲಿ ಇಟ್ಟುಕೊಂಡು ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಪರೀಕ್ಷೆಗಳ ಪರಿಷ್ಕೃತ ವೇಳಾಪಟ್ಟಿಯನ್ನು ಶೀಘ್ರ ಪ್ರಕಟಿಸಲಾಗುವುದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಪ್ರಕಟಣೆ ತಿಳಿಸಿದೆ.

ಆಧಾರ್ ದಾಖಲೆ ಪರಿಶೀಲಿಸಲು ಅನುಮತಿ

ಬೆಂಗಳೂರು: ಬಾಂಗ್ಲಾದೇಶ ಮೂಲದ 12 ಮಂದಿಯ ಆಧಾರ್ ಕಾರ್ಡ್‌ಗಳ ದಾಖಲೆ ಪರಿಶೀಲಿಸಲು ರಾಷ್ಟ್ರೀಯ ತನಿಖಾ ದಳಕ್ಕೆ (ಎನ್ಐಎ) ಹೈಕೋರ್ಟ್ ಅನುಮತಿಸಿದೆ.

ಈ ಕುರಿತಂತೆ ಎನ್‌ಐಎ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಾನ್ಯ ಮಾಡಿದ್ದು, ‘ಬಾಂಗ್ಲಾ ದೇಶದ ಹಲವು ಪ್ರಜೆಗಳು ನಕಲಿ ದಾಖಲೆಗಳನ್ನು ನೀಡಿ ಆಧಾರ್ ಕಾರ್ಡ್‌ಗಳನ್ನು ಪಡೆದುಕೊಂಡಿದ್ದಾರೆ ಎಂಬ ಆರೋಪಗಳ ಪರಿಶೀಲನೆ ನಡೆಸುವ ಅಗತ್ಯವಿದೆ’ ಎಂದು ಅಭಿಪ್ರಾಯಪಟ್ಟಿದೆ.

‘ಆಧಾರ್ ಕಾರ್ಡ್ ಹೊಂದಿರುವ ವ್ಯಕ್ತಿಯ ವೈಯಕ್ತಿಕ ಮಾಹಿತಿಯನ್ನು ಆಧಾರ್ ಕಾಯ್ದೆ–2016ರ ಕಲಂ 33ರ ಅಡಿ ನೀಡಲು ಸಾಧ್ಯವಿಲ್ಲ’ ಎಂದು ಭಾರತೀಯ ವಿಶಿಷ್ಟ ಗುರುತು ಪ್ರಾಧಿಕಾರ (ಯುಐಡಿಎಐ) 2021ರ ಏಪ್ರಿಲ್ 22ರಂದು ಆದೇಶಿಸಿತ್ತು. ಇದನ್ನು ಪ್ರಶ್ನಿಸಿ ಎನ್‌ಐಎ ಹೈಕೋರ್ಟ್ ಮೆಟ್ಟಿಲೇರಿತ್ತು.

ಚಾಮರಾಜಪೇಟೆ ಮೈದಾನಕ್ಕೆ ಭದ್ರತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಾಮರಾಜಪೇಟೆ ಮೈದಾನದಲ್ಲಿ ಧ್ವಜಾರೋಹಣ ನೆರವೇರಿಸಲು ಕಂದಾಯ ಇಲಾಖೆ ಸಿದ್ಧತೆ ಮಾಡಿಕೊಳ್ಳುತ್ತಿದ್ದು, ಮೈದಾನ ಬಳಿ ಪೊಲೀಸರು ಶುಕ್ರವಾರರಿಂದಲೇ ಬಿಗಿ ಭದ್ರತೆ ಕೈಗೊಂಡಿದ್ದಾರೆ.

ಮೈದಾನದ ಬಳಕೆ ಬಗ್ಗೆ ಪರ-ವಿರೋಧ ಚರ್ಚೆಗಳು ನಡೆಯುತ್ತಿದ್ದು, ಪೊಲೀಸರು ಈಗಾಗಲೇ ಶಾಂತಿ ಸಭೆಗಳನ್ನು ನಡೆಸಿದ್ದಾರೆ. ಆದರೆ, ಕೆಲ ಕಿಡಿಗೇಡಿಗಳು ಕಾನೂನು ಸುವ್ಯವಸ್ಥೆಗೆ ಧಕ್ಕೆ ತರುವ ಸಾಧ್ಯತೆ ಇರುವುದಾಗಿ ಗುಪ್ತಚರ ಅಧಿಕಾರಿಗಳು ಎಚ್ಚರಿಸಿದ್ದಾರೆ. ಇದೇ ಕಾರಣಕ್ಕೆ ಮೈದಾನ ಹಾಗೂ ಸುತ್ತಮುತ್ತ 600ಕ್ಕೂ ಸಿಬ್ಬಂದಿಯನ್ನು ಭದ್ರತೆಗಾಗಿ ನಿಯೋಜಿಸಲಾಗಿದೆ.

ಹೆಚ್ಚುವರಿ ಪೊಲೀಸ್ ಕಮಿಷನರ್ ಸಂದೀಪ್ ಪಾಟೀಲ ನೇತೃತ್ವದಲ್ಲಿ ಚಾಮರಾಜಪೇಟೆಯಲ್ಲಿ ಶುಕ್ರವಾರ ಪಥಸಂಚಲನ ನಡೆಸಿದ ಪೊಲೀಸರು, ಯಾರಾದರೂ ಕಾನೂನು ಕೈಗೆತ್ತಿಕೊಂಡರೆ ಕಠಿಣ ಕ್ರಮ ಎದುರಿಸಬೇಕಾಗುತ್ತದೆ ಎಂಬುದಾಗಿ ಎಚ್ಚರಿಕೆ ರವಾನಿಸಿದರು.

‘ಚಾಮರಾಜಪೇಟೆಯನ್ನು ಸೂಕ್ಷ್ಮ ಹಾಗೂ ಅತಿ ಸೂಕ್ಷ್ಮ ಪ್ರದೇಶವೆಂದು ಪರಿಗಣಿಸಲಾಗಿದೆ. ಕೆಎಸ್‌ಆರ್‌ಪಿ, ನಗರ ಸಶಸ್ತ್ರ ಮೀಸಲು ಪಡೆ ಸಿಬ್ಬಂದಿಯನ್ನು ಭದ್ರತೆಗೆ ಬಳಸಿಕೊಳ್ಳಲಾಗುತ್ತಿದೆ. ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಧ್ವಜಾರೋಹಣ ನೆರವೇರಿಸಲು ಕ್ರಮ ಕೈಗೊಳ್ಳಲಾಗಿದ್ದು, ಆಹ್ವಾನ ಇದ್ದವರಿಗೆ ಮಾತ್ರ ಮೈದಾನದಲ್ಲಿ ಪ್ರವೇಶವಿರಲಿದೆ’ ಎಂದು ಸಂದೀಪ್ ಪಾಟೀಲ ಹೇಳಿದರು.



ಚಾಮರಾಜಪೇಟೆ ಮೈದಾನದಲ್ಲಿ ಪೊಲೀಸರು ಪಥಸಂಚಲನ ನಡೆಸಿದರು

ಗುಟ್ಟಹಳ್ಳಿ ಮೈದಾನಕ್ಕೆ ಸಚಿವ ಭೇಟಿ

ಚಾಮರಾಜಪೇಟೆ ಮೈದಾನದ ಜಾಗವನ್ನು 'ಸರ್ವೆ ನಂ. 40' ಗುಟ್ಟಹಳ್ಳಿ ಮೈದಾನವೆಂದು ಗುರುತಿಸಿರುವ ಕಂದಾಯ ಇಲಾಖೆ ಅಧಿಕಾರಿಗಳು, ಸರ್ಕಾರದ ವತಿಯಿಂದ ಧ್ವಜಾರೋಹಣ ನೆರವೇರಿಸುವುದಾಗಿ ಹೇಳಿದ್ದಾರೆ. ಮೈದಾನಕ್ಕೆ ಶನಿವಾರ (ಆ. 13) ಬೆಳಿಗ್ಗೆ 10.30 ಗಂಟೆಗೆ ಸಚಿವ ಆರ್. ಅಶೋಕ ಭೇಟಿ ನೀಡಲಿದ್ದಾರೆ ಎಂಬುದಾಗಿಯೂ ತಿಳಿಸಿದ್ದಾರೆ.

ಮೂರು ಪ್ರತ್ಯೇಕ ವಿದ್ಯುತ್ ಅವಘಡ: ಹೈಕೋರ್ಟ್ ಆದೇಶ

ಕೆಪಿಟಿಸಿಎಲ್‌ಗೆ ₹1.28 ಕೋಟಿ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಸನ ಮತ್ತು ಬೆಂಗಳೂರು ನಗರಗಳಲ್ಲಿ 2017-18ರ ಅವಧಿಯಲ್ಲಿ ನಡೆದ ಮೂರು ಪ್ರತ್ಯೇಕ ವಿದ್ಯುತ್ ಅವಘಡಗಳಲ್ಲಿ ಮೃತಪಟ್ಟ ವ್ಯಕ್ತಿಯೊಬ್ಬರ ಪತ್ನಿ ಸೇರಿದಂತೆ ಗಾಯಾಳು ಸಂತ್ರಸ್ತರಿಗೆ ಒಟ್ಟು ₹ 1.28 ಕೋಟಿ ಮೊತ್ತದ ಪರಿಹಾರ ಪಾವತಿಸಲು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಕೆಪಿಟಿಸಿಎಲ್) ಮತ್ತು ಬೆಂಗಳೂರು ವಿದ್ಯುತ್ ಪೂರೈಕೆ ಕಂಪನಿಗೆ (ಬೆಸ್ಕಾಂ) ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಸಲ್ಲಿಸಲಾಗಿದ್ದ ಮೂರು ಪ್ರತ್ಯೇಕ ರಿಟ್ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ, ‘ಎರಡು ತಿಂಗಳಲ್ಲಿ ಸಂತ್ರಸ್ತರಿಗೆ ಪರಿಹಾರ ಪಾವತಿಸಬೇಕು ಮತ್ತು ಓವರ್ ಹೆಡ್ ವಿದ್ಯುತ್ ಲೇನ್‌ಗಳಿಂದ ಅವಘಡ ಸಂಭವಿಸಿದ ಸಂದರ್ಭದಲ್ಲಿ ವಿದ್ಯುತ್ ಪೂರೈಕೆ ಕಂಪನಿಗಳು ಮುಖ್ಯ ಕಚೇರಿಯಿಂದ ವರದಿಗೆ ಕಾಯಬಾರದು’ ಎಂದು ಆದೇಶಿಸಿದೆ.

ಎನ್.ಸುಬ್ರಹ್ಮಣ್ಯ: ಹಾಸನ ಜಿಲ್ಲೆಯ ಸಕಲೇಶಪುರದ ಕಾಫಿ ಎಸ್ಟೇಟ್‌ನಲ್ಲಿ ಕಾಳು ಮೆಣಸು ಒಕ್ಕಣೆ ಮಾಡುತ್ತಿದ್ದಾಗ ವಿದ್ಯುತ್ ತಂತಿ ತಗುಲಿ ಕೃಷಿ ಕಾರ್ಮಿಕ ಎನ್. ಸುಬ್ರಹ್ಮಣ್ಯ (36) ಸಾವನ್ನಪ್ಪಿದ್ದ ಪ್ರಕರಣದಲ್ಲಿ ಕೆಪಿಟಿಸಿಎಲ್ ₹ 5 ಲಕ್ಷ ಪರಿಹಾರ ನೀಡಿ 2017ರ ನವೆಂಬರ್ 9ರಂದು ಆದೇಶಿಸಿತ್ತು. ಇದನ್ನು ಪ್ರಶ್ನಿಸಿ ಮೃತರ ಪತ್ನಿ ರೇಖಾ, ‘₹ 68.74 ಲಕ್ಷ ಪರಿಹಾರ ನೀಡಲು ಆದೇಶಿಸಬೇಕು’ ಎಂದು ಕೋರಿದ್ದರು. ಈ ಪ್ರಕರಣದಲ್ಲಿ ₹ 25.52 ಲಕ್ಷ ಪರಿಹಾರ ನೀಡಲು ನ್ಯಾಯಪೀಠ ಆದೇಶಿಸಿದೆ.

ಕೆ.ಚಂದನಾ: ಬೆಂಗಳೂರಿನ ಲೊಟ್ಟೆಗೊಲ್ಲಹಳ್ಳಿಯಲ್ಲಿ 9ನೇ ತರಗತಿ ವ್ಯಾಸಂಗ ಮಾಡುತ್ತಿದ್ದ 15 ವರ್ಷದ ಬಾಲಕಿ ಕೆ.ಚಂದನಾ 2018ರ ಅಕ್ಟೋಬರ್ 1ರಂದು ತಲೆಯ ಮೇಲೆ ಕಬ್ಬಿಣದ ಕಂಬಿಗಳನ್ನು ಹೊತ್ತು ಮನೆಯ ಮೆಟ್ಟಿಲು ಹತ್ತುತ್ತಿದ್ದಳು. ಈ ವೇಳೆ ಪಕ್ಕದಲ್ಲೇ ಹಾದು ಹೋಗಿದ್ದ 11 ಕೆ.ವಿ.ಸಾಮರ್ಥ್ಯದ ವಿದ್ಯುತ್ ತಂತಿಗಳು ಕಂಬಿಗಳಿಗೆ ಸ್ಪರ್ಶಿಸಿದ್ದವು. ವಿದ್ಯುತ್ ಪ್ರವಹಿಸಿ ಚಂದನಾ ಶೇ 79ರಷ್ಟು ಅಂಗವೈಕಲ್ಯಕ್ಕೆ ತುತ್ತಾಗಿದ್ದಳು. ಆಕೆಗೆ ಬೆಸ್ಕಾಂ ₹ 2.5 ಲಕ್ಷ ಪರಿಹಾರ ನೀಡಿತ್ತು.

ಇದನ್ನು ಪ್ರಶ್ನಿಸಿ ₹ 90 ಲಕ್ಷ ಪರಿಹಾರ ಕೋರಿದ್ದ ಈ ಪ್ರಕರಣದಲ್ಲಿ ₹ 51.76 ಲಕ್ಷ ಪರಿಹಾರ ನೀಡಲು ಆದೇಶಿಸಲಾಗಿದೆ.

ಮುಯೀಜ್ ಅಹ್ಮದ್ ಶರೀಫ್: ಗುರಪ್ಪನಪಾಳ್ಯದಲ್ಲಿ ಆರು ವರ್ಷದ ಬಾಲಕ ಮುಯೀಜ್ ಅಹ್ಮದ್ ಶರೀಫ್ ಮನೆ ಪಕ್ಕದಲ್ಲಿ ಬಿದ್ದಿದ್ದ ಕ್ರಿಕೆಟ್ ಬಾಲ್ ತೆಗೆದುಕೊಳ್ಳಲು ಹೋದಾಗ ಸಮೀಪದಲ್ಲೇ 66 ಕೆ.ವಿ. ಸಾಮರ್ಥ್ಯದ ಹೈ ಟೆನ್ಷನ್ ತಂತಿಯ ಇಂಡಕ್ಷನ್ ಝೋನ್ ಇತ್ತು. ಇದರಿಂದ ಪ್ರವಹಿಸುತ್ತಿದ್ದ ವಿದ್ಯುತ್ ತಗುಲಿ ಆತನಿಗೆ ಶೇ 80ರಷ್ಟು ಸುಟ್ಟ ಗಾಯಗಳಾಗಿದ್ದವು. 2017ರ ಸೆಪ್ಟೆಂಬರ್ 16ರಂದು ನಡೆದಿದ್ದ ಈ ಘಟನೆಯಲ್ಲಿ ಬೆಸ್ಕಾಂ ₹ 5 ಲಕ್ಷ ಪರಿಹಾರ ಪಾವತಿಸಿತ್ತು. ಇದನ್ನು ಪ್ರಶ್ನಿಸಿದ್ದ ಅರ್ಜಿದಾರರು ₹ 90 ಲಕ್ಷ ಪರಿಹಾರವನ್ನು ಬಡ್ಡಿ ಸಮೇತ ನೀಡುವಂತೆ ಕೋರಿದ್ದರು. ನ್ಯಾಯಪೀಠ, ₹ 50.82 ಲಕ್ಷ ಪರಿಹಾರ ಪಾವತಿಸುವಂತೆ ಬೆಸ್ಕಾಂಗೆ ಆದೇಶಿಸಿದೆ.



ಮರದ ತುಂಡು ಬಿದ್ದು ಗಾಯ: ಎಂಜಿನಿಯರ್ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸಿಎಂಎಂ ನ್ಯಾಯಾಲಯ ಆವರಣದಲ್ಲಿ ಕಟ್ಟಡ ನಿರ್ಮಾಣಕ್ಕೆ ಬಳಸುತ್ತಿದ್ದ ಮರದ ತುಂಡು ಕಾಲಿನ ಮೇಲೆ ಬಿದ್ದು ಆರ್. ನಾರಾಯಣ (50) ಎಂಬುವರು ಗಾಯಗೊಂಡಿದ್ದು, ಎಂಜಿನಿಯರ್ ಸೇರಿ ಮೂವರ ವಿರುದ್ಧ ಹಲಸೂರು ಗೇಟ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಶಿವಮೊಗ್ಗ ಜಿಲ್ಲೆ ಭದ್ರಾವತಿಯ ಬೊಮ್ಮನಕಟ್ಟೆ ಗ್ರಾಮದ ನಾರಾಯಣ, ತಮ್ಮ ವಕೀಲರನ್ನು ಭೇಟಿಯಾಗಲು ಗುರುವಾರ ನ್ಯಾಯಾಲಯದ ಆವರಣಕ್ಕೆ ಬಂದಿದ್ದಾಗ ಈ ಅವಘಡ ಸಂಭವಿಸಿದೆ. ಮುಂಜಾಗ್ರತಾ ಕ್ರಮ ಕೈಗೊಳ್ಳದೇ ನಿರ್ಲಕ್ಷ್ಯ ಆರೋಪದಡಿ ಎಂಜಿನಿಯರ್, ಗುತ್ತಿಗೆದಾರ, ಮೇಲ್ವಿಚಾರಕ ಹಾಗೂ ಇತರರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ನ್ಯಾಯಾಲಯದ ಆವರಣದಲ್ಲಿ ಕಟ್ಟಡ ನಿರ್ಮಾಣ ಕೆಲಸ ನಡೆಯುತ್ತಿದೆ. ಕಾಮಗಾರಿಗಾಗಿ ಮರದ ತುಂಡುಗಳನ್ನು ಬಳಸಲಾಗುತ್ತಿದೆ. ನಾರಾಯಣ ಹಾಗೂ ವಕೀಲರು ಆವರಣದಲ್ಲಿ ಮಾತನಾಡುತ್ತ ನಿಂತಿದ್ದರು. ಇದೇ ಸಂದರ್ಭದಲ್ಲೇ ಮರದ ತುಂಡು ನಾರಾಯಣ ಅವರ ಬಲ ಕಾಲಿನ ಮೇಲೆ ಬಿದ್ದು ರಕ್ತಸ್ರಾವವಾಗಿತ್ತು. ಗಾಯಗೊಂಡ ಅವರು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದಾರೆ. ಅವರ ಹೇಳಿಕೆ ಪಡೆಯಲಾಗಿದೆ’ ಎಂದೂ ತಿಳಿಸಿವೆ.

ಮಾತುಕತೆಗೆ ಕರೆದು ಲೈಂಗಿಕ ದೌರ್ಜನ್ಯ: ಯುವತಿ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ಯಮದ ಬಗ್ಗೆ ಮಾತುಕತೆಗೆಂದು ಯುವತಿಯೊಬ್ಬರನ್ನು ಹೋಟೆಲ್‌ಗೆ ಕರೆಸಿ ಲೈಂಗಿಕ ದೌರ್ಜನ್ಯ ಎಸಗಲಾಗಿದ್ದು, ಈ ಬಗ್ಗೆ ಕಬ್ಬನ್ ಪಾರ್ಕ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ನಗರದ ನಿವಾಸಿಯಾಗಿರುವ ಯುವತಿ ದೂರು ನೀಡಿದ್ದಾರೆ. ಲೈಂಗಿಕ ದೌರ್ಜನ್ಯ ಹಾಗೂ ಜೀವ ಬೆದರಿಕೆ ಆರೋಪದಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ತಮಿಳುನಾಡಿನ ನಿವಾಸಿಯಾಗಿರುವ ಆರೋಪಿ ತಲೆಮರೆಸಿಕೊಂಡಿದ್ದಾನೆ’ ಎಂದು ಪೊಲೀಸರು ಹೇಳಿದರು.

‘ಉದ್ಯಮಿ ಆಗಿರುವ ಆರೋಪಿ, ತಮಿಳುನಾಡಿನಿಂದ ಇತ್ತೀಚೆಗೆ ನಗರಕ್ಕೆ ಬಂದಿದ್ದ. ಸಂಬಂಧಿಕರೊಬ್ಬರ ಮೂಲಕ ಯುವತಿಯನ್ನು ಸಂಪರ್ಕಿಸಿದ್ದ ಈತ, ಉದ್ಯಮ ಅಭಿವೃದ್ಧಿ ಬಗ್ಗೆ ಮಾತನಾಡಬೇಕೆಂದು ಹೇಳಿ ಆಗಸ್ಟ್ 6ರಂದು ಹೋಟೆಲ್‌ಗೆ ಕರೆಸಿಕೊಂಡಿದ್ದ. ಇದೇ ವೇಳೆ ಯುವತಿ ಜೊತೆ ಅನುಚಿತವಾಗಿ ವರ್ತಿಸಿ, ಲೈಂಗಿಕ ದೌರ್ಜನ್ಯ ಎಸಗಿದ್ದ. ನಂತರ ಜೀವ ಬೆದರಿಕೆಯೊಡ್ಡಿದ್ದ. ಆತನಿಂದ ತಪ್ಪಿಸಿಕೊಂಡಿದ್ದ ಯುವತಿಯು ಸಂಬಂಧಿಕರಿಗೆ ವಿಷಯ ತಿಳಿಸಿದ್ದರು. ನಂತರವೇ ಠಾಣೆಗೆ ಬಂದು ದೂರು ನೀಡಿದ್ದಾರೆ’ ಎಂದೂ ಪೊಲೀಸರು ಮಾಹಿತಿ ನೀಡಿದರು.



ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ ಆಚರಣೆ ಅಂಗವಾಗಿ ನಗರದ ಎಂ.ಜಿ.ರಸ್ತೆಯ ಮೆಟ್ರೊ ಬುಲೆವಾರ್ಡ್ ಪಿಲ್ಲರ್‌ಗಳಿಗೆ ಬಣ್ಣಬಣ್ಣಗಳ ವಿದ್ಯುತ್ ದೀಪಾಲಂಕಾರ ಮಾಡಲಾಗಿದೆ — ಪ್ರಜಾವಾಣಿ ಚಿತ್ರ

ವಿಚಾರ ಸಂಕಿರಣದಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಕಂಬಾರ ಅಭಿಮತ

ಹೋರಾಟದ ಕಿಚ್ಚು ಹಚ್ಚಿದ್ದ ರಂಗಭೂಮಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನಕ್ಷರಸ್ಥರಲ್ಲೂ ಸ್ವಾತಂತ್ರ್ಯ ಹೋರಾಟದ ಕಿಚ್ಚು ಹಚ್ಚಿದ್ದೇ ರಂಗಭೂಮಿ ಹಾಗೂ ಗ್ರಾಮೀಣ ಬಯಲಾಟಗಳು ಎಂದು ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಚಂದ್ರಶೇಖರ ಕಂಬಾರ ಸ್ಮರಿಸಿದರು.

ಜೈನ್ ವಿಶ್ವವಿದ್ಯಾಲಯದಲ್ಲಿ ಸಾಹಿತ್ಯ ಅಕಾಡೆಮಿ ಶುಕ್ರವಾರ ಹಮ್ಮಿಕೊಂಡಿದ್ದ 'ಸ್ವಾತಂತ್ರ್ಯ ಆಂದೋಲನಕ್ಕೆ ಕನ್ನಡ ಸಾಹಿತ್ಯದ ಕೊಡುಗೆ' ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

ಅಂದು ಬ್ರಿಟಿಷರ ವಿರುದ್ಧ ಹೋರಾಟ ನಡೆಸಿದ್ದ ಸಾಹಸಿಗರ ಕಥೆಗಳು ನಾಟಕಗಳ ರೂಪ ಪಡೆಯುತ್ತಿದ್ದವು. ಕಿತ್ತೂರು ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ ಮತ್ತಿತರರ ಕಥೆಗಳನ್ನು ರಂಗದ ಮೇಲೆ ತರುತ್ತಿದ್ದರು. ಸಂಗ್ಯಾ ಬಾಳ್ಯಾ ದಂತಹ ಕಥೆಯಲ್ಲೂ ಬ್ರಿಟಿಷ್ ವಿರೋಧಿ ಮಾತುಗಳನ್ನು ತುರುಕುತ್ತಿದ್ದರು. ಖಳನಾಯನ ಪಾತ್ರಗಳಿಗೆ ಬ್ರಿಟಿಷ್ ಸಂಗೀತ, ಸ್ವಾತಂತ್ರ್ಯ ಹೋರಾಟದ ಕಲಿಗಳ ಪಾತ್ರಗಳಿಗೆ ಭಾರತೀಯ ಸಂಗೀತ ನುಡಿಸುತ್ತಿದ್ದರು. ಕಂಪನಿ ನಾಟಕಗಳೂ ಅದೇ ದಾರಿಯಲ್ಲಿ ಸಾಗಿದವು. ಇದರಿಂದ ಬ್ರಿಷರ ವಿರುದ್ಧದ ಹೋರಾಟ ತೀವ್ರ ಸ್ವರೂಪ ಪಡೆಯಿತು ಎಂದರು.



ಸಾಹಿತ್ಯ ಅಕಾಡೆಮಿ ಆಯೋಜಿಸಿದ್ದ 'ಸ್ವಾತಂತ್ರ್ಯ ಆಂದೋಲನಕ್ಕೆ ಕನ್ನಡ ಸಾಹಿತ್ಯದ ಕೊಡುಗೆ' ವಿಚಾರ ಸಂಕಿರಣದಲ್ಲಿ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಚಂದ್ರಶೇಖರ ಕಂಬಾರ, ಸಾಹಿತ್ಯ ಅಕಾಡೆಮಿ ಕನ್ನಡ ಸಲಹಾ ಸಮಿತಿ ಸದಸ್ಯ ಎಚ್.ಎಸ್. ಶಿವಪ್ರಕಾಶ್ ಮಾತುಕತೆಯಲ್ಲಿ ತೊಡಗಿದ್ದರು —ಪ್ರಜಾವಾಣಿ ಚಿತ್ರ

ಗಳಗನಾಥರು, ಬಸವರಾಜ ಕಟ್ಟಿಮನಿ, ತರಾಸು, ಅನಕೃ, ಕೃಷ್ಣಮೂರ್ತಿ ಪುರಾಣಿಕ ಸೇರಿದಂತೆ ಅಂದಿನ ಕಾಲಘಟ್ಟದ ಸಾಹಿತಿಗಳು ಕಥೆ, ಕಾದಂಬರಿಗಳ ಮೂಲಕ ಸ್ವಾತಂತ್ರ್ಯ ಹೋರಾಟ ಕುರಿತು ಜಾಗೃತಿ ಮೂಡಿಸಿದ್ದರು. ಪತ್ರಿಕೆಗಳು, ಸಾಹಿತ್ಯ ಕೃತಿಗಳೇ ಊರಿನ ಆಚೆಯ ತಿಳಿವಳಿಕೆಗೆ ಸಹಕಾರಿಯಾಗಿದ್ದವು ಎಂದರು.

ಚಳವಳಿ ನಿರತರಿಗೆ ಊಟ ನೀಡುತ್ತಿದ್ದ ದಲಿತ ಮಹಿಳೆಯೊಬ್ಬರು ಸ್ವಾತಂತ್ರ್ಯ ಹೋರಾಟಗಾರರ ಪಿಂಚಣಿ ಪಡೆಯಲು ನಿರಾಕರಿಸಿದ್ದು ಅವರಲ್ಲಿನ ಸ್ವಾಭಿಮಾನದ ಪ್ರತೀಕ ಎಂದರು.

ಸಾಹಿತಿ ಎಚ್.ಎಸ್. ಶಿವಪ್ರಕಾಶ್,

> **ದಲಿತರಿಗೂ ಶಿಕ್ಷಣ ನೀಡಲು ಬ್ರಿಟಿಷರು ನಿರ್ಧರಿಸಿದ್ದು ಕ್ರಾಂತಿಕಾರಕ ನಡೆ. ಮೆಕಾಲೆ ಶಿಕ್ಷಣ ನೀತಿ ಶಿಕ್ಷಣ ಸಮಾನತೆಗೆ ನಾಂದಿಯಾಯಿತು**
> **ಚಂದ್ರಶೇಖರ ಕಂಬಾರ,** ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ

ಸ್ವಾತಂತ್ರ್ಯ ಚಳವಳಿ ಕೇವಲ ಬ್ರಿಟಿಷರಿಂದ ಮುಕ್ತಿ ಪಡೆಯಲಷ್ಟೇ ಸೀಮಿತವಾಗಿರಲಿಲ್ಲ. ಸಮಾಜದ ಜಾತಿ ವ್ಯವಸ್ಥೆ, ಅಸಮಾನತೆ, ಮೌಢ್ಯಗಳ ವಿರುದ್ಧದ ಹೋರಾಟವೂ ಆಗಿತ್ತು. ಆಶಯ ಸಾಕಾರಗೊಂಡ ನಂತರ ಸಂಭ್ರಮಕ್ಕೆ ಕಾರಣಗಳಿದ್ದರೂ, ದೇಶ ವಿಭಜನೆ, ಗಾಂಧಿ ಹತ್ಯೆ ಸೇರಿದಂತೆ ಹಿಂಸಾಚಾರದ ಸ್ವರೂಪಗಳು ದುರಂತದ ಕ್ಷಣಗಳಿಗೂ ಸಾಕ್ಷಿಯಾದವು. ಸ್ವಾತಂತ್ರ್ಯದ ಅಮೃತ ಗಳಿಗೆಯಲ್ಲಿ ಎಷ್ಟು ಅಮೃತ ಸಿಕ್ಕಿದೆ, ನೋವೆಷ್ಟು ಎನ್ನುವ ಕುರಿತು ವಿಮರ್ಶೆ ಮಾಡಿಕೊಳ್ಳಬೇಕಿದೆ ಎಂದರು.

ಸಾಹಿತ್ಯ ಅಕಾಡೆಮಿ ಕಾರ್ಯದರ್ಶಿ ಕೆ.ಶ್ರೀನಿವಾಸ ರಾವ್, ಜೈನ್ ವಿಶ್ವವಿದ್ಯಾಲಯದ ಡೀನ್ ರಜನಿ ಜೈರಾಮ್ ಉಪಸ್ಥಿತರಿದ್ದರು.

9 ಮಂದಿಗೆ 'ಉತ್ತಮ ಗ್ರಂಥಪಾಲಕ' ಪುರಸ್ಕಾರ

ಬೆಂಗಳೂರು: ಸಾರ್ವಜನಿಕ ಗ್ರಂಥಾಲಯ ಇಲಾಖೆ ಶುಕ್ರವಾರ ಹಮ್ಮಿಕೊಂಡಿದ್ದ ಗ್ರಂಥಪಾಲಕರ ದಿನಾಚರಣೆಯಲ್ಲಿ 9 ಮಂದಿಗೆ 'ಉತ್ತಮ ಗ್ರಂಥಪಾಲಕ' ಪುರಸ್ಕಾರ ನೀಡಿ ಗೌರವಿಸಲಾಯಿತು.

ಶೈಕ್ಷಣಿಕ ಗ್ರಂಥಾಲಯ ವಿಭಾಗದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ಪ್ರಾಧ್ಯಾಪಕ ಡಾ.ಎಂ.ರಘುನಂದನ್, ತುಮಕೂರು ವಿವಿ ಕುಲಪತಿ ಡಾ.ಕೇಶವ, ಪಿಇಎಸ್ ವಿಶ್ವವಿದ್ಯಾಲಯದ ಗ್ರಂಥಪಾಲಕ ಡಾ.ಬಿ.ಸುಭಾಷ್ ರೆಡ್ಡಿ, ಕಲಬುರಗಿಯ ಕೇಂದ್ರೀಯ ವಿವಿಯ ಗ್ರಂಥಪಾಲಕ ಡಾ.ಪರಶುರಾಮ ಕಟ್ಟಿಮನಿ, ಕಲಬುರಗಿ ಜಿಲ್ಲೆ ಅಫ್ಜಲಪುರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಗ್ರಂಥಪಾಲಕಿ ಡಾ.ಸಾವಿತ್ರಿ ಕೃಷ್ಣ ಕಟ್ಟಿಮನಿ, ಧಾರವಾಡ ಕರ್ನಾಟಕ ವಿವಿ ಗ್ರಂಥಾಲಯ ಮತ್ತು ಮಾಹಿತಿ ತಂತ್ರಜ್ಞಾನ ವಿಭಾಗದ ಸಹ ಪ್ರಾಧ್ಯಾಪಕ ಡಾ.ಗುರುರಾಜ ಎಸ್. ಹಡಗಲಿ ಅವರಿಗೆ ಪುರಸ್ಕಾರ ನೀಡಲಾಯಿತು.

ವಿಶಿಷ್ಟ ಗ್ರಂಥಾಲಯ ವಿಭಾಗದಲ್ಲಿ ಬೆಂಗಳೂರಿನ ಆಲ್ ಇಂಡಿಯಾ ರೇಡಿಯೊ (ರಾಜಭವನದ ರಸ್ತೆ) ಗ್ರಂಥಪಾಲಕಿ ಎಸ್.ಬಿ.ಪುಣ್ಯವತಿ ಹಾಗೂ ಸಾರ್ವಜನಿಕ ಗ್ರಂಥಾಲಯ ವಿಭಾಗದಲ್ಲಿ ರಾಯಚೂರು ಜಿಲ್ಲೆ ಸಿಂಧನೂರು ಹೈಟೆಕ್ ಗ್ರಂಥಾಲಯದ ಗ್ರಂಥಪಾಲಕ ವಿಶ್ವನಾಥ್ ಬಿ. ಕುಲಕರ್ಣಿ, ತುಮಕೂರು ಜಿಲ್ಲಾ ಕೇಂದ್ರ ಗ್ರಂಥಾಲಯದ (ಉಪ ನಿರ್ದೇಶಕರ ಕಚೇರಿ) ಗ್ರಂಥಾಲಯ ಸಹಾಯಕ ಕೆ. ರಾಜಶೇಖರ್ ಅವರಿಗೆ ಉತ್ತಮ ಗ್ರಂಥಪಾಲಕ ಪ್ರಶಸ್ತಿ ನೀಡಲಾಯಿತು.

ಪುಸ್ತಕ ಆಯ್ಕೆ ಸಮಿತಿ ಅಧ್ಯಕ್ಷ ಡಾ.ದೊಡ್ಡರಂಗೇಗೌಡ ಮಾತನಾಡಿ, 'ಪುಸ್ತಕ ಓದಿನಿಂದ ಜ್ಞಾನ ಹಾಗೂ ವಿಚಾರವಂತರಾಗಲು ಸಾಧ್ಯ ಇದೆ. ನಿರಂತರವಾಗಿ ಸಾಹಿತ್ಯ ಓದುವ ಅಭ್ಯಾಸ ಬೆಳೆಸಿಕೊಳ್ಳಬೇಕು' ಎಂದು ಪ್ರತಿಪಾದಿಸಿದರು. ಸಾರ್ವಜನಿಕ ಗ್ರಂಥಾಲಯ ಇಲಾಖೆ ನಿರ್ದೇಶಕ ಡಾ.ಸತೀಶ ಕುಮಾರ್ ಎಸ್. ಹೊಸಮನಿ ಮಾತನಾಡಿ, 'ಗ್ರಂಥಾಲಯ ಡಿಜಿಟಲೀಕರಣ ಯೋಜನೆಯಡಿ 26 ನಗರ ಕೇಂದ್ರ ಗ್ರಂಥಾಲಯ, 30 ಜಿಲ್ಲಾ ಕೇಂದ್ರ ಗ್ರಂಥಾಲಯ, 218 ತಾಲ್ಲೂಕು ಗ್ರಂಥಾಲಯ ಸೇರಿದಂತೆ ಒಟ್ಟು 272 ಗ್ರಂಥಾಲಯಗಳಲ್ಲಿ ಮೊದಲ ಹಂತದಲ್ಲಿ ಡಿಜಿಟಲ್ ಸೌಲಭ್ಯ ಕಲ್ಪಿಸಲಾಗಿದೆ' ಎಂದರು. ಶಾಸಕ ಎಂ.ಕೃಷ್ಣಪ್ಪ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಮಿತಿ ಪ್ರಧಾನ ಕಾರ್ಯದರ್ಶಿ ಡಾ.ಎಸ್.ಸೆಲ್ವಕುಮಾರ್ ಹಾಜರಿದ್ದರು.



ನಗರದ ಪುರಭವನದಲ್ಲಿ ಆಯೋಜಿಸಿದ್ದ ಬಿ.ಆರ್. ಅಂಬೇಡ್ಕರ್ ಅವರ 131ನೇ ಜನ್ಮ ದಿನಾಚರಣೆಯಲ್ಲಿ (ಎಡದಿಂದ) ಸಂಘದ ರಾಜ್ಯ ಕಾರ್ಯದರ್ಶಿ ಎಂ.ರವಿಪ್ರಕಾಶ್, ರಾಜ್ಯ ಪ್ರಧಾನ ಕಾರ್ಯದರ್ಶಿ ವೆಂಕಟರಮಣಪ್ಪ, ಜ್ಞಾನಪ್ರಕಾಶ ಸ್ವಾಮೀಜಿ, ಸಂಘದ ರಾಜ್ಯ ಅಧ್ಯಕ್ಷ ಎಫ್.ಎಚ್.ಜಕ್ಕಪ್ಪನವರ ಮತ್ತು ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್ ಅವರು ಬಿ.ಆರ್.ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು – ಪ್ರಜಾವಾಣಿ ಚಿತ್ರ

ಕೆಎಸ್‌ಆರ್‌ಟಿಸಿ: ಮೊಕದ್ದಮೆ ವಾಪಸ್ ಪಡೆಯಲು ಆಗ್ರಹ

ಬೆಂಗಳೂರು: 'ಕೆಎಸ್‌ಆರ್‌ಟಿಸಿ ಬಸ್ ಚಾಲಕರು, ನಿರ್ವಾಹಕರ ಮೇಲೆ ದಾಖಲಿಸಿರುವ ಮೊಕದ್ದಮೆಗಳನ್ನು ರಾಜ್ಯ ಸರ್ಕಾರವು ಹಿಂದಕ್ಕೆ ಪಡೆಯಬೇಕು' ಎಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ನೌಕರರ ಸಂಘದ ರಾಜ್ಯ ಅಧ್ಯಕ್ಷ ಎಫ್. ಎಚ್.ಜಕ್ಕಪ್ಪನವರ ಆಗ್ರಹಿಸಿದರು.

ನಿಗಮದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ನೌಕರರ ಸಂಘವು ನಗರದಲ್ಲಿ ಶುಕ್ರವಾರ ಆಯೋಜಿಸಿದ್ದ ಅಂಬೇಡ್ಕರ್ ಅವರ 131ನೇ ಜನ್ಮದಿನಾಚರಣೆಯಲ್ಲಿ ಮಾತನಾಡಿದರು.

'ಸಾರಿಗೆ ನೌಕರರನ್ನು ಸರ್ಕಾರಿ ನೌಕರರೆಂದು ಪರಿಗಣಿಸಲು ಆಗ್ರಹಿಸಿ ಪರ್ಯಾಯ ಸಂಘಟನೆಯ ನೇತೃತ್ವದಲ್ಲಿ ನಡೆದ ಪ್ರತಿಭಟನೆ ವೇಳೆ ಕೆಲವರ ಮೇಲೆ ಪ್ರಕರಣ ದಾಖಲಿಸಲಾಗಿತ್ತು. ನೌಕರರನ್ನು ಬೇರೆ ವಿಭಾಗಗಳಿಗೆ ವರ್ಗಾವಣೆ ಮಾಡಲಾಗಿತ್ತು' ಎಂದರು.

'ಕೆಎಸ್‌ಆರ್‌ಟಿಸಿಯನ್ನು ಖಾಸಗೀಕರಣಗೊಳಿಸುವ ಹುನ್ನಾರ ನಡೆಯುತ್ತಿದೆ. ಸಾರ್ವಜನಿಕ ಉದ್ದಿಮೆಗಳು ಉಳಿಯಬೇಕು. ಅವುಗಳ ಅಭಿವೃದ್ಧಿಯಿಂದ ಕಲ್ಯಾಣ ರಾಜ್ಯ ಸಾಧ್ಯವಾಗಲಿದೆ. ಯಾವುದೇ ಕಾರಣಕ್ಕೂ ಖಾಸಗೀಕರಣ ಮಾಡಬಾರದು' ಎಂದು ಆಗ್ರಹಿಸಿದರು.

'ರಾಜ್ಯದಲ್ಲಿ ನಿಗಮಕ್ಕೆ ಸೇರಿದ 3,700 ಎಕರೆಯಷ್ಟು ಆಸ್ತಿಯಿದೆ. ನಿಗಮದ ಅಭಿವೃದ್ಧಿ ಕಾರ್ಯಕ್ಕೆ ಬೆಂಗಳೂರಿನಲ್ಲಿ 1,200 ಎಕರೆ ಗುರುತಿಸಲಾಗಿತ್ತು. ಅದನ್ನು ಅದಾನಿಗೆ ಕೊಡುವುದಾಗಿ ಸಂಸದರೊಬ್ಬರು ಹೇಳಿದ್ದಾರೆ. ಯಾವ ಕಾರಣಕ್ಕೂ ಈ ಕೆಲಸ ನಡೆಯಬಾರದು' ಎಂದು ಹೇಳಿದರು.

ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್ ಮಾತನಾಡಿ, 'ಅಂಬೇಡ್ಕರ್ ಜಾತಿ ಹಾಗೂ ಹಸಿವು ಮುಕ್ತ ಭಾರತ ನಿರ್ಮಿಸುವ ಕನಸು ಕಂಡಿದ್ದರು. ಆ ನಿಟ್ಟಿನಲ್ಲಿ ಪ್ರಬುದ್ಧ ಹಾಗೂ ವೈಚಾರಿಕ ಭಾರತ ನಿರ್ಮಿಸಬೇಕಿದೆ' ಎಂದು ನುಡಿದರು. ಮೈಸೂರಿನ ಉರಿಲಿಂಗ ಪೆದ್ದಿಶ್ವರ ಸಂಸ್ಥಾನ ಶಾಖಾ ಮಠದ ಜ್ಞಾನಪ್ರಕಾಶ ಸ್ವಾಮೀಜಿ, ಎಸ್.ಉಮೇಶ್, ಶಾಖಾ ಮಾರುತಿ, ಎಸ್.ಶ್ರೀನಿವಾಸ, ಎಚ್. ದಿವಾಕರ್, ಎಂ,ಜಗದೀಶ್, ಲಕ್ಷ್ಮಣ್ ಮೊದಲಾದವರು ಹಾಜರಿದ್ದರು.

ಘರ್ಷಣೆ: ಆರು ತಂಡ ರಚನೆ 10 ಮಂದಿ ಬಂಧನ

ಕನಕಗಿರಿ (ಕೊಪ್ಪಳ ಜಿಲ್ಲೆ): ತಾಲ್ಲೂಕಿನ ಹುಲಿಹೈದರ ಗ್ರಾಮದಲ್ಲಿ ಗುರುವಾರ ನಡೆದ ಗುಂಪು ಘರ್ಷಣೆಗೆ ಸಂಬಂಧಿಸಿದಂತೆ ಪೊಲೀಸರು 10 ಜನರನ್ನು ಬಂಧಿಸಿ, 15 ಜನರನ್ನು ವಶಕ್ಕೆ ತೆಗೆದುಕೊಂಡಿದ್ದಾರೆ.

'ವಶಪಡಿಸಿಕೊಂಡ ಕೆಲವರ ನಡೆ ಅನುಮಾನಾಸ್ಪದವಾಗಿದ್ದು, ಅವರನ್ನು ತೀವ್ರ ವಿಚಾರಣೆಗೆ ಒಳಪಡಿಸಲಾಗಿದೆ. ಇನ್ನಷ್ಟು ಆರೋಪಿಗಳ ಬಂಧನಕ್ಕೆ ಪೊಲೀಸರ ಆರು ತಂಡ ರಚಿಸಲಾಗಿದೆ' ಎಂದು ಎಸ್‌ಪಿ ಅರುಣಾಂಗ್ಶು ಗಿರಿ ತಿಳಿಸಿದರು.

'ಗ್ರಾಮಸ್ಥರು ಆತಂಕಪಡುವ ಅಗತ್ಯವಿಲ್ಲ. ನಿಜವಾದ ಆರೋಪಿಗಳನ್ನು ಮಾತ್ರ ಬಂಧಿಸಲಾಗುವುದು. ತಪ್ಪಿತಸ್ಥರು ಅಲ್ಲದವರನ್ನು ಬಿಡುಗಡೆ ಮಾಡಲಾಗುವುದು' ಎಂದರು.

ಬಂಧನದ ಭೀತಿಯಿಂದ ಬಹುತೇಕ ಜನರು ಗ್ರಾಮ ತೊರೆದಿದ್ದಾರೆ.



ಸ್ವಾತಂತ್ರ್ಯೋತ್ಸವ ಸಂಭ್ರಮ

ಪ್ರಜಾವಾಣಿ-ಡೆಕ್ಕನ್ ಹೆರಾಲ್ಡ್ ಕಚೇರಿಯಲ್ಲಿ ನಡೆದ ಸ್ವಾತಂತ್ರ್ಯ ದಿನಾಚರಣೆ ಸಂದರ್ಭದ ಕಾರ್ಯಕ್ರಮದಲ್ಲಿ ದಕ್ಷಿಣ್ ಇಂಟರ್‌ನ್ಯಾಷನಲ್ ಸ್ಕೂಲ್‌ನ ಮಕ್ಕಳು ಶುಕ್ರವಾರ ಶಾಸ್ತ್ರೀಯ ಸಂಗೀತ ಹಾಗೂ ದೇಶಭಕ್ತಿ ಗೀತೆಗಳನ್ನು ಪ್ರಸ್ತುತಪಡಿಸಿದರು

ವಿಶ್ವ ಅಂಗಾಂಗ ದಿನ: ಮೂತ್ರಪಿಂಡಕ್ಕಾಗಿ 4,388 ಮಂದಿ ನೋಂದಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಅಂಗ ಮತ್ತು ಅಂಗಾಂಶ ಕಸಿ ಸಂಸ್ಥೆಯಡಿ (ಸೊಟ್ಟೊ) ರಾಜ್ಯದಲ್ಲಿ ಮೂತ್ರಪಿಂಡಕ್ಕೆ 4,388 ಹಾಗೂ ಯಕೃತ್ತಿಗಾಗಿ 1,153 ಮಂದಿ ಹೆಸರು ನೋಂದಾಯಿಸಿ, ಅಂಗಾಂಗಕ್ಕಾಗಿ ಎದುರು ನೋಡುತ್ತಿದ್ದಾರೆ.


ವಿಶ್ವ ಅಂಗಾಂಗ ದಾನದ ಪ್ರಯುಕ್ತ ಆರೋಗ್ಯ ಇಲಾಖೆಯು ಶನಿವಾರ ರಾಜ್ಯದಾದ್ಯಂತ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಈ ಮೊದಲು ಜೀವಸಾರ್ಥಕತೆ ಹೆಸರಿನಿಂದ ನೋಂದಾಯಿಸಲಾಗಿದ್ದ ಸೊಟ್ಟೊ, ಅಂಗಾಂಗ ದಾನಕ್ಕೆ ಉತ್ತೇಜನ ನೀಡುವುದು ಹಾಗೂ ಮೃತ ದಾನಿಗಳಿಂದ ಅಂಗಾಂಗ ಒದಗಿಸುವ ಕಾರ್ಯವನ್ನು ಮಾಡುತ್ತಿದೆ.

ಅಂತಿಮ ಹಂತದ ಅಂಗಾಂಗ ವೈಫಲ್ಯ ಸಮಸ್ಯೆಯಿಂದ ಬಳಲುತ್ತಿರುವವರಿಗೆ ಸಂಸ್ಥೆ ನೆರವಾಗುತ್ತಿದೆ. ಈ ಸಂಸ್ಥೆಯಡಿ ಹೃದಯಕ್ಕಾಗಿ 92 ಮಂದಿ, ಶ್ವಾಸಕೋಶಕ್ಕಾಗಿ 36 ಮಂದಿ, ಹೃದಯ ಮತ್ತು ಶ್ವಾಸಕೋಶಕ್ಕೆ 22 ಮಂದಿ, ಯಕೃತ್ತು ಮತ್ತು ಮೂತ್ರಪಿಂಡಕ್ಕೆ 31 ಮಂದಿ, ಮೂತ್ರಪಿಂಡ ಹಾಗೂ ಮೇದೋಜೀರಕ ಗ್ರಂಥಿಗೆ 17 ಮಂದಿ ಹೆಸರು ನೋಂದಾಯಿಸಿದ್ದಾರೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

> **ರಾಜ್ಯದಲ್ಲಿ ಅಂಗಾಂಗ ದಾನ ಹಾಗೂ ಕಸಿಗೆ ವೇಗ ನೀಡಲು ಏರ್ ಆಂಬುಲೆನ್ಸ್ ಸೌಲಭ್ಯ ತರಲಾಗುತ್ತಿದೆ. ಎಲ್ಲರೂ ಅಂಗಾಂಗ ದಾನಕ್ಕೆ ಹೆಸರು ನೋಂದಾಯಿಸಿಕೊಳ್ಳಿ.**
> **ಡಾ.ಕೆ. ಸುಧಾಕರ್,** ಆರೋಗ್ಯ ಸಚಿವ

ಕೋವಿಡ್‌ನಿಂದಾಗಿ 2020ರಲ್ಲಿ 35 ಮಂದಿ ಮಾತ್ರ ಅಂಗಾಂಗ ದಾನ ಮಾಡಿದ್ದರು. 2021ರಲ್ಲಿ ಈ ಸಂಖ್ಯೆ 70ಕ್ಕೆ ಏರಿಕೆಯಾಗಿತ್ತು. ಈ ವರ್ಷ 81 ಮಂದಿ ಅಂಗಾಂಗಗಳನ್ನು ನೀಡಿದ್ದಾರೆ. ಆರು ವರ್ಷಗಳಲ್ಲಿ 448 ಮಂದಿ ಅಂಗಾಂಗ ದಾನ ಮಾಡಿದ್ದಾರೆ. 662 ಮೂತ್ರಪಿಂಡ, 374 ಯಕೃತ್ತು, 133 ಹೃದಯ ಪಡೆದು, ನೋಂದಾಯಿತ ರೋಗಿಗಳಿಗೆ ಒದಗಿಸಲಾಗಿದೆ.

ಮಿದುಳು ನಿಷ್ಕ್ರಿಯಗೊಂಡ ಬಳಿಕ ಕುಟುಂಬ ಸದಸ್ಯರ ಒಪ್ಪಿಗೆ ಮೇರೆಗೆ ಅಂಗಾಂಗವನ್ನು ದಾನವಾಗಿ ಪಡೆಯಲಾಗುತ್ತದೆ. ಅಂಗಾಂಗ ದಾನಕ್ಕೆ ವಯಸ್ಸಿನ ಮಿತಿಯಿಲ್ಲ. ಒಬ್ಬ ದಾನಿಯು 8 ಜೀವಗಳನ್ನು ಉಳಿಸಬಹುದು. ಹೃದಯ, ಎರಡು ಮೂತ್ರಪಿಂಡಗಳು, ಪಿತ್ತಜನಕಾಂಗ, ಮೇದೋಜೀರಕ ಗ್ರಂಥಿ, ಸಣ್ಣ ಕರುಳು ಮತ್ತು ಶ್ವಾಸಕೋಶಗಳನ್ನು ದಾನ ಮಾಡಬಹುದು. ಅದೇ ದಾನಿ ಅಂಗಾಂಶ ದಾನದ ಮೂಲಕ 50ಕ್ಕೂ ಹೆಚ್ಚು ಜನರಿಗೆ ನೆರವಾಗಬಹುದು. ಚರ್ಮ, ಮೂಳೆಗಳು, ಅಸ್ಥಿರಜ್ಜುಗಳು, ಹೃದಯದ ಕವಾಟಗಳು ಮತ್ತು ಕಾರ್ನಿಯಾಗಳನ್ನು ದಾನ ಮಾಡಬಹುದು ಎಂದು ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.



‘ಲೋಕಾಯುಕ್ತ ಬಲಪಡಿಸಿ, ಭ್ರಷ್ಟಾಚಾರ ವಿರುದ್ಧ ನಡೆ ಸಾಬೀತುಪಡಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಲೋಕಾಯುಕ್ತ ಸಂಸ್ಥೆ ಬಲಪಡಿಸಲು ಹೈಕೋರ್ಟ್ ನೀಡಿರುವ ಆದೇಶವನ್ನು ರಾಜ್ಯ ಸರ್ಕಾರ ಪಾಲಿಸಿದರೆ ಬಿಜೆಪಿಯು ಭ್ರಷ್ಟಾಚಾರದ ವಿರುದ್ಧವಾಗಿದೆ ಎಂಬುದು ಸಾಬೀತಾಗುತ್ತದೆ’ ಎಂದು ಬಿಜೆಪಿ ಮುಖಂಡ ಬಿ.ಸೋಮಶೇಖರ್ ಅಭಿಪ್ರಾಯಪಟ್ಟಿದ್ದಾರೆ.



ಬಿ.ಸೋಮಶೇಖರ್

‘ಮೌಲ್ಯಾಧಾರಿತ ರಾಜಕಾರಣ ಅಪ್ಪಿಕೊಂಡಿದ್ದ ರಾಮಕೃಷ್ಣ ಹೆಗಡೆ ಅವರು ಲೋಕಾಯುಕ್ತ ಸಂಸ್ಥೆಯನ್ನು ಹುಟ್ಟು ಹಾಕಿದ್ದರು. ಆಡಳಿತದಲ್ಲಿ ಭ್ರಷ್ಟಾಚಾರ ಮತ್ತು ಅಧಿಕಾರ ದುರುಪಯೋಗ ಇರಬಾರದು ಎಂದು ಅವರು ಬಯಸಿದ್ದರು. ಆದೇ ಸಂದರ್ಭದಲ್ಲಿ ನನ್ನ ಮೇಲಿನ ಆರೋಪವೊಂದನ್ನು ಹೆಗಡೆ ಅವರು ಲೋಕಾಯುಕ್ತ ತನಿಖೆಗೆ ಒಳಪಡಿಸಿದ್ದರು. ನೈತಿಕ ಕಾರಣದಿಂದ ನಾನು ರಾಜೀನಾಮೆ ನೀಡಿದ್ದೆ. ಅದಕ್ಕೆ ಮೆಚ್ಚುಗೆಯೂ ವ್ಯಕ್ತವಾಗಿತ್ತು. ಲೋಕಾಯುಕ್ತ ತನಿಖೆಯಲ್ಲಿ ಆರೋಪಗಳು ಆಧಾರ ರಹಿತ ಎಂಬುದು ಸಾಬೀತಾಯಿತು. ಬಳಿಕ ರಾಜಕೀಯ ಒತ್ತಡಗಳಿಗೆ ಮಣಿದು ಹೆಗಡೆ ಅವರು ಇಷ್ಟವಿಲ್ಲದಿದ್ದರೂ ಲೋಕಾಯುಕ್ತರ ಅಧಿಕಾರ ಮೊಟಕುಗೊಳಿಸಿದ್ದರು’ ಎಂದು ವಿವರಿಸಿದ್ದಾರೆ.

‘ನಂತರ ಅಧಿಕಾರಕ್ಕೆ ಬಂದವರು ಲೋಕಾಯುಕ್ತ ಬಲಪಡಿಸುವ ಮಾತುಗಳನ್ನೇ ಆಡುತ್ತಿದ್ದರು. ಸಿದ್ದರಾಮಯ್ಯ ಅವರು ಬಲಪಡಿಸುವ ಬದಲು ಇರುವ ಅಧಿಕಾರವನ್ನೂ ಕಸಿದುಕೊಂಡು ಮೂಲೆಗುಂಪು ಮಾಡಿದರು. ಇದೀಗ ಎಲ್ಲರ ಆಶಯದಂತೆ ಎಸಿಬಿಯನ್ನು ಹೈಕೋರ್ಟ್ ರದ್ದುಗೊಳಿಸಿದೆ. ಇದರಿಂದ ಸಿದ್ದರಾಮಯ್ಯ ಅವರಿಗೆ ಮುಖಭಂಗವಾಗಿದೆ. ಹೈಕೋರ್ಟ್ ತೀರ್ಪನ್ನು ಸ್ವಾಗತಿಸಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, ಸಂಸ್ಥೆಯನ್ನು ಇನ್ನಷ್ಟು ಬಲಪಡಿಸಲು ಮುಂದಾಗಬೇಕು’ ಎಂದು ಒತ್ತಾಯಿಸಿದ್ದಾರೆ.

ಕಾಂಗ್ರೆಸ್‌ನಿಂದ ಸ್ವಾತಂತ್ರ್ಯ ನಡಿಗೆ: ಯುವಕರ ಆಸಕ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಅಂಗವಾಗಿ ಆಗಸ್ಟ್ 15ರಂದು ನಗರದಲ್ಲಿ ಕಾಂಗ್ರೆಸ್ ಹಮ್ಮಿಕೊಂಡಿರುವ ಸ್ವಾತಂತ್ರ್ಯ ನಡಿಗೆ ಕಾರ್ಯಕ್ರಮದಲ್ಲಿ ಭಾಗವಹಿಸಲು ಈಗಾಗಲೇ 62,394 ಮಂದಿ ಆನ್‌ಲೈನ್ ಮೂಲಕ ನೋಂದಣಿ ಮಾಡಿಕೊಂಡಿದ್ದಾರೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದರು.

‘ಪ್ರತಿದಿನ 10 ಸಾವಿರ ಮಂದಿ ನೋಂದಣಿ ಮಾಡಿಕೊಳ್ಳುತ್ತಿದ್ದಾರೆ. ಇವರಲ್ಲಿ ಶೇ 75ರಷ್ಟು ಯುವಕರಿದ್ದಾರೆ. ನೋಂದಣಿ ಮಾಡಿಕೊಂಡವರಿಗೆ ಕಿಟ್, ರಾಷ್ಟ್ರಧ್ವಜ, ಟೀ ಶರ್ಟ್ ನೀಡುವ ಪ್ರಯತ್ನ ಮಾಡಲಾಗುತ್ತಿದೆ. ಎಲ್ಲರೂ ಬಿಳಿ ವಸ್ತ್ರ ಧರಿಸಿ, ಕುಟುಂಬ ಸಮೇತರಾಗಿ ಭಾಗವಹಿಸಬೇಕು’ ಎಂದು ಕೋರಿದರು.

‘ವಾಹನ ದಟ್ಟಣೆ ತಡೆಯಲು ಮೆಟ್ರೊ ರೈಲು ಟಿಕೆಟ್ ಖರೀದಿಸಲಾಗಿದೆ. ಟಿಕೆಟ್ ದರದಲ್ಲಿ ವಿನಾಯಿತಿ ನೀಡುವಂತೆ ಮೆಟ್ರೊ ಆಡಳಿತ ಮಂಡಳಿ ಹಾಗೂ ಮುಖ್ಯಮಂತ್ರಿಗೆ ಪತ್ರ ಬರೆಯಲಾಗಿದೆ. ಬೆಂಗಳೂರು ನಾಗರಿಕರು ಮೆಟ್ರೊ ಮಾರ್ಗವನ್ನೇ ಬಳಸಬೇಕು’ ಎಂದು ತಿಳಿಸಿದರು. ‘ಬೆಂಗಳೂರು ನಗರಕ್ಕೆ ಸಂಬಂಧಿಸಿದಂತೆ ಶಾಸಕ ರಾಮಲಿಂಗಾರೆಡ್ಡಿ ಅವರ ತಂಡ ಮಳಿಗೆಗಳನ್ನು ಹಾಕಿ, ತಿಂಡಿ, ನೀರಿನ ವ್ಯವಸ್ಥೆ ಮಾಡಲಿದೆ. ಕಾರ್ಯಕ್ರಮಕ್ಕೆ ಸೇವಾದಳದ ಒಂದು ಸಾವಿರ ಸದಸ್ಯರನ್ನು ಸಹ ನಿಯೋಜಿಸಲಾಗಿದೆ. ರಸ್ತೆಯಲ್ಲಿ ರಾಷ್ಟ್ರಧ್ವಜ ಬಿದ್ದಿದ್ದರೆ ಅದನ್ನು ಎತ್ತಿಕೊಳ್ಳುವ ಕಾರ್ಯವನ್ನು ಅವರು ಮಾಡಲಿದ್ದಾರೆ. ಎಲ್ಲ ರೈಲ್ವೆ ನಿಲ್ದಾಣ ಕೇಂದ್ರಗಳಲ್ಲಿ ಪಕ್ಷದ ಪ್ರತಿನಿಧಿಗಳು ಮಾರ್ಗದರ್ಶನ ನೀಡುವರು’ ಎಂದು ತಿಳಿಸಿದರು.

‘ಸರ್ಕಾರ ರಾಷ್ಟ್ರಧ್ವಜ ಖರೀದಿಗೆ ದರ ನಿಗದಿಪಡಿಸಿರುವುದನ್ನು ಪ್ರಶ್ನಿಸುವುದಿಲ್ಲ. ನಾವು ನೀಡುವ ರಾಷ್ಟ್ರಧ್ವಜಕ್ಕೆ ಹಣ ಪಡೆಯುವುದಿಲ್ಲ. ಇದು ದೇಶಕ್ಕೆ ಗೌರವ ನೀಡುವ ವಿಚಾರವಾಗಿದ್ದು, ವ್ಯಾಪಾರ ಮಾಡಬಾರದು. ಧಾರವಾಡದ ಖಾದಿ ಭಂಡಾರದಿಂದ ರಾಷ್ಟ್ರಧ್ವಜ ಖರೀದಿಸಲಾಗಿದೆ’ ಎಂದು ಹೇಳಿದರು..

ಸ್ವಾತಂತ್ರ್ಯ ನಡಿಗೆ ಮಾರ್ಗ

ಸಂಗೊಳ್ಳಿ ರಾಯಣ್ಣ ವೃತ್ತದಿಂದ ಮಧ್ಯಾಹ್ನ 2 ಗಂಟೆಗೆ ಪಾದಯಾತ್ರೆ ಆರಂಭವಾಗಿ ಕೆ.ಆರ್. ವೃತ್ತ, ಹಡ್ಸನ್ ಸರ್ಕಲ್, ಜೆಸಿ ರಸ್ತೆ, ಮಿನರ್ವ ವೃತ್ತ, ವಿ.ವಿ.ಪುರಂ ವೃತ್ತ ಮಾರ್ಗವಾಗಿ ಬಸವನಗುಡಿ ನ್ಯಾಷನಲ್ ಕಾಲೇಜು ಮೈದಾನ ತಲುಪಲಿದೆ.

ಮಾರ್ಗದಲ್ಲಿ ಸ್ವಾತಂತ್ರ್ಯ ಹೋರಾಟದ ಮುಂಚೂಣಿ ನಾಯಕರ ಚಿತ್ರಗಳನ್ನು ಪ್ರದರ್ಶಿಸಲು ಉದ್ದೇಶಿಸಲಾಗಿದೆ. ಮಂಗಳೂರು, ಬೆಳಗಾವಿ ಸೇರಿದಂತೆ ವಿವಿಧ ಜಿಲ್ಲೆಗಳ ಕಲಾ ತಂಡಗಳು ಪಾದಯಾತ್ರೆಯಲ್ಲಿ ಭಾಗವಹಿಸಲಿವೆ.

‘1.5 ಲಕ್ಷಕ್ಕೂ ಹೆಚ್ಚು ಜನ ಪಾಲ್ಗೊಳ್ಳುವ ನಿರೀಕ್ಷೆ’

‘ಸ್ವಾತಂತ್ರ್ಯ ನಡಿಗೆ ಕಾರ್ಯಕ್ರಮದಲ್ಲಿ ಸುಮಾರು 1.5 ಲಕ್ಷಕ್ಕೂ ಹೆಚ್ಚು ಜನ ಭಾಗವಹಿಸುವ ನಿರೀಕ್ಷೆ ಇದೆ’ ಎಂದು ಕಾರ್ಯಕ್ರಮ ಅನುಷ್ಠಾನ ಸಮಿತಿ ಅಧ್ಯಕ್ಷ ಡಾ. ಜಿ. ಪರಮೇಶ್ವರ ತಿಳಿಸಿದರು.

‘ತುಮಕೂರು ರಸ್ತೆ ಮೂಲಕ 21 ಜಿಲ್ಲೆಗಳು ಬೆಂಗಳೂರು ಸಂಪರ್ಕ ಹೊಂದಿದ್ದು, ಕಾರ್ಯಕರ್ತರಿಗೆ ಸಿದ್ದಗಂಗಾ ಮಠದಲ್ಲಿ ಹಿಂದಿನ ರಾತ್ರಿ ತಂಗುವ ಸಿದ್ಧತೆ ಮಾಡಲಾಗಿದೆ. ಅಂತರರಾಷ್ಟ್ರೀಯ ಪ್ರದರ್ಶನ ಮೈದಾನದವರೆಗೂ ಅವರು ತಮ್ಮ ವಾಹನಗಳನ್ನು ತರಬಹುದು. ಅಲ್ಲಿಂದ ಮೆಟ್ರೊ ಮೂಲಕ ಸಂಗೊಳ್ಳಿ ರಾಯಣ್ಣ ವೃತ್ತದವರೆಗೆ ಆಗಮಿಸಬಹುದು’ ಎಂದರು.

’ಕೋಲಾರ ಮಾರ್ಗವಾಗಿ ಬರುವವರಿಗೆ ಐಟಿಐ ಮೈದಾನದಲ್ಲಿ ವಾಹನ ನಿಲುಗಡೆ ಮಾಡಿಕೊಡಲಾಗಿದ್ದು, ಊಟದ ವ್ಯವಸ್ಥೆ ಇದೆ. ಅಲ್ಲಿಂದ ಬೈಯ್ಯಪ್ಪನಹಳ್ಳಿಯಿಂದ ಮೆಟ್ರೋ ಮಾರ್ಗವಾಗಿ ಆಗಮಿಸುತ್ತಾರೆ. ಮೈಸೂರು ರಸ್ತೆಯಲ್ಲಿ ಕೆಂಗೇರಿ ಪಕ್ಕದಲ್ಲಿ ಒಕ್ಕಲಿಗರ ಸಂಘದ ಬಳಿ ವಾಹನ ನಿಲುಗಡೆ, ಊಟದ ವ್ಯವಸ್ಥೆ ಮಾಡಲಾಗಿದೆ. ಚಿಕ್ಕಬಳ್ಳಾಪುರ ಮಾರ್ಗವಾಗಿ ಬರುವವರಿಗೆ ಅರಮನೆ ಮೈದಾನದಲ್ಲಿ ವ್ಯವಸ್ಥೆ ಮಾಡಲಾಗಿದೆ. ರಾಮನಗರದಿಂದ ಬರುವವರಿಗೆ ನೈಸ್ ಜಂಕ್ಷನ್‌ನಲ್ಲಿ ವ್ಯವಸ್ಥೆ ಮಾಡಲಾಗಿದೆ. ರೈಲಿನಲ್ಲಿ ಬರುವವರಿಗೆ ಮಳವಳ್ಳಿ ಚಿಕ್ಕಣ್ಣ ಕಲ್ಯಾಣ ಮಂಟಪ, ಆಂಜನೇಯ ದೇವಸ್ಥಾನ, ಸತ್ಯನಾರಾಯಣ ಕಲ್ಯಾಣ ಮಂಟಪದಲ್ಲಿ ಉಳಿದುಕೊಳ್ಳುವ ವ್ಯವಸ್ಥೆ ಇದೆ ಎಂದರು.

ಸಂಕ್ಷಿಪ್ತ ಸುದ್ದಿ

ಕಾಟಿಪಳ್ಳ: ರಾಖಿ ತೆಗೆಸಿದ್ದಕ್ಕೆ ಪೋಷಕರ ಆಕ್ರೋಶ

ಸುರತ್ಕಲ್: ನಗರದ ಹೊರವಲಯದ ಕಾಟಿಪಳ್ಳದ ಇನ್ಫೆಂಟ್ ಮೇರಿ ಆಂಗ್ಲ ಮಾಧ್ಯಮ ಶಾಲೆಯಲ್ಲಿ ವಿದ್ಯಾರ್ಥಿಗಳ ಕೈಯಲ್ಲಿದ್ದ ರಾಖಿ ತೆಗೆಸಿದ್ದಕ್ಕೆ ಪೋಷಕರು ಹಾಗೂ ಬಿಜೆಪಿ ಕಾರ್ಯಕರ್ತರು ಶುಕ್ರವಾರ ಶಾಲೆಗೆ ಮುತ್ತಿಗೆ ಹಾಕಿ ಆಕ್ರೋಶ ವ್ಯಕ್ತಪಡಿಸಿದರು.

ರಕ್ಷಾ ಬಂಧನ ಹಬ್ಬದ ಪ್ರಯುಕ್ತ ಕೆಲವು ವಿದ್ಯಾರ್ಥಿಗಳು ಗುರುವಾರ ಕೈಗೆ ರಾಖಿ ಕಟ್ಟಿಕೊಂಡು ತರಗತಿಗೆ ಬಂದಿದ್ದರು. ಶಿಕ್ಷಕರು ಮಕ್ಕಳ ಕೈಯಲ್ಲಿದ್ದ ರಾಖಿ ತೆಗೆಸಿ ಕಸದ ಬುಟ್ಟಿಗೆ ಎಸೆದಿದ್ದರು ಎಂದು ಆರೋಪಿಸಲಾಗಿದೆ.

‘ವಿದ್ಯಾರ್ಥಿಗಳು ‘ಫ್ರೆಂಡ್ ಶಿಪ್ ಬ್ಯಾಂಡ್’ ಧರಿಸಿದ್ದಾರೆ ಎಂದುಕೊಂಡು ಅದನ್ನು ತೆಗೆಸಿದ್ದೇವೆ’ ಎಂದು ಶಿಕ್ಷಕರು ಪೋಷಕರಿಗೆ ಸಮಜಾಯಿಷಿ ನೀಡಿದರು. ಇದಕ್ಕೊಪ್ಪದ ಪೋಷಕರು, ರಾಖಿ ತೆಗೆಸಿದ ಶಿಕ್ಷಕಿಯೇ ಮಕ್ಕಳ ಕೈಗೆ ಮತ್ತೆ ರಾಖಿ ಕಟ್ಟಬೇಕು ಎಂದು ಪೋಷಕರು ಪಟ್ಟು ಹಿಡಿದರು. ಪರಿಸ್ಥಿತಿ ಹದ್ದು ಮೀರುವುದನ್ನು ತಡೆಯಲು ಸುರತ್ಕಲ್ ಠಾಣೆಯ ಪೊಲೀಸರು ಆಡಳಿತ ಮಂಡಳಿ ಹಾಗೂ ಪೋಷಕರ ಜೊತೆ ಮಾತುಕತೆ ನಡೆಸಿದರು. ಬಳಿಕ ಶಾಲಾ ಮುಖ್ಯ ಶಿಕ್ಷಕರ ಕೈಗೂ ಪೋಷಕರು ರಾಖಿ ಕಟ್ಟಿದರು.

ಗುಂಡಿನ ದಾಳಿ: 12 ಮಂದಿ ಸಾವು

ಸೆಟಿಂಜ್, ಅಮೆರಿಕ (ಎಪಿ): ಮಾಂಟೆನಿಗ್ರೊದ ಸೆಟಿಂಜ್ ಎಂಬ ಪಟ್ಟಣದಲ್ಲಿ ಕೌಟುಂಬಿಕ ಕಲಹದ ಹಿನ್ನೆಲೆಯಲ್ಲಿ ವ್ಯಕ್ತಿಯೊಬ್ಬ ಗುಂಡಿನ ದಾಳಿ ನಡೆಸಿದ ಘಟನೆಯಲ್ಲಿ 11 ಮಂದಿ ಮೃತಪಟ್ಟಿದ್ದಾರೆ. ಒಬ್ಬ ಪೊಲೀಸ್ ಸೇರಿ ಇತರ ಆರು ಜನರು ಗಾಯಗೊಂಡಿದ್ದಾರೆ ಎಂದು ಮಾಧ್ಯಮಗಳು ಶುಕ್ರವಾರ ವರದಿ ಮಾಡಿವೆ.

ನಂತರ ನಡೆದ ಗುಂಡಿನ ಚಕಮಕಿಯಲ್ಲಿ ಪೊಲೀಸರು ಈ ವ್ಯಕ್ತಿಯನ್ನು ಹತ್ಯೆ ಮಾಡಿದ್ದಾರೆ. ಗಾಯಗೊಂಡವರ ಸ್ಥಿತಿ ಬಗ್ಗೆ ಹೆಚ್ಚಿನ ಮಾಹಿತಿ ಲಭ್ಯವಾಗಿಲ್ಲ ಎಂದು ಮಾಧ್ಯಮಗಳು ವರದಿ ಮಾಡಿವೆ.

ಇದೇ 28 ರಂದು ಬಿಜೆಪಿ ಜನೋತ್ಸವ

ಬೆಂಗಳೂರು: ರಾಜ್ಯ ಸರ್ಕಾರಕ್ಕೆ ಒಂದು ವರ್ಷ ತುಂಬಿದ ಹಿನ್ನೆಲೆಯಲ್ಲಿ ಇದೇ 28 ರಂದು ದೊಡ್ಡಬಳ್ಳಾಪುರದಲ್ಲಿ ಜನೋತ್ಸವ ನಡೆಸಲು ಬಿಜೆಪಿ ತೀರ್ಮಾನಿಸಿದೆ.

ಜುಲೈ 28 ರಂದು ಜನೋತ್ಸವ ನಿಗದಿ ಮಾಡಲಾಗಿತ್ತು. ಸುಳ್ಯದ ಸಮೀಪದ ಬೆಳ್ಳಾರೆಯಲ್ಲಿ ಪಕ್ಷದ ಕಾರ್ಯಕರ್ತ ಪ್ರವೀಣ್ ಬೆಟ್ಟಾರು ಅವರ ಹತ್ಯೆಯಿಂದ ಕಾರ್ಯಕ್ರಮವನ್ನು ರದ್ದುಪಡಿಸಲಾಗಿತ್ತು.

ಅತ್ಯುತ್ತಮ ತನಿಖೆ: ರಾಜ್ಯದ 6 ಪೊಲೀಸರಿಗೆ ಕೇಂದ್ರ ಪದಕ

ಪ್ರಜಾವಾಣಿ ವಾರ್ತೆ



ಕೆ.ಲಕ್ಷ್ಮೀ ಗಣೇಶ್



ಶಂಕರ್ ಮರಿಹಾಳ



ವೆಂಕಟಪ್ಪ ನಾಯ್ಕ



ಎಂ.ಆರ್.ಗೌತಮ್



ಶಂಕರಗೌಡ ಪಾಟೀಲ



ಎಚ್ ಗುರು ಬಸವರಾಜ್

ನವದೆಹಲಿ: ಕೊಲೆ, ಡ್ರಗ್ಸ್ ಮಾರಾಟ ಹಾಗೂ ಇತರ ಗಂಭೀರ ಪ್ರಕರಣಗಳನ್ನು ಭೇದಿಸಿ ಅಪರಾಧಿಗಳಿಗೆ ಶಿಕ್ಷೆ ಕೊಡಿಸಿದ್ದ ರಾಜ್ಯದ ಆರು ಪೊಲೀಸ್ ಅಧಿಕಾರಿಗಳಿಗೆ ಕೇಂದ್ರ ಗೃಹ ಸಚಿವರ 2022ನೇ ಸಾಲಿನ ಪದಕ ಲಭಿಸಿದೆ.

ಲೋಕಾಯುಕ್ತ ಎಸ್ಪಿ ಕೆ. ಲಕ್ಷ್ಮೀ ಗಣೇಶ್, ಹೆಸ್ಕಾಂ ಎಸ್ಪಿ ಶಂಕರ್ ಕೆ. ಮರಿಹಾಳ, ಸಿಂಧನೂರು ಉಪ ವಿಭಾಗದ ಡಿವೈಎಸ್ಪಿ ವೆಂಕಟಪ್ಪ ನಾಯ್ಕ, ಲೋಕಾಯುಕ್ತ ಡಿವೈಎಸ್ಪಿ ಎಂ.ಆರ್. ಗೌತಮ್, ಸಿಐಡಿ ಡಿವೈಎಸ್ಪಿ (ಕಲಬುರಗಿ) ಶಂಕರಗೌಡ ಪಾಟೀಲ ಹಾಗೂ ದಾವಣಗೆರೆಯ ಬಸವನಗರ ಠಾಣೆ ಇನ್‌ಸ್ಪೆಕ್ಟರ್ ಎಚ್. ಗುರು ಬಸವರಾಜ್ ಪದಕಕ್ಕೆ ಪಾತ್ರರಾಗಿದ್ದಾರೆ.

ದೇಶದ 151 ಪೊಲೀಸ್ ಅಧಿಕಾರಿಗಳು ಪದಕಕ್ಕೆ ಆಯ್ಕೆಯಾಗಿದ್ದಾರೆ. ತನಿಖೆಯಲ್ಲಿ ಶ್ರೇಷ್ಠತೆ ಗುರುತಿಸುವ ಉದ್ದೇಶದಿಂದ 2018ರಿಂದ ಈ ಪದಕ ನೀಡಲಾಗುತ್ತಿದೆ ಎಂದು ಕೇಂದ್ರ ಗೃಹ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಬಾಲಕಿ ಕೊಂದವನಿಗೆ ಗಲ್ಲು ಶಿಕ್ಷೆ: ಸಿಐಡಿ ಡಿವೈಎಸ್ಪಿ ಶಂಕರಗೌಡ, ಈ ಹಿಂದೆ ಸೇಡಂ ವೃತ್ತದ ಸಿಪಿಐ ಆಗಿ ಕೆಲಸ ಮಾಡಿದ್ದರು. ಚಿಂಚೋಳಿ ತಾಲ್ಲೂಕಿನ ಯಾಕಾಪುರದಲ್ಲಿ ಅತ್ಯಾಚಾರ ಎಸಗಿ ಬಾಲಕಿ ಕೊಲೆ ಮಾಡಲಾಗಿತ್ತು. ಈ ಪ್ರಕರಣ ಭೇದಿಸಿದ್ದ ಶಂಕರಗೌಡ, ಆರೋಪಿ ಯಲ್ಲಪ್ಪ ಎಂಬಾತನಿಗೆ ಗಲ್ಲು ಶಿಕ್ಷೆ ಕೊಡಿಸಿದ್ದರು.

ಆಸ್ತಿ ಜಪ್ತಿ ಮಾಡಿಸಿದ್ದ ರಾಜ್ಯದ ಮೊದಲ ಪ್ರಕರಣ: ಗಾಂಜಾ ಮಾರಾಟವನ್ನೇ ವೃತ್ತಿ ಮಾಡಿಕೊಂಡಿದ್ದ ಪೆಡ್ಲರ್ ಅಜಯ್ ಕುಮಾರ್ ಸಿಂಗ್ (54) ಎಂಬಾತನನ್ನು ಬಂಧಿಸಿದ್ದ ಎಸ್ಪಿ ಲಕ್ಷ್ಮೀ ಗಣೇಶ್, ಆರೋಪಿ ಅಕ್ರಮವಾಗಿ ಸಂಪಾದಿಸಿದ್ದ ₹ 1.68 ಕೋಟಿ ಮೌಲ್ಯದ ಆಸ್ತಿಯನ್ನು ಜಪ್ತಿ ಮಾಡಿಸಿದ್ದರು. ಎನ್‌ಡಿಪಿಎಸ್ ಕಾಯ್ದೆಯಡಿ ಆಸ್ತಿ ಜಪ್ತಿ ಮಾಡಿದ ರಾಜ್ಯದ ಮೊದಲ ಪ್ರಕರಣ ಇದಾಗಿತ್ತು.

ರಾಮನಗರದ ಭೀಮೇಗೌಡನ ದೊಡ್ಡಿಯಲ್ಲಿ 2016ರಲ್ಲಿ ನಡೆದಿದ್ದ ಮಾರೇಗೌಡ (70), ಮಗಳು ಗೌರಮ್ಮ (50) ಮತ್ತು ಮೊಮ್ಮೊಗಳು ಸುಕನ್ಯಾ (15) ಕೊಲೆ ಪ್ರಕರಣವನ್ನೂ ಭೇದಿಸಿದ್ದ ಲಕ್ಷ್ಮೀ ಗಣೇಶ್, ಅಪರಾಧಿ ಬಸವರಾಜ ಬೋವಿ (41) ಎಂಬಾತನಿಗೆ ಗಲ್ಲು ಶಿಕ್ಷೆ ಕೊಡಿಸಿದ್ದರು.



ಪ್ರತಿ ಮನೆಯಲ್ಲೂ ರಾಷ್ಟ್ರಧ್ವಜ ಅಭಿಯಾನದಲ್ಲಿ ಭಾಗವಹಿಸಿದ್ದ ವಿಶೇಷ ಮಕ್ಕಳಿಗೆ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ನೀರು ವಿತರಿಸಿದರು

ಪೌರಕಾರ್ಮಿಕರಿಗೆ ಮುಖ್ಯಮಂತ್ರಿ ಅಭಿನಂದನಾ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರತಿ ಮನೆಯಲ್ಲೂ ರಾಷ್ಟ್ರಧ್ವಜ’ ಅಭಿಯಾನದಡಿ ಯಲಹಂಕದಲ್ಲಿ ಬಿಬಿಎಂಪಿ ವತಿಯಿಂದ ಧ್ವಜ ಮಾರಾಟ ಮೊಬೈಲ್ ಕೇಂದ್ರಕ್ಕೆ ಚಾಲನೆ ನೀಡಲಾಯಿತು.

ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ನಡೆಯುತ್ತಿರುವ ಪ್ರತಿ ಮನೆಯಲ್ಲೂ ರಾಷ್ಟ್ರಧ್ವಜ ಅಭಿಯಾನಕ್ಕೆ ಯಲಹಂಕದಲ್ಲಿ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಡೋಲು ಬಾರಿಸಿ ಕಾರ್ಯಕ್ರಮ ಉದ್ಘಾಟಿಸಿದರು.

ನಗರದ ವಿಧಾನಸೌಧ, ಎಂ.ಎಸ್ ಬಿಲ್ಡಿಂಗ್, ವಿ.ವಿ.ಟವರ್ ಸೇರಿ ಪ್ರಮುಖ ಸ್ಥಳಗಳಲ್ಲಿ ಧ್ವಜಗಳನ್ನು ಮಾರಾಟ ಮಾಡಲು ವ್ಯವಸ್ಥೆ ಮಾಡಿರುವ ಪಾಲಿಕೆಯು ಧ್ವಜ ಮಾರಾಟ ಮೊಬೈಲ್ ಕೇಂದ್ರಕ್ಕೂ ಚಾಲನೆ ನೀಡಿದೆ. ಅಭಿಯಾನಕ್ಕಾಗಿ ಪ್ರಚಾರ ಸಾಮಗ್ರಿಗಳಾದ ಕರಪತ್ರ, ಸ್ಟಿಕ್ಕರ್ ಹಾಗೂ ಬ್ಯಾಡ್ಜ್ ಅನ್ನು ಅನಾವರಣಗೊಳಿಸಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಪೌರಕಾರ್ಮಿಕರ ಸೇವೆಯನ್ನು ಗುರುತಿಸಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕಳುಹಿಸಿದ್ದ ಅಭಿನಂದನಾ ಪತ್ರವನ್ನು ಮುಖ್ಯ ಆಯುಕ್ತರು ಪೌರಕಾರ್ಮಿಕರಿಗೆ ನೀಡಿದರು.

ವಿಜಯಶ್ರೀ ನಟರಾಜ್ ಅವರು ದೇಶಭಕ್ತಿ ಗೀತೆಗಳಿಗೆ ಅನುಗುಣವಾಗಿ ಭಾರತಾಂಬೆ, ತ್ರಿವರ್ಣ ಧ್ವಜ, ಯೋಧರ ಭಾವಚಿತ್ರಗಳನ್ನು ಬಿಡಿಸಿದರು. ನೃತ್ಯ ಪ್ರದರ್ಶನಗಳು, ಡೊಳ್ಳು ಕುಣಿತ, ಇನ್ನಿತರೆ ಕಾರ್ಯಕ್ರಮಗಳು ನಡೆದವು.

ವಲಯ ವಿಶೇಷ ಆಯುಕ್ತ ರಂಗಪ್ಪ, ವಲಯ ಜಂಟಿ ಆಯುಕ್ತೆ ಪೂರ್ಣಿಮಾ, ಗಾಯಕಿ ಜಯಶ್ರೀ, ಮುಖ್ಯ ಎಂಜಿನಿಯರ್ ರಂಗನಾಥ್, ಮಾಜಿ ಯೋಧರು, ಸ್ಥಳೀಯ ನಾಗರಿಕರು ಹಾಜರಿದ್ದರು.

ಆರೋಗ್ಯ ಉಚಿತ ತಪಾಸಣೆ ಶಿಬಿರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಮಹಾಗಣಪತಿ ನಗರದ ವಂದೇ ಮಾತರಂ ಸಮಾಜ ಸೇವಾ ಸಮಿತಿ ವತಿಯಿಂದ ಆರೋಗ್ಯ ಉಚಿತ ತಪಾಸಣೆ ಮತ್ತು ರಕ್ತದಾನ ಶಿಬಿರವನ್ನು ಆಯೋಜಿಸಲಾಗಿದೆ.

ಮಹಾಗಣಪತಿ ನಗರದಲ್ಲಿರುವ ಮಹಾಗಣಪತಿ ಸಾಂಸ್ಕೃತಿಕ ಸಂಘದ ಸಭಾಂಗಣದಲ್ಲಿ ಆ.15ರಂದು ಬೆಳಿಗ್ಗೆ 9.30ರಿಂದ ಶಿಬಿರ ನಡೆಯಲಿದೆ. 18 ವರ್ಷ ಮೇಲ್ಪಟ್ಟವರಿಗೆ ಕೋವಿಡ್ ಬೂಸ್ಟರ್ ಲಸಿಕೆಯನ್ನೂ ನೀಡಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ. ಹೆಚ್ಚಿನ ಮಾಹಿತಿಗೆ 98451 83066.

ರೈಲ್ವೆ ಮೇಲ್ಸೇತುವೆ ಸಂಚಾರ ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೊರಗುಂಟೆಪಾಳ್ಯ ಜಂಕ್ಷನ್‌ನಿಂದ ಹೆಬ್ಬಾಳ ವೃತ್ತಕ್ಕೆ ಸಂಪರ್ಕ ಕಲ್ಪಿಸುವ ಹೊರವರ್ತುಲ ರಸ್ತೆಯಲ್ಲಿರುವ ರೈಲ್ವೆ ಮೇಲ್ಸೇತುವೆಯಲ್ಲಿ ಆಗಸ್ಟ್ 13ರಿಂದ 17ರವರೆಗೆ ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿದೆ.

‘ಮೇಲ್ಸೇತುವೆಯಲ್ಲಿ ತುರ್ತು ದುರಸ್ತಿ ಕಾಮಗಾರಿ ನಡೆಸಲಾಗುತ್ತಿದೆ. ಹೀಗಾಗಿ, ಸಂಚಾರ ನಿರ್ಬಂಧಿಸಲಾಗಿದೆ. ಸಾರ್ವಜನಿಕರು, ಪರ್ಯಾಯ ಮಾರ್ಗದಲ್ಲಿ ಸಂಚರಿಸಬಹುದು’ ಎಂದು ಸಂಚಾರ ಪೊಲೀಸರು ಹೇಳಿದ್ದಾರೆ.

ಮಳೆ: ಭೀಮಾ, ಕೃಷ್ಣಾ ತೀರದಲ್ಲಿ ಪ್ರವಾಹದ ಭೀತಿ

ಕೊಡಗು: ಮುಂದುವರಿದ ಭೂಕುಸಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಕೊಡಗು, ಚಿಕ್ಕಮಗಳೂರು, ವಿಜಯಪುರ, ಯಾದಗಿರಿ, ಕೊಪ್ಪಳ ಸೇರಿದಂತೆ ಕೆಲವೆಡೆ ಶುಕ್ರವಾರವೂ ಮಳೆಯಾಗಿದೆ. ಕೊಡಗಿನಲ್ಲಿ ಭೂಕುಸಿತ ಮುಂದುವರಿದಿದ್ದು, ವಿಜಯಪುರ ಜಿಲ್ಲೆಯ ಕೃಷ್ಣಾ ಮತ್ತು ಭೀಮಾ ನದಿ ತೀರದ ಪ್ರದೇಶದಲ್ಲಿ ಪ್ರವಾಹದ ಭೀತಿ ಉಂಟಾಗಿದೆ.

ಕೊಡಗು ಜಿಲ್ಲೆಯ ಕೆಲವೆಡೆ ಗುರುವಾರ ರಾತ್ರಿ ಭಾರಿ ಮಳೆ ಸುರಿದಿದ್ದು, ಶುಕ್ರವಾರ ಮಳೆ ಪ್ರಮಾಣ ಕೊಂಚ ಕಡಿಮೆಯಾಗಿದೆ. ಆದರೆ, ಭೂಕುಸಿತ ಮುಂದುವರಿದಿವೆ.

ಶನಿವಾರಸಂತೆ ಸಮೀಪದ ಕೊಡ್ಲಿಪೇಟೆ ಹೋಬಳಿಯ ಬ್ಯಾಡಗೊಟ್ಟ ಗ್ರಾಮ ಪಂಚಾಯಿತಿ ಹಿಂಭಾಗದ ಗುಡ್ಡದಿಂದ ಮಣ್ಣು ಕುಸಿದು ಅಬ್ದುಲ್ ಎಂಬುವರ ಮನೆಯ ಸುತ್ತ ಕೆಸರು ಮಿಶ್ರಿತ ಮಣ್ಣು ಆವರಿಸಿದೆ. ಮನೆಯ ಹಿಂಬಾಗಿಲು ಹಾಗೂ ಕಿಟಕಿಗಳು ಮುಚ್ಚಿಹೋಗಿವೆ. ನಿರಂತರವಾಗಿ ನೆಲದಿಂದ ನೀರು ಉಕ್ಕಿ ಬರುತ್ತಿದೆ. ಗುಡ್ಡದ ಕೆಳಗೆ 25 ಮನೆಗಳಿದ್ದು, ಜನರಲ್ಲಿ ಆತಂಕ ಮನೆ ಮಾಡಿದೆ.

ಹಿರಿಕರ ಗ್ರಾಮದ ಎಚ್.ಎಂ.ಈರಮ್ಮ ಅವರ ಕಾಫಿತೋಟದಲ್ಲಿ ಮಣ್ಣು ಕುಸಿತವಾಗಿ ತೊರೆಯ ನೀರು ಹರಿದು ಬೆಳೆ ಹಾನಿಯಾಗಿದೆ. ಮಡಿಕೇರಿ– ಕುಟ್ಟ ರಸ್ತೆಯ ಒಂದು ಭಾಗ ಮತ್ತೆ ಕುಸಿದಿದೆ. ಚಿಕ್ಕಮಗಳೂರು ಜಿಲ್ಲೆಯ ಮಲೆನಾಡು ಭಾಗದ ವಿವಿಧೆಡೆ ಸಾಧಾರಣ ಮಳೆಯಾಗಿದೆ.



ಶನಿವಾರಸಂತೆ ಸಮೀಪದ ಬ್ಯಾಡಗೊಟ್ಟ ಗ್ರಾಮ ಪಂಚಾಯಿತಿ ಹಿಂಭಾಗದ ಗುಡ್ಡ ಕುಸಿದು ವ್ಯಾಪಾರಿ ಅಬ್ದುಲ್ ಅವರ ಮನೆಯ ಸುತ್ತ ಮಣ್ಣು ಆವರಿಸಿ ಮುಚ್ಚಿಹೋಗಿದೆ

ಪ್ರವಾಹ ಆತಂಕ: ಮಹಾರಾಷ್ಟ್ರದ ಪಶ್ಚಿಮಘಟ್ಟ ವ್ಯಾಪ್ತಿಯಲ್ಲಿ ಭಾರೀ ಮಳೆಯಾಗುತ್ತಿರುವುದರಿಂದ ವಿಜಯಪುರ ಜಿಲ್ಲೆಯಲ್ಲಿ ಹರಿಯುತ್ತಿರುವ ಕೃಷ್ಣಾ ಮತ್ತು ಭೀಮಾ ನದಿ ತೀರದಲ್ಲಿ ಹಾಗೂ ಯಾದಗಿರಿ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಯಲ್ಲಿ ಪ್ರವಾಹದ ಭೀತಿ ಉಂಟಾಗಿದೆ.

ಮುನ್ನೆಚ್ಚರಿಕೆ ಕ್ರಮವಾಗಿ ಆಲಮಟ್ಟಿ ಜಲಾಶಯದಿಂದ 2.25 ಲಕ್ಷ ಕ್ಯುಸೆಕ್ ನೀರನ್ನು ಕೃಷ್ಣಾ ನದಿಗೆ ಬಿಡಲಾಗುತ್ತಿದ್ದು, ನದಿ ಕೆಳ ಪಾತ್ರದ ಗ್ರಾಮಗಳಲ್ಲಿ ಪ್ರವಾಹದ ಆತಂಕ ಎದುರಾಗಿದೆ. ಮಹಾರಾಷ್ಟ್ರದ ಉಜನಿ ಜಲಾಶಯದಿಂದ ಭೀಮಾ ನದಿಗೆ 30 ಸಾವಿರ ಕ್ಯುಸೆಕ್ ನೀರನ್ನು ಬಿಟ್ಟಿದ್ದು, ಮತ್ತಷ್ಟು ಹೆಚ್ಚಳವಾಗುವ ಸಾಧ್ಯತೆ ಇದೆ. ಹೀಗಾಗಿ ಚಡಚಣ, ಇಂಡಿ, ಆಲಮೇಲ ತಾಲ್ಲೂಕು ವ್ಯಾಪ್ತಿಯಲ್ಲಿ ನದಿ ದಂಡೆಯತ್ತ ಜನರು ತೆರಳದಂತೆ ಜಿಲ್ಲಾಡಳಿತವು ಮುನ್ನೆಚ್ಚರಿಕೆ ನೀಡಿದೆ.

ಯಾದಗಿರಿ ಜಿಲ್ಲೆಯ ಹುಣಸಗಿ ತಾಲ್ಲೂಕಿನ ಬಸವಸಾಗರ ಜಲಾಶಯಕ್ಕೆ ಶುಕ್ರವಾರ 2.20 ಲಕ್ಷ ಕ್ಯುಸೆಕ್ ಒಳ ಹರಿವಿದ್ದು, 2.33 ಲಕ್ಷ ಕ್ಯುಸೆಕ್ ನೀರು ಕೃಷ್ಣಾ ನದಿಗೆ ಹರಿಸಲಾಗುತ್ತಿದೆ. ಇದರಿಂದ ಕೊಳ್ಳೂರು (ಎಂ) ಸೇತುವೆ ಮುಳುಗಡೆಯಾಗುವ ಆತಂಕ ತಲೆದೋರಿದೆ.

ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನ ಪ್ರವಾಹ ದಲ್ಲಿ ತವದ (ಶೀಲಹಳ್ಳಿ) ಗಡ್ಡಿ ಪ್ರದೇಶದಲ್ಲಿ ಮೂರು ದಿನಗಳಿಂದ ನಡುಗಡ್ಡೆಯಲ್ಲಿ ಸಿಲುಕಿದ್ದ ಸಿದ್ದಪ್ಪ ಹರಿಜನ ಮತ್ತು ಗದ್ದೆಪ್ಪ ಕುಟುಂಬಸ್ಥರ ಪೈಕಿ ಸಿದ್ಧಪ್ಪ ಸೇರಿ ಕುಟುಂಬದ ನಾಲ್ವರು ಶುಕ್ರವಾರ ಈಜಿ ದಡಕ್ಕೆ ಬಂದರು. ಗದ್ದೆಪ್ಪ, ಪತ್ನಿ ಮತ್ತು ಮಗ ನಡುಗಡ್ಡೆಯಲ್ಲಿ ಉಳಿದಿದ್ದಾರೆ. ಅವರ ರಕ್ಷಣೆಗೆ ತಾಲ್ಲೂಕು ಆಡಳಿತವು ಕಾರ್ಯಾಚರಣೆ ನಡೆಸಿದೆ.

ಸುದ್ದಿ 2 ನಿಮಿಷ

ಅಪಘಾತ ವಿಮೆ ಪರಿಹಾರಕ್ಕೆ ಹೆಣ್ಣು ಮಕ್ಕಳೂ ಅರ್ಹ: ಹೈಕೋರ್ಟ್

ಬೆಂಗಳೂರು: ‘ಅಪಘಾತ ಪ್ರಕರಣಗಳಲ್ಲಿ ಪೋಷಕರು ಮೃತಪಟ್ಟಾಗ ಅವರ ವಿವಾಹಿತ ಹೆಣ್ಣು ಮಕ್ಕಳೂ ವಿಮಾ ಪರಿಹಾರ ಪಡೆಯಲು ಅರ್ಹರು’ ಎಂದು ಹೈಕೋರ್ಟ್ ಆದೇಶಿಸಿದೆ.

ಅಪಘಾತ ಪ್ರಕರಣವೊಂದರಲ್ಲಿ ಮೃತಪಟ್ಟ ಮಹಿಳೆಯ ವಿವಾಹಿತ ಮಗಳಿಗೆ ಪರಿಹಾರ ಘೋಷಿಸಿದ ಮೋಟಾರು ಅಪಘಾತ ಪರಿಹಾರ ನ್ಯಾಯಮಂಡಳಿ (ಎಂಎಸಿಟಿ) ಆದೇಶ ಪ್ರಶ್ನಿಸಿ ವಿಮಾ ಕಂಪನಿ ಸಲ್ಲಿಸಿದ್ದ ಮೇಲ್ಮನವಿಯನ್ನು ಧಾರವಾಡ ಪೀಠದಲ್ಲಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಚ್.ಪಿ.ಸಂದೇಶ್ ವಜಾಗೊಳಿಸಿ ಆದೇಶಿಸಿದ್ದಾರೆ. ‘ಮೃತರ ವಿವಾಹಿತ ಹೆಣ್ಣು ಮಕ್ಕಳು ಪರಿಹಾರ ಕೋರಿ ಅರ್ಜಿ ಸಲ್ಲಿಸಲು ಅರ್ಹರಲ್ಲ ಎಂಬ ವಿಮಾ ಸಂಸ್ಥೆಯ ವಾದವನ್ನು ಒಪ್ಪಲು ಸಾಧ್ಯವಿಲ್ಲ. ಗಂಡು ಮತ್ತು ಹೆಣ್ಣು ಮಕ್ಕಳ ನಡುವೆ ತಾರತಮ್ಯ ಮಾಡಲು ಸಾಧ್ಯವಿಲ್ಲ. ವಿವಾಹಿತ ಮತ್ತು ವಯಸ್ಕ ಗಂಡು ಮಕ್ಕಳು ಪರಿಹಾರ ಕ್ಲೇಮು ಮಾಡಲು ಅರ್ಹರಾದರೆ, ವಿವಾಹಿತ ಹೆಣ್ಣು ಮಕ್ಕಳೂ ಅದಕ್ಕೆ ಅರ್ಹರು’ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಪ್ರಕರಣವೇನು?: ರೇಣುಕಾ ಎಂಬುವರು 2012ರ ಏಪ್ರಿಲ್ 12ರಂದು ಹುಬ್ಬಳ್ಳಿಯಿಂದ ಟೆಂಪೊದಲ್ಲಿ ತೆರಳುತ್ತಿದ್ದರು. ಪ್ರಯಾಣದ ವೇಳೆ ಯಮನೂರು ಬಳಿ ಟೆಂಪೊಗೆ ಲಾರಿ ಡಿಕ್ಕಿ ಹೊಡೆದಿತ್ತು. ರೇಣುಕಾ ಮೃತಪಟ್ಟಿದ್ದರು. ಪರಿಹಾರ ಕೋರಿ ಅವರ ಪತಿ, ವಿವಾಹಿತ ಹೆಣ್ಣು ಮಕ್ಕಳು ಎಂಎಸಿಟಿಗೆ ಕ್ಲೇಮು ಅರ್ಜಿ ಸಲ್ಲಿಸಿದ್ದರು. ನ್ಯಾಯಮಂಡಳಿ ಕ್ಲೇಮುದಾರರಿಗೆ ಶೇ 6ರಷ್ಟು ಬಡ್ಡಿದರಲ್ಲಿ ₹ 5.91 ಲಕ್ಷ ಪರಿಹಾರ ಘೋಷಿಸಿತ್ತು. ಈ ಆದೇಶವನ್ನು ಪ್ರಶ್ನಿಸಿ ವಿಮಾ ಕಂಪನಿ ಮೇಲ್ಮನವಿ ಸಲ್ಲಿಸಿತ್ತು.

‘ಬೈರತಿ ಬಸವರಾಜಗೆ ಕಾಂಗ್ರೆಸ್ ತಕ್ಕ ಪಾಠ ಕಲಿಸಲಿದೆ’



ಕೆ.ಆರ್.ಪುರ: ಕಾಂಗ್ರೆಸ್‌ನ ಎಲ್ಲಾ ರೀತಿಯ ಸ್ಥಾನಮಾನ ಪಡೆದು ಪಕ್ಷಕ್ಕೆ ಮೋಸ ಮಾಡಿ ವಲಸೆ ಹೋಗಿರುವ ಬೈರತಿ ಬಸವರಾಜ ಅವರ ವಿರುದ್ಧ ಸೂಕ್ತ ಅಭ್ಯರ್ಥಿ ಹಾಕುವ ಮೂಲಕ ಮುಂದಿನ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಬೇಕಾಗಿದೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಆಕ್ರೋಶ ಹೊರಹಾಕಿದರು.

ಕೆ.ಆರ್.ಪುರದಲ್ಲಿ ಕಾಂಗ್ರೆಸ್ ವತಿಯಿಂದ ಸ್ವಾತಂತ್ರ್ಯೋತ್ಸವ ಅಮೃತ ಮಹೋತ್ಸವ ಅಂಗವಾಗಿ ಆಗಸ್ಟ್ 15ರಂದು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ವೃತ್ತದಿಂದ ನ್ಯಾಷನಲ್ ಕಾಲೇಜು ಮೈದಾನದವರೆಗೆ ಹಮ್ಮಿಕೊಂಡಿರುವ ಪಾದಯಾತ್ರೆ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದರು.

ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ.ಹರಿಪ್ರಸಾದ್, ಮಾಜಿ ವಿಧಾನ ಪರಿಷತ್ ಸದಸ್ಯ ನಾರಾಯಣಸ್ವಾಮಿ, ಕೆಪಿಸಿಸಿ ಪ್ರದಾನ ಕಾರ್ಯದರ್ಶಿ ಡಿ.ಕೆ.ಮೋಹನ್, ಕೆಪಿಸಿಸಿ ಸದಸ್ಯ ಕಲ್ಕೆರೆ ನಾರಾಯಣಸ್ವಾಮಿ, ಯುವ ಅಧ್ಯಕ್ಷ ಮಹಮದ್ ನಲಪಾಡ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥ್, ಮುಖಂಡರಾದ ಎಲ್.ಮುನಿಸ್ವಾಮಿ, ಡಿ.ಎ.ಗೋಪಾಲ್, ಅಗರ ಪ್ರಕಾಶ್, ಗಗನ್ ಯಾದವ್ ಇದ್ದರು.

ಗಲಾಟೆ: ಪಿಯು ವಿದ್ಯಾರ್ಥಿ ಕೊಲೆ

ಬೆಂಗಳೂರು: ಕಾಡುಗೊಂಡನಹಳ್ಳಿ (ಕೆ.ಜೆ.ಹಳ್ಳಿ) ಠಾಣೆ ವ್ಯಾಪ್ತಿಯಲ್ಲಿ ಅರ್ಬಾಜ್ (18) ಎಂಬುವರನ್ನು ಚಾಕುವಿನಿಂದ ಇರಿದು ಕೊಲೆ ಮಾಡಲಾಗಿದ್ದು, ಕಾಲೇಜು ಸಹಪಾಠಿಗಳೇ ಕೃತ್ಯ ಎಸಗಿರುವ ಶಂಕೆ ವ್ಯಕ್ತವಾಗಿದೆ.

‘ಸ್ಥಳೀಯ ನಿವಾಸಿ ಅರ್ಬಾಜ್, ಪ್ರಾವಿನ್ಸ್ ಕಾಲೇಜಿನಲ್ಲಿ ಪಿಯು ಎರಡನೇ ವರ್ಷದಲ್ಲಿ ಓದುತ್ತಿದ್ದರು. ಕಾಲೇಜು ಬಳಿಯೇ ಶುಕ್ರವಾರ ಅವರ ಜೊತೆ ಜಗಳ ತೆಗೆದಿದ್ದ ಆರೋಪಿಗಳು ಚಾಕುವಿನಿಂದ ಇರಿದು ಕೊಲೆ ಮಾಡಿದ್ದಾರೆ’ ಎಂದು ಪೂರ್ವ ವಿಭಾಗದ ಡಿಸಿಪಿ ಭೀಮಾಶಂಕರ್ ಗುಳೇದ ತಿಳಿಸಿದರು.

‘ಕಾಲೇಜಿನಲ್ಲಿ ಗುರುವಾರ ಸಾಂಸ್ಕೃತಿಕ ಕಾರ್ಯಕ್ರಮ ನಡೆದಿತ್ತು. ನೃತ್ಯ ಮಾಡುವ ಸಂದರ್ಭದಲ್ಲಿ ಸಹಪಾಠಿಗಳ ನಡುವೆ ಪರಸ್ಪರ ತಳ್ಳಾಟ ನಡೆದು, ಗಲಾಟೆ ಆಗಿತ್ತು. ಶಿಕ್ಷಕರು ಜಗಳ ಬಿಡಿಸಿ ಕಳುಹಿಸಿದ್ದರು. ಗಲಾಟೆಯಿಂದ ಸಿಟ್ಟಾಗಿದ್ದ ಎದುರಾಳಿ ತಂಡದವರೇ ಅರ್ಬಾಜ್ ಅವರನ್ನು ಕೊಲೆ ಮಾಡಿರುವ ಶಂಕೆ ಇದೆ’ ಎಂದರು.



ಅರ್ಬಾಜ್

ಹೊರಗೆ ಕರೆದು ಕೃತ್ಯ: ‘ಅರ್ಬಾಜ್ ನಮಾಜ್ ಮುಗಿಸಿ, ಅಲ್ಲಿಂದ ಕಾಲೇಜಿಗೆ ಬಂದಿದ್ದರು. ಅವರನ್ನು ಕಾಲೇಜಿನಿಂದ ಹೊರಗೆ ಕರೆಸಿದ್ದ ಆರೋಪಿಗಳು ದೇಹದ 2 ಕಡೆ ಚಾಕುವಿನಿಂದ ಇರಿದು ಪರಾರಿಯಾಗಿದ್ದಾರೆ. ಆರೋಪಿಗಳ ಪತ್ತೆಗೆ ವಿಶೇಷ ತಂಡ ರಚಿಸಲಾಗಿದೆ’ ಎಂದು ಗುಳೇದ ತಿಳಿಸಿದರು.

ಚಿತ್ರಾವಳಿ



ಸ್ವಾತಂತ್ರ್ಯದ ಅಮೃತ ಮಹೋತ್ಸವ ಅಂಗವಾಗಿ ಬೆಂಗಳೂರು ವಿಶ್ವವಿದ್ಯಾಲಯದ ಪ್ರಾಣಿಶಾಸ್ತ್ರ, ಆನ್ವಯಿಕ ತಳಿವಿಜ್ಞಾನ ಹಾಗೂ ನ್ಯಾಯ ವಿಜ್ಞಾನ ವಿಭಾಗದ ವತಿಯಿಂದ ಜ್ಞಾನಭಾರತಿ ಆವರಣದಲ್ಲಿ ಆಯೋಜಿಸಲಾಗಿದ್ದ ‘ವಾಕಥಾನ್’ ಕಾರ್ಯಕ್ರಮದಲ್ಲಿ ಕುಲಪತಿ ಪ್ರೊ. ಎಸ್.ಎಂ. ಜಯಕರ್, ಕುಲಸಚಿವ ಪ್ರೊ. ಎಂ.ಕೊಟ್ರೇಶ್, ಕುಲಸಚಿವ(ಮೌಲ್ಯಮಾಪನ) ಪ್ರೊ. ಜೆ.ಟಿ. ದೇವರಾಜು, ವಿಭಾಗದ ಮುಖ್ಯಸ್ಥ ಪ್ರೊ. ಮೆಹಬೂಬ್ ಬಾಷಾ ಇದ್ದರು.



ಸ್ವಾತಂತ್ರ್ಯೋತ್ಸವ ಅಂಗವಾಗಿ ನಗರದ ಟಿಪ್ಪು ಸುಲ್ತಾನ್ ಅರಮನೆಗೆ ತ್ರಿವರ್ಣ ಧ್ವಜದ ಬಣ್ಣಗಳ ವಿದ್ಯುತ್ ವಿಶೇಷ ದೀಪಾಲಂಕಾರ ಮಾಡಲಾಗಿದೆ – ಪ್ರಜಾವಾಣಿ ಚಿತ್ರ



ಸ್ವಾತಂತ್ರ್ಯದ ಅಮೃತಮಹೋತ್ಸವದ ಪ್ರಯುಕ್ತ ಸಕ್ರ ವರ್ಲ್ಡ್ ಆಸ್ಪತ್ರೆಯ ಸಿಬ್ಬಂದಿ ಪೌರಕಾರ್ಮಿಕರೊಂದಿಗೆ ನಗರದಲ್ಲಿ ಶುಕ್ರವಾರ ಸ್ವಚ್ಛತಾ ಅಭಿಯಾನ ನಡೆಸಿದರು.

ಒಗ್ಗಟ್ಟಿನಿಂದ ಹೋರಾಡಿದರೆ ವಿರೋಧಿ ಬಲಿಷ್ಠವಾಗಿದ್ದರೂ ಗೆಲ್ಲಬಹುದು: ರಮಾದೇವಿ

ಆನಂದ್ ತೇಲ್ತುಂಬ್ಡೆ ಬಿಡುಗಡೆಗೆ ಒತ್ತಾಯ

ಪ್ರಜಾವಾಣಿ ವಾರ್ತೆ



ನಗಾರಿ ಬಾರಿಸುವ ಮೂಲಕ ಸಮಾವೇಶವನ್ನು ಸಿದ್ದರಾಮಯ್ಯ ಮತ್ತು ರಮಾಬಾಯಿ ಆನಂದ ತೇಲ್ತುಂಬ್ಡೆ ಉದ್ಘಾಟಿಸಿದರು. ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನದಾಸ್, ವಕೀಲ ರವಿವರ್ಮಕುಮಾರ್, ದಲಿತ ಸಂಘರ್ಷ ಸಮಿತಿ ಸಂಯೋಜಕ ವಿ.ನಾಗರಾಜ್, ಮಾವಳ್ಳಿ ಶಂಕರ್, ಕಾಂಗ್ರೆಸ್ ಮುಖಂಡ ಎಚ್.ಸಿ.ಮಹದೇವಪ್ಪ ಇದ್ದರು —ಪ್ರಜಾವಾಣಿ ಚಿತ್ರ

ಬೆಂಗಳೂರು: ಕಾನೂನು ಬಾಹಿರ ಚಟುವಟಿಕೆ ತಡೆ ಕಾಯಿದೆ ಅಡಿ ಸುಳ್ಳು ಪ್ರಕರಣ ದಾಖಲಿಸಿ ಬಂಧಿಸಲಾಗಿರುವ ಆನಂದ್ ತೇಲ್ತುಂಬ್ಡೆ ಸೇರಿ ಎಲ್ಲರನ್ನೂ ಬಿಡುಗಡೆ ಮಾಡಬೇಕು ಎಂದು ಶೋಷಿತರ ರಾಜ್ಯ ಮಟ್ಟದ ಐಕ್ಯತಾ ಸಮಾವೇಶ ಒಕ್ಕೊರಲಿನಿಂದ ಒತ್ತಾಯಿಸಿತು.

ದಲಿತ ಸಂಘರ್ಷ ಸಮಿತಿ(-ಸಂಯೋಜಕ) ಆಯೋಜಿಸಿದ್ದ ಸಮಾವೇಶದಲ್ಲಿ ಕೈಗೊಂಡ ನಿರ್ಣಯಗಳನ್ನು ದಲಿತ ಸಂಘರ್ಷ ಸಮಿತಿ(ಅಂಬೇಡ್ಕರ್ ವಾದ) ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್ ಸಭೆಗೆ ಮಂಡಿಸಿದರು. 'ಹೋರಾಟಗಾರರಾದ ತೀಸ್ತಾ ಸೆಟಲ್‌ವಾಡ್, ವರವರ ರಾವ್ ಸೇರಿ ಎಲ್ಲರ ವಿರುದ್ಧದ ಪ್ರಕರಣಗಳನ್ನು ವಾಪಸ್ ಪಡೆಯಬೇಕು. ಸುಗ್ರೀವಾಜ್ಞೆ ಮೂಲಕ ಕರ್ನಾಟಕದಲ್ಲಿ ಜಾರಿಗೆ ತಂದಿರುವ ಮತಾಂತರ ನಿಷೇಧ ಕಾಯ್ದೆಯನ್ನು ಹಿಂಪಡೆಯಬೇಕು. ಪಿಟಿಸಿಎಲ್ ಕಾಯ್ದೆಗೆ ಸಮಗ್ರ ತಿದ್ದುಪಡಿ ತರಬೇಕು, ಭೂಸುಧಾರಣೆ, ಎಪಿಎಂಸಿ, ವಿದ್ಯುತ್ ತಿದ್ದುಪಡಿ ಕಾಯ್ದೆಗಳನ್ನು ಹಿಂದಕ್ಕೆ ಪಡೆಯಬೇಕು' ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅಂಬೇಡ್ಕರ್ ಅವರ ಮೊಮ್ಮಗಳು ರಮಾಬಾಯಿ ಆನಂದ್ ತೇಲ್ತುಂಬ್ಡೆ, 'ಭೀಮ ಕೊರೆಗಾಂವ್ ಹೋರಾಟದ 200ನೇ ವರ್ಷದ ನೆನಪಿನ ಕಾರ್ಯಕ್ರಮವನ್ನು ತಡೆಯಲು ನಕ್ಸಲ್ ನಂಟಿನ ಆರೋಪ ಹೊರಿಸಲಾಯಿತು. ಸುಳ್ಳು ಪ್ರಕರಣ ದಾಖಲಿಸಿ ಆನಂದ್ ತೇಲ್ತುಂಬ್ಡೆ ಅವರನ್ನು ಜೈಲಿಗೂ ತಳ್ಳಲಾಗಿದೆ' ಎಂದು ಬೇಸರ ವ್ಯಕ್ತಪಡಿಸಿದರು.

'ಈ ರೀತಿಯ ರಾಜಕೀಯದ ವಿರುದ್ಧ ಸಾಮಾಜಿಕ ಸಂಘಟನೆಗಳು ಬಲಿಷ್ಠಗೊಳ್ಳಬೇಕಿದೆ. ಇದು ಅಂಬೇಡ್ಕರ್ ಅವರ ಆಶಯವೂ ಆಗಿತ್ತು. ಚಳವಳಿ ದುರ್ಬಲ ಆಗಿರುವುದರಿಂದ ಈ ರೀತಿಯ ದಬ್ಬಾಳಿಕೆ ಹೆಚ್ಚಾಗುತ್ತಿದೆ. ವಿರೋಧಿಗಳು ಎಷ್ಟೇ ಬಲಿಷ್ಠವಾಗಿದ್ದರೂ ಒಗ್ಗಟ್ಟಿನಿಂದ ಹೋರಾಡಿದರೆ ಮಣಿಸಲು ಸಾಧ್ಯವಿದೆ' ಎಂದು ಅವರು ಹೇಳಿದರು.

'ಕಾರಜೋಳ, ನಾರಾಯಣಸ್ವಾಮಿಗೆ ಪ್ರಶ್ನೆ ಮಾಡಿ'

'ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಭೂಮಿ ಪರಭಾರೆ ನಿಷೇಧ (ಪಿಟಿಸಿಎಲ್) ಕಾಯ್ದೆಗೆ ಸಮಗ್ರ ತಿದ್ದುಪಡಿ ಅಗತ್ಯವಿದ್ದರೂ, ಸದನದಲ್ಲಿ ಪ್ರಶ್ನೆ ಮಾಡುತ್ತಿಲ್ಲ ಏಕೆ' ಎಂದು ಸಭೆಯಲ್ಲಿದ್ದ ಹೋರಾಟಗಾರರು ಸಿದ್ದರಾಮಯ್ಯ ಅವರನ್ನು ಪ್ರಶ್ನೆ ಮಾಡಿದರು.

ಪೊಲೀಸರು ಅವರನ್ನು ಹೊರಕ್ಕೆ ಕಳುಹಿಸುವ ಪ್ರಯತ್ನ ಮಾಡಿದರು. ಅದನ್ನು ತಡೆದ ಸಿದ್ದರಾಮಯ್ಯ, 'ಚರ್ಚೆ ಮಾಡಲು ಅವಕಾಶ ಇರಬೇಕು. ಕೇಳಲಿ ಸುಮ್ಮನಿರಿ' ಎಂದರು.

'ಪಿಟಿಸಿಎಲ್ ಕಾಯ್ದೆ ತಿದ್ದುಪಡಿ ಆಗಲೇಬೇಕು ಎಂದು ನಾನೂ ಹೇಳುತ್ತಿದ್ದೇನೆ. ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಮತ್ತು ಕೇಂದ್ರ ಸಚಿವ ಎ.ನಾರಾಯಣಸ್ವಾಮಿ ಮನೆ ಮುಂದೆ ಕುಳಿತು ಈ ಪ್ರಶ್ನೆಗಳನ್ನು ನೀವು ಕೇಳಬೇಕಲ್ಲವೇ' ಎಂದು ಸಿದ್ದರಾಮಯ್ಯ ಮರು ಪ್ರಶ್ನೆ ಹಾಕಿದರು.

'ಅನ್ಯಾಯವನ್ನು ದಲಿತರು ಪ್ರಶ್ನಿಸುತ್ತಿಲ್ಲ ಏಕೆ'

'ಬಿಜೆಪಿ ಸರ್ಕಾರದಲ್ಲಿ ದಲಿತರಿಗೆ ಸಾಕಷ್ಟು ಅನ್ಯಾಯವಾಗುತ್ತಿದೆ. ಜನಸಂಖ್ಯೆಗೆ ಅನುಗುಣವಾಗಿ ಬಜೆಟ್‌ನಲ್ಲಿ ನಿಗದಿಯಾಗಬೇಕಿದ್ದ ಅನುದಾನದಲ್ಲಿ ₹14 ಸಾವಿರ ಕೋಟಿಯಷ್ಟು ಖೋತಾ ಆಗಿದೆ. ಆದರೂ, ಪ್ರಶ್ನೆ ಮಾಡುತ್ತಿಲ್ಲ ಏಕೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರಶ್ನಿಸಿದರು.

'ಒಳಮೀಸಲಾತಿ ಜಾರಿ ಸಾಧ್ಯವಿಲ್ಲ ಎಂದು ಕೇಂದ್ರ ಸಾಮಾಜಿಕ ನ್ಯಾಯ ಸಚಿವ ಎ.ನಾರಾಯಣಸ್ವಾಮಿ ಹೇಳುತ್ತಿದ್ದಾರೆ. ಅದಕ್ಕೂ ಚಪ್ಪಾಳೆ ಹೊಡೆಯುತ್ತಿದ್ದೀರಿ. ಬಿಜೆಪಿ ಸರ್ಕಾರದ ಮೋಸಗಳನ್ನು ದಲಿತರು, ಕಾರ್ಮಿಕರು, ರೈತ ಸಂಘಟನೆಗಳು ಒಗ್ಗೂಡಿ ಜನರಿಗೆ ತಿಳಿಸಬೇಕಾಗಿದೆ' ಎಂದರು.



ನುಲಿಯ ಚಂದಯ್ಯ ಭಾವಚಿತ್ರದೊಂದಿಗೆ ಜಾನಪದ ಕಲಾ ತಂಡಗಳು ಮತ್ತು ಮಹಿಳೆಯರು ಮೆರವಣಿಗೆ ನಡೆಸಿದರು —ಪ್ರಜಾವಾಣಿ ಚಿತ್ರ

ಕಸುಬು ಆಧರಿತರ ಮಕ್ಕಳಿಗೂ ವಿದ್ಯಾರ್ಥಿ ವೇತನ: ಮುಖ್ಯಮಂತ್ರಿ ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನುಲಿಯ ಚಂದಯ್ಯ ಅವರ ಹೆಸರನ್ನು ಬೆಂಗಳೂರಿನ ರಸ್ತೆ ಮತ್ತು ವೃತ್ತಕ್ಕೆ ನಾಮಕರಣ ಮಾಡಲು ಕ್ರಮ ಕೈಗೊಳ್ಳಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇದೇ ಮೊದಲ ಬಾರಿಗೆ ಆಯೋಜಿಸಿದ್ದ ನುಲಿಯ ಚಂದಯ್ಯ ಜಯಂತಿ ಉದ್ಘಾಟಿಸಿದ ಅವರು, 'ಸಂಘಕ್ಕೆ ಬಿಡಿಎ ನಿವೇಶನ ನೀಡಲಾಗುವುದು. ಸಮುದಾಯ ಭವನ ನಿರ್ಮಾಣಕ್ಕೆ ಸಹಕಾರ ನೀಡಲಾಗುವುದು. ಇತರ ಬೇಡಿಕೆಗಳ ಈಡೇರಿಕೆಗೂ ಪ್ರಯತ್ನಿಸಲಾಗುವುದು' ಎಂದು ಹೇಳಿದರು.

'ರೈತರ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತೆ ಘೋಷಿಸಿದ್ದ 'ಮುಖ್ಯಮಂತ್ರಿ ರೈತ ವಿದ್ಯಾರ್ಥಿನಿ' ವಿದ್ಯಾರ್ಥಿ ವೇತನ ಯೋಜನೆಯನ್ನು ಇತರ ಕಸುಬುಗಳನ್ನು ಆಧರಿಸಿ ಜೀವನ ನಡೆಸುತ್ತಿರುವವರ ಮಕ್ಕಳಿಗೂ ವಿಸ್ತರಿಸಲಾಗುವುದು. ಕೆಲವೇ ದಿನಗಳಲ್ಲಿ ಈ ಸಂಬಂಧ ಆದೇಶ ಹೊರಡಿಸಲಾಗುವುದು' ಎಂದು ತಿಳಿಸಿದರು.

ಉಪ ಕಸುಬುಗಳನ್ನು ನಂಬಿಕೊಂಡವರ ಆರ್ಥಿಕ ಸಬಲತೆಗೆ ಸರ್ಕಾರ ಅನುದಾನ ಘೋಷಿಸಲಿದೆ. ಈ ಬಗ್ಗೆ ಮುಖ್ಯ ಕಾರ್ಯದರ್ಶಿಗಳು, ಹಣಕಾಸು ಇಲಾಖೆ ಜೊತೆ ಈಗಾಗಲೇ ಚರ್ಚಿಸಲಾಗಿದೆ. ಆರ್ಥಿಕ ಉತ್ತೇಜನ ನೀಡುವ ಬಗ್ಗೆ ಶೀಘ್ರದಲ್ಲೇ ಆದೇಶ ನೀಡಲಾಗುವುದು. ಸಮಾಜದಲ್ಲಿ ಹಿಂದುಳಿದ ಸಮುದಾಯಗಳನ್ನು ಗುರುತಿಸಿ ಆದ್ಯತೆ ನೀಡುವ ಕಾರ್ಯವನ್ನು ಸರ್ಕಾರ ಕೈಗೊಳ್ಳುತ್ತಿದೆ ಎಂದು ಸ್ಪಷ್ಟಪಡಿಸಿದರು.

'ನುಲಿಯ ಚಂದಯ್ಯ ಕಾಯಕಕ್ಕೆ ಹೆಸರಾದವರು. ಬದುಕಿನ ನೋವು-ನಲಿವು, ಸವೆಸಿದ ದಾರಿಯನ್ನು ವಚನಗಳ ಮೂಲಕ ಸಮಾಜಕ್ಕೆ ಕೊಡುಗೆ ನೀಡಿ ಆಧ್ಯಾತ್ಮದ ದಾರಿ ತೋರಿದ್ದಾರೆ. ಬಸವಣ್ಣನವರ ನೇತೃತ್ವದಲ್ಲಿ ವಚನ ಸಾಹಿತ್ಯಕ್ಕೆ ಅಪಾರವಾದ ಕೊಡುಗೆ ನೀಡಿದ್ದಾರೆ. ಪರಿಶುದ್ಧ ಕಾಯಕಕ್ಕೆ ಇನ್ನೊಂದು ಹೆಸರೇ ನುಲಿಯ ಚಂದಯ್ಯ' ಎಂದು ಬಣ್ಣಿಸಿದರು.

'ನುಲಿಯ ಚಂದಯ್ಯ ಸೇರಿ ಹಲವು ಶರಣರು ಬಸವಣ್ಣನವರ ನೇತೃತ್ವದಲ್ಲಿ ಕಲ್ಯಾಣ ರಾಜ್ಯ ನಿರ್ಮಿಸಿದ್ದರು. ಕಾಯಕ ತತ್ವವನ್ನು ಜಗತ್ತಿಗೇ ಸಾರಿದ್ದರು. ನುಲಿಯ ಚಂದಯ್ಯ ಜಯಂತಿಯನ್ನು ಸರ್ಕಾರದಿಂದ ಆಚರಿಸಲು ಮುಂದಾಗಿರುವುದು ಸಮಾಜಕ್ಕೆ ಸಂದ ದೊಡ್ಡ ಗೌರವ' ಎಂದು ಚಿತ್ರದುರ್ಗದ ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರು ಪ್ರಶಂಸೆ ವ್ಯಕ್ತಪಡಿಸಿದರು.

ಎಂಜಿನಿಯರ್‌ಗಳಿಗೆ 2 ವರ್ಷ ಜೈಲು

ಬೆಳಗಾವಿ: ನೀರಾವರಿ ಇಲಾಖೆಯಲ್ಲಿ ಅಧಿಕಾರ ದುರ್ಬಳಕೆ

ಬೆಳಗಾವಿ: ಮುಳುಗಡೆ ಸಂತ್ರಸ್ತರಿಗೆ ಪುನರ್ವಸತಿ ಕಲ್ಪಿಸುವ ಯೋಜನೆಯಲ್ಲಿ ಅಧಿಕಾರ ದುರ್ಬಳಕೆ ಮಾಡಿಕೊಂಡ ನೀರಾವರಿ ಇಲಾಖೆಯ ಐವರು ಎಂಜಿನಿಯರ್‌ಗಳಿಗೆ ಇಲ್ಲಿನ 4ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ವಿಶೇಷ ನ್ಯಾಯಾಲಯ ಎರಡು ವರ್ಷಗಳ ಸಾದಾ ಜೈಲು ಶಿಕ್ಷೆ ಹಾಗೂ ತಲಾ ₹ 70 ಸಾವಿರ ದಂಡ ವಿಧಿಸಿದೆ.

2012ರಲ್ಲಿ ಸವದತ್ತಿ ತಾಲ್ಲೂಕಿನ ನವಿಲುತೀರ್ಥ ಜಲಾಶಯದ ವೃತ್ತ ಕಚೇರಿ (ಮಲಪ್ರಭಾ ಎಡದಂಡೆ ಕಾಲುವೆ ನಿರ್ಮಾಣ)ಯ ಸೂಪರಿಂಟೆಂಡಿಂಗ್ ಎಂಜಿನಿಯರ್ ಆಗಿದ್ದ ಬಿ.ಪದ್ಮನಾಭ, ತಾಂತ್ರಿಕ ಸಹಾಯಕರಾಗಿದ್ದ ಆನಂದ ಮಿರ್ಜಿ, ಕಿರಿಯ ಎಂಜಿನಿಯರ್ ಆಗಿದ್ದ ಶುಭಾ ಟಿ, ಶಿರಸಂಗಿಯ ಉಪವಿಭಾಗ–5ರ ಕಿರಿಯ ಎಂಜಿನಿಯರ್ ಪ್ರಕಾಶ ಹೊಸಮನಿ, ಗದಗ ಜಿಲ್ಲೆಯ ನರಗುಂದದ ಎಂಆರ್‌ಬಿಸಿ ವಿಭಾಗ–1ರ ಕಾರ್ಯನಿರ್ವಾಹಕ ಎಂಜಿನಿಯರ್ ಆಗಿದ್ದ ಎಂ.ಬಿ.ಕವದಿ ಶಿಕ್ಷೆಗೆ ಒಳಗಾದವರು.

ಈ ಪ್ರಕರಣದ ವಿಚಾರಣೆ ನಡೆಸಿದ 4ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶ ಮೋಹನ್ ಪ್ರಭು ಶುಕ್ರವಾರ ಶಿಕ್ಷೆ ಪ್ರಕಟಿಸಿದ್ದಾರೆ.

ಪ್ರಕರಣದ ವಿವರ: ಕಗದಾಳ ಗ್ರಾಮದಲ್ಲಿರುವ ಎಲ್ಲ ಮನೆಗಳು ನೀರಿನಿಂದ ಜವುಗು ಹಿಡಿದಿದ್ದವು. ವಾಸಕ್ಕೆ ಯೋಗ್ಯವಿಲ್ಲದ ಕಾರಣ ಪುನರ್ವಸತಿ ಕಲ್ಪಿಸುವ ಪ್ರಕ್ರಿಯೆ ನಡೆದಿತ್ತು. ಇದಕ್ಕಾಗಿ ನಡೆದ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಕಾಯ್ದೆ ಉಲ್ಲಂಘನೆ ನಡೆದಿದೆ. ಈ ಎಂಜಿನಿಯರ್‌ಗಳು ಲಂಚ ಕೊಟ್ಟವರಿಗೆ ಹೆಚ್ಚಿನ ಪರಿಹಾರ ಒದಗಿಸಿ, ಅಧಿಕಾರ ದುರುಪಯೋಗ ಮಾಡಿಕೊಂಡಿದ್ದಾರೆ ಎಂದು ಅದೇ ಗ್ರಾಮದ ಹಣಮಪ್ಪ ಮಾದರ ದೂರು ಸಲ್ಲಿಸಿದ್ದರು.

ಅಂದಿನ ಲೋಕಾಯುಕ್ತ ಡಿವೈಎಸ್ಪಿಗಳಾದ ಎಚ್.ಜಿ. ಪಾಟೀಲ ಹಾಗೂ ಜಿ.ಆರ್. ಪಾಟೀಲ ತನಿಖೆ ಕೈಗೊಂಡು ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಸರ್ಕಾರದ ಪರವಾಗಿ ವಿಶೇಷ ಸರ್ಕಾರಿ ಅಭಿಯೋಜಕ ಪ್ರವೀಣ ಅಗಸಗಿ ವಾದ ಮಂಡಿಸಿದರು.

ಸೌಲಭ್ಯವಂಚಿತರಿಗೆ 75 ಲಕ್ಷ ಊಟ ಪೂರೈಕೆ

ಬೆಂಗಳೂರು: ಸ್ವಾತಂತ್ರ್ಯ ದಿನದಂದು ರಾಬಿನ್ ಹುಡ್ ಆರ್ಮಿಯು ದೇಶದ 75 ಲಕ್ಷ ಬಡವರಿಗೆ ಊಟ ಬಡಿಸಲು ಮುಂದಾಗಿದೆ.

ಆಗಸ್ಟ್ 15ರಂದು ದೇಶದಾದ್ಯಂತ ಹಸಿದವರಿಗೆ ಆಹಾರ ನೀಡಲಾಗುವುದು. ಅನಾಥಾಶ್ರಮಗಳು, ವೃದ್ಧಾಶ್ರಮಗಳು, ಆಶ್ರಯ ತಾಣಗಳು, ಗ್ರಾಮೀಣ ನಿವಾಸಿಗಳು ಸೇರಿದಂತೆ ಮೂಲಸೌಲಭ್ಯ ಮತ್ತು ಸಂಪನ್ಮೂಲದ ಕೊರತೆ ಇರುವ ಪ್ರದೇಶ ಗುರುತಿಸಿ, ಈ ಅಭಿಯಾನ ನಡೆಸಲಾಗುತ್ತದೆ ಎಂದು ರಾಬಿನ್ ಬುಡ್ ಆರ್ಮಿಯ ಸಹ ಸಂಸ್ಥಾಪಕಿ ಆರುಷಿ ಬಾತ್ರಾ ಹೇಳಿದರು. ಆರೋಗ್ಯ ರಕ್ಷಣೆಯ ಸೌಲಭ್ಯದೊಂದಿಗೆ ನಿಜವಾದ ಅರ್ಥದಲ್ಲಿ ಅವರನ್ನು ಸ್ವಾವಲಂಬಿಗಳನ್ನಾಗಿ ಮಾಡುವುದು ಸಂಸ್ಥೆಯ ಉದ್ದೇಶ ಎಂದು ತಿಳಿಸಿದರು.

ದೋಣಿ ದುರಂತ: 32 ಮಂದಿ ನಾಪತ್ತೆ

ಬಂದಾ: ಉತ್ತರಪ್ರದೇಶದ ಬಂದಾ ಜಿಲ್ಲೆಯ ಯಮುನಾ ನದಿಯಲ್ಲಿ ಗುರುವಾರ ಸಂಭವಿಸಿದ ದೋಣಿ ದುರಂತದಲ್ಲಿ ಮೂವರ ಮೃತದೇಹಗಳು ಪತ್ತೆಯಾಗಿದ್ದು, ಇನ್ನೂ 32 ಜನರು ನಾಪತ್ತೆಯಾಗಿದ್ದಾರೆ ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ.

ಮೃತಪಟ್ಟವರನ್ನು ಫುಲ್ವಾ (50), ರಜ್ರಾನಿ (45) ಹಾಗೂ ಕಿಶನ್ (7 ತಿಂಗಳು) ಎಂದು ಗುರುತಿಸಿರುವುದಾಗಿ ಬಂದಾದ ಡಿಐಜಿ ವಿಪಿನ್ ಮಿಶ್ರಾ ಮಾಹಿತಿ ನೀಡಿದ್ದಾರೆ.

ಎನ್‌ಡಿಆರ್‌ಎಫ್ ಮತ್ತು ಎಸ್‌ಡಿಆರ್‌ಎಫ್ ಸಿಬ್ಬಂದಿಯು ಶೋಧ ಕಾರ್ಯಾಚರಣೆಯನ್ನು ಮುಂದುವರಿಸಿದ್ದು, ಮೃತದೇಹಗಳ ಪತ್ತೆಗಾಗಿ ಪ್ರಯಾಗ್ ರಾಜ್‌ನಿಂದ ಮುಳುಗುತಜ್ಞರನ್ನೂ ಕರೆಸಲಾಗಿದೆ. ದೋಣಿಯು ಮರ್ಕಾದಿಂದ ಫತೇಪುರ ಜಿಲ್ಲೆಯ ಜರೌಲಿ ಘಾಟ್‌ಗೆ ಹೋಗುತ್ತಿತ್ತು. ದೋಣಿಯಲ್ಲಿ ಒಟ್ಟು 50 ಮಂದಿ ಇದ್ದು ಜತೆಗೆ ದ್ವಿಚಕ್ರ ವಾಹನಗಳೂ ಇದ್ದವು. ಇವರಲ್ಲಿ ಬಹುತೇಕರು ರಕ್ಷಾ ಬಂಧನದ ನಿಮಿತ್ತ ತಮ್ಮ ಸಂಬಂಧಿಕರನ್ನು ಭೇಟಿಯಾಗಲು ಹೊರಟಿದ್ದರು. ದೋಣಿಯು ಸಮ್‌ಗರ ಹಳ್ಳಿಯ ಸಮೀಪಕ್ಕೆ ಬಂದಾಗ ಜೋರಾಗಿ ಗಾಳಿ ಬೀಸಿದ ಪರಿಣಾಮ ಮಗುಚಿಬಿದ್ದಿದ್ದು, ಹಲವರು ನೀರು ಪಾಲಾಗಿದ್ದಾರೆ. ನಾವಿಕ ಸೇರಿದಂತೆ ಇತರ 15 ಮಂದಿ ಈಜಿ ದಡ ಸೇರಿದ್ದಾರೆ ಎಂದು ಮಿಶ್ರಾ ಹೇಳಿದ್ದಾರೆ.

ಮೃತಪಟ್ಟ ಕುಟುಂಬಗಳಿಗೆ ತಲಾ ₹4 ಲಕ್ಷ ಪರಿಹಾರ ಘೋಷಿಸಲಾಗಿದೆ.

ಸ್ವಪಕ್ಷದ ಕಾರ್ಯಕರ್ತರು, ಮುಖಂಡರಿಂದ ವಿರೋಧ ● ಆದೇಶಕ್ಕೆ ತಡೆ ನೀಡಿದ ಸರ್ಕಾರ

ಮೇಸ್ತ ಕೊಲೆ ಆರೋಪಿಗೆ ಉಪಾಧ್ಯಕ್ಷ ಸ್ಥಾನ

ಪ್ರಜಾವಾಣಿ ವಾರ್ತೆ

ಕಾರವಾರ: ಯುವಕ ಪರೇಶ ಮೇಸ್ತ ಕೊಲೆ ಪ್ರಕರಣದ ಪ್ರಮುಖ ಆರೋಪಿ ಜಮಾಲ್ ಆಜಾದ್ ಅಣ್ಣಿಗೇರಿ ಅವರಿಗೆ, ಉತ್ತರ ಕನ್ನಡ ಜಿಲ್ಲಾ ವಕ್ಫ್ ಸಲಹಾ ಸಮಿತಿ ಉಪಾಧ್ಯಕ್ಷ ಸ್ಥಾನ ನೀಡಿದ ಕ್ರಮವು ವ್ಯಾಪಕ ಖಂಡನೆಗೆ ಗುರಿಯಾಗಿದೆ. ಸ್ವತಃ ಬಿಜೆಪಿ ಕಾರ್ಯಕರ್ತರು, ಮುಖಂಡರು ವಿರೋಧ ವ್ಯಕ್ತಪಡಿಸುತ್ತಿದ್ದಂತೆ ಸರ್ಕಾರವು ನೇಮಕಾತಿಯನ್ನು ಶುಕ್ರವಾರ ತಡೆ ಹಿಡಿದಿದೆ.

ಜಿಲ್ಲಾ ವಕ್ಫ್ ಸಲಹಾ ಸಮಿತಿಯ ಉಪಾಧ್ಯಕ್ಷ ಸ್ಥಾನಕ್ಕೆ ಜಮಾಲ್ ಅವರನ್ನು ಆಯ್ಕೆ ಮಾಡಿ ರಾಜ್ಯ ವಕ್ಫ್ ಮಂಡಳಿಯು ಗುರುವಾರ ಆದೇಶಿಸಿತ್ತು. ಇದನ್ನು ಬಿಜೆಪಿ ಮುಖಂಡರು ಟೀಕಿಸಿದ್ದರು. ಸಾಮಾಜಿಕ ಜಾಲತಾಣಗಳಲ್ಲಿ ನೂರಾರು ಮಂದಿ ತರಾಟೆಗೆ ತೆಗೆದುಕೊಂಡಿದ್ದರು. ಕಾರವಾರ ಶಾಸಕಿ ರೂಪಾಲಿ ನಾಯ್ಕ ಸೇರಿದಂತೆ ಈ ಭಾಗದ ಹಲವು ನಾಯಕರು ಬಹಿರಂಗವಾಗಿಯೇ ಅಸಮಾಧಾನ ವ್ಯಕ್ತಪಡಿಸಿದ್ದರು.

2017ರ ಡಿಸೆಂಬರ್‌ನಲ್ಲಿ ನಡೆದ ಗಲಭೆಯ ಸಂದರ್ಭ, ಹೊನ್ನಾವರದಲ್ಲಿ ಪರೇಶ ಮೇಸ್ತ ಅವರ ಕೊಲೆಯಾಗಿತ್ತು. ಈ ಪ್ರಕರಣವು ಭಾರಿ ಸಂಚಲನ ಉಂಟು ಮಾಡಿತ್ತು. ಆರೋಪಿಗಳ ಬಂಧನಕ್ಕೆ ಆಗ್ರಹಿಸಿ ಬಿಜೆಪಿ ಕಾರ್ಯಕರ್ತರು, ರಾಜ್ಯದಾದ್ಯಂತ ಪ್ರತಿಭಟನೆ ನಡೆಸಿದ್ದರು. ಬಳಿಕ ಪಕ್ಷದ ವಿವಿಧ ಹಿರಿಯ ಮುಖಂಡರು ಮೇಸ್ತ ಅವರ ಮನೆಗೆ ಭೇಟಿ ನೀಡಿದ್ದರು. 2018ರ ಫೆ.21ರಂದು ಅಂದಿನ ಬಿಜೆಪಿ ಅಧ್ಯಕ್ಷ ಅಮಿತ್ ಶಾ ಕೂಡ ಬಂದು ಪಾಲಕರಿಗೆ ಸಾಂತ್ವನ ಹೇಳಿದ್ದರು.

'ಬಿಜೆಪಿಯ ಕೋಮು ಕಾರ್ಯಸೂಚಿ ಮತ್ತೊಮ್ಮೆ ಬಯಲು'

ಬೆಂಗಳೂರು: ಪರೇಶ್ ಮೇಸ್ತ ಕೊಲೆ ಆರೋಪಿ ಆಝಾದ್ ಅಣ್ಣಿಗೇರಿಯನ್ನು ವಕ್ಫ್ ಬೋರ್ಡ್‌ಗೆ ನೇಮಕ ಮಾಡುವ ಮೂಲಕ ಬಿಜೆಪಿಯ ಕೋಮು ಕಾರ್ಯಸೂಚಿ ಮತ್ತೊಮ್ಮೆ ಬಯಲಾಗಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ದೂರಿದ್ದಾರೆ.

2017ರಲ್ಲಿ ಪರೇಶ್ ಮೇಸ್ತ ಅವರ ಕೊಲೆಯನ್ನು ರಾಜಕೀಯವಾಗಿ ಲಾಭ ಮಾಡಿಕೊಂಡಿದ್ದು ಇದೇ ಬಿಜೆಪಿ. ಪರೇಶ್ ಮೇಸ್ತ ಕೊಲೆಗೂ ಆಝಾದ್ ಅಣ್ಣಿಗೇರಿ ನೇಮಕಾತಿಗೂ ಇರುವ ಒಳ ಒಪ್ಪಂದ ಏನು ಎನ್ನುವುದನ್ನು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ರಾಜ್ಯದ ಜನರಿಗೆ ಸ್ಪಷ್ಟಪಡಿಸಬೇಕು ಎಂದು ಒತ್ತಾಯಿಸಿದ್ದಾರೆ.

ಚುನಾವಣೆಗಳು ಹತ್ತಿರ ಬಂದಾಗ, ಬಿಜೆಪಿ ಇಕ್ಕಟ್ಟಿಗೆ ಸಿಲುಕಿದಾಗಲೆಲ್ಲ ಅಮಾಯಕರ ಕೊಲೆಗಳು ನಡೆಯುತ್ತವೆ. ಸಂಘ ಪರಿವಾರದ ಮಾಜಿ ಮುಖಂಡ ಮಹೇಂದ್ರಕುಮಾರ್ ಅವರು ಬಿಜೆಪಿ, ಸಂಘ ಪರಿವಾರದ ಕುರಿತು ಹಲವಾರು ಭಯಾನಕ ಸಂಗತಿಗಳನ್ನು ಸಮಾಜದ ಮುಂದೆ ಇಟ್ಟಿದ್ದರು. ನಾಡಿನ ಜನರು, ಯುವ ಪೀಳಿಗೆ ಈ ಕುರಿತು ಗಂಭೀರವಾಗಿ ಚಿಂತಿಸಬೇಕು ಎಂದು ವಿನಂತಿಸಿದ್ದಾರೆ.

ರಾಜ್ಯದಲ್ಲಿ ನಡೆದಿರುವ ಬಿಜೆಪಿ ಕಾರ್ಯಕರ್ತರ ಕೊಲೆ, ಇತರೆ ಕೋಮು ಕೊಲೆಗಳು, ಗಲಭೆಗಳನ್ನು ಹೈಕೋರ್ಟ್‌ನ ಹಾಲಿ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ತನಿಖೆ ನಡೆಸಬೇಕು. ಈ ಕೊಲೆಗಳ ಹಿಂದಿನ ನಿಗೂಢ, ಒಳ ಒಪ್ಪಂದಗಳನ್ನು ಬಹಿರಂಗಗೊಳಿಸಬೇಕು ಎಂದು ಆಗ್ರಹಿಸಿದ್ದಾರೆ.

ತೀರ್ಪು ಕಾಯ್ದಿರಿಸಿದ 'ಸುಪ್ರೀಂ'

ಪ್ರಜಾವಾಣಿ ವಾರ್ತೆ

ನವದೆಹಲಿ: ನೌಕರರ ಭವಿಷ್ಯ ನಿಧಿ 1995ರ ಕಾಯ್ದೆಯಲ್ಲಿನ (ಇಪಿಎಸ್ 95) ತಿದ್ದುಪಡಿಗೆ ಸಂಬಂಧಿಸಿದಂತೆ ಸಲ್ಲಿಕೆಯಾಗಿರುವ 67 ಅರ್ಜಿಗಳು ಹಾಗೂ ನೌಕರರ ಭವಿಷ್ಯ ನಿಧಿ ಸಂಸ್ಥೆ (ಇಪಿಎಫ್‌ಒ) ಸಲ್ಲಿಸಿರುವ ಮೇಲ್ಮನವಿಯ ವಿಚಾರಣೆಯನ್ನು ಪೂರ್ಣಗೊಳಿಸಿರುವ ಸುಪ್ರೀಂ ಕೋರ್ಟ್, ತೀರ್ಪನ್ನು ಕಾಯ್ದಿರಿಸಿದೆ.

ಪಿಂಚಣಿದಾರರ ಪರವಾಗಿ ಕೇರಳ ಹೈಕೋರ್ಟ್ ತೀರ್ಪು ನೀಡಿತ್ತು. ಇದನ್ನು ಪ್ರಶ್ನಿಸಿ ನೌಕರರ ಭವಿಷ್ಯ ನಿಧಿ ಸಂಸ್ಥೆಯು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದೆ.

ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಉದಯ್ ಯು.ಲಲಿತ್ ನೇತೃತ್ವದ ಪೀಠದ ಎದುರು ಒಪಿಎಫ್‌ಒ ಪರವಾಗಿ ವಾದ ಮಂಡಿಸಿದ ಹಿರಿಯ ವಕೀಲ ಆರ್ಯಂ ಸುಂದರಂ ಹಾಗೂ ರೋಹಿಣಿ ಮೂಸಾ, 'ಕೇರಳ ಹೈಕೋರ್ಟ್‌ನ ತೀರ್ಪನ್ನು ಎತ್ತಿ ಹಿಡಿದರೆ ಉದ್ಯೋಗಿಗಳ ಪಿಂಚಣಿ ವ್ಯವಸ್ಥೆಯು ಸಂಪೂರ್ಣ ಸರ್ವನಾಶ ಆಗಲಿದೆ' ಎಂದು ಗಮನ ಸೆಳೆದರು.

'ಒಂದು ವೇಳೆ ಹೈಕೋರ್ಟ್ ತೀರ್ಪನ್ನು ಪಾಲನೆ ಮಾಡಿದರೆ, ಪ್ರತಿ ಖಾಸಗಿ ವಲಯದ ಉದ್ಯೋಗಿಗೆ ಅವರ ವೇತನದ ಮಿತಿಯನ್ನು ಗಣನೆಗೆ ತೆಗೆದುಕೊಳ್ಳದೆ ಪಿಂಚಣಿಯನ್ನು ನೀಡಬೇಕಾಗುತ್ತದೆ. ಖಾಸಗಿ ವಲಯದ ಪ್ರತಿಯೊಬ್ಬ ಉದ್ಯೋಗಿಯು ಕೊನೆಯದಾಗಿ ಪಡೆದ ವೇತನದ ಮೊತ್ತವನ್ನು ಆಧರಿಸಿದ ಪಿಂಚಣಿಯ ಆಯ್ಕೆಯನ್ನು ಬಯಸುತ್ತಾನೆ. ಇದರಿಂದ ನಿಧಿಗೆ ವಂತಿಗೆ ನೀಡದಿದ್ದರೂ ಪಿಂಚಣಿಯುತ ವೇತನದ ಶೇ 50ರಷ್ಟು ಮೊತ್ತ ಅವರಿಗೆ ಸಿಗುತ್ತದೆ' ಎಂದರು.

'ಸರ್ಕಾರಿ ಪಿಂಚಣಿ ಯೋಜನೆಗಳು ಸಹ 2004ರ ಬಳಿಕ ನೌಕರರ ಕೊನೆಯ ಸಂಬಳದ ಶೇ 50 ಮೊತ್ತವನ್ನು ಪಿಂಚಣಿ ರೂಪದಲ್ಲಿ ನೀಡುತ್ತಿಲ್ಲ. ಈ ಯೋಜನೆ ಕಾರ್ಯಸಾಧುವಲ್ಲ ಎಂದು ರದ್ದುಪಡಿಸಲಾಗಿದೆ. ಅವರು ನೀಡುವ ವಂತಿಗೆಯ ಆಧಾರದಲ್ಲಿ ಪಿಂಚಣಿ ಪಡೆಯುತ್ತಿದ್ದಾರೆ' ಎಂದು ಅವರು ಹೇಳಿದರು.

ಸರ್ಕಾರದ ಪರವಾಗಿ ವಾದ ಮಂಡಿಸಿದ ಹೆಚ್ಚುವರಿ ಸಾಲಿಸಿಟರ್ ಜನರಲ್ ವಿಕ್ರಮ್‌ಜಿತ್ ಬ್ಯಾನರ್ಜಿ, 'ನೌಕರರ ಪಿಂಚಣಿ ಯೋಜನೆಯು ನೌಕರರಿಗೆ ಅನುಕೂಲ ಮಾಡಿಕೊಡುವ ಜಗತ್ತಿನ ಅತಿ ದೊಡ್ಡ ಯೋಜನೆ. ಜಗತ್ತಿನ ಹಲವು ಕಡೆಗಳಲ್ಲಿ ಇಂತಹ ಯೋಜನೆಗಳು ಸರ್ವನಾಶವಾಗಿವೆ' ಎಂದರು.

ಪಿಂಚಣಿದಾರರು ಹಾಗೂ ನೌಕರರ ಪರವಾಗಿ ವಾದ ಮಂಡಿಸಿದ ಹಿರಿಯ ವಕೀಲ ಗೋಪಾಲ್, 'ನಮ್ಮ ದೇಶದ ಪಿಂಚಣಿ ಯೋಜನೆಯು ಕುಸಿಯುವ ಹಂತದಲ್ಲಿಲ್ಲ. ಯೋಜನೆಯ ಸಂಚಿತ ನಿಧಿಯ ಬಡ್ಡಿಯ ಹಣದಲ್ಲಿ ನಿವೃತ್ತರಿಗೆ ಪಿಂಚಣಿ ನೀಡಲಾಗುತ್ತಿದೆ. ನೌಕರರ ಭವಿಷ್ಯ ನಿಧಿ ಸಂಸ್ಥೆಯು ಒಂದು ಸಲವೂ ಸಂಚಿತ ನಿಧಿಯಿಂದ ಹಣ ತೆಗೆದಿಲ್ಲ' ಎಂದರು.

ಓಲಾ ಬೈಕ್ ಖರೀದಿ: ₹76,960 ಕಳೆದುಕೊಂಡ ಗ್ರಾಹಕ

ಬೆಂಗಳೂರು: ಆನ್‌ಲೈನ್ ಮೂಲಕ ಓಲಾ ಬೈಕ್ ಖರೀದಿಸಲು ಮುಂದಾಗಿದ್ದ ನಗರದ ನಿವಾಸಿ ಅಬ್ದುಲ್ ಎಂಬುವರು ₹76,960 ಕಳೆದುಕೊಂಡಿದ್ದು, ಈ ಸಂಬಂಧ ದಕ್ಷಿಣ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ತಲಘಟ್ಟಪುರ ನಿವಾಸಿ ಅಬ್ದುಲ್ ಅವರು ಇತ್ತೀಚೆಗೆ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ. ಏಪ್ರಿಲ್ 14ರಂದು ಅಬ್ದುಲ್ ಅವರಿಗೆ ಕರೆ ಮಾಡಿದ್ದ ಆರೋಪಿ, 'ಆನ್‌ಲೈನ್ ಮೂಲಕ ಕಡಿಮೆ ಬೆಲೆಗೆ ಓಲಾ ಬೈಕ್ ಮಾರುತ್ತಿದ್ದೇವೆ' ಎಂದಿದ್ದ. ಮಾತು ನಂಬಿದ್ದ ದೂರುದಾರ, ಆತನ ಜೊತೆ ವ್ಯವಹಾರ ಮುಂದುವರಿಸಿದ್ದರು. ಆರೋಪಿಯು ಹಂತ ಹಂತವಾಗಿ ₹ 76,960 ಪಡೆದಿದ್ದ. ಬಳಿಕ, ಬೈಕ್ ನೀಡದೇ ನಾಪತ್ತೆಯಾಗಿದ್ದಾನೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಬೊಮ್ಮಾಯಿ ನೇತೃತ್ವದಲ್ಲಿ ಚುನಾವಣೆ: ಅರುಣ್ ಸಿಂಗ್

ನವದೆಹಲಿ: ಕರ್ನಾಟಕದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಬದಲಾವಣೆ ಇಲ್ಲ ಎಂದು ಬಿಜೆಪಿಯ ಕರ್ನಾಟಕ ಉಸ್ತುವಾರಿ ಹಾಗೂ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅರುಣ್ ಸಿಂಗ್ ಸ್ಪಷ್ಟಪಡಿಸಿದರು.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಬೊಮ್ಮಾಯಿ ಜನಸಾಮಾನ್ಯರ ಮುಖ್ಯಮಂತ್ರಿ. ಅವರ ನೇತೃತ್ವದಲ್ಲೇ ಮುಂದಿನ ವಿಧಾನಸಭಾ ಚುನಾವಣೆಯನ್ನು ಎದುರಿಸಲಾಗುವುದು' ಎಂದರು.

'ಮುಖ್ಯಮಂತ್ರಿ ಬದಲಾವಣೆ ಎಂಬುದು ಕಾಂಗ್ರೆಸ್ ಸೃಷ್ಟಿ. ಕಾಂಗ್ರೆಸ್ ಪಕ್ಷವು ಊಹಾಪೋಹಗಳನ್ನು ಹರಿಬಿಡುವ ಮೂಲಕ ಗೊಂದಲಗಳನ್ನು ಸೃಷ್ಟಿಸುತ್ತಿದೆ. ಇಡೀ ಗೊಂದಲವನ್ನು ಸೃಷ್ಟಿಸಿದ್ದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್. ಅವರಿಬ್ಬರ ಮಧ್ಯೆ ಒಡಕು ಇದೆ. ಅದನ್ನು ಮುಚ್ಚಿ ಹಾಕಲು ಮುಖ್ಯಮಂತ್ರಿ ಬದಲಾವಣೆಯ ಸುಳ್ಳು ಸುದ್ದಿ ಹರಡುತ್ತಿದ್ದಾರೆ' ಎಂದು ಅರುಣ್ ಸಿಂಗ್ ಅವರು ತಿಳಿಸಿದರು.

'ಬೊಮ್ಮಾಯಿ ಅವರು ಎಲ್ಲ ವರ್ಗದ ಜನರ ಪರವಾಗಿ ಅತ್ಯುತ್ತಮ ಕೆಲಸಗಳನ್ನು ಮಾಡುತ್ತಿದ್ದಾರೆ. ಮುಂದಿನ ಚುನಾವಣೆಯಲ್ಲಿ 150 ಸ್ಥಾನಗಳನ್ನು ಗೆದ್ದು ಮತ್ತೆ ಸರ್ಕಾರ ರಚಿಸಲಿದೆ' ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ವೇದಿಕೆಯಲ್ಲೇ ಸಲ್ಮಾನ್ ರಶ್ದಿಗೆ ಇರಿತ

ಒಂದನೇ ಪುಟದಿಂದ...

'ಪ್ರೇಕ್ಷಕರ ಸಾಲಿನಲ್ಲಿ ಕುಳಿತಿದ್ದ ರೀಟಾ ಅವರು, ಈ ಘಟನೆ ನಡೆದ ಬೆನ್ನಲ್ಲೇ ವೇದಿಕೆಗೆ ಧಾವಿಸಿ, ಚಿಕಿತ್ಸೆಗೆ ನೆರವಾದರು' ಎಂದು ನ್ಯೂಯಾರ್ಕ್ ಟೈಮ್ಸ್ ವರದಿ ಮಾಡಿದೆ.

ವೇದಿಕೆಯತ್ತ ನುಗ್ಗಿದ ಅಪರಿಚಿತ ವ್ಯಕ್ತಿ, ರಶ್ದಿ ಅವರಿಗೆ 10–15 ಬಾರಿ ಚಾಕುವಿನಿಂದ ಇರಿದ ಎಂದು ಪ್ರತ್ಯಕ್ಷದರ್ಶಿಯೊಬ್ಬರ ಹೇಳಿಕೆಯನ್ನು ಉಲ್ಲೇಖಿಸಿ ಎನ್‌ಡಿಟಿವಿ ವರದಿ ಮಾಡಿದೆ.

ರಶ್ದಿ ಅವರ ಸಂದರ್ಶನ ನಡೆಸುತ್ತಿದ್ದ ವ್ಯಕ್ತಿಯೂ ಈ ದಾಳಿಯಲ್ಲಿ ಗಾಯಗೊಂಡಿದ್ದಾರೆ ಎಂದು ಮೂಲಗಳನ್ನು ಉಲ್ಲೇಖಿಸಿ ಎನ್‌ಡಿಟಿವಿ ವರದಿ ಮಾಡಿದೆ.

ಮುಂಬೈನಲ್ಲಿ ಜನಿಸಿರುವ ರಶ್ದಿ ಅವರು 14 ಕೃತಿಗಳನ್ನು ರಚಿಸಿದ್ದಾರೆ. ಅವರ ಕೆಲವು ಕೃತಿಗಳು ಮೂಲಭೂತವಾದಿಗಳ ಕೆಂಗಣ್ಣಿಗೆ ಗುರಿಯಾಗಿದ್ದರಿಂದಾಗಿ ಅವರು ಬೆದರಿಕೆ ಕರೆಗಳನ್ನು ಎದುರಿಸಿದ್ದಾರೆ. ಹಲವು ದಶಕಗಳ ಕಾಲ ಅವರು ಅಜ್ಞಾತವಾಸದಲ್ಲಿಯೂ ಇದ್ದರು. 1998ರಲ್ಲಿ ಪ್ರಕಟವಾದ 'ದಿ ಸಟಾನಿಕ್ ವರ್ಸಸ್' ಕೃತಿ ಅವರಿಗೆ ಭಾರಿ ಜನಪ್ರಿಯತೆ ತಂದುಕೊಡುವ ಜೊತೆಗೆ, ಜೀವ ಬೆದರಿಕೆಗೂ ಕಾರಣವಾಗಿತ್ತು.

ಇರಾನ್‌ನ ಧಾರ್ಮಿಕ ಮುಖಂಡ ಆಯತೊಲ್ಲಾ ಖೊಮೇನಿ, ರಶ್ದಿ ಹತ್ಯೆ ಫತ್ವಾ ಹೊರಡಿಸಿದ್ದರು.

ಸಂಕ್ಷಿಪ್ತ ಸುದ್ದಿ

ಮಂತ್ರಿ ಡೆವಲಪರ್ಸ್‌ನ ₹ 300 ಕೋಟಿ ಮೌಲ್ಯದ ಆಸ್ತಿ ಜಪ್ತಿ

ನವದೆಹಲಿ(ಪಿಟಿಐ) : ಬೆಂಗಳೂರು ಮೂಲದ ಮಂತ್ರಿ ಡೆವಲಪರ್ಸ್ ಪ್ರೈವೇಟ್ ಲಿಮಿಟೆಡ್ ವಿರುದ್ಧದ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿ, ಕಂಪನಿಯ ₹ 300 ಕೋಟಿ ಮೌಲ್ಯದ ಸ್ಥಿರಾಸ್ತಿಯನ್ನು ಜಪ್ತಿ ಮಾಡಲಾಗಿದೆ ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಅಧಿಕಾರಿಗಳು ಹೇಳಿದ್ದಾರೆ.

'ಮಂತ್ರಿ ಸೆರೆನಿಟಿ, ಮಂತ್ರಿ ವೆಬ್‌ಸಿಟಿ ಹಾಗೂ ಮಂತ್ರಿ ಎನರ್ಜಿಯಾ ಎಂಬ ವಸತಿ ಯೋಜನೆಗಳಡಿ ಮನೆ ಖರೀದಿಸುವವರಿಗೆ ವಂಚಿಸಲಾಗಿದೆ ಎಂಬ ಆರೋಪಗಳಿಗೆ ಸಂಬಂಧಿಸಿ ಹಣ ಅಕ್ರಮ ವರ್ಗಾವಣೆ ಕಾಯ್ದೆಯಡಿ, ಕಂಪನಿಯ ಸ್ಥಿರಾಸ್ತಿಗಳ ಜಪ್ತಿಗಾಗಿ ತಾತ್ಕಾಲಿಕ ಆದೇಶ ಹೊರಡಿಸಲಾಗಿದೆ' ಎಂದು ಇ.ಡಿ ತಿಳಿಸಿದೆ.

ಠೇವಣಿಗಳ ಜಪ್ತಿ: ಇಬ್ಬರು ಚೀನಾ ಪ್ರಜೆಗಳು ಬೆಂಗಳೂರಿನಲ್ಲಿ ಸ್ಥಾಪಿಸಿರುವ ಯೆಲ್ಲೊ ಟ್ಯೂನ್ ಟೆಕ್ನಾಲಜೀಸ್ ಎಂಬ 'ನಕಲಿ ಕಂಪನಿ' ಗೆ ಸೇರಿದ (ಷೆಲ್ ಕಂಪನಿ) ₹ 370 ಕೋಟಿ ಮೌಲ್ಯದ ಠೇವಣಿಗಳನ್ನು ಅಕ್ರಮ ಹಣ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿ ಜಪ್ತಿ ಮಾಡಲಾಗಿದೆ ಎಂದು ಇ.ಡಿ ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ.

ಕಂಪನಿಯು ಈ ಹಣವನ್ನು ಬ್ಯಾಂಕ್, ಪೇಮೆಂಟ್ ಗೇಟ್‌ವೇ ಹಾಗೂ ಕ್ರಿಪ್ಟೊ ಖಾತೆಗಳಲ್ಲಿ ಹೂಡಿಕೆ ಮಾಡಿತ್ತು.

ನೂಪುರ್ ಹತ್ಯೆಗೆ ಸಂಚು: ಜೆಇಎಂ ಉಗ್ರನ ಬಂಧನ

ಲಖನೌ: ಬಿಜೆಪಿಯ ಮಾಜಿ ವಕ್ತಾರೆ ನೂಪುರ್ ಶರ್ಮಾ ಅವರನ್ನು ಹತ್ಯೆ ಮಾಡುವ ಹೊಣೆ ಹೊತ್ತಿದ್ದ ಜೈಷ್– ಎ– ಮೊಹಮ್ಮದ್ (ಜೆಇಎಂ) ಸಂಘಟನೆಯ ಉಗ್ರಗಾಮಿಯೊಬ್ಬನನ್ನು ಉತ್ತರಪ್ರದೇಶದ ಭಯೋತ್ಪಾದನಾ ನಿಗ್ರಹ ದಳವು ಶುಕ್ರವಾರ ಬಂಧಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಂಧಿತ ಆರೋಪಿಯನ್ನು ಸಹರನ್‌ಪುರ ಜಿಲ್ಲೆಯ ಕುಂದಾಕಲಾ ಗ್ರಾಮದ ಮೊಹಮ್ಮದ್ ನದೀಮ್ (25) ಎಂದು ಗುರುತಿಸಲಾಗಿದೆ ಎಂದು ಎಡಿಜಿಪಿ (ಕಾನೂನು ಮತ್ತು ಸುವ್ಯವಸ್ಥೆ) ಪ್ರಶಾಂತ ಕುಮಾರ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ನಗರದಲ್ಲಿ ಇಂದು

ಬೈಕ್ ರ‍್ಯಾಲಿ ಹಾಗೂ ತಿರಂಗ ಯಾತ್ರೆ: ಅಶೋಕ ಹಾರನಳ್ಳಿ, ಆಯೋಜನೆ: ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ, ಸ್ಥಳ: ಶಂಕರ ಮಠದ ಆವರಣ, ಶಂಕರಪುರ, ಬೆಳಿಗ್ಗೆ 7ರಿಂದ

ಸೈಕಲ್ ಜಾಥಾ: ಚಾಲನೆ: ಎಚ್.ಜಿ. ಬಾಲಗೋಪಾಲ್, ಗೋವಿಂದೇಗೌಡ ಎಚ್.ಜಿ., ಆಯೋಜನೆ ಮತ್ತು ಸ್ಥಳ: ವಿವೇಕಾನಂದ ಪದವಿ ಕಾಲೇಜು, ಬೆಳಿಗ್ಗೆ 7.30

ರಾಘವೇಂದ್ರಸ್ವಾಮಿಗಳ 351ನೇ ಆರಾಧನಾ ಮಹೋತ್ಸವ: ವಿದ್ಯಾಧೀಶತೀರ್ಥ ಸ್ವಾಮೀಜಿ, ಆಯೋಜನೆ ಹಾಗೂ ಸ್ಥಳ: ರಾಘವೇಂದ್ರ ಸೇವಾ ಸಮಿತಿ, ಸಂಜಯನಗರ, ಬೆಳಿಗ್ಗೆ 8ರಿಂದ

ಮನೆ ಮನೆಗಳಲ್ಲಿ ರಾಷ್ಟ್ರಧ್ವಜ: ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಉಪಸ್ಥಿತಿ: ರಘುನಾಥ್ ರಾವ್ ಮಲ್ಕಾಪುರೆ, ವಿಶ್ವೇಶ್ವರ ಹೆಗಡೆ ಕಾಗೇರಿ, ವಿ. ಸುನೀಲ್ ಕುಮಾರ್, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ವಿಧಾನಸೌಧ ಮುಂಭಾಗ, ಬೆಳಿಗ್ಗೆ 9

ಮಿಮಿಕ್ರಿ ದಯಾನಂದ್, ಅನುರಾಧ ಭಟ್ ಸೇರಿ ಹಲವರಿಗೆ ರಾಘವೇಂದ್ರ ಸದ್ಭಾವನಾ ಪ್ರಶಸ್ತಿ ಪ್ರದಾನ: ಮುಖ್ಯ ಅತಿಥಿ: ಮಹೇಶ್ ಜೋಶಿ, ಅಮರ್‌ಕುಮಾರ್ ಪಾಂಡೆ, ಅಧ್ಯಕ್ಷತೆ: ಎಚ್.ಎಲ್.ಎನ್. ರಾವ್, ಸ್ಥಳ: ಕೋದಂಡರಾಮ ವಿದ್ಯಾರ್ಥಿ ಸೇವಾ ಸಂಘ, ಬೆಳಿಗ್ಗೆ 9.30

ಸಮೃದ್ಧಿ ಸಾಮಾಜಿಕ ಶೈಕ್ಷಣಿಕ ಸೇವಾ ಟ್ರಸ್ಟ್ ಉದ್ಘಾಟನಾ ಸಮಾರಂಭ: ಉದ್ಘಾಟನೆ: ಸೌಮ್ಯನಾಥ ಸ್ವಾಮೀಜಿ, ಅತಿಥಿಗಳು: ಎಂ.ಕೃಷ್ಣಪ್ಪ, ಎಚ್. ರವೀಂದ್ರ, ಎಲ್.ಎನ್.ಮುಕುಂದರಾಜ್, ಎಸ್.ನಾಗಭೂಷಣ, ವಿಜಯಲಕ್ಷ್ಮಿ ಬಾಳೆಕುಂದ್ರಿ, ಸ್ಥಳ: ಆದಿಚುಂಚನಗಿರಿ ಸಮುದಾಯ ಭವನ, ವಿಜಯನಗರ, ಬೆಳಿಗ್ಗೆ 10



ರಹಮತ್ ತರೀಕೆರೆ

ಸರಣಿ ವಿಶೇಷ ಉಪನ್ಯಾಸ ಮಾಲಿಕೆ: ವಿಷಯ: 'ಕನ್ನಡ ಸಾಹಿತ್ಯ ಮತ್ತು ಬಹುತ್ವ ಪರಿಕಲ್ಪನೆ', ಉಪನ್ಯಾಸಕರು: ರಹಮತ್ ತರೀಕೆರೆ, ಅಧ್ಯಕ್ಷತೆ: ಎ.ಎಚ್. ರಾಮರಾವ್, ಮುಖ್ಯ ಅತಿಥಿ: ಎಸ್.ಎನ್. ನಾಗರಾಜರೆಡ್ಡಿ, ಉಪಸ್ಥಿತಿ: ಎಂ. ಸತೀಶ್ ಕಾರಂತ್, ಪಿ.ಎಲ್. ರಮೇಶ್, ಆಯೋಜನೆ ಹಾಗೂ ಸ್ಥಳ: ನ್ಯಾಷನಲ್ ಕಾಲೇಜು, ಬಸವನಗುಡಿ, ಮಧ್ಯಾಹ್ನ 2.30

ರಾಘವೇಂದ್ರತೀರ್ಥ ಗುರುಸಾರ್ವಭೌಮರ 351ನೇ ಆರಾಧನಾ ಮಹೋತ್ಸವ: ಭಜನೆ: ಶ್ರೀಪಾದರಾಜ ಭಜನಾ ಮಂಡಳಿ, ಆಯೋಜನೆ: ಸರ್ವಮೂಲ ಪ್ರತಿಷ್ಠಾನ, ಸ್ಥಳ: ಉಡುಪಿಯ ಪಲಿಮಾರು ಮಠ, ಸಂಪಿಗೆ ರಸ್ತೆ, ಮಲ್ಲೇಶ್ವರ, ಬೆಳಿಗ್ಗೆ 10

ಘಂಟಸಾಲ ವೆಂಕಟೇಶ್ವರರಾವ್ ಅವರ ಜನ್ಮ ಶತಮಾನೋತ್ಸವ: ಮುಖ್ಯ ಅತಿಥಿ: ಚಂದ್ರಶೇಖರ್ ಕಂಬಾರ, ಅಧ್ಯಕ್ಷತೆ: ಎ.ರಾಧಾಕೃಷ್ಣ ರಾಜು, ಅತಿಥಿ: ಜಯಮಾಲ, ಘಂಟಸಾಲ ಶತಜಯಂತಿ ಪುರಸ್ಕಾರ: ಪಿ.ಸುಶೀಲಾ, ಆಯೋಜನೆ: ತೆಲುಗು ವಿಜ್ಞಾನ ಸಮಿತಿ, ಸ್ಥಳ: ವೈಯಾಲಿಕಾವಲಿನ ಕೃಷ್ಣದೇವರಾಯ ಕಲ್ಯಾಣ ಮಂದಿರ, ಬೆಳಿಗ್ಗೆ 10.30

ಅಮೃತ ಭಾರತಿಗೆ ಕನ್ನಡದಾರತಿ: ಉದ್ಘಾಟನೆ: ಸಿ.ಸೋಮಶೇಖರ್, ಅಧ್ಯಕ್ಷತೆ: ಪಿ.ಟಿ. ಶ್ರೀನಿವಾಸ ನಾಯಕ್, ಅತಿಥಿಗಳು: ವೀರಕಪುತ್ರ ಶ್ರೀನಿವಾಸ್, ಬೇಲೂರು ರಘುನಂದನ್, ಹಿದಾಯತ್ ಅಹಮದ್, ಆಯೋಜನೆ: ಸರ್ಕಾರಿ ಕಲಾ ಕಾಲೇಜು, ಸ್ಥಳ: ಕಾಲೇಜಿನ ಕಲಾಂಗಣ, ಅಂಬೇಡ್ಕರ್ ವೀಧಿ, ಬೆಳಿಗ್ಗೆ 11



ಸಿ. ಸೋಮಶೇಖರ್

ಸಾಧ್ವಿಮಣಿ ರುಕ್ಮಿಣಿ ಮತ್ತು ಸಾಧ್ವಿಮಣಿ ಸಾವಿತ್ರಮ್ಮನವರ ಮಮತೆಯ ಮಡಿಲು, ಮಮತೆಯ ಕಡಲು ಪುಸ್ತಕ ಬಿಡುಗಡೆ: ಉದ್ಘಾಟನೆ: ಕೆ.ಸುಂದರಮೂರ್ತಿ, ಅಧ್ಯಕ್ಷತೆ: ಮಂಗಳಾ ವೇದಪ್ರಕಾಶ್, ಪ್ರಾಸ್ತಾವಿಕ ನುಡಿ: ಬಿ.ಎಸ್. ಜ್ಞಾನಪ್ರಕಾಶ್, ಪುಸ್ತಕ ಬಿಡುಗಡೆ: ಸುವರ್ಣ ಅಮರನಾಥ್, ಕಾಂತರಾಜ್, ಲಲಿತಾ ಮೈತ್ರಿ, ಅತಿಥಿಗಳು: ಎಂ.ಎಸ್. ನರಸಿಂಹಮೂರ್ತಿ, ಸ್ಥಳ: ಸವಿತಾ ಲೇಡಿಸ್ ಕ್ಲಬ್, ಲಾಲ್‌ಬಾಗ್ ನಾಲ್ಕನೇ ಅಡ್ಡರಸ್ತೆ, ಬೆಳಿಗ್ಗೆ 10.30

ಅಲಯನ್ಸ್ ಕಾನೂನು ಸಮಾವೇಶ: ಮುಖ್ಯ ಭಾಷಣ: ಪ್ರಶಾಂತ್ ಮಾಲಿ, ಭಾಷಣಕಾರರು: ನಿಖಿಲ್ ನರೇಂದ್ರನ್, ತಾಜ್ ಮ್ಯಾಥ್ಯೂ, ಆಶಿಶ್ ಚಂದ್ರ, ವಿ. ಶ್ಯಾಮ್ ಕೃಷ್ಣ, ಅರುಣ್ ತಿವಾರಿ, ಜಯದೀಪ್ ರೆಡ್ಡಿ, ಪ್ರವೀಣ ಮಾತ್ನಿ, ಸ್ವಪ್ನಿ ಬಿ., ಆಯೋಜನೆ: ಅಲಯನ್ಸ್ ವಿಶ್ವವಿದ್ಯಾಲಯ, ಸ್ಥಳ: ದಿ ಲಲಿತ್ ಹೋಟೆಲ್, ಮಧ್ಯಾಹ್ನ 3

ರಾಷ್ಟ್ರೀಯ ಗಣಿಗಾರಿಕೆ ಸಮಾವೇಶ: ಮುಖ್ಯ ಅತಿಥಿ: ಮಲ್ಲೈ ಟಿಕಾದರ್, ಗೌರವ ಅತಿಥಿಗಳು: ಡಿ.ಎಸ್. ರಮೇಶ್, ಟಿ. ಸಾಮಿನಾಥನ್, ಅಧ್ಯಕ್ಷತೆ: ಮೇಧಾ ವೆಂಕಟೇಶ್, ಆಯೋಜನೆ: ಮೈನ್ಸ್ ಸೇಫ್ಟಿ ಅಸೋಸಿಯೇಷನ್ ಕರ್ನಾಟಕ, ಸ್ಥಳ: ಜೆ.ಎನ್. ಟಾಟಾ ಸಭಾಂಗಣ, ಭಾರತೀಯ ವಿಜ್ಞಾನ ಸಂಸ್ಥೆ, ಬೆಳಿಗ್ಗೆ 4

ಜನಪದ ಸಂಗೀತ ಶ್ರಾವಣ: ಉದ್ಘಾಟನೆ: ಡಿ. ಮಹೇಂದ್ರ, ಶರಣಪ್ಪ ಗೋನಾಳ್, ಅಧ್ಯಕ್ಷತೆ: ಅಪ್ಪಗೆರೆ ತಿಮ್ಮರಾಜು, ಗೌರವ ಸಮರ್ಪಣೆ: ಗೋವರ್ಧನ್ ಶಾನಭಾಗ್, ಅರುಣ್ ಕುಮಾರ್, ಆಯೋಜನೆ: ಗಾನಮಾಧುರ್ಯ ಸಾಂಸ್ಕೃತಿಕ ಕಲಾ ಸಂಘ, ಸ್ಥಳ: ವಾಲ್ ಬ್ರಿಡ್ಜ್ ಕ್ಲಸ್ಟರ್ ಅಪಾರ್ಟ್‌ಮೆಂಟ್, ನಾಗರಬಾವಿ, ಸಂಜೆ 5.30

'ಮಂತ್ರದ್ರಷ್ಟ ಅರವಿಂದ ಘೋಷ್' ಪುಸ್ತಕ ಬಿಡುಗಡೆ: ಉಪಸ್ಥಿತಿ: ಬಿ.ಸಿ. ನಾಗೇಶ್, ಹರಿಪ್ರಕಾಶ್ ಕೋಣೆಮನೆ, ಕಾ.ಶ್ರೀ. ನಾಗರಾಜ್, ಆಯೋಜನೆ ಹಾಗೂ ಸ್ಥಳ: ಕೇಶವಶಿಲ್ಪ, ರಾಷ್ಟ್ರೋತ್ಥಾನ ಪರಿಷತ್, ಚಾಮರಾಜಪೇಟೆ, ಸಂಜೆ 5.30

ರಾಘವೇಂದ್ರ ಗುರುಸಾರ್ವಭೌಮರ 351ನೇ ಆರಾಧನೆ: ದಾಸಸೌರಭ: ಸುಶ್ರಾವ್ಯ ಆಚಾರ್ಯ ಮತ್ತು ಸಂಗಡಿಗರು, ಆಯೋಜನೆ: ಬನಶಂಕರಿ ಸರ್ವಜ್ಞ ಸೇವಾ ಬಳಗ, ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, ಹೊಸಕೆರೆಹಳ್ಳಿ, ಸಂಜೆ 6.30

ಸ್ವಾತಂತ್ರ್ಯದ ಅಮೃತ ಮಹೋತ್ಸವದ ಪ್ರಯುಕ್ತ ವಿಶೇಷ ಅಂಚೆ ಲಕೋಟೆ ಬಿಡುಗಡೆ: ಮುಖ್ಯ ಅತಿಥಿ: ರಾಜ್ಯಪಾಲ ಥಾವರಚಂದ್ ಗೆಹಲೋತ್, ಅತಿಥಿ: ಎಸ್.ರಾಜೇಂದ್ರಕುಮಾರ್, ಆಯೋಜನೆ: ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ, ಅಧ್ಯಕ್ಷತೆ: ಐ.ಎಸ್.ಪ್ರಸಾದ್, ಸ್ಥಳ: ಎಫ್‌ಕೆಸಿಸಿಐ ಸಭಾಂಗಣ, ಸಂಜೆ 4


ರಾಘವೇಂದ್ರತೀರ್ಥ ಗುರುಸಾರ್ವಭೌಮರ 351ನೇ ಆರಾಧನಾ ಪಂಚರಾತ್ರೋತ್ಸವ: ಸುಬುಧೇಂದ್ರತೀರ್ಥ ಸ್ವಾಮೀಜಿ, ಭರತನಾಟ್ಯ: ವಿನಾಯಕ ನೃತ್ಯ ಶಾಲೆ ಕೋಟೆ ಕನಕಪುರ, ವಿಜಯಲಕ್ಷ್ಮಿ ಪ್ರಕಾಶ್ ಮತ್ತು ಶಿಷ್ಯವೃಂದ, ಆಯೋಜನೆ ಹಾಗೂ ಸ್ಥಳ: ನಂಜನಗೂಡು ರಾಘವೇಂದ್ರಸ್ವಾಮಿಗಳ ಮಠ, ಶೇಷಾದ್ರಿಪುರ, ಸಂಜೆ 7

ಪುಸ್ತಕ ಓದು–ವಿಮರ್ಶೆ–ಸಂವಾದ: ಪುಸ್ತಕ: 'ಬಾಪೂ ನಂತರದ ಭಾರತ', ಪುಖ್ಯ ಅತಿಥಿ: ರಘುನಾಥ ಚ.ಹ., ಆಯೋಜನೆ: ಸಾಲಿಡಾರಿಟಿ, ಸ್ಥಳ: ಶಾಂತಿ ಸದನ, ಆರ್.ಟಿ. ನಗರ, ಸಂಜೆ 7.15

ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿ **ಅವರ 20ನೇ ವರ್ಷದ ಕಾರ್ಯಕ್ರಮದ ಅಂಗವಾಗಿ ಮನೆ–ಮನೆಗಳಲ್ಲಿ ಶಿವಪೂಜೆ, ವಚನ ಪ್ರವಚನ, ಬೆಳಿಗ್ಗೆ–** ಸ್ಥಳ: ಮಂಜುಳಾ ಮತ್ತು ಯಜಮಾನ ಪಾಲನೇತ್ರ ಅವರ ನಿವಾರ, ನಂ.18, 5ನೇ ಕ್ರಾಸ್, ವಿದ್ಯಾನಗರ, ಸಂಜೆ: ಸುವರ್ಣ ಮತ್ತು ಕೆ.ಎಂ. ವೀರಭದ್ರಪ್ಪ ಅವರ ನಿವಾಸ, ನಂ.42, ನಾಗಾರ್ಜುನ ರೆಸಿಡೆನ್ಸಿ ಬಡಾವಣೆ, ಸೀಗೇಹಳ್ಳಿ, ಕೃಷ್ಣರಾಜಪುರ

ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ ಕಾರ್ಯಕ್ರಮ: ಅಧ್ಯಕ್ಷತೆ: ಕುಲಾಧಿಪತಿ ಡಾ. ಪಿ. ಶಾಮರಾಜು. ಅತಿಥಿಗಳು: ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಾವೇದ್ ಅಖ್ತರ್. ಉಪಸ್ಥಿತಿ: ಕುಲಪತಿ ಡಾ. ಎಂ. ಧನಂಜಯ. ಆಯೋಜನೆ: ಕುವೆಂಪು ಸಭಾಂಗಣ, ರೇವಾ ವಿಶ್ವವಿದ್ಯಾಲಯ. ಬೆಳಿಗ್ಗೆ 10ಕ್ಕೆ

ಜಾನಪದ ಸಂಭ್ರಮ: ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ಉದ್ಘಾಟನೆ: ಡಿ.ವಿ. ಸದಾನಂದಗೌಡ, ಅಧ್ಯಕ್ಷತೆ: ಡಾ.ಸಿ.ಎನ್. ಅಶ್ವತ್ಥನಾರಾಯಣ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಕೆ. ಗೋಪಾಲಯ್ಯ, ಎಂ. ಮುನಿರತ್ನ, ತೇಜಸ್ವಿ ಸೂರ್ಯ, ಆಯೋಜನೆ: ರಾಜ್ಯ ಒಕ್ಕಲಿಗರ ಒಕ್ಕೂಟ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 10.45



ನಿರ್ಮಲಾನಂದನಾಥ ಸ್ವಾಮೀಜಿ

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	122.42	67,529	54,354
ಹಾರಂಗಿ	2,859	2,854.45	3,452	3,250
ಕಬಿನಿ	2,284	2,283.02	28,120	30,000
ಹೇಮಾವತಿ	2,922	2,921.60	43,083	39,110
ಲಿಂಗನಮಕ್ಕಿ	1819	1,810	53,571	2,594
ಸೂಪಾ (ಮೀ)	564	546.40	24,496	00
ಮಾಣಿ	595	587	5,174	00
ತುಂಗಭದ್ರಾ	1,633	1,631.91	1,20,416	98,179
ಮಲಪ್ರಭಾ	2,079.50	2,075.80	20,266	3,394
ಘಟಪ್ರಭಾ	2,175	2,173.16	29,002	11,902
ಭದ್ರಾ	186	184	30,860	26,103
ಆಲಮಟ್ಟಿ (ಮೀ)	519.60	518.67	1,55,047	2,25,000
ನಾರಾಯಣಪುರ (ಮೀ)	492.25	491.19	2,20,000	2,34,220

*ನೆಲಮಟ್ಟದಿಂದ

'ಅನ್ನ ಭಾಗ್ಯ'ಕ್ಕೆ ಕನ್ನ • 3.17 ಲಕ್ಷ ಎಎವೈ, ಬಿಪಿಎಲ್ ಪಡಿತರ ಚೀಟಿ ರದ್ದು

'ಅನರ್ಹ'ರಿಂದ ₹11.91 ಕೋಟಿ ವಸೂಲಿ

• ರಾಜೇಶ್ ರೈ ಚಟ್ಲ

ಬೆಂಗಳೂರು: ಅಂತ್ಯೋದಯ ಅನ್ನ ಯೋಜನೆ (ಎಎವೈ) ಮತ್ತು ಬಿಪಿಎಲ್ ಪಡಿತರ ಚೀಟಿಯನ್ನು ಅಕ್ರಮವಾಗಿ ಪಡೆದು ಬಡವರ 'ಅನ್ನ ಭಾಗ್ಯ'ಕ್ಕೆ ಕನ್ನ ಹಾಕಿದವರನ್ನು ಪತ್ತೆ ಹಚ್ಚುವ ಕಾರ್ಯಾಚರಣೆ ಚುರುಕುಗೊಳಿಸಿರುವ ಆಹಾರ ಇಲಾಖೆ, ಅಂಥವರಿಂದ ₹11.91 ಕೋಟಿ ದಂಡ ವಸೂಲಿ ಮಾಡಿದೆ.

2021ರ ಜ.30ರಿಂದ ಇದೇ ಜೂನ್ 30ರವರೆಗೆ ಈ ಕಾರ್ಯಾಚರಣೆ ನಡೆಸಿರುವ ಇಲಾಖೆ, ತಹಶೀಲ್ದಾರ್‌ಗಳ ಮೂಲಕ ನೋಟಿಸ್ ಜಾರಿ ಮಾಡಿ ಕ್ರಮ ತೆಗೆದುಕೊಂಡಿದೆ. ಅನರ್ಹರು ಹೊಂದಿದ್ದ ಒಟ್ಟು 3.17 ಲಕ್ಷ ಪಡಿತರ ಚೀಟಿಗಳನ್ನು ಈ ಅವಧಿಯಲ್ಲಿ ರದ್ದುಪಡಿಸಿದೆ. ಈ ಪೈಕಿ, ಕೆಲವು ಪಡಿತರ ಚೀಟಿಗಳನ್ನು ಎಪಿಎಲ್‌ಗೆ ಪರಿವರ್ತಿಸಲಾಗಿದೆ.

ಬೆಳಗಾವಿ, ಮೈಸೂರು ಮತ್ತು ತುಮಕೂರು ಜಿಲ್ಲೆಗಳಲ್ಲಿ ಅನರ್ಹ ಪಡಿತರ ಚೀಟಿ ಹೊಂದಿರುವವರ ಹೆಚ್ಚಿನ ಸಂಖ್ಯೆಯಲ್ಲಿದ್ದು, ಈ ಜಿಲ್ಲೆಗಳಲ್ಲಿ ₹1 ಕೋಟಿಗೂ ಹೆಚ್ಚು ದಂಡ ವಸೂಲಿ ಮಾಡಲಾಗಿದೆ.

ಈ ಮಧ್ಯೆ, ಸಾರಿಗೆ ಇಲಾಖೆಯ ನೆರವು ಪಡೆದು ನಾಲ್ಕು ಚಕ್ರದ ವೈಯಕ್ತಿಕ ವಾಹನ ಹೊಂದಿರುವ 12,584 ಎಎವೈ, ಬಿಪಿಎಲ್ ಪಡಿತರ ಚೀಟಿದಾರರನ್ನು ಗುರುತಿಸಿರುವ ಇಲಾಖೆ, ಅಂಥವರ ವಿರುದ್ಧವೂ ಕಾರ್ಯಾಚರಣೆ ಆರಂಭಿಸಿದೆ.

ಸರ್ಕಾರದ ಮಾನದಂಡಗಳ ಪ್ರಕಾರ, ಆದಾಯ ತೆರಿಗೆ ಪಾವತಿದಾರರು, ಸರ್ಕಾರಿ ನೌಕರರು, 3 ಹೆಕ್ಟೇರ್‌ಗಿಂತ ಹೆಚ್ಚು ಜಮೀನು ಹೊಂದಿದವರು, ₹1.20 ಲಕ್ಷಕ್ಕಿಂತ ಹೆಚ್ಚು ವಾರ್ಷಿಕ ಆದಾಯ ಹೊಂದಿರುವವರು ಮತ್ತು ನಾಲ್ಕು ಚಕ್ರದ ವೈಯಕ್ತಿಕ ವಾಹನ ಇರುವವರು ಎಎವೈ ಅಥವಾ ಬಿಪಿಎಲ್ ಪಡಿತರ ಚೀಟಿ ಪಡೆಯಲು ಅರ್ಹರಲ್ಲ. ಈ ನಿಯಮಗಳನ್ನು ಉಲ್ಲಂಘಿಸಿ ಈ ಪಡಿತರ ಚೀಟಿ ಹೊಂದಿದವರನ್ನು 'ಅನರ್ಹ'ರು ಎಂದು ಇಲಾಖೆ ಪಟ್ಟಿ ಮಾಡಿದೆ.

'ನಾಲ್ಕು ಚಕ್ರಗಳ ವಾಹನ ಹೊಂದಿರುವ ಎಎವೈ ಮತ್ತು ಬಿಪಿಎಲ್ ಪಡಿತರ ಚೀಟಿ ಹೊಂದಿರುವ ಕುಟುಂಬಗಳ ಮಾಹಿತಿ ನೀಡುವಂತೆ ಸಾರಿಗೆ ಇಲಾಖೆಯನ್ನು ಕೋರಲಾಗಿತ್ತು. ಪಡಿತರ ಚೀಟಿಗೆ ಜೋಡಣೆಯಾದ ಆಧಾರ್ ಸಂಖ್ಯೆಯ ಆಧಾರದಲ್ಲಿ ಅಂಥ ವಾಹನ ಹೊಂದಿರುವವರ ಪಟ್ಟಿಯನ್ನು ಇಲಾಖೆ ನೀಡಿದೆ. ಅಂಥವರಿಗೂ ನೋಟಿಸ್ ಜಾರಿ ಮಾಡಿ, ಪಡಿತರ ಚೀಟಿ ಹಿಂದಿರುಗಿಸಲು ಹಲವು ಬಾರಿ ಅವಕಾಶ ನೀಡಲಾಗಿದೆ. ಇಲಾಖೆಯ ಸೂಚನೆಗೆ ಸ್ಪಂದಿಸದವರಿಂದ ಇದೀಗ 2021ರ ಜುಲೈ 12ರಂದು ನೀಡಿದ್ದ ಆದೇಶದಂತೆ ದಂಡ ವಸೂಲಿ ಮಾಡಲಾಗುತ್ತಿದೆ. ದಾಖಲೆಗಳು, ಹೆಸರಿನ ವ್ಯತ್ಯಾಸ ಗೊಂದಲ ಇದ್ದಲ್ಲಿ ಸ್ಥಳ ಪರಿಶೀಲಿಸುವ ಅಧಿಕಾರವನ್ನು ಅಧಿಕಾರಿಗಳಿಗೆ ನೀಡಲಾಗಿದೆ' ಎಂದು ಇಲಾಖೆ ಅಧಿಕಾರಿಯೊಬ್ಬರು ಹೇಳಿದರು.

ಅನರ್ಹ ಪಡಿತರ ಚೀಟಿ – ದಂಡ ವಸೂಲಿ (₹ಗಳಲ್ಲಿ)

ಸ್ವಯಂ ಹಿಂದಿರುಗಿಸಿದವರಿಂದ	13,28,760
ಆದಾಯ ತೆರಿಗೆ ಪಾವತಿದಾರರಿಂದ	75,95,169
ಸರ್ಕಾರಿ ನೌಕರರಿಂದ	10,16,28,557
3 ಹೆಕ್ಟೇರ್‌ಗಿಂತ ಹೆಚ್ಚಿನ ಜಮೀನುದಾರರಿಂದ	9,000
₹1.20 ಲಕ್ಷಕ್ಕಿಂತ ಹೆಚ್ಚು ಆದಾಯ ಇರುವವರಿಂದ	8,124
ಇಲಾಖೆ ಅಧಿಕಾರಿಗಳಿಂದ ಪತ್ತೆ	77,97,168
ಇತರ ಕಾರಣಗಳಿಗೆ ದಂಡ	7,47,110
ಒಟ್ಟು	11,91,13,888

3.17 ಲಕ್ಷ ಅನರ್ಹರು ಹೊಂದಿದ್ದ ಪಡಿತರ ಚೀಟಿಗಳನ್ನು ರದ್ದುಪಡಿಸಿ, ಎಎವೈ, ಬಿಪಿಎಲ್ ಪಡಿತರ ಚೀಟಿ ಪಡೆಯಲು ಅರ್ಹತೆ ಇರುವವರಿಗೆ ವಿತರಿಸುವ ಕೆಲಸ ಮಾಡುತ್ತಿದ್ದೇವೆ

ಉಮೇಶ್ ಕತ್ತಿ, ಆಹಾರ ಸಚಿವ

'ಮೂರೂ ಪಕ್ಷಗಳ ನಾಯಕರು ಬೆತ್ತಲಾಗಿದ್ದಾರೆ'

ಮೈಸೂರು: 'ಭ್ರಷ್ಟಾಚಾರ ನಿಗ್ರಹ ದಳವನ್ನು (ಎಸಿಬಿ) ರದ್ದುಗೊಳಿಸಿರುವ ಹೈಕೋರ್ಟ್ ತೀರ್ಪಿನಿಂದಾಗಿ ಪ್ರಮುಖ ಮೂರೂ ರಾಜಕೀಯ ಪಕ್ಷಗಳ ನಾಯಕರು ಬೆತ್ತಲಾಗಿದ್ದಾರೆ' ಎಂದು ವಿಧಾನಪರಿಷತ್ ಸದಸ್ಯ ಎ.ಎಚ್. ವಿಶ್ವನಾಥ್ ಟೀಕಿಸಿದರು.

ಇಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ತೀರ್ಪು ಸ್ವಾಗತಾರ್ಹ. ರಾಜಕೀಯ ಭ್ರಷ್ಟಾಚಾರ ತೊಲಗಿಸಲು ಲೋಕಾಯುಕ್ತ ತರಲಾಗಿತ್ತು. ಅದನ್ನು 2014ರಲ್ಲಿದ್ದ ರಾಜ್ಯ ಸರ್ಕಾರ ಶಿಥಿಲಗೊಳಿಸಿತ್ತು' ಎಂದು ಹೇಳಿದರು.

ಇಸ್ರೊ: ತಮಿಳುನಾಡಿನಲ್ಲಿ ಎರಡನೇ ಉಪಗ್ರಹ ಉಡ್ಡಯನ ಕೇಂದ್ರ ಸ್ಥಾಪನೆ

ಚೆನ್ನೈ: ತಮಿಳುನಾಡಿನ ತೂತ್ತುಕುಡಿ ಜಿಲ್ಲೆಯ ಕುಲಶೇಖರಪಟ್ಟಣಂನಲ್ಲಿ ಎರಡನೇ ಉಪಗ್ರಹ ಉಡ್ಡಯನ ಕೇಂದ್ರವನ್ನು ಇಸ್ರೊ ಸ್ಥಾಪಿಸುತ್ತಿದೆ.

ಈ ಮಹತ್ವಾಕಾಂಕ್ಷೆ ಯೋಜನೆಗಾಗಿ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡಿದ್ದು, ಇನ್ನೆರಡು ವರ್ಷಗಳಲ್ಲಿ ಉಡ್ಡಯನ ಕೇಂದ್ರ ನಿರ್ಮಾಣವಾಗಲಿದೆ ಎಂದು ಮೂಲಗಳು ಹೇಳಿವೆ.



ಮಂತ್ರಾಲಯದಲ್ಲಿ ರಾಯರ 351ನೇ ಆರಾಧನಾ ಮಹೋತ್ಸವದ ಪೂರ್ವಾರಾಧನೆ ದಿನವಾದ ಶುಕ್ರವಾರ ಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥರು ಮೂಲವೃಂದಾವನಕ್ಕೆ ವಿಶೇಷ ಪೂಜೆ, ಅಲಂಕಾರ ನೆರವೇರಿಸಿದರು

ಮಂತ್ರಾಲಯ: ರಾಯರ ವೈಭವದ ಪೂರ್ವಾರಾಧನೆ

ಪ್ರಜಾವಾಣಿ ವಾರ್ತೆ

ರಾಯಚೂರು: ರಾಘವೇಂದ್ರ ಸ್ವಾಮಿಯವರ 351ನೇ ಆರಾಧನಾ ಮಹೋತ್ಸವದ ಪ್ರಯುಕ್ತ ಮಂತ್ರಾಲಯದಲ್ಲಿ ಶುಕ್ರವಾರ ಪೂರ್ವಾರಾಧನೆಯು ವೈಭವದಿಂದ ನೆರವೇರಿತು.

ರಾಯರ ಮೂಲ ವೃಂದಾವನಕ್ಕೆ ವಿಶೇಷ ಪೂಜೆ, ಮಹಾಪಂಚಾಮೃತ ಅಭಿಷೇಕ, ಪುಷ್ಪಾಲಂಕಾರ ಮತ್ತು ವಸ್ತ್ರಾಲಂಕಾರವನ್ನು ಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥರು ವಿಧಿವತ್ತಾಗಿ ನೆರವೇರಿಸಿದರು.

ಮೂಲರಾಮದೇವರ ಪೂಜೆ, ಮಂಗಳಾರತಿ ನಡೆಯಿತು. ಪ್ರಾಕಾರದಲ್ಲಿ ನಡೆದ ರಥೋತ್ಸವದಲ್ಲಿ ಭಕ್ತರು ಸಾಕಷ್ಟು ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಮಠದ ಹೊರಭಾಗ ಸಂಜೆ ಯೋಗೀಂದ್ರ ಮಂಟಪದಲ್ಲಿ ನಡೆದ ಸಮಾರಂಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿರುವ 10 ವಿದ್ವಾಂಸರಿಗೆ 'ಶ್ರೀರಾಘವೇಂದ್ರಾನುಗ್ರಹ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ಬೆಂಗಳೂರಿನ ವಿದ್ವಾನ್ ಮಳಗಿ ರಾಮಾಚಾರ್, ಮೈಸೂರಿನ ವಿದ್ವಾನ್ ಸಿ.ಎಚ್.ಶ್ರೀನಿವಾಸಮೂರ್ತಿ, ಹುಬ್ಬಳ್ಳಿಯ ಹೃದ್ರೋಗ ತಜ್ಞ ಡಾ.ವಿ. ಜಿ.ನಾಡಗೌಡ ಸೇರಿ ದೇಶದ ವಿವಿಧ ರಾಜ್ಯಗಳ ವಿದ್ವಾಂಸರು ಪ್ರಶಸ್ತಿ ಸ್ವೀಕರಿಸಿದರು. ರಾಯರ ಮಧ್ಯಾರಾಧನೆ ದಿನವಾದ ಶನಿವಾರ, ತಿರುಪತಿ ತಿರುಮಲ ವೆಂಕಟೇಶ್ವರ ದೇವಸ್ಥಾನದ ಅರ್ಚಕರು ಶೇಷವಸ್ತ್ರದೊಂದಿಗೆ ಮಂತ್ರಾಲಯಕ್ಕೆ ಬರುವರು. ರಾಯರಿಗೆ ಸಮರ್ಪಿಸಲು ಸುಬುಧೇಂದ್ರ ತೀರ್ಥರಿಗೆ ಶೇಷವಸ್ತ್ರ ನೀಡುವರು.

ಬಿಟ್ ಕಾಯಿನ್ ಹೂಡಿಕೆ: ವಂಚನೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಬಿಟ್ ಕಾಯಿನ್ ಮೇಲೆ ಹೂಡಿಕೆ ಮಾಡಿದರೆ ನಿತ್ಯವೂ ದುಪ್ಪಟ್ಟು ಲಾಭ ಗಳಿಸಬಹುದೆಂದು ಹೇಳಿ ನಗರದ ಮಹಿಳೆಯೊಬ್ಬ- ರಿಂದ ₹65.84 ಲಕ್ಷ ಪಡೆದು ವಂಚಿಸಲಾಗಿದ್ದು, ಈ ಸಂಬಂಧ ದಕ್ಷಿಣ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಪುಟ್ಟೇನಹಳ್ಳಿ ನಿವಾಸಿಯಾಗಿರುವ 45 ವರ್ಷದ ಮಹಿಳೆ ವಂಚನೆ ಬಗ್ಗೆ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದು ವರಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ದೂರುದಾರ ಮಹಿಳೆ, ವಾಟ್ಸ್‌ಆ್ಯಪ್ ಬಳಸುತ್ತಿದ್ದಾರೆ. ಅವರ ಮೊಬೈಲ್ ಸಂಖ್ಯೆ ತಿಳಿದುಕೊಂಡಿದ್ದ ಆರೋಪಿಗಳು, ಮೇ 23ರಂದು ‘ಬಿಟಿಸಿ ಡೈಮಂಡ್ ವಿಐಪಿ 11-5’ ವಾಟ್ಸ್‌ಆ್ಯಪ್ ಗ್ರೂಪ್‌ಗೆ ಸೇರಿಸಿದ್ದರು. ಬಿಟ್ ಕಾಯಿನ್ ವ್ಯವಹಾರ ಹಾಗೂ ಅದರಿಂದ ಬಂದ ಲಾಭದ ವಿವರವನ್ನು ಗ್ರೂಪ್‌ನಲ್ಲಿ ಹಾಕುತ್ತಿದ್ದರು. ಹಣ ಹೂಡಿಕೆ ಮಾಡಿದರೆ, ದುಪ್ಪಟ್ಟು ಲಾಭ ಬರುವುದಾಗಿಯೂ ಜಾಹೀರಾತು ನೀಡುತ್ತಿದ್ದರು.’

‘ಆರೋಪಿಗಳ ಮಾತು ನಂಬಿದ್ದ ಮಹಿಳೆ, ಬಿನಾನ್ಸ್ ಆ್ಯಪ್ ಮೂಲಕ ಆರಂಭದಲ್ಲಿ ₹24,070 ಹೂಡಿಕೆ ಮಾಡಿದ್ದರು. ಇದಾದ ನಂತರ, ಪುನಃ ₹6.45 ಲಕ್ಷ ಹಾಕಿದ್ದರು. ಇದಕ್ಕೆ ಅಸಲು ಹೊರತುಪಡಿಸಿ ₹1.60 ಲಕ್ಷ ಲಾಭ ಬಂದಿರುವುದಾಗಿ ಹೇಳಿದ್ದ ಆರೋಪಿಗಳು, ಆ್ಯಪ್ ಖಾತೆಗೆ ವರ್ಗಾ- ಯಿಸಿರುವುದಾಗಿ ಹೇಳಿದ್ದರು. ಅದನ್ನು ಪಡೆಯಲು ಕಮಿಷನ್ ನೀಡಬೇಕೆಂದು ಹೇಳಿದ್ದರು.’

‘ಲಾಭದ ಹಣ ಪಡೆಯಲೆಂದು ಮಹಿಳೆ ಹಂತ ಹಂತವಾಗಿ ₹ 65.84 ಲಕ್ಷ ಪಾವತಿಸಿದ್ದರು. ಇದಾದ ನಂತರವೂ ಆರೋಪಿಗಳು ಹಣಕ್ಕೆ ಬೇಡಿಕೆ ಇರಿಸಿದ್ದರು. ಅನುಮಾನಗೊಂಡ ಮಹಿಳೆ ಠಾಣೆಗೆ ದೂರು ನೀಡಿದ್ದಾರೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ನಟ ವಿನೋದ್ ಕುಮಾರ್ ಕೊಲೆ ಪ್ರಕರಣ

ಗೋವರ್ಧನ ಮೂರ್ತಿಗೆ ಜಾಮೀನು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡದ ನಟ ವಿನೋದ್ ಕುಮಾರ್ ಕೊಲೆ ಪ್ರಕರಣದ ಅಪರಾಧಿ ಯಾದ ರಿಯಲ್ ಎಸ್ಟೇಟ್ ಉದ್ಯಮಿ ಗೋವರ್ಧನ ಮೂರ್ತಿಗೆ ಸುಪ್ರೀಂ ಕೋರ್ಟ್ ಜಾಮೀನು ನೀಡಿದೆ.

ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಗಳಾದ ಸಂಜಯ್ ಕಿಶನ್ ಕೌಲ್, ಎಸ್. ರವೀಂದ್ರ ಭಟ್ ಹಾಗೂ ಎಂ.ಎಂ. ಸುಂದರೇಶ್ ಅವರನ್ನು ಒಳಗೊಂಡ ಪೀಠವು, ‘ಗೋವರ್ಧನ ಮೂರ್ತಿ ಆರು ವರ್ಷಕ್ಕೂ ಹೆಚ್ಚು ಕಾಲದಿಂದ ಜೈಲಿನ- ಲ್ಲಿದ್ದಾರೆ. ಅವರು ಸಲ್ಲಿಸಿದ ಮೇಲ್ಮನವಿ ಯನ್ನು ತಕ್ಷಣವೇ ವಿಚಾರಣೆಗೆ ತೆಗೆದು- ಕೊಳ್ಳುವುದಿಲ್ಲ’ ಎಂದು ಹೇಳಿತು.

ಗೋವರ್ಧನ ಮೂರ್ತಿ ಪರವಾಗಿ ಹಿರಿಯ ವಕೀಲ ಮಹೇಶ್ ಜೇಠ್ಮಲಾನಿ,



ವಕೀಲರಾದ ಅಜಯ್ ಅವಸ್ಥಿ ಹಾಗೂ ನಾರಾಯಣ ಎಂ.ಜಿ. ವಾದ ಮಂಡಿಸಿದರು.

ಗೋವರ್ಧನ ಮೂರ್ತಿಗೆ ಜೀವಾ ವಧಿ ಶಿಕ್ಷೆ ಮತ್ತು ₹ 5 ಐದು ಲಕ್ಷ ದಂಡ ವಿಧಿಸಿ ಕರ್ನಾಟಕ ಹೈಕೋರ್ಟ್ 2020ರ ಮಾರ್ಚ್ 20ರಂದು ತೀರ್ಪು ನೀಡಿತ್ತು. ಇದನ್ನು ಪ್ರಶ್ನಿಸಿ ಗೋವರ್ಧನ ಮೂರ್ತಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು.

ಮೂರ್ತಿಯನ್ನು ಖುಲಾಸೆಗೊಳಿಸಿ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪ್ರಧಾನ ಮತ್ತು ಸೆಷನ್ಸ್ ನ್ಯಾಯಾಲಯ 2012ರ ಡಿ. 26ರಂದು ಆದೇಶಿಸಿತ್ತು. ಇದನ್ನು ರದ್ದುಪಡಿಸಲು ಕೋರಿ 2014ರ ಜೂನ್ 15ರಂದು ಬಾಗಲೂರು ಪೊಲೀಸರು ಹೈಕೋರ್ಟ್‌ಗೆ ಕ್ರಿಮಿನಲ್ ಮೇಲ್ಮನವಿ ಸಲ್ಲಿಸಿದ್ದರು.

‘ಬೆಂಗಳೂರಿನ ಎಲ್‌ಜಿ ರೋಸ್ ಹೆರಿಟೇಜ್‌ನಲ್ಲಿ 2008ರ ಅ.7ರಂದು ಗೋವರ್ಧನ ಮೂರ್ತಿ ಔತಣಕೂಟ ಏರ್ಪಡಿಸಿದ್ದರು. ವಿನೋದ್ ಕುಮಾರ್ ಹಾಗೂ ಆತನ ಭಾವಿ ಮಾವ ಶಂಕರರೆಡ್ಡಿ ಭಾಗಿಯಾಗಿದ್ದರು. ಶಂಕರ್ ಮತ್ತು ಗೋವರ್ಧನ್ ನಡುವೆ ಭೂ ವ್ಯವಹಾರ ಸಂಬಂಧ ಜಗಳ ನಡೆದಿತ್ತು. ಇದರಿಂದ ಶಂಕರ ರೆಡ್ಡಿ ಮುನಿಸಿಕೊಂಡು ಹೊರಗೆ ಬಂದಾಗ ಅವರೊಂದಿಗೆ ಹೊರಟಿದ್ದ ವಿನೋದ್‌ಗೆ ಪಾನಮತ್ತನಾಗಿದ್ದ ಗೋವರ್ಧನ ಮೂರ್ತಿ ತನ್ನ ಗನ್‌ನಿಂದ ಗುಂಡು ಹಾರಿಸಿದ್ದರು. ಗಾಯಗೊಂಡ ವಿನೋದ್ ಚಿಕಿತ್ಸೆ ಫಲಕಾರಿಯಾಗದೆ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದರು’ ಎಂದು ಪೊಲೀಸರು ಆರೋಪ ಪಟ್ಟಿ ಸಲ್ಲಿಸಿದ್ದರು.

ಶಂಕರ ಕ್ಯಾನ್ಸರ್ ಆಸ್ಪತ್ರೆ: ದಶಮಾನೋತ್ಸವ ಇಂದಿನಿಂದ

ಬೆಂಗಳೂರು: ಶಂಕರ ಕ್ಯಾನ್ಸರ್ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರವು ದಶ ಮಾನೋತ್ಸವ ಕಾರ್ಯಕ್ರಮವನ್ನು ಇದೇ 13ರಿಂದ 15ರವರೆಗೆ ಹಮ್ಮಿಕೊಂಡಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಆಸ್ಪತ್ರೆಯ ಟ್ರಸ್ಟಿ ಡಾ. ಬಿ.ಎಸ್. ಶ್ರೀನಾಥ್, ‘ಶಂಕರಪುರ- ದಲ್ಲಿರುವ ಆಸ್ಪತ್ರೆಯಲ್ಲಿ ಕಾರ್ಯಕ್ರಮ ನಡೆಯಲಿದೆ. ಸುಪ್ರೀಂ ಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಎಂ.ಎನ್. ವೆಂಕಟಾಚಲಯ್ಯ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸ- ಲಿದ್ದಾರೆ. ಈ ಸಂದರ್ಭದಲ್ಲಿ ಅವರು ಸಂಸ್ಥೆಯ ಕೈಪಿಡಿಯನ್ನೂ ಬಿಡುಗಡೆ ಮಾಡಲಿದ್ದಾರೆ. ಉದ್ಯಮಿಗಳಾದ ಸುಶ್ಮಿತಾ ಬಾಗ್ ಚಿ ಮತ್ತು ಸುಬ್ರೊತೊ ಬಾಗ್ ಚಿ ಅವರು ಕೂಡ ಪಾಲ್ಗೊಳ್ಳ- ಲಿದ್ದಾರೆ. ‘ಭಾರತದಲ್ಲಿ ಕೈಗೆಟುಕುವ ದರದಲ್ಲಿ ಸಿಗುವ ಕ್ಯಾನ್ಸರ್ ಕಾಳಜಿ’ ಎಂಬ ವಿಷಯದ ಬಗ್ಗೆ ವಿಚಾರ ಸಂಕಿರಣವೂ ನಡೆಯಲಿದೆ’ ಎಂದು ಹೇಳಿದರು.

ಆ.14ರಂದು ದಾನಿಗಳನ್ನು ಗೌರವಿ ಸಲಾಗುತ್ತದೆ. ಕೊನೆಯ ದಿನವಾದ ಸೋಮವಾರ ಸ್ವಾತಂತ್ರ್ಯದ 75ನೇ ವರ್ಷಾಚರಣೆ ನಡೆಯಲಿದ್ದು, ಶೃಂಗೇರಿ ಶಾರದಾ ಪೀಠದ ಆಡಳಿತಾಧಿಕಾರಿ ವಿ.ಆರ್. ಗೌರಿಶಂಕರ್ ಧ್ವಜಾರೋಹಣ ನೆರವೇರಿಸಲಿದ್ದಾರೆ’ ಎಂದರು.

ಸುಗಮ ಸಂಗೀತದ ಚೇತನವಾಗಿದ್ದ ಸುಬ್ಬಣ್ಣ ಉಳಿಸಿದ ನೆನಪು ಅಪಾರ

ತಿಳಿ ನೀಲದಲ್ಲಿ ತಾ ಲೀನವಾಗಿ...

• ಮಾಲತಿ ಶರ್ಮಾ

ನುಡಿ ನಮನ

'ಆರ್ ಯೂ ಸಿಂಗರ್' ಎಂಬ ಪ್ರಶ್ನೆ ಬಂದಿದ್ದೇ ತಡ, 'ಕೋಡಗನ ಕೋಳಿ ನುಂಗಿತ್ತಾ...' ಹಾಡನ್ನು ಹಾಡಿಯೇಬಿಟ್ಟರವರು. ಚೆನ್ನೈನ ಅಮೆರಿಕ ವೀಸಾ ಕಚೇರಿಯ ಅಧಿಕಾರಿಗಳಿಗೆ ಹಾಡಿನಲ್ಲೇ ಉತ್ತರಿಸಿದ್ದರು ಸುಬ್ಬಣ್ಣ.

ಫೀನಿಕ್ಸ್‌ನಲ್ಲಿ 1998ರಲ್ಲಿ ನಡೆದ ಸಾಹಿತ್ಯ ಸಮ್ಮೇಳನಕ್ಕೆ ಮುನ್ನ ವೀಸಾ ಪರಿಶೀಲನೆ ಸಂದರ್ಭ ನಡೆದ ಘಟನೆ ಇದು.

ಸುಬ್ಬಣ್ಣ ಅಂದರೆ ಹಾಗೆಯೇ. ಅವರು ಮರೆತುಹೋಗುವುದಂತೂ ಸಾಧ್ಯವೇ ಇಲ್ಲ. 'ಏನಮ್ಮಾ ತಂಗೀ... ಮನೆ ಕಡೆ ಬಂದೇ ಇಲ್ವಲ್ಲಮ್ಮಾ... ಊಟ ಹಾಕಿಸ್ತೀನಿ ಅಂದವಳು ಕರೀಲೇ ಇಲ್ವಲ್ಲಮ್ಮಾ? ಗಸಗಸೆ ಪಾಯಸ ಮಾಡು. ಆದ್ರೆ, ನಮ್ಮ ಶಾಂತೂಗೆ (ಶಾಂತಮ್ಮ, ಸುಬ್ಬಣ್ಣ ಅವರ ಪತ್ನಿ) ಹೇಳ್ಬೇಡ, ಆಯ್ತಾ. ಗೊತ್ತಾದರೆ ನನಗೆ ಶುಗರ್ ಇದ್ದೂ ಪಾಯಸ ತಿಂದೆ ಅಂತ ಕೋಪಿಸ್ಕೊಳ್ತಾಳೆ...' ಅಂತೆಲ್ಲ ಹೇಳೋರು.

ಇಂಥ ಅದೆಷ್ಟೋ ಕಕ್ಕುಲಾತಿಯ, ಆಪ್ತತೆಯ, ಮಗುವಿನ ಮುಗ್ಧತೆಯ ಮಾತುಗಳು ಸುಬ್ಬಣ್ಣ ಅವರಿಂದ ಕೇಳಿದ್ದಿದೆ. ಹಾಗಾಗಿ ನಾವೆಲ್ಲರೂ ಒಂದೇ ಮನೆಯವರಾಗಿಬಿಟ್ಟಿದ್ದೆವು. ತುಂಬಾ ವಿಶ್ವಾಸಿ. ಈ ಮಲೆನಾಡಿಗರ ವ್ಯಕ್ತಿತ್ವವೇ ಹಾಗೆಯೇ ಏನೋ. ತುಂಬಾ ಹಚ್ಚಿಕೊಂಡುಬಿಟ್ಟಿದ್ದರು.

ಹಾಡಿನ ಸಾಹಿತ್ಯಕ್ಕೆ ತಕ್ಕಹಾಗೆ ರಾಗ ಸಂಯೋಜನೆ ಮತ್ತು ಗಾಯನ, ಅದರಲ್ಲೊಂದು ಸಹಜತೆ ಸುಬ್ಬಣ್ಣನವರ ವೈಶಿಷ್ಟ್ಯ. ಶರೀಫರ ಗೀತೆಗಳಿಗೆ ತಮ್ಮ ವಿಶಿಷ್ಟ ಧ್ವನಿಯ ಮೂಲಕವೇ ಅವುಗಳು ಮತ್ತಷ್ಟು ಮನೆ ಮಾತಾಗುವಂತೆ ಛಾಪು ಮೂಡಿಸಿದ್ದರು. ಸುಬ್ಬಣ್ಣ ಮತ್ತು ಅಶ್ವತ್ಥ್ ಅವರ ಧ್ವನಿಯಲ್ಲಿ ಶರೀಫರ ಗೀತೆಗಳ ಶಕ್ತಿಯೇ ಬೇರೆಯಾಗಿತ್ತು.

ಕುವೆಂಪು ಅವರ ಓ ನನ್ನ ಚೇತನವನ್ನು ಏಕ ಗಾಯಕರ ಬದಲು ಗಂಡು– ಹೆಣ್ಣು ಧ್ವನಿಗಳಲ್ಲಿ ಮೂಡಿಬರುವಂತೆ ಸಂಯೋಜಿಸಿದ್ದನ್ನು ಕೇಳಿದ್ದೀರಲ್ಲಾ? ಏನಾದರೂ ಸರಿಯೇ... ಮೊದಲು ಮಾನವನಾಗು ಗೀತೆಯನ್ನು ಬೇಸ್ ಧ್ವನಿಯಲ್ಲಿ ಹಾಡುತ್ತಾ ಅದರ ಸಂದೇಶ ಬೋಧನೆಯನ್ನು ಪರಿಣಾಮಕಾರಿಯಾಗಿ ಶ್ರೋತೃವಿಗೆ ತಲುಪಿಸಿದ್ದವರೂ ಅವರು.



ಆನಂದಮಯ ಈ ಜಗಹೃದಯ... ಗೀತೆಯೂ ಇದೇ ಸಾಲಿಗೆ ಸೇರುತ್ತದೆ.

ಕಾಳಿಂಗರಾಯರು, ಮೈಸೂರು ಅನಂತಸ್ವಾಮಿ, ಸಿ. ಅಶ್ವತ್ಥ್, ಬಾಳಪ್ಪ ಹುಕ್ಕೇರಿ ಮತ್ತು ಸುಬ್ಬಣ್ಣ ಸುಗಮ ಸಂಗೀತದ ಐದು ಸ್ತಂಭಗಳಂತಿದ್ದವರು. ಕೊನೆಯ ಸ್ತಂಭ ಇಂದು ಕಳಚಿದೆ ಎಂದು ಸುಬ್ಬಣ್ಣನವರ ಸೊಸೆ ಅರ್ಚನಾ ಉಡುಪ ಹೇಳಿದ್ದು ಅಕ್ಷರಶಃ ನಿಜ.

ಪ್ರತೀ ಫೋನ್ ಕರೆಯ ಸಂದರ್ಭದಲ್ಲೂ ಅವರ ಮಾತು ಹಾಡಿನೊಂದಿಗೆ ಕೊನೆಗೊಳ್ಳುತ್ತಿತ್ತು. 'ಏನಾದರೂ ಆಗು, ಮೊದಲು ಮಾನವನಾಗು...' ಎಂದು ತಮ್ಮ ಶ್ರೀಮಂತ ಕಂಠದಲ್ಲಿ ಹಾಡಿ ಮುಗಿಸುತ್ತಿದ್ದರು.

ಹೀಗೆ, ಶರೀಫಜ್ಜನ ಕೋಡಗನ ಕೋಳಿ ನುಂಗಿತ್ತಾ ಇರಲಿ, ಕುವೆಂಪು ಗೀತೆಯೇ ಇರಲಿ, ಸುಬ್ಬಣ್ಣನಿಗೆ ಹಾಡಬೇಕು ಅಷ್ಟೆ. ಸುಬ್ರಹ್ಮಣ್ಯ ಅವರು ಬೆಂಗಳೂರಿಗೆ ಬಂದ ಮೇಲೆ ಸುಬ್ಬಣ್ಣ ಆದರು. ಹೆಸರಿನ ಮುಂದೆ ಶಿವಮೊಗ್ಗವೂ ಸೇರಿಕೊಂಡಿತು. ಹೀಗೆ ಅವರು ಶಿವಮೊಗ್ಗ ಸುಬ್ಬಣ್ಣನಾದ ಮೇಲೆ ಹಿಂದಿರುಗಿ ನೋಡಲೇ ಇಲ್ಲ.

ಅದೆಷ್ಟೋ ವೇದಿಕೆಗಳಲ್ಲಿ ನಾವು, ಇತರ ಕಲಾವಿದರು ಒಂದು ಹಾಡಿನ ಬಳಿಕ ಸ್ವಲ್ಪ ಅಂತರ ತೆಗೆದುಕೊಳ್ಳುವುದು, ಧ್ವನಿ ವ್ಯತ್ಯಾಸ ಆಗುವುದು ನಡೆಯುತ್ತಿರುತ್ತದೆ. ಆದರೆ, ಸುಬ್ಬಣ್ಣ ಹಾಗಲ್ಲ. ಅವರ ಮೊದಲ ಹಾಡಿನಿಂದ ಹಿಡಿದು, ಕೊನೆಯ ಹಾಡಿನವರೆಗೂ ಅದೇ ಕಸುವು, ಹುಮ್ಮಸ್ಸು ಇರುತ್ತಿತ್ತು.

ನಾನು, ನನ್ನದು ಎಂಬ ಅಹಂ, ಅವರಿಗಾಗಲಿ ಅವರ ಮನೆಯವರು ಯಾರಿಗೂ ಇಲ್ಲವೇ ಇಲ್ಲ. ಹಾಗಾಗಿ ಸುಬ್ಬಣ್ಣನದು ಮಗುವಿನ ಮುಗ್ಧತೆ, ಮುಕ್ತತೆ. ಹಾಗಾಗಿಯೇ ಅವರು ಅದ್ಭುತ ವ್ಯಕ್ತಿಯಾಗಿ ತುಂಬಾ ಹತ್ತಿರವಾಗಿದ್ದರು.

ಹಾಡಿದರೆ ಇಷ್ಟು ದುಡ್ಡು ಬರುತ್ತದೆ ಎಂದು ಯಾವತ್ತೂ ಲೆಕ್ಕಹಾಕಿ ಹಾಡಿದವರಂತೂ ಅವರಲ್ಲ. ಹಾಡಬೇಕು ಅಷ್ಟೇ ಅನ್ನುವ ಪ್ಯಾಷನ್ ಇದ್ದವರು ಅವರಾಗಿದ್ದರು. ಇಂಥ ಸುಬ್ಬಣ್ಣನಿಗೆ ಕೋಪ ಬರುವುದೂ ಇಲ್ಲವೆಂದೇನಿಲ್ಲ. ಒಮ್ಮೆ ಅವರನ್ನು ನಾನು ಆಕಾಶವಾಣಿಯಲ್ಲಿ ಸಂದರ್ಶನ ಮಾಡುತ್ತಿದ್ದೆ. ಆಗ ಅವರನ್ನು ಶಿವಮೊಗ್ಗ ಸುಬ್ಬಣ್ಣ ಎಂದು ಪರಿಚಯಿಸುತ್ತಾ ಹೋದೆ. ತಕ್ಷಣವೇ ಸಣ್ಣಗೆ ಮುನಿಸಿಕೊಂಡ ಅವರು, 'ಡಾ. ಶಿವಮೊಗ್ಗ ಸುಬ್ಬಣ್ಣ ಎಂದು ಹೇಳು, ಏನಾಗುತ್ತದೆ ನೋಡೋಣ' ಎಂದುಬಿಟ್ಟರು. ಅಂದರೆ ಏನು ಹೇಳಬೇಕೋ ಅದನ್ನು ನೇರವಾಗಿ ಹೇಳಿಯೇಬಿಡುವವರು. ಮತ್ತೊಂದು ಕ್ಷಣಕ್ಕೆ ಅಂಥದ್ದೇನು ಆಗಿಯೇ ಇಲ್ಲವೇನೋ ಎಂಬಂತೆ ಎಲ್ಲವನ್ನೂ ಮರೆಸಿಬಿಡುವವರು.

ಅವರ ಕುಟುಂಬದವರಿಗೂ ಅದೇ ಸಂಸ್ಕಾರ ಬಂದಿದೆ. ಅವರ ಸೊಸೆ, ಗಾಯಕಿ ಅರ್ಚನಾ ಅಂತೂ ನನ್ನ ಮಗಳ ಹಾಗೆ ಕಾಣುತ್ತಾಳೆ. ಸುಬ್ಬಣ್ಣ ಜೊತೆ ವೇದಿಕೆಯಲ್ಲಿ, ಆಕಾಶವಾಣಿಯಲ್ಲಿ ಒಮ್ಮೆ ಹಾಡಿದ್ದೇನೆ. ಭಾವಗೀತೆಗಳ ಸುವರ್ಣ ಕಾಲದಿಂದ ಅವರ ಒಡನಾಟದ ನೆನಪುಗಳು ಬಗೆದಷ್ಟೂ ಇವೆ. ನಿತ್ಯ ಹಸುರಾಗಿ. ಅವರ ಮಾತು, ಗೀತೆ ಅನುರಣಿಸುತ್ತಲೇ ಇವೆ.

ನಿರೂಪಣೆ: ಶರತ್ ಹೆಗ್ಡೆ

ಕಂಚಿನ ಕಂಠದ ಗಾಯಕನಿಗೆ ಭಾವಪೂರ್ಣ ವಿದಾಯ

ಪ್ರಜಾವಾಣಿ ವಾರ್ತೆ



ಗಾಯಕರಾದ ಕಿಕ್ಕೇರಿ ಕೃಷ್ಣಮೂರ್ತಿ, ವೈ.ಕೆ.ಮುದ್ದುಕೃಷ್ಣ, ಶ್ರೀನಿವಾಸ್ ಉಡುಪ ಹಾಗೂ ಅಭಿಮಾನಿಗಳು ಶಿವಮೊಗ್ಗ ಸುಬ್ಬಣ್ಣ ಅವರ ಅಂತಿಮ ದರ್ಶನ ಪಡೆದರು. ಸೊಸೆ ಅರ್ಚನಾ ಉಡುಪ, ಪುತ್ರ ಶ್ರೀರಂಗ ಇದ್ದರು –ಪ್ರಜಾವಾಣಿ ಚಿತ್ರ

ಬೆಂಗಳೂರು: ತಮ್ಮ ಕಂಚಿನ ಕಂಠದ ಮೂಲಕ ನಾಡಿನ ಜನರ ಹೃದಯಗಳನ್ನು 'ಆನಂದಮಯ'ಗೊಳಿಸಿದ್ದ ಶಿವಮೊಗ್ಗ ಸುಬ್ಬಣ್ಣ ಅವರಿಗೆ, ಸುಗಮ ಸಂಗೀತ ಕ್ಷೇತ್ರದ ಪ್ರಮುಖರು ಗಾಯನದ ಮೂಲಕ ಶುಕ್ರವಾರ ಭಾವಪೂರ್ಣ ವಿದಾಯ ಹೇಳಿದರು.

ಕಲಾಕ್ಷೇತ್ರದ ಆವರಣದಲ್ಲಿ ಸುಬ್ಬಣ್ಣ ಅವರು ಚಿರನಿದ್ರೆಗೆ ಜಾರಿದ್ದರೆ, ಅವರು ಹಾಡಿದ್ದ ಗೀತೆಗಳನ್ನು ಶಿಷ್ಯರು ಹಾಗೂ ಸಹಕಲಾವಿದರು ಹಾಡುವ ಮೂಲಕ ಗೀತ ನಮನ ಸಲ್ಲಿಸಿದರು. ಸಾಹಿತ್ಯ, ಸಂಗೀತ, ನೃತ್ಯ, ರಂಗಭೂಮಿ ಸೇರಿ ವಿವಿಧ ಕ್ಷೇತ್ರಗಳ ಪ್ರಮುಖರು ತಮ್ಮ ನೆಚ್ಚಿನ ಗಾಯಕನ ಅಂತಿಮ ದರ್ಶನ ಪಡೆದುಕೊಂಡರು. ಬ್ರಾಹ್ಮಣ ಸಂಪ್ರದಾಯದಂತೆ ಧಾರ್ಮಿಕ ವಿಧಿ-ವಿಧಾನಗಳನ್ನು ನೆರವೇರಿಸಿದ ಪುತ್ರ ಶ್ರೀರಂಗ, ಬನಶಂಕರಿ ಚಿತಾಗಾರದಲ್ಲಿ ಅಂತ್ಯಸಂಸ್ಕಾರ ನೆರವೇರಿಸಿದರು. ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಗಾಯಕನಿಗೆ ಸರ್ಕಾರಿ ಗೌರವದೊಂದಿಗೆ ವಿದಾಯ ಹೇಳಲಾಯಿತು.

ಅವರ ನಿಧನಕ್ಕೆ ಪ್ರಧಾನಿ ನರೇಂದ್ರ ಮೋದಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೇರಿ ಹಲವರು ಸಂತಾಪ ಸೂಚಿಸಿದ್ದಾರೆ. ವಯೋಸಹಜ ಆರೋಗ್ಯ ಸಮಸ್ಯೆಯಿಂದ ಸುಬ್ಬಣ್ಣ ಅವರು ಕೆಲ ದಿನಗಳಿಂದ ಜಯನಗರದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದರು. ಆರೋಗ್ಯ ಮತ್ತಷ್ಟು ಹದಗೆಟ್ಟಿದ್ದರಿಂದ ಜಯದೇವ ಹೃದ್ರೋಗ ಆಸ್ಪತ್ರೆಗೆ ಗುರುವಾರ ರಾತ್ರಿ ಕರೆದೊಯ್ಯಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಕೊನೆಯುಸಿರೆಳೆದರು.

ಶುಕ್ರವಾರ ಬೆಳಿಗ್ಗೆ ಬನಶಂಕರಿಯಲ್ಲಿರುವ ಅವರ ನಿವಾಸದಲ್ಲಿ ವಿವಿಧ ಧಾರ್ಮಿಕ ಸಂಪ್ರದಾಯ ಪೂರ್ಣಗೊಳಿಸಿ, ರವೀಂದ್ರ ಕಲಾಕ್ಷೇತ್ರದಲ್ಲಿ ಸಾರ್ವಜನಿಕರಿಗೆ ಪಾರ್ಥಿವ ಶರೀರದ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿತ್ತು.

'ಸುಬ್ಬಣ್ಣ ಹೆಸರು ಚಿರಸ್ಥಾಯಿಗೆ ಕ್ರಮ'

ಶಿವಮೊಗ್ಗ ಸುಬ್ಬಣ್ಣ ಅವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, 'ಸುಬ್ಬಣ್ಣ ಅವರು ಯುವಕರಿಗೆ ದೊಡ್ಡ ಪ್ರೇರಣೆ. ಅವರ ಹೆಸರು ಸದಾ ನೆನಪಿನಲ್ಲಿ ಇರಬೇಕು. ಅಂತಹ ಕೆಲಸವನ್ನು ಸರ್ಕಾರ ಮಾಡಲಿದೆ. ಅವರ ಸ್ಮಾರಕ, ಪ್ರತಿಷ್ಠಾನ ಅಥವಾ ಪ್ರಶಸ್ತಿ ಸ್ಥಾಪನೆ ಬಗ್ಗೆ ಕುಟುಂಬಸ್ಥರ ಅಭಿಪ್ರಾಯ ಪಡೆದು, ಕ್ರಮಕೈಗೊಳ್ಳಲಾಗುತ್ತದೆ' ಎಂದು ಹೇಳಿದರು.

ಸಾಹಿತ್ಯ ಅಕಾಡೆಮಿ ಮಾಜಿ ಅಧ್ಯಕ್ಷ ಪ್ರೊ. ಎಂ.ಎಚ್. ಕೃಷ್ಣಯ್ಯ ನಿಧನ

ಒಂದನೇ ಪುಟದಿಂದ...

1937ರ ಜುಲೈ 21ರಂದು ಮೈಸೂರಿನಲ್ಲಿ ಕೃಷ್ಣಯ್ಯ ಜನಿಸಿದ್ದರು. ತಂದೆ ಹುಚ್ಚಯ್ಯ ಹಾಗೂ ತಾಯಿ ಕೆಂಪಮ್ಮ. ಮೈಸೂರು ವಿಶ್ವವಿದ್ಯಾಲಯದಿಂದ ಬಿ.ಎ ಮತ್ತು ಎಂ.ಎ ಪದವಿ ಪಡೆದಿದ್ದ ಕೃಷ್ಣಯ್ಯ, ಪ್ರಾಧ್ಯಾಪಕರಾಗಿ ವೃತ್ತಿ ಆರಂಭಿಸಿದ್ದರು. ಬೆಂಗಳೂರು, ಕೋಲಾರ ಸೇರಿದಂತೆ ಹಲವು ಸರ್ಕಾರಿ ಕಾಲೇಜುಗಳಲ್ಲಿ ಕೆಲಸ ಮಾಡಿ ನಿವೃತ್ತರಾಗಿದ್ದರು.

ಸಂಕ್ಷಿಪ್ತ ಕನ್ನಡ ಭಾಷೆಯ ಚರಿತ್ರೆ, ಆರ್.ಎಂ.ಹಡಪದ, ರುಜುಪಥ, ಬಸವಯ್ಯ, ಶೃಂಗಾರ ಲಹರಿ, ಕಲಾ ದರ್ಶನ, ರಂಗಭೂಮಿ ಮತ್ತು ಸೌಂದರ್ಯ ಪ್ರಜ್ಞೆ ಸೇರಿದಂತೆ 30ಕ್ಕೂ ಹೆಚ್ಚು ಕೃತಿಗಳನ್ನು ಕೃಷ್ಣಯ್ಯ ರಚಿಸಿದ್ದರು. 'ಕುವೆಂಪು ಸಾಹಿತ್ಯ: ಚಿತ್ರ ಸಂಪುಟ' ಕೃತಿಯನ್ನು ಸಂಪಾದಿಸಿದ್ದರು.

ಕನ್ನಡ ವಿಶ್ವವಿದ್ಯಾಲಯದ ಸಿಂಡಿಕೇಟ್, ಕನ್ನಡ ಪುಸ್ತಕ ಪ್ರಾಧಿಕಾರ, ತಂಜಾವೂರಿನ ದಕ್ಷಿಣ ಭಾಗೀಯ ಸಾಂಸ್ಕೃತಿಕ ಕೇಂದ್ರ, ಉದಯಭಾನು ಕಲಾ ಸಂಘದಲ್ಲಿ ಕೃಷ್ಣಯ್ಯ ಸಕ್ರಿಯರಾಗಿದ್ದರು. ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾಗಿಯೂ ಸಾಹಿತ್ಯ ಕ್ಷೇತ್ರಕ್ಕೆ ತಮ್ಮದೇ ಕೊಡುಗೆ ನೀಡಿದ್ದರು.

ಲಲಿತ ಕಲಾ ಅಕಾಡೆಮಿ ಪುರಸ್ಕಾರ, ಕರ್ನಾಟಕ ಸಾಹಿತ್ಯ ಅಕಾಡಮಿ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕುವೆಂಪು ಪ್ರಶಸ್ತಿ, ಮಾಸ್ತಿ ಪ್ರಶಸ್ತಿ ಸಂದಿತ್ತು.

'ತುಂಬಾ ಪ್ರೀತಿ, ಬದ್ಧತೆ, ಪ್ರಾಮಾಣಿಕತೆ ಕೃಷ್ಣಯ್ಯ ಅವರಲ್ಲಿ ಇತ್ತು. ಲಲಿತಕಲೆ ಅಕಾಡೆಮಿಯಲ್ಲಿ ಹಡಪದ್ ಅವರೊಂದಿಗೆ ಸೇರಿಕೊಂಡು ಬೇಕಾದಷ್ಟು ಕೆಲಸವನ್ನು ಮಾಡಿದರು. ಶೇಷಾದ್ರಿಪುರಂ ಕಾಲೇಜಿನಲ್ಲಿ ನಾವಿಬ್ಬರೂ ಒಟ್ಟಿಗೆ ಪಾಠ ಮಾಡುತ್ತಿದ್ದೆವು. ಅವರನ್ನು ನೋಡಿಯೂ ಬಲ್ಲೆ. ಅವರು ಶೇ 100ರಷ್ಟು ಜಾತ್ಯತೀತರು. ವೈಯಕ್ತಿಕವಾಗಿ ನನಗೆ ಅತ್ಯಂತ ದೊಡ್ಡ ನಷ್ಟ' ಎಂದು ವಿಮರ್ಶಕ ಎಚ್.ಎಸ್. ರಾಘವೇಂದ್ರ ರಾವ್ ಹೇಳಿದರು.

'ಕಲೆಗಳ ನಡುವಿನ ಸೇತುವೆ'

'ನಾನು ಕಂಡ ಅತ್ಯಂತ ಬದ್ಧ, ಪ್ರಾಮಾಣಿಕ ಅಧ್ಯಾಪಕರಲ್ಲಿ ಕೃಷ್ಣಯ್ಯ ಅವರೂ ಒಬ್ಬರು. ವಿಶೇಷ ಎಂದರೆ, ಸಾಮಾನ್ಯವಾಗಿ ಕನ್ನಡ ಮೇಷ್ಟ್ರು ಕನ್ನಡ ಸಾಹಿತ್ಯದಿಂದ ಹೊರಗೆ ಹೋಗುವುದು ತೀರಾ ಅಪರೂಪ. ಬೇರೆ ಭಾಷೆಗಳ ಸಾಹಿತ್ಯ ಮಾತ್ರ ಅಲ್ಲ, ಯುರೋಪಿಯನ್ ಚಿತ್ರಕಲೆ, ಪಾಶ್ಚಿಮಾತ್ಯ ಶಾಸ್ತ್ರೀಯ ಸಂಗೀತ, ಶಿಲ್ಪ ಮುಂತಾದ ಕ್ಷೇತ್ರಗಳ ಬಗ್ಗೆಯೂ ಆಳವಾಗಿ ತಿಳಿದುಕೊಂಡಿದ್ದ ಸಾಹಿತಿ ಅವರು. ಭಾರತೀಯ ಕಲೆಗಳು ಬಹುತೇಕರಿಗೆ ಗೊತ್ತಿರಬಹುದು. ಆದರೆ, ಪಾಶ್ಚಿಮಾತ್ಯ ನೃತ್ಯ, ಚಿತ್ರಕಲೆಗಳ ಬಗ್ಗೆ ಸಾಕಷ್ಟು ಅರಿತುಕೊಂಡಿದ್ದ ವಿರಳರು. ಅವುಗಳ ಬಗ್ಗೆ ಅವರು ಆಸಕ್ತಿ ಹೊಂದಿ, ಕೇಳಿ ತಿಳಿದುಕೊಂಡಿದ್ದರು. ಅವುಗಳ ಬಗ್ಗೆ ಬರೆದಿದ್ದಾರೆ. ಒಟ್ಟಾರೆಯಾಗಿ ಬೇರೆ ಬೇರೆ ಕಲೆಗಳ ನಡುವಿನ ಸೇತುವೆಯಾಗಿದ್ದರು' ಎಂದು ವಿಮರ್ಶಕ ಎಚ್.ಎಸ್. ರಾಘವೇಂದ್ರ ರಾವ್ ಸ್ಮರಿಸಿಕೊಂಡರು.

ಸಾಹಿತಿ ಸಿದ್ಧಗಂಗಯ್ಯ ಕಂಬಾಳು ಇನ್ನಿಲ್ಲ

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ನಿಸರ್ಗಪ್ರಿಯ' ಕಾವ್ಯನಾಮದಿಂದ ಹೆಸರಾಗಿದ್ದ ಸಾಹಿತಿ ಸಿದ್ಧಗಂಗಯ್ಯ ಕಂಬಾಳು ದೀರ್ಘ ಕಾಲದ ಅನಾರೋಗ್ಯದಿಂದಾಗಿ (77) ಶುಕ್ರವಾರ ನಿಧನರಾದರು. ಅವರಿಗೆ ಇಬ್ಬರು ಪುತ್ರರು ಇದ್ದಾರೆ.

ಕಾದಂಬರಿ, ಸಂಶೋಧನೆ, ನಾಟಕ, ಮಹಾಕಾವ್ಯ, ಜನಪದ ಗ್ರಂಥ ಸಂಪಾದನೆ ಮೊದಲಾದ ಪ್ರಕಾರಗಳಲ್ಲಿ ಕೃತಿ ರಚನೆ ಮಾಡಿದ್ದರು. ನಿಸರ್ಗಪ್ರಿಯ ಅವರು ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕಿನ ಕಂಬಾಳು ಗ್ರಾಮದವರು. ಬಾಲ್ಯದಿಂದಲೂ ರಂಗಭೂಮಿಯಲ್ಲಿ ಆಸಕ್ತಿ ಇತ್ತು. 'ಗುಜ' ಎಂಬ ಕಂಪನಿಯ ನಾಟಕಗಳಲ್ಲಿ ಕೆಲ ವರ್ಷ ಅಭಿನಯಿಸಿದ್ದರು.

ಸರ್ಕಾರಿ ಕಾಲೇಜಿನ ಪ್ರಾಂಶುಪಾಲ, ಶಿಕ್ಷಣ ಇಲಾಖೆಯ ಸಹಾಯಕ ನಿರ್ದೇಶಕ, ಕರ್ನಾಟಕ ನಾಟಕ ಅಕಾಡೆಮಿಯ ರಿಜಿಸ್ಟ್ರಾರ್ ಹೀಗೆ ಹಲವು ಹುದ್ದೆಗಳಲ್ಲಿ ಕೆಲಸ ಮಾಡಿದ್ದರು.

ನಿಸರ್ಗಪ್ರಿಯ ಅವರ 'ಸ್ವರ್ಗಸ್ಥ' ಕೃತಿಗೆ ರಾಜ್ಯ ಸಾಹಿತ್ಯ ಅಕಾಡೆಮಿಯ ಬಹುಮಾನ ಲಭಿಸಿತ್ತು.ಬೆನಕನಕೆರೆ, ಯಶೋಧರ, ತಿರುಕರಾಜ, ವ್ಯವಸ್ಥೆ, ರುದ್ರ ಚೋರಪುರಾಣ ಮುಂತಾದ ಕೃತಿಗಳನ್ನು ರಚಿಸಿದ್ದರು.

ಬೆಂಗಳೂರು ದೂರದರ್ಶನದಲ್ಲಿ 1990ರ ದಶಕದಲ್ಲಿ ಪ್ರತಿ ಶನಿವಾರ ಪ್ರಸಾರವಾಗುತ್ತಿದ್ದ 'ಸಿರಿಗಂಧ' ಎಂಬ ಜಾನಪದ ಚಿತ್ರಮಾಲಿಕೆಗೆ ಸಂಶೋಧನಾ ಸಾಹಿತ್ಯವನ್ನು ಸಹ ಒದಗಿಸಿದ್ದರು. 'ಅಲ್ಲಮ' ಹಾಗೂ 'ರಾಮಾ ರಾಮಾ ರೇ' ಕನ್ನಡ ಸಿನಿಮಾಗಳಿಗೆ ಸಂಭಾಷಣೆಯನ್ನು ಕೂಡ ಬರೆದಿದ್ದರು. 'ರಾಮ ರಾಮಾ ರೇ' ಚಿತ್ರದ ಸಂಭಾಷಣೆಗಾಗಿ ಹುಣಸೂರು ಕೃಷ್ಣಮೂರ್ತಿ ಸ್ಮರಣಾರ್ಥ ಪ್ರಶಸ್ತಿಯೂ ಅವರಿಗೆ ಒಲಿದುಬಂದಿತ್ತು.

ಅಂತ್ಯಕ್ರಿಯೆಯು ಸ್ವಗ್ರಾಮ ಕಂಬಾಳುವಿನಲ್ಲಿ ಶುಕ್ರವಾರ ನೆರವೇರಿತು.

128 ಮಹಿಳಾ ಸ್ವಾಸ್ಥ್ಯ ಕೇಂದ್ರಗಳ ಸ್ಥಾಪನೆಗೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 128 ಮಹಿಳಾ ಸ್ವಾಸ್ಥ್ಯ ಕೇಂದ್ರಗಳನ್ನು ಸ್ಥಾಪಿಸಲು ಸಚಿವ ಸಂಪುಟ ಸಭೆ ಆಡಳಿತಾತ್ಮಕ ಅನುಮೋದನೆ ನೀಡಿದೆ ಎಂದು ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ತಿಳಿಸಿದರು.

ಈ ಕೇಂದ್ರಗಳ ಸ್ಥಾಪನೆಗೆ ₹22.40 ಕೋಟಿ ವೆಚ್ಚವಾಗಲಿದೆ ಎಂದು ಸಭೆಯ ಬಳಿಕ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಈ ಕೇಂದ್ರಗಳಲ್ಲಿ ಮಹಿಳೆಯರ ಆರೋಗ್ಯ ತಪಾಸಣೆಗೆ ಪ್ರತ್ಯೇಕ ಕೊಠಡಿ ಇರುತ್ತದೆ. ಅಲ್ಲಿ ತಜ್ಞ ಮಹಿಳಾ ವೈದ್ಯರೇ ತಪಾಸಣೆ ನಡೆಸಿ ಚಿಕಿತ್ಸೆ ನೀಡುತ್ತಾರೆ. 300 ಕೇಂದ್ರಗಳಲ್ಲಿ ಸ್ವಾಸ್ಥ್ಯ ಕೇಂದ್ರಗಳನ್ನು ಸ್ಥಾಪಿಸಬೇಕಿತ್ತು. ಆದರೆ, 172 ಕಡೆಗಳಲ್ಲಿ ತಾಲ್ಲೂಕು ಆಸ್ಪತ್ರೆಗಳಲ್ಲೇ ಪ್ರತ್ಯೇಕ ತಪಾಸಣೆ, ಚಿಕಿತ್ಸಾ ವ್ಯವಸ್ಥೆ ಇರುವ ಕಾರಣ 128 ಕಡೆ ಹೊಸದಾಗಿ ವ್ಯವಸ್ಥೆ ಕಲ್ಪಿಸಲಾಗುವುದು ಎಂದು ಮಾಧುಸ್ವಾಮಿ ತಿಳಿಸಿದರು.

ಶಿಕ್ಷಕರ ನೇಮಕ: ವಯೋಮಿತಿ ಸಡಿಲಿಕೆ

ಬೆಂಗಳೂರು: ರಾಜ್ಯದಲ್ಲಿ 15 ಸಾವಿರ ಪದವೀಧರ ಪ್ರಾಥಮಿಕ ಶಿಕ್ಷಕರ (6ರಿಂದ 8ನೇ ತರಗತಿ) ನೇಮಕಾತಿಯಲ್ಲಿ ಎಲ್ಲ ವರ್ಗದ ಅಭ್ಯರ್ಥಿಗಳಿಗೂ ಎರಡು ವರ್ಷ ವಯೋಮಿತಿ ಸಡಿಲಿಕೆ ಮಾಡಲಾಗಿದ್ದು, ಇದಕ್ಕೆ ಶುಕ್ರವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಘಟನೋತ್ತರ ಅನುಮೋದನೆ ನೀಡಲಾಯಿತು.

ಎಸ್‌ಸಿ, ಎಸ್‌ಟಿ, ಪ್ರವರ್ಗ–1 ಮತ್ತು ಅಂಗವಿಕಲ ಅಭ್ಯರ್ಥಿಗಳಿಗೆ 47, ಪ್ರವರ್ಗ 2ಎ, 2ಬಿ, 3ಎ ಮತ್ತು 3ಬಿ ಪ್ರವರ್ಗದ ಅಭ್ಯರ್ಥಿಗಳಿಗೆ 45, ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ 42 ವರ್ಷ ಗರಿಷ್ಠ ವಯೋಮಿತಿ ನಿಗದಿಪಡಿಸಲಾಗಿದೆ. ಈ ಸಡಿಲಿಕೆ ಒಂದು ಬಾರಿಗೆ ಮಾತ್ರ ಎಂದು ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಅಲ್ಲದೆ, ಪ್ರತಿ ಪ್ರವರ್ಗಗಳಲ್ಲಿ ಶೇ 50 ರಷ್ಟು ಹುದ್ದೆಗಳನ್ನು ಮಹಿಳೆಯರಿಗೆ, ಶೇ 1ರಷ್ಟು ಹುದ್ದೆಗಳನ್ನು ಲೈಂಗಿಕ ಅಲ್ಪಸಂಖ್ಯಾತ ಅಭ್ಯರ್ಥಿಗಳಿಗೆ ಮೀಸಲಿಡಲಾಗಿದೆ. ನೇಮಕಾತಿ ಪ್ರಕ್ರಿಯೆಗೆ ಪೂರಕವಾಗಿ, ಕರ್ನಾಟಕ ಶಿಕ್ಷಣ ಇಲಾಖೆ ಸೇವೆಗಳು (ಸಾರ್ವಜನಿಕ ಶಿಕ್ಷಣ ಇಲಾಖೆ) ನೇಮಕಾತಿ ವಿಶೇಷ ನಿಯಮಗಳು–2022' ಅನ್ನು ಅಂತಿಮಗೊಳಿಸಿ ಸರ್ಕಾರ ಇತ್ತೀಚೆಗೆ ಅಧಿಸೂಚನೆ ಹೊರಡಿಸಿತ್ತು.

ಕೋವಿಡ್–19 ಪಿಡುಗಿನ ಹಿನ್ನೆಲೆಯಲ್ಲಿ ದೇಶಾದ್ಯಂತ ವಿಧಿಸಲಾದ ಲಾಕ್‌ಡೌನ್‌ನಿಂದಾಗಿ ರಾಜ್ಯದಲ್ಲಿ ಯಾವುದೇ ನೇಮಕಾತಿ ಪ್ರಕ್ರಿಯೆ ನಡೆಯದೇ ಇದ್ದ ಕಾರಣ ಹಲವರ ವಯೋಮಿತಿ ಮೀರಿತ್ತು. 15 ಸಾವಿರ ಹುದ್ದೆಗಳಿಗೆ ಸಾಕಷ್ಟು ಅರ್ಜಿಗಳೂ ಬಂದಿರಲಿಲ್ಲ. ಇದರಿಂದಾಗಿ ವಯೋಮಿತಿ ಮೀರಿದ ಅಭ್ಯರ್ಥಿಗಳಿಗೆ ಒಂದು ಅವಕಾಶ ನೀಡಲು ಈ ಕ್ರಮ ತೆಗೆದುಕೊಳ್ಳಲಾಯಿತು ಎಂದು ಮಾಧುಸ್ವಾಮಿ ಹೇಳಿದರು.

ಭಕ್ತವತ್ಸಲ ವರದಿಗೆ ಒಪ್ಪಿಗೆ

ಬಿಬಿಎಂಪಿ ಸೇರಿದಂತೆ ನಗರ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ಹಿಂದುಳಿದ ವರ್ಗಗಳ 'ಎ' ಮತ್ತು 'ಬಿ' ಪ್ರವರ್ಗದ ಸಮುದಾಯಗಳಿಗೆ ಈಗಿರುವ ರಾಜಕೀಯ ಮೀಸಲಾತಿಯನ್ನು ಶೇ 33 ಕ್ಕೆ ಹೆಚ್ಚಿಸುವಂತೆ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಕೆ.ಭಕ್ತವತ್ಸಲ ಆಯೋಗ ನೀಡಿದ ವರದಿ ಶಿಫಾರಸುಗಳಿಗೆ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ.

ಆಯಾ ಸಮುದಾಯಗಳ ರಾಜಕೀಯ ಹಿಂದುಳಿದಿರುವಿಕೆಯನ್ನು ಖಾತರಿಪಡಿಸಿದ ಬಳಿಕವೇ ಸ್ಥಳೀಯ ಸಂಸ್ಥೆಗಳಲ್ಲಿ ಮೀಸಲಾತಿ ವರ್ಗೀಕರಿಸಿ ಚುನಾವಣೆ ನಡೆಸಬೇಕು ಎಂದು ಸುಪ್ರೀಂಕೋರ್ಟ್ ಹೇಳಿತ್ತು. ಹಿಂದುಳಿದಿರುವಿಕೆಯನ್ನು ಗುರುತಿಸುವ ಸಲುವಾಗಿ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಕೆ. ಭಕ್ತವತ್ಸಲ ಅಧ್ಯಕ್ಷತೆಯಲ್ಲಿ ಆಯೋಗವನ್ನು ಸರ್ಕಾರ ರಚಿಸಿತ್ತು. ವರದಿಯನ್ನು ರಾಜ್ಯ ಸರ್ಕಾರ ಸುಪ್ರೀಂಕೋರ್ಟ್‌ಗೆ ಸಲ್ಲಿಸಿದೆ.

ಕೆಎಸ್‌ಆರ್‌ಟಿಸಿ, ಬಿಎಂಟಿಸಿಗೆ ಹೊಸ ಬಸ್

2022–23 ನೇ ಸಾಲಿಗೆ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಕ್ಕೆ ಅಗತ್ಯವಿರುವ ವಿವಿಧ ಮಾದರಿಯ 650 ಹೊಸ ಬಸ್‌ಗಳನ್ನು ₹199.40 ಕೋಟಿ ಅಂದಾಜು ವೆಚ್ಚದಲ್ಲಿ ಖರೀದಿಸಲು ಒಪ್ಪಿಗೆ ನೀಡಲಾಗಿದೆ.

ಅದೇ ರೀತಿ ಬಿಎಂಟಿಸಿಗೆ 840 ಬಿಎಸ್–6 ಡೀಸೆಲ್ ಬಸ್‌ಗಳನ್ನು ₹360 ಕೋಟಿ ಖರೀದಿಸಲು ಆಡಳಿತಾತ್ಮಕ ಒಪ್ಪಿಗೆ ನೀಡಲಾಗಿದೆ.

ಇತರ ಪ್ರಮುಖ ನಿರ್ಣಯಗಳು

- ಬೆಂಗಳೂರು ದಕ್ಷಿಣ ತಾಲ್ಲೂಕು ಕುರುಬರಹಳ್ಳಿ ಸರ್ವೆ ಸಂಖ್ಯೆ 89 ರಲ್ಲಿರುವ 35.33 ಎಕರೆ ಭೂಮಿಯನ್ನು ಜನಸೇವಾ ಟ್ರಸ್ಟ್‌ಗೆ ಮಂಜೂರು ಮಾಡಲು ಸಂಪುಟ ಸಭೆ ಅನುಮೋದನೆ ನೀಡಿದೆ.
- ಬೆಂಗಳೂರು ನಗರ ಜಿಲ್ಲೆ ಉತ್ತರ ತಾಲ್ಲೂಕಿನ ದಾಸನಪುರ ಹೋಬಳಿಯ ಕಮ್ಮಸಂದ್ರ ಗ್ರಾಮದಲ್ಲಿ 3.24 ಎಕರೆ ಭೂಮಿಯನ್ನು ಉತ್ತರ ಕರ್ನಾಟಕಗಳ ಮಹಾಸಂಸ್ಥೆಗೆ ಮಂಜೂರು ಮಾಡಲಾಗಿದೆ.
- ವಿಜಯಪುರ ಜಿಲ್ಲೆಯ ವಿಜಯಪುರ, ಬಸವನ ಬಾಗೇವಾಡಿ ಮತ್ತು ಇಂಡಿ ತಾಲ್ಲೂಕುಗಳಲ್ಲಿ ಗ್ರಾಮೀಣ ಜನವಸತಿಗಳು, ಇಂಡಿ ಪಟ್ಟಣ ಮತ್ತು ಇತರೆ ನಗರ ಸ್ಥಳೀಯ ಸಂಸ್ಥೆಗಳಾದ ಚಡಚಣ, ಮನಗೂಳಿ, ನಿಡಗುಂದಿ ಹಾಗೂ ಕೊಲ್ಹಾರ ಒಳಗೊಂಡಂತೆ ಬಹುಗ್ರಾಮ ಕುಡಿಯುವ ನೀರು ಪೂರೈಕೆ ಯೋಜನೆಯನ್ನು ಎನ್‌ಐಡಿಎ ಅಡಿ ನಬಾರ್ಡ್‌ನಿಂದ ಪಡೆದ ಸಾಲ ಮತ್ತು ನಗರಾಭಿವೃದ್ಧಿ ಅನುದಾನದ ನೆರವಿನೊಂದಿಗೆ ಒಟ್ಟು ₹2,077.63 ಕೋಟಿ ಪರಿಷ್ಕೃತ ಅಂದಾಜಿಗೆ ಒಪ್ಪಿಗೆ.
- ಕೆ–ಶಿಪ್, ಕೆಆರ್‌ಡಿಸಿಎಲ್ ಮತ್ತು ಲೋಕೋಪಯೋಗಿ ಇಲಾಖೆ ವತಿಯಿಂದ ಅಭಿವೃದ್ಧಿಪಡಿಸಲಾದ ₹1,329.47 ಕಿ.ಮೀ ಉದ್ದದ ರಸ್ತೆಗಳ ಮೇಲ್ಮೈ ಪದರಗಳ ನವೀಕರಣ ಹಾಗೂ ಇತರೆ ಕಾಮಗಾರಿಗಳನ್ನು ಕೈಗೊಳ್ಳಲು ₹440 ಕೋಟಿ ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ.
- ಕೊಪ್ಪಳ ಜಿಲ್ಲೆ ಅಂಜನಾದ್ರಿ ಬೆಟ್ಟದಲ್ಲಿ ಪ್ರವಾಸಿಗಳಿಗೆ ಮೂಲಭೂತ ಸೌಕರ್ಯ ಕಾಮಗಾರಿಗಳನ್ನು ಕಲ್ಪಿಸಲು ₹100 ಕೋಟಿ ಅಂದಾಜು ವೆಚ್ಚದ ಯೋಜನೆಗೆ ಒಪ್ಪಿಗೆ.
- ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿ ಬೆಂಗಳೂರಿನ ಮುಖ್ಯ ಕಚೇರಿ ಆವರಣದಲ್ಲಿ ₹90 ಕೋಟಿ ಅಂದಾಜು ವೆಚ್ಚದಲ್ಲಿ ನೂತನ ಅಭಿವೃದ್ಧಿ ಭವನ ನಿರ್ಮಿಸಲು ಆಡಳಿತಾತ್ಮಕ ಅನುಮೋದನೆ.
- ಆಂಧ್ರಪ್ರದೇಶದ ಶ್ರೀಶೈಲದಲ್ಲಿ ಯಾತ್ರಿ ನಿವಾಸ ಸಂಕೀರ್ಣ ಕಟ್ಟಡವನ್ನು ₹85 ಕೋಟಿ ಅಂದಾಜು ವೆಚ್ಚದಲ್ಲಿ ನಿರ್ಮಾಣ ಮಾಡಲು ಅನುಮೋದನೆ.
- ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಅನುಷ್ಠಾನಗೊಳಿಸುತ್ತಿರುವ ಚಿತ್ರದುರ್ಗ ಜಿಲ್ಲೆಯ ಹಿರಿಯೂರು ನಗರದ ದಕ್ಷಿಣ ಭಾಗಕ್ಕೆ ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಮೊದಲನೇ ಹಂತದ ಯೋಜನೆ ₹100 ಕೋಟಿಗೆ ಒಪ್ಪಿಗೆ.
- ಕರ್ನಾಟಕ ರಾಜ್ಯ ಬಾಲ ನ್ಯಾಯ(ಮಕ್ಕಳ ಪಾಲನೆ ಮತ್ತು ರಕ್ಷಣೆ) ನಿಯಮ 2022 ಕರಡು ಅಧಿಸೂಚನೆಗೆ, ಘಟನೋತ್ತರ ಅನುಮೋದನೆ.
- ಹಾಸನ ಜಿಲ್ಲೆಯ ಹೊನ್ನಾವರ ಕೆರೆಯಿಂದ ನೀರನ್ನು ಎತ್ತಿ ಹಾಸನ ತಾಲ್ಲೂಕಿನ ಹಾಸನ ಹಾಗೂ ದುದ್ದ ಹೋಬಳಿ ಮತ್ತು ಅರಸೀಕೆರೆ ತಾಲ್ಲೂಕಿನ ಜಾವಗಲ್ ಹೋಬಳಿಯ 27 ಕೆರೆಗಳಿಗೆ ಹಾಗೂ 18 ಕಟ್ಟೆಗಳನ್ನು ತುಂಬಿಸುವ ₹47.50 ಕೋಟಿ ಯೋಜನೆಗೆ ಒಪ್ಪಿಗೆ.

ಎಸಿಬಿ ರದ್ದು ಮಾಡಲು ಸಿದ್ಧ: ಸಚಿವ ಮಾಧುಸ್ವಾಮಿ

ಬೆಂಗಳೂರು: ಎಸಿಬಿಯನ್ನು ರದ್ದು ಮಾಡಲು ಸರ್ಕಾರ ತಾತ್ವಿಕವಾಗಿ ಸಿದ್ಧವಿದೆ. ಅದಕ್ಕೆ ಹಲವು ಸೂಕ್ಷ್ಮ ವಿಚಾರಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾಗಿದೆ ಎಂದು ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ತಿಳಿಸಿದರು.

'ಒಂದು ಕಡೆ ನಮ್ಮ ಪಕ್ಷದ ಪ್ರಣಾಳಿಕೆಯಲ್ಲಿ ಎಸಿಬಿಯನ್ನು ರದ್ದು ಮಾಡುತ್ತೇವೆಎಂದುಹೇಳಿದ್ದೇವೆ.ಆದರೆಸರ್ಕಾರ ನಡೆಸುವಾಗ, ಈ ಹಿಂದಿನ ಸರ್ಕಾರದ (ಸಿದ್ದರಾಮಯ್ಯ) ತೀರ್ಮಾನವನ್ನು ಸಮರ್ಥಿಸಿಕೊಳ್ಳಬೇಕಾಗುತ್ತದೆ' ಎಂದರು.

ನ್ಯಾಯಮೂರ್ತಿಗಳ ನೇಮಕ

ಬೆಂಗಳೂರು: ಐವರು ಹಿರಿಯ ಸೆಷನ್ಸ್ ನ್ಯಾಯಾಧೀಶರನ್ನು ಕರ್ನಾಟಕ ಹೈಕೋರ್ಟ್‌ನ ಹೆಚ್ಚುವರಿ ನ್ಯಾಯಮೂರ್ತಿಗಳನ್ನಾಗಿ ನೇಮಕ ಮಾಡಿ ಕೇಂದ್ರ ಸರ್ಕಾರ ಶುಕ್ರವಾರ ಆದೇಶಿಸಿದೆ.

ಅನಿಲ್ ಭೀಮಸೇನ ಕಟ್ಟಿ, ಗುರುಸಿದ್ದಯ್ಯ ಬಸವರಾಜ, ಚಂದ್ರಶೇಖರ ಮೃತ್ಯುಂಜಯ ಜೋಶಿ, ಉಮೇಶ ಮಂಜುನಾಥ ಭಟ್ ಅಡಿಗ ಹಾಗೂ ತಲಕಾಡು ಗಿರಿಗೌಡ ಶಿವಶಂಕರೇಗೌಡ ನೂತನ ನ್ಯಾಯಮೂರ್ತಿಗಳಾಗಿ ನೇಮಕಗೊಂಡವರಾಗಿದ್ದಾರೆ.

ಕಾನೂನು ವಿವಿ ಕುಲಪತಿ: ಮೂವರ ಹೆಸರು ಶಿಫಾರಸು

ಧಾರವಾಡ: ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ನೂತನ ಕುಲಪತಿ ಹುದ್ದೆಗೆ ಮೂವರು ಹೆಸರುಗಳನ್ನು ಶೋಧನಾ ಸಮಿತಿ ಶಿಫಾರಸು ಮಾಡಿದೆ.

ಪ್ರೊ.ಈಶ್ವರ ಭಟ್ ಅವರಿಂದ ತೆರವಾದ ಸ್ಥಾನಕ್ಕೆ ಒಟ್ಟು 10 ಅರ್ಜಿಗಳು ಸಲ್ಲಿಕೆಯಾಗಿದ್ದವು. ಅದರಲ್ಲಿ ಮೈಸೂರು ವಿ.ವಿಯ ಪ್ರೊ. ಬಸವರಾಜು, ಬೆಂಗಳೂರಿನ ರಾಷ್ಟ್ರೀಯ ಕಾನೂನು ಶಾಲೆಯ ವಿ.ವಿಯ ಪ್ರೊ.ಒ.ವಿ.ನಂದಿಮಠ ಹಾಗೂ ಪ್ರೊ.ಅಶೋಕ ಪಾಟೀಲ ಅವರ ಹೆಸರುಗಳನ್ನು ಶಿಫಾರಸು ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ಅಂತರ್ಜಲ ಬಳಕೆಗೆ ಮೀಟರ್

ಒಂದನೇ ಪುಟದಿಂದ...

ನೀರು ಬಳಕೆದಾರರ ಸಂಘ, ನೀರಿನ ಬಳಕೆದಾರರ ಮಹಾ ಮಂಡಳಿ, ಕೆರೆ ನೀರು ಬಳಕೆದಾರರ ಸಂಘ, ಗ್ರಾಮೀಣ ನೀರು ಮತ್ತು ನೈರ್ಮಲ್ಯ ಸಮಿತಿ, ಜಲಾನಯನ ಸಮಿತಿಗಳನ್ನು ಬಲಪಡಿಸಲು ನಿಯಮಿತ ಸಭೆಗಳನ್ನು ನಡೆಸಲು ಸರ್ಕಾರದ ಮುಖ್ಯಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಜಲ ನೀತಿ ಸಮಿತಿ ರಚನೆ.

ನೀರು ಬಳಕೆಯ ದಕ್ಷತೆ ಮತ್ತು ನೀರಿನ ಉತ್ಪಾದಕತೆಯನ್ನು ಸುಧಾರಿಸುವುದು, ನೀರಾವರಿ ಯೋಜನೆಗಳ ನಿರ್ವಹಣೆ, ನೀರಾವರಿ ಆಧುನೀಕರಣ ಮತ್ತು ಕಾಲುವೆ ಯಾಂತ್ರೀಕರಣ, ಸೂಕ್ಷ್ಮ ನೀರಾವರಿ, ಕರ್ನಾಟಕ ಜಲಸಂಪನ್ಮೂಲ ಮಾಹಿತಿ ವ್ಯವಸ್ಥೆ, ನದಿ ಕಣಿವೆ ಯೋಜನೆ ಮತ್ತು ನಿರ್ವಹಣೆಗೆ ರೈತರನ್ನು ಪ್ರೋತ್ಸಾಹಿಸಲಾಗುವುದು. ಜಲಮೂಲಗಳು, ಜಲಾನಯನ ಪ್ರದೇಶಗಳ ಸುಧಾರಣೆಯಲ್ಲಿ ರೈತರ ಪಾಲ್ಗೊಳ್ಳುವಿಕೆ ಉತ್ತೇಜಿಸಲಾಗುವುದು.

ರೈತರ ಆದಾಯ ದ್ವಿಗುಣಗೊಳಿಸುವುದು, ವಿವಿಧ ಬೆಳೆಗಳ ನೀರಿನ ಉತ್ಪಾದಕತೆಯನ್ನು ಹೆಚ್ಚಿಸುವುದು, ನೀರಿನ ಬಳಕೆಯ ದಕ್ಷತೆಯನ್ನು ಸುಧಾರಿಸುವುದು.

ಗ್ರಾಮೀಣ ಕುಡಿಯುವ ನೀರು ಮತ್ತು ನೀರಾವರಿ ಅಗತ್ಯಗಳನ್ನು ಪೂರೈಸಲು ಪಂಚಾಯಿತಿ ಮಟ್ಟದ ಅಂತರ್ಜಲ ಬಜೆಟ್ ಮತ್ತು ಸಮಗ್ರ ಅಂತರ್ಜಲ–ಕೆರೆ–ಜಲಾನಯನ ನಿರ್ವಹಣೆಯಲ್ಲಿ ರೈತರ ಸಹಭಾಗಿತ್ವ ಅಳವಡಿಸಿಕೊಳ್ಳಬೇಕು.

ಭಾರಿ ಮಳೆಯ ಅವಧಿಯಲ್ಲಿ ಸಮಯೋಚಿತ ಮೇಲ್ವಿಚಾರಣೆ ಮತ್ತು ಮುನ್ಸೂಚನೆ ತಂತ್ರಜ್ಞಾನಗಳಿಂದ ಪ್ರವಾಹ ನಿಯಂತ್ರಣ ಒದಗಿಸುವುದರೊಂದಿಗೆ ಮತ್ತು ಅಣೆಕಟ್ಟು ವ್ಯವಸ್ಥಾಪಕರು ಮತ್ತು ಪ್ರವಾಹ ನಿಯಂತ್ರಣ ಆಡಳಿತದ ಮಧ್ಯೆ ಪರಿಣಾಮಕಾರಿ ಸಂವಹನದ ಮೂಲಕ ಪ್ರವಾಹ ಅಪಾಯಗಳನ್ನು ನಿಯಂತ್ರಿಸಬೇಕು. ಪ್ರವಾಹದ ನೀರನ್ನು ಸಂಗ್ರಹಿಸಿ ಬಳಕೆ ಮಾಡುವ ಬಗ್ಗೆ ಚಿಂತನೆ.

'ಪಾಸ್‌ಪೋರ್ಟ್–ಮ್ಯಾಜಿಸ್ಟ್ರೇಟ್ ಅನುಮತಿ ಅನಗತ್ಯ'

ಬೆಂಗಳೂರು: 'ಪಾಸ್‌ಪೋರ್ಟ್ ನವೀಕರಣಕ್ಕೆ ಅರ್ಜಿ ಸಲ್ಲಿಸಿದವರ ವಿರುದ್ಧ ಯಾವುದಾದರೂ ಕ್ರಿಮಿನಲ್ ಪ್ರಕರಣ ವಿಚಾರಣೆಗೆ ಬಾಕಿಯಿದ್ದರೆ ಸಂಬಂಧಿಸಿದ ಮ್ಯಾಜಿಸ್ಟ್ರೇಟ್ ಕೋರ್ಟ್ ಅನುಮತಿ ಪಡೆಯುವ ಅಗತ್ಯವಿಲ್ಲ' ಎಂದು ಹೈಕೋರ್ಟ್ ಆದೇಶಿಸಿದೆ.

ಉದ್ಯಮಿ ಸಂಜಯ್ ಜಿ.ಖೇಣಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ವಿಶ್ವಜಿತ್ ಶೆಟ್ಟಿ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಪಾಸ್‌ಪೋರ್ಟ್‌ಗೆ ಹೊಸದಾಗಿ ಅರ್ಜಿ ಸಲ್ಲಿಸಿದವರ ವಿರುದ್ಧ ಯಾವುದಾದರೂ ಕ್ರಿಮಿನಲ್ ಪ್ರಕರಣ ಬಾಕಿಯಿದ್ದರೆ ಮಾತ್ರ ಮ್ಯಾಜಿಸ್ಟ್ರೇಟ್ ಕೋರ್ಟ್ ಅನುಮತಿ ಅಗತ್ಯ' ಎಂದು ಸ್ಪಷ್ಟಪಡಿಸಿದೆ.

ಅಂತೆಯೇ, ಪಾಸ್‌ಪೋರ್ಟ್ ಅಧಿಕಾರಿ 2022ರ ಜ.12 ಮತ್ತು ಮಾರ್ಚ್ 11ರಂದು ಹೊರಡಿಸಿದ್ದ ಸೂಚನೆಗಳನ್ನು ರದ್ದುಪಡಿಸಿದೆ.

ಪ್ರಕರಣವೇನು?: ಸಂಜಯ್ ಖೇಣಿ ಅವರಿಗೆ 2021ರ ಜ. 23ರಂದು ಪ್ರಾದೇಶಿಕ ಪಾಸ್‌ಪೋರ್ಟ್ ಪ್ರಾಧಿಕಾರವು ಪಾಸ್‌ಪೋರ್ಟ್ ಮಂಜೂರು ಮಾಡಿತ್ತು. ಅದರ ಅವಧಿ 2022ರ ಜ. 22ರಂದು ಮುಗಿಯುತ್ತಿದ್ದ ಹಿನ್ನೆಲೆಯಲ್ಲಿ 2021ರ ಅಕ್ಟೋಬರ್ 25ರಂದು ನವೀಕರಣಕ್ಕೆ ಅರ್ಜಿ ಸಲ್ಲಿಸಿದ್ದರು. ಪಾಸ್‌ಪೋರ್ಟ್ ನವೀಕರಣಕ್ಕಾಗಿ ಸಂಬಂಧಿಸಿದ ಮ್ಯಾಜಿಸ್ಟ್ರೇಟ್ ಅನುಮತಿ ಪಡೆಯುವಂತೆ ಸಂಜಯ್ ಖೇಣಿಗೆ ಅವರಿಗೆ ಬೆಂಗಳೂರಿನ ಪ್ರಾದೇಶಿಕ ಪಾಸ್‌ಪೋರ್ಟ್ ಅಧಿಕಾರಿ ಸೂಚಿಸಿದ್ದರು. ಇದನ್ನು ಖೇಣಿ ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು.

ಪ್ರಜಾವಾಣಿ ಶನಿವಾರ, 13 ಆಗಸ್ಟ್ 2022
ಭೂಮಿಕಾ
ಮಹಿಳೆಯ ಆಪ್ತ ಸಂಗಾತಿ
7





ಒಕ್ಕೂಟದ ಆರ್ಥಿಕ ನೆರವಿನಿಂದ ಮಡಕೆಗಳನ್ನು ಮಾಡಿ ಮಾರಾಟ ಮಾಡುತ್ತಿರುವ ನೀಲವ್ವ ಕುಂಬಾರ

ಹಪ್ಪಳ-ಸಂಡಿಗೆ ವ್ಯಾಪಾರ ನಡೆಸುತ್ತಿರುವ ಲಕ್ಷ್ಮಿ ಹೊಕ್ರಾಣಿ

ಅರ್ಥ ಸ್ವಾತಂತ್ರ್ಯದ ಕೊಂಡಿ 'ಚಾಮುಂಡಿ'

ದುಡಿಯಬೇಕೆಂಬ ಛಲವಿರುವ ಹೆಣ್ಣುಮಕ್ಕಳ ರಟ್ಟೆಗೆ ಶಕ್ತಿ ತುಂಬುತ್ತಿದೆ ಬಾಗಲಕೋಟೆಯ ಚಾಮುಂಡೇಶ್ವರಿ ಮಹಿಳಾ ಒಕ್ಕೂಟ.

ಪ್ರಕಾಶ ಬಾಳಕ್ಕನವರ

ಕಟಗೇರಿಯ ಬಡ ಕುಟುಂಬದ ಭಾರತಿ ಶ್ರೀಶೈಲ ತುಪ್ಪದ ಅವರು ಕೂಲಿ ಮಾಡಿ ಬದುಕು ಸವೆಸುತ್ತಿದ್ದರು. ಎರಡು ವರ್ಷಗಳ ಹಿಂದೆ ಸಿಕ್ಕ ಸಣ್ಣ ಆರ್ಥಿಕ ನೆರವಿನಿಂದ, ಕೂಲಿ ಬಿಟ್ಟು, ಚುರುಮುರಿ ವ್ಯಾಪಾರ ಆರಂಭಿಸಿದರು. ಅದರಲ್ಲಿಯೇ ತಕ್ಕಮಟ್ಟಿನ ಆದಾಯ ಗಳಿಸಿ ಪುತ್ರಿಯರ ಮದುವೆ ಮಾಡಿದ್ದಾರೆ. ಇನ್ನೊಬ್ಬ ಪುತ್ರಿಯನ್ನು ಬಿ.ಕಾಂ ಓದಿಸುತ್ತಿದ್ದಾರೆ !...

ಇದೇ ರೀತಿ ಕೂಲಿಮಾಡಿಕೊಂಡಿದ್ದ ಮೀನಾಕ್ಷಿ ಹೆರೂರ ಅವರದ್ದು ಮತ್ತೊಂದು ಕತೆ. ಊಟಕ್ಕೆ ತತ್ವಾರ ಇತ್ತು. ಇನ್ನು ದಿನದ ಕೂಲಿಯಲ್ಲಿ ಮಗಳಿಗೆ ಮದುವೆ ಮಾಡುವುದು ಹೇಗೆ ಎಂದು ಯೋಚಿಸುತ್ತಿದ್ದಾಗಲೇ ಸಕಾಲದಲ್ಲಿ ಸಿಕ್ಕ ಹಣಕಾಸಿನ ನೆರವು ಹೋಟೆಲ್ ಉದ್ಯಮವನ್ನು ಪ್ರಾರಂಭಿಸಲು ಪ್ರೇರೇಪಿಸಿತು. ಹಂತ ಹಂತವಾಗಿ ವ್ಯಾಪಾರ ಸುಧಾರಿಸಿತು. ಮಗಳ ಮದುವೆಯೂ ಆಯಿತು. ಬ್ಯಾಂಕಿಗೆ ಪಿಗ್ಮಿ ಕಟ್ಟುವ ಹಂತಕ್ಕೆ ಜೀವನ ಬದಲಾಯಿತು.

> ಸಾಲ ಪಡೆದವರೆಲ್ಲರೂ ಆರ್ಥಿಕವಾಗಿ ಸಬಲರಾಗಿದ್ದಾರೆ. ನಿಜವಾಗಿಯೂ ನಮ್ಮ ಒಕ್ಕೂಟ ಬಡವರ ಬದುಕಿಗೆ ಸಂಜೀವಿನಿ.
> ಭಾಗೀರಥಿ ಮೇಟಿ,
> ಅಧ್ಯಕ್ಷೆ, ಚಾಮುಂಡೇಶ್ವರಿ ಮಹಿಳಾ ಒಕ್ಕೂಟ

ಇದು ಕೇವಲ ಭಾರತಿ, ಮೀನಾಕ್ಷಿ ಅವರ ಬದುಕು ಬದಲಾದ ಕತೆಯಲ್ಲ. ಬಾಗಲಕೋಟ ಜಿಲ್ಲೆಯ ಗುಳೇದಗುಡ್ಡ ತಾಲ್ಲೂಕಿನ ಕಟಗೇರಿ–ಕೊಂಕಣಕೊಪ್ಪ ಗ್ರಾಮಗಳ 500ಕ್ಕೂ ಹೆಚ್ಚು ಮಹಿಳೆಯರು ಇಂಥದ್ದೇ ಆರ್ಥಿಕ ನೆರವಿನೊಂದಿಗೆ ಸ್ವಾವಲಂಬಿ ಬದುಕು ಕಟ್ಟಿಕೊಂಡಿದ್ದಾರೆ. ದುಡಿಯಬೇಕೆಂಬ ಛಲವಿರುವ ಹೆಣ್ಣುಮಕ್ಕಳ ರಟ್ಟೆಗೆ ಶಕ್ತಿ ತುಂಬುತ್ತಿರುವುದು ಚಾಮುಂಡೇಶ್ವರಿ ಮಹಿಳಾ ಒಕ್ಕೂಟ.

ದೀನದಯಾಳ ಅಂತ್ಯೋದಯ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನದಡಿ 2019ರಲ್ಲಿ ಕಟಗೇರಿ ಮತ್ತು ಕೊಂಕಣಕೊಪ್ಪ ಗ್ರಾಮಗಳ 90ಕ್ಕೂ ಹೆಚ್ಚು ಸ್ವಸಹಾಯ ಸಂಘಗಳು ಸೇರಿ ಚಾಮುಂಡೇಶ್ವರಿ ಮಹಿಳಾ ಒಕ್ಕೂಟ ರಚಿಸಿವೆ. ಸುಮಾರು 900 ಮಹಿಳೆಯರು ಒಕ್ಕೂಟದ ಸದಸ್ಯರು. ಇದರಲ್ಲಿ 500 ಮಹಿಳೆಯರು ಒಕ್ಕೂಟದಿಂದ ಸಾಲ ಪಡೆದು ಸ್ವ ಉದ್ಯೋಗ ಆರಂಭಿಸಿದ್ದಾರೆ. ಕೂಲಿ ಮಾಡುತ್ತಿದ್ದವರು ಕಿರು ಉದ್ದಿಮೆಯ ನೊಗವನ್ನು ಹೊತ್ತಿದ್ದಾರೆ.

ಹೀಗೆ ಶುರುವಾಯ್ತು...

ಚಾಮುಂಡೇಶ್ವರಿ ಮಹಿಳಾ ಒಕ್ಕೂಟಕ್ಕೆ ಬಾಗಲಕೋಟೆ ಜಿಲ್ಲಾ ಪಂಚಾಯತಿಯಿಂದ ಕೇಂದ್ರ ಸರ್ಕಾರದ ಸಮುದಾಯ ಬಂಡವಾಳ ನಿಧಿಯಡಿ ₹21 ಲಕ್ಷ ಹಾಗೂ ಕಿರು ಆಹಾರ ಉತ್ಪನ್ನ ತಯಾರಿಕೆ (ಪಿಎಂಎಫ್‌ಎಂಇ)ಯೋಜನೆಯಡಿ ₹ 6 ಲಕ್ಷ ಅನುದಾನ ದೊರೆತಿದೆ.

ಎರಡು ವರ್ಷಗಳಿಂದ ಈವರೆಗೆ 500 ಮಹಿಳೆಯರಿಗೆ ₹ 1 ಕೋಟಿವರೆಗೆ ಸಾಲ ದೊರೆತಿದೆ. ಸಾಲ ಪಡೆದವರು ಕೃಷಿ, ಹೈನುಗಾರಿಕೆ, ಕೋಳಿ, ಕುರಿ ಸಾಕಾಣಿಕೆಯಂಥ ಉದ್ದಿಮೆ ಆರಂಭಿಸಿದ್ದಾರೆ. ಶ್ಯಾವಿಗೆ, ಹಪ್ಪಳ, ಚಟ್ನಿ, ರೊಟ್ಟಿ, ಚಕ್ಕುಲಿಯಂತಹ ಆಹಾರ ಉತ್ಪನ್ನಗಳ ತಯಾರಿಕೆ, ಟೇಲರಿಂಗ್, ಬಟ್ಟೆ, ಬ್ಯಾಗ್ ತಯಾರಿಕೆಯಂತಹ ಗುಡಿ ಕೈಗಾರಿಕೆಯಲ್ಲಿ ಕೆಲವರು ನಿರತರಾಗಿದ್ದಾರೆ. ಇನ್ನು ಕೆಲವರು ನೇಕಾರಿಕೆ, ಕುಂಬಾರಿಕೆ, ಹೋಟೆಲ್ ಉದ್ಯಮ, ಬ್ಯೂಟಿ ಪಾರ್ಲರ್, ಫೋಟೊ ಸ್ಟುಡಿಯೊ, ಝುರಾಕ್ಸ್ ಅಂಗಡಿಯಿಟ್ಟು ಬದುಕಿಗೆ 'ಅರ್ಥ'ಕಂಡುಕೊಂಡಿದ್ದಾರೆ.



ಸ್ವಾತಂತ್ರ್ಯದ ಅಮೃತ ಮಹೋತ್ಸವದ ಹಿನ್ನೆಲೆಯಲ್ಲಿ ಗ್ರಾಮ ಪಂಚಾಯ್ತಿಯೊಂದರ ಬೇಡಿಕೆಗೆ ಅನುಗುಣವಾಗಿ ಹೊಲಿದಿರುವ ತ್ರಿವರ್ಣ ಧ್ವಜಗಳನ್ನು ತೋರಿಸುತ್ತಿರುವ ಒಕ್ಕೂಟದ ಸದಸ್ಯರು.

'ಸಾಲ ಪಡೆಯುವಾಗ ಅಳುಕಿತ್ತು. ಗೊತ್ತಿದಿದ್ದು ಹಪ್ಪಳ ಮಾಡುವ ಕೆಲಸ. ರಾಗಿ, ಗೋವಿನಜೋಳ, ಆಲೂಗೆಡ್ಡೆ ಹೀಗೆ ನಾನಾ ಬಗೆಯ ಹಪ್ಪಳ ಮಾಡುತ್ತಿದ್ದೇನೆ. ಸಕಾಲಕ್ಕೆ ಸಾಲ ಮರುಪಾವತಿಯಾಗುವಷ್ಟು ಆರ್ಡರ್ ಬರುತ್ತಿದೆ. ಒಕ್ಕೂಟ ಬದುಕಿಗೆ ಬೆಳಕಾಗಿದೆ' ಎನ್ನುತ್ತಾರೆ ಒಕ್ಕೂಟದ ಸದಸ್ಯೆ ಲಕ್ಷ್ಮಿ ಹೊಕ್ರಾಣಿ.

'ಮನೆಗೆಲಸ ಮಾಡಿಕೊಂಡಿದ್ದೆ. ಒಕ್ಕೂಟದಿಂದ ₹ 25 ಸಾವಿರ ಸಾಲ ಸಿಕ್ಕಿತು. ರೊಟ್ಟಿ ವ್ಯಾಪಾರ ಆರಂಭಿಸಿದೆ. ಸೌರಶಕ್ತಿ ಬಳಸಿ ರೊಟ್ಟಿ ಮಾಡುವ ಮಶಿನ್ ಖರೀದಿಸಿದ್ದೇನೆ. ಈಗ ತಿಂಗಳಿಗೆ 30 ಸಾವಿರ ರೊಟ್ಟಿ ಮಾರ್ತೀನಿ. ₹15 ಸಾವಿರಕ್ಕೂ ಹೆಚ್ಚು ಆದಾಯವಿದೆ. ಈ ನೆರವು ಬದುಕಿನ ದಿಕ್ಕನ್ನೇ ಬದಲಿಸಿದೆ' ಎಂದು ಜಯಶ್ರೀ ತುಪ್ಪದ ಹರ್ಷ ವ್ಯಕ್ತಪಡಿಸುತ್ತಾರೆ.

₹ 25 ಸಾವಿರ ಸಾಲ

ಒಕ್ಕೂಟ ವ್ಯಾಪ್ತಿಯಲ್ಲಿರುವ ಪ್ರತಿ ಸ್ವಸಹಾಯ ಗುಂಪಿನ ಮೂವರು ಮಹಿಳೆಯರಿಗೆ ಶೇ1ರ ಬಡ್ಡಿ ದರದಲ್ಲಿ ತಲಾ ₹25 ಸಾವಿರ ಸಾಲ, ಪರಿಶಿಷ್ಟ ಜಾತಿ, ಪಂಗಡದ ಐವರು ಸದಸ್ಯರಿಗೆ ₹1.25 ಲಕ್ಷ ಸಾಲ ನೀಡಲಾಗುತ್ತಿದೆ. ಕಿರು ಆಹಾರೋತ್ಪನ್ನ ತಯಾರಿಕೆಗಾಗಿ ತಲಾ ₹40 ಸಾವಿರ ಸಾಲ ನೀಡಲಾಗುತ್ತಿದೆ. ಪಡೆದ ಸಾಲವನ್ನು ಬಡ್ಡಿ ಸಮೇತ 18 ತಿಂಗಳಲ್ಲಿ ಮರುಪಾವತಿ ಮಾಡಬೇಕೆಂಬ ನಿಬಂಧನೆಯಿದೆ. ನಿಗದಿತ ಅವಧಿಯೊಳಗೆ ಸಾಲ ಮರುಪಾವತಿಯಾಗುತ್ತಿರುವುದು ಈ ಒಕ್ಕೂಟದ ಅಗ್ಗಳಿಕೆ ಎಂದು ಹೆಮ್ಮೆಯಿಂದ ಹೇಳುತ್ತಾರೆ ಒಕ್ಕೂಟದ ಅಧ್ಯಕ್ಷೆ ಭಾಗೀರಥಿ ಮೇಟಿ.

ಮಾಸಿಕ ಸಂತೆಯ ನೆರವು

ಈ ಒಕ್ಕೂಟ ಸಾಲ ಕೊಡುವುದಷ್ಟೆ ಅಲ್ಲ, ಸದಸ್ಯರು ತಯಾರಿಸುವ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸುವ ಕೆಲಸವನ್ನು ಮಾಡಲಾಗುತ್ತಿದೆ. ಪ್ರತಿ ತಿಂಗಳು ಒಕ್ಕೂಟದಿಂದ ಸಂತೆ ನಡೆಯುತ್ತದೆ. ತರಕಾರಿ, ದವಸ, ಧಾನ್ಯ, ಕರಕುಶಲ ವಸ್ತುಗಳಂಥ ಉತ್ಪನ್ನಗಳನ್ನು ಮಾರಾಟ ಮಾಡಲಾಗುತ್ತದೆ.

'ನಮಗ ಸ್ವಲ್ಪ ಹೊಲ ಐತ್ರಿ. ಅದರಾಗ ಬ್ಯಾರೆ ಬ್ಯಾರೆ ತರಕಾರಿ ಬೆಳೆದು ಸಂತೆ ನಡೆಯುವ ಊರುಗಳಿಗೆ ಹೋಗಿ ಮಾರಾಟ ಮಾಡ್ತೀವಿ. ಕೈತುಂಬ ರೊಕ್ಕ ಸಿಗತ್ತ. ಮಕ್ಕಳಿಗೆ ಸಾಲಿ ಕಲಿಸಾಕ ತೊಂದ್ರೆ ಇಲ್ಲ. ತರಕಾರಿಗಳನ್ನು ದಲ್ಲಾಳಿಗಳಿಗೆ ಕೊಡೋದಿಲ್ಲ. ನಾವೇ ಕುಂತ ಮಾರ್ತೀವಿ. ಲಾಭ ಚಲೋ ಸಿಗತ್ತದಾ. ಒಕ್ಕೂಟದ ಸಾಲ ನಮ್ಮ ಪಾಲಿಗೆ ಸಂಜೀವಿನಿ ಆಗೈತೆ' ಎನ್ನುತ್ತಾರೆ ಸುಧಾ ಕಮತಗಿ ಹಾಗೂ ಬಾಳವ್ವ ಮೊಕಾಶಿ.

ಇವರ ಜೊತೆಗೆ, ಬ್ಯಾಗ್, ಮಾಸ್ಕ್ ಹೊಲಿಯುವ ಭಾರತಿ ಉಮೇಶ ತುಪ್ಪದ, ಕ್ಯಾಮೆರಾ ಹಿಡಿದು ಫೋಟೊ ತೆಗೆಯುವ ಶೈಲಾ ಲಿಂಗನಾಯಕರ, ಗರಿಗರಿ ಶಾವಿಗೆ ತಯಾರಿಸುವ ಕಾಳಮ್ಮ ಬಡಿಗೇರ, ಯಲ್ಲಮ್ಮ ಗಾಣಿಗೇರ, ರುಚಿ, ರುಚಿ ಹಳ್ಳಿ ಊಟ ತಯಾರಿಸಿ ಸೈ ಎನಿಸಿಕೊಂಡಿರುವ ಈರಬಸವ್ವ ಮಠಪತಿ, ನಾಲ್ಕಾರು ಎಮ್ಮೆಗಳನ್ನು ಖರೀದಿಸಿ ಹೈನುಗಾರಿಕೆಯಲ್ಲಿ ತೊಡಗಿರುವ ಸುಮಿತ್ರಾ ಮೊಕಾಶಿ, ಅನಸೂಯಾ ದಂಡನ್ನವರ, ಸುಜಾತಾ ಕಾಮನ್ನವರ, ರೇಣುಕಾ ಡೋಣಿ, ಬೇಕರಿ ಆರಂಭಿಸಿರುವ ಕೊಂಕಣಕೊಪ್ಪ ಗ್ರಾಮದ ಲಕ್ಷ್ಮವ್ವ ರೊಳ್ಳಿ ಇವರೆಲ್ಲರೂ ಒಕ್ಕೂಟದ ನೆರವು ಪಡೆದವರು.



ಸೌರಶಕ್ತಿಯಿಂದ ರೊಟ್ಟಿ ತಯಾರಿಸುವ ರೇಖಾ ತುಪ್ಪದ

ಒಕ್ಕೂಟ ನಿರ್ವಹಣೆ ಹೀಗಿದೆ

ಒಕ್ಕೂಟದ ವ್ಯವಸ್ಥೆ ನಿರ್ವಹಣೆಗಾಗಿ 15 ಸದಸ್ಯರ ಸಮಿತಿ ಇದೆ. ಈ ಸದಸ್ಯರು ಗ್ರಾಮದ ಎಲ್ಲ ವಾರ್ಡ್‌ಗಳಲ್ಲಿರುವ ಸ್ವಸಹಾಯ ಸಂಘಗಳನ್ನು ಪ್ರತಿನಿಧಿಸುತ್ತಾರೆ. ಇವರೆಲ್ಲ ಯಾವುದೇ ಫಲಾಪೇಕ್ಷೆ ಇಲ್ಲದೇ ಸೇವೆ ಸಲ್ಲಿಸುತ್ತಿದ್ದಾರೆ. ತಮ್ಮೂರಿನ ಮಹಿಳೆಯರು ಸ್ವಾವಲಂಬಿಗಳಾಗಬೇಕು ಎಂಬ ಉದ್ದೇಶ ಹೊಂದಿರುವ ಸದಸ್ಯರು ಅತ್ಯಂತ ಅಚ್ಚುಕಟ್ಟಾಗಿ ಒಕ್ಕೂಟವನ್ನು ಮುನ್ನಡೆಸುತ್ತಿದ್ದಾರೆ. ಸಾಲ ನೀಡಿಕೆ, ಲೆಕ್ಕಪತ್ರ ನಿರ್ವಹಣೆ, ಕಾಗದ ಪತ್ರಗಳ ತಯಾರಿಕೆ ಸೇರಿದಂತೆ ಎಲ್ಲ ಆಡಳಿತಾತ್ಮಕ ಕಾರ್ಯಗಳನ್ನು ನಿರ್ವಹಿಸಲು ನಾಲ್ವರು ಮಹಿಳೆಯರಿದ್ದಾರೆ. ಇವರಿಗೆ ಜಿಲ್ಲಾ ಪಂಚಾಯ್ತಿಯಿಂದ ಗೌರವಧನ ನೀಡಲಾಗುತ್ತಿದೆ.

ಬೇರೆ ರಾಜ್ಯಕ್ಕೂ ವಿಸ್ತರಣೆ

ಒಕ್ಕೂಟದ ಮಹಿಳೆಯರು ತಯಾರಿಸಿದ ವಿವಿಧ ಬಗೆಯ ಬ್ಯಾಗ್, ಪರ್ಸ್ ಮತ್ತಿತರರ ಕಸೂತಿ ಬಟ್ಟೆಗಳು ದೆಹಲಿ, ಕೋಲ್ಕತ್ತಾ, ಭುವನೇಶ್ವರ ಹೀಗೆ ಬೇರೆ ಬೇರೆ ರಾಜ್ಯಗಳಿಗೂ ಮಾರಾಟವಾಗುತ್ತಿವೆ. ಒಕ್ಕೂಟ ಕೇವಲ ವ್ಯವಹಾರ, ವ್ಯಾಪಾರ, ಉದ್ಯಮಕ್ಕಷ್ಟೇ ಸೀಮಿತವಾಗದೇ ಗ್ರಾಮದಲ್ಲಿನ ಸಮಾಜಮುಖಿ ಕಾರ್ಯಗಳಲ್ಲೂ ತೊಡಗಿಸಿಕೊಳ್ಳುತ್ತಿದೆ. ಸರ್ವ ಜನಾಂಗದ ಶಾಂತಿಯ ತೋಟದಂತಿರುವ ಚಾಮುಂಡೇಶ್ವರಿ ಒಕ್ಕೂಟವನ್ನು ಶೀಲಾ ಮೇಟಿ ಅವರ ನೇತೃತ್ವದ 15 ಸದಸ್ಯರ ತಂಡ ಸುಗಮವಾಗಿ ಮುನ್ನಡೆಸುತ್ತಿದೆ.

ಪ್ರಶಸ್ತಿ – ಪುರಸ್ಕಾರ

ಒಕ್ಕೂಟದ ಕಾರ್ಯವೈಖರಿಯನ್ನು ಮೆಚ್ಚಿದ ಜಿಲ್ಲಾ ಪಂಚಾಯ್ತಿ, ಕಳೆದ ಸಾಲಿನಲ್ಲಿ ₹ 1 ಲಕ್ಷ ಮೊತ್ತದ ಬಹುಮಾನ ನೀಡಿದೆ. ಮಷಿನ್ ಬಳಸಿ ಪ್ರತಿ ತಿಂಗಳು ಸಾವಿರಾರು ರೊಟ್ಟಿ ತಯಾರಿಸಿ ಮಾರಾಟ ಮಾಡುವ ಒಕ್ಕೂಟದ ಸದಸ್ಯೆ ಜಯಶ್ರೀ ತುಪ್ಪದ ಅವರಿಗೆ ರಾಜ್ಯಮಟ್ಟದ ಪುರಸ್ಕಾರದ ಗೌರವವೂ ದೊರೆತಿದೆ.

---

80 ವರ್ಷಗಳ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಮಹಿಳೆಯೊಬ್ಬರು 'ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಳಿ'ಯ (ಸಿಎಸ್‌ಐಆರ್) ಮಹಾನಿರ್ದೇಶಕ ಹುದ್ದೆಗೆ ಆಯ್ಕೆಯಾಗಿದ್ದಾರೆ. ಭಾರತ ಸ್ವಾತಂತ್ರ್ಯದ ಅಮೃತಮಹೋತ್ಸವ ಆಚರಿಸಿಕೊಳ್ಳುತ್ತಿರುವ ಈ ಹೊತ್ತಿನಲ್ಲಿ ವಿಜ್ಞಾನ ಕ್ಷೇತ್ರದ ಆಡಳಿತಾತ್ಮಕ ಮಹೋನ್ನತ ಹುದ್ದೆಗೆ ಏರುವ ಮೂಲಕ ಕಲೈಸೆಲ್ವಿ ಅವರು ನಾರಿಪಥವೊಂದನ್ನು ತೆರೆದಿದ್ದಾರೆ.



ವಿಜ್ಞಾನ ಕ್ಷೇತ್ರಕ್ಕೆ ನಾರಿಶಕ್ತಿಯ ದೀವಿಗೆ

ವ್ಯಕ್ತಿ ವಿಶೇಷ

ರವಿಪ್ರಕಾಶ್ ಎಸ್.

ರಾಷ್ಟ್ರಪತಿ ಹುದ್ದೆಗೆ ಬುಡಕಟ್ಟು ಸಮುದಾಯದ ಮಹಿಳೆ ದ್ರೌಪದಿ ಮುರ್ಮು ಹೆಸರು ಕೇಳಿ ಬಂದಾಗ ದೇಶದಲ್ಲಿ ಒಂದು ರೀತಿಯ ಸಂಚಲನ ಮೂಡಿಸಿತ್ತು. ದೇಶವಾಸಿಗಳು ಅತ್ಯಂತ ಪ್ರೀತಿ ಮತ್ತು ಗೌರವದಿಂದಲೇ ಮುರ್ಮು ಅವರನ್ನು ಆ ಸ್ಥಾನಕ್ಕೇರಿಸಿ ಸಂಭ್ರಮಿಸಿದ್ದು, ಭಾರತದ ಹೆಮ್ಮೆ.

ಅದೇ ರೀತಿ ಹಿರಿಯ ವಿಜ್ಞಾನಿ ಡಾ.ನಲ್ಲತಂಬಿ ಕಲೈಸೆಲ್ವಿ, ಅವರ ಹೆಸರು ಭಾರತೀಯ ವಿಜ್ಞಾನ ಕ್ಷೇತ್ರದ ಹಲವು ದಿಗ್ಗಜರಲ್ಲಿ ಹುಬ್ಬೇರಿಸಿರುವುದಂತೂ ದಿಟ. ಇದಕ್ಕೆ ಕಾರಣವಿಷ್ಟೇ 80 ವರ್ಷಗಳ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ 'ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಳಿ'ಯ (ಸಿಎಸ್‌ಐಆರ್) ಮಹಾನಿರ್ದೇಶಕ ಹುದ್ದೆಗೆ ಮಹಿಳೆಯೊಬ್ಬರು ಆಯ್ಕೆ ಆಗಿರುವುದು. ಅದೂ ಭಾರತ ಸ್ವಾತಂತ್ರ್ಯ ದಿನದ ಅಮೃತ ಮಹೋತ್ಸವ ಸಂಭ್ರಮದಲ್ಲಿರುವಾಗ ಇಂಥ ಮಹೋನ್ನತ ಹುದ್ದೆಯನ್ನು ಅಲಂಕರಿಸಿದ ಮೊದಲ ಮಹಿಳೆ ಕಲೈಸೆಲ್ವಿ. ಪುರುಷ ಪ್ರಾಬಲ್ಯದ ಸರಪಳಿ ಮುರಿದು 'ನಾರಿ ಶಕ್ತಿಯ' ಅನಾವರಣ ಮಾಡಿದ ಕೀರ್ತಿ ಇವರದು. ವಿಜ್ಞಾನ ಕ್ಷೇತ್ರದಲ್ಲಿ ಇಂತಹದ್ದೊಂದು ಬದಲಾವಣೆ ಈ ಹಂತದಲ್ಲಿ ಅಗತ್ಯವಿತ್ತು ಎಂದೇ ಹಲವರು ಪ್ರತಿಪಾದಿಸಿದ್ದಾರೆ.

ತಮಿಳುನಾಡಿನ ತಿರುನಲ್ವೇಲಿ ಜಿಲ್ಲೆಯ ಅಂಬಸಮುದ್ರಂ ಎಂಬ ಸಣ್ಣ ಪಟ್ಟಣದ ಕಲೈಸೆಲ್ವಿ. ತಮಿಳು ಮಾಧ್ಯಮದಲ್ಲಿ ಶಿಕ್ಷಣ ಪಡೆದು, ಈಗ ವಿಜ್ಞಾನ ಕ್ಷೇತ್ರದ ಅತ್ಯುನ್ನತ ಸಂಸ್ಥೆಯ ಮುಖ್ಯಸ್ಥರಾಗಿ ಆಯ್ಕೆ ಆಗಿದ್ದಾರೆ. 'ಮಾತೃಭಾಷೆಯಲ್ಲಿ ಶಿಕ್ಷಣ ಪಡೆದಿದ್ದು, ಮುಂದೆ ವಿಜ್ಞಾನದ ಪರಿಕಲ್ಪನೆಗಳನ್ನು ಅರಿತುಕೊಳ್ಳಲು ಸುಲಭವಾಯಿತು' ಎಂದು ಸೆಲ್ವಿ ಹೇಳಿದ್ದಾರೆ.

ನಲ್ಲತಂಬಿಯವರ ಈ ಮಹಾ ಸಾಧನೆಯ ಹಿಂದೆ ಅಪಾರ ಪರಿಶ್ರಮವಿದೆ. ವೈಜ್ಞಾನಿಕ ಸಾಧನೆಗಳೂ ಸಾಕಷ್ಟಿವೆ. ಈ ನೇಮಕಕ್ಕೆ ದೇಶ ವ್ಯಾಪಿ ಅಪಾರ ಶ್ಲಾಘನೆಯೂ ವ್ಯಕ್ತವಾಗಿದೆ. ಶೇಖರ್ ಮಂಡೆ ಅವರ ನಿವೃತ್ತಿಯ ಬಳಿಕ ಈ ಹುದ್ದೆಗೆ ಯಾರು ಎಂಬ ಪ್ರಶ್ನೆ ಕೇಂದ್ರ ಸಂಪುಟ ನೇಮಕ ಸಮಿತಿ ಮುಂದೆ ಬಂದಾಗ ಮರು ಮಾತಿಲ್ಲದೇ ಕಲೈಸೆಲ್ವಿ ಹೆಸರನ್ನು ಅಂತಿಮಗೊಳಿಸಿತು. ಅಲ್ಲದೇ, ಇವರು ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಇಲಾಖೆಯ ಕಾರ್ಯದರ್ಶಿ ಆಗಿಯೂ ಕಾರ್ಯ ನಿರ್ವಹಿಸಲಿದ್ದಾರೆ.

ವಿಜ್ಞಾನ ಕ್ಷೇತ್ರದಲ್ಲಿ ಮಹಿಳೆಯೊಬ್ಬರು ಅತಿ ಉನ್ನತ ಸ್ಥಾನಕ್ಕೇರುವುದು ಸುಲಭದ ಮಾತಲ್ಲ. ಮಹಿಳೆಯಾಗಿ ತನ್ನ 'ಕರ್ತವ್ಯ'ಗಳ ಜತೆಗೆ ಪ್ರಯೋಗಾಲಯಗಳಲ್ಲಿ ಪುರುಷ ವಿಜ್ಞಾನಿಗಳ 'ಅಹಂ'ನೊಂದಿಗೆ ಗುದ್ದಾಡುತ್ತಲೇ ಮೆಟ್ಟಿಲೇರಬೇಕಾದ ಸ್ಥಿತಿ ಈಗಲೂ ಇದೆ. ಇತ್ತೀಚಿನ ವರ್ಷಗಳಲ್ಲಿ ವಿಜ್ಞಾನ ಕ್ಷೇತ್ರದಲ್ಲಿ ಮಹಿಳೆಯರಿಗೆ ಕೇಂದ್ರ ಸರ್ಕಾರ ಹೆಚ್ಚಿನ ಪ್ರೋತ್ಸಾಹ ನೀಡುತ್ತಿರುವುದು ನಿಜ. ಆದರೆ, ಇತರ ಎಲ್ಲ ಕ್ಷೇತ್ರಗಳಂತೆ ಅಲ್ಲೂ ಜಡ್ಡುಗಟ್ಟಿದ ಮತ್ತು ಪುರುಷ ಪ್ರಧಾನ ವ್ಯವಸ್ಥೆ ಇರುವುದು ನಿಜ. ಅಲ್ಲಿ ಚಲನಶೀಲತೆ ತುಂಬಲು ಈ ನೇಮಕ ಅತಿ ಮಹತ್ವದ್ದು.

ಅದರಲ್ಲೂ ಸಿಎಸ್‌ಐಆರ್ ಸಾಮಾನ್ಯ ಸಂಸ್ಥೆಯೇನಲ್ಲ. ದೇಶದ ವೈಜ್ಞಾನಿಕ ಆದ್ಯತೆಯ ವಲಯಕ್ಕೆ ಸೇರಿದ ಅತ್ಯಂತ ಮಹತ್ವದ ಸಂಶೋಧನಾ ಪ್ರಯೋಗಾಲಯ ಸಂಸ್ಥೆಗಳ ಜಾಲವನ್ನು ಹೊಂದಿರುವ ಸಂಸ್ಥೆ ಇದು. ಸಿಎಸ್‌ಐಆರ್ ಅಡಿ 38 ಸಂಶೋಧನಾ ಸಂಸ್ಥೆಗಳಿವೆ. ಇಂಥದ್ದೊಂದು ಸಂಸ್ಥೆಗೆ ನಾಯಕಿಯಾಗಿ, ಅದನ್ನು ಮುನ್ನೆಡಸುವ ಜವಾಬ್ದಾರಿ ಬಹಳ ಮಹತ್ವದ್ದು.

ಲಿಥಿಯಮ್ ಅಯಾನ್ ಬ್ಯಾಟರಿಗಳ ಸಂಗ್ರಹ ಸಾಮರ್ಥ್ಯವನ್ನು ಹೆಚ್ಚಿಸಲು ಎಲೆಕ್ಟ್ರೋಡ್‌ಗಳನ್ನು ನವೀನ ವಿಧಾನವನ್ನು ಅಭಿವೃದ್ಧಿಪಡಿಸಿದ್ದು ಕಲೈಸೆಲ್ವಿ ಅವರಿಗೆ ಗರಿ ಮೂಡಿಸಿದೆ. ಕಿರಿಯ ವಿಜ್ಞಾನಿಯಾಗಿ 25 ವರ್ಷಗಳ ಸಂಶೋಧನಾ ಪಯಣದಲ್ಲಿ ಎಲೆಕ್ಟ್ರೋಕೆಮಿಕಲ್ ಪವರ್ ಸಿಸ್ಟಂ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸಿದ್ದಾರೆ. ಸೋಡಿಯಂ ಅಯಾನ್/ ಲಿಥಿಯಂ ಸಲ್ಫರ್ ಬ್ಯಾಟರಿಗಳು ಮತ್ತು ಸೂಪರ್ ಕೆಪಾಸಿಟರ್‌ಗಳ ಅಭಿವೃದ್ಧಿಯ ಮೇಲೆ ಕಾರ್ಯನಿರ್ವಹಿಸುತ್ತಿದ್ದಾರೆ. 125 ಕ್ಕೂ ಹೆಚ್ಚು ಸಂಶೋಧನಾ ಪ್ರಬಂಧಗಳು ಪ್ರಕಟಿಸಿದ್ದು, ಆರಕ್ಕೆ ಪೇಟೆಂಟ್ ಕೂಡ ಸಿಕ್ಕಿದೆ.

ಕಲೈಸೆಲ್ವಿ ಅವರು ಮಹಾನಿರ್ದೇಶಕ ಹುದ್ದೆ ಅಲಂಕರಿಸುವುದಕ್ಕೂ ಮೊದಲು ತಮಿಳುನಾಡಿನ ಕಾರೈಕುಡಿಯಲ್ಲಿರುವ ಸಿಎಸ್‌ಐಆರ್ ಎಲೆಕ್ಟ್ರೋಕೆಮಿಕಲ್ ರಿಸರ್ಚ್ ಇನ್ಸ್‌ಟಿಟ್ಯೂಟ್‌ನ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದ್ದರು.

ವಿದ್ಯುತ್ ಚಲನೆ ಎಂದರೆ ಮೊದಲಿಂದಲೂ ಕಲೈಸೆಲ್ವಿ ಅವರಿಗೆ ಅತೀವ ಕುತೂಹಲ ಮತ್ತು ಅವರ ಹೃದಯಕ್ಕೆ ಆಪ್ತವಾದ ವಿಷಯ. ಅಷ್ಟೇ ಅಲ್ಲ ನವೀಕರಿಸಬಹುದಾದ ಪವನ ಮತ್ತು ಸೌರ ಇಂಧನ ಮೂಲಗಳ ವ್ಯಾಪಕ ಬಳಕೆಯ ಬಗ್ಗೆ ಸಾಕಷ್ಟು ತಲೆಕೆಡಿಸಿಕೊಂಡಿದ್ದರು. ದೇಶದ ಇಂಧನ ಕೊರತೆ ನೀಗಿಸುವ ಮತ್ತು ಕ್ಷಮತೆಯನ್ನು ಹೆಚ್ಚಿಸುವುದೇ ಅವರಿಗಿದ್ದ ಕಾಳಜಿ. ಪಳೆಯುಳಿಕೆ ಇಂಧನ ಮೂಲದ ಭಾರದಿಂದ ಹೊರಬಂದು ಅಧಿಕ ಕ್ಷಮತೆಯ ಬ್ಯಾಟರಿಗಳ ಬಳಕೆಯ ಬಗ್ಗೆ ಗಮನಹರಿಸಲಾಗಿದೆ. ಆದರೆ, ಇದು ಸಾಕಾರಗೊಳ್ಳಲು ಸಾಕಷ್ಟು ದೂರ ಕ್ರಮಿಸಬೇಕಾಗಿದ್ದು, ಈ ಕಾರ್ಯಕ್ಕೆ ಹೆಚ್ಚಿನ ವೇಗ ನೀಡಲು ಕಲೈಸೆಲ್ವಿ ಸಿಎಸ್‌ಐಆರ್‌ನ ಉನ್ನತ ಸ್ಥಾನದಲ್ಲಿರುವುದು ನೆರವಾಗಲಿದೆ.

ದೇಶದ ಹಲವು ಮಹತ್ವದ ಹುದ್ದೆಗಳಿಗೆ ಮಹಿಳೆಯರು ತಮ್ಮ ಸಾಧನೆಯ ಮೂಲಕವೇ ಏರುತ್ತಿರುವುದು ಹೊಸ ಗಾಳಿ ಬೀಸುತ್ತಿರುವುದಕ್ಕೆ ಸಂಕೇತ. ಅದರಲ್ಲೂ ವಿಜ್ಞಾನ ಕ್ಷೇತ್ರದಲ್ಲಿ ಕಲೈಸೆಲ್ವಿ ಅವರ ಸಾಧನೆ ಹೊಸ ಪೀಳಿಗೆಯ ಮಹಿಳಾ ವಿಜ್ಞಾನ ಹೊಸ ಆಶಾಕಿರಣ ಮೂಡಿಸಬಲ್ಲದು. ಸಂಶೋಧನಾ ಸಂಸ್ಥೆಗಳಲ್ಲಿ ಹೊಸ ಚೈತನ್ಯ ಕಾಣಬಹುದು ಎಂಬ ಅಪೇಕ್ಷೆ ವಿಜ್ಞಾನ ವಲಯದ್ದು.

ಕಡಿಮೆ ತೂಕ ಅಂಡಾಣು ಉತ್ಪತ್ತಿಗೆ ಅಡ್ಡಿ

ಸ್ಪಂದನ



ಡಾ. ವೀಣಾ ಎಸ್. ಭಟ್

• ವಯಸ್ಸು 35, ತೂಕ 38 ಕೆ.ಜಿ. ಎಲ್ಲರೂ ಸಣಕಲಿ ಎಂದು ಆಡಿಕೊಳ್ಳುತ್ತಾರೆ. ಮದುವೆಯಾಗಿದೆ. ಮಕ್ಕಳಾಗಿಲ್ಲ. ಮಕ್ಕಳಾಗುವುದಕ್ಕೆ ವೈದ್ಯರಲ್ಲಿ ಚಿಕಿತ್ಸೆ ಪಡೆಯುತ್ತಿದ್ದೇನೆ. ಮಕ್ಕಳು ಆಗದೇ ಇರುವುದಕ್ಕೆ ತೂಕ ಕಾರಣವಿರಬಹುದಾ? ಮಕ್ಕಳಾಗಲು ಇಂತಿಷ್ಟೆ ತೂಕವಿರಬೇಕಾ? ಎಷ್ಟೇ ತಿಂದರೂ ದಪ್ಪಗಾಗುತ್ತಿಲ್ಲ. ಇದು ಅನಾರೋಗ್ಯದ ಸಂಕೇತವೇ?
ಸಂಗೀತಾ, ಊರು ತಿಳಿಸಿಲ್ಲ

ಸಂಗೀತಾ ಅವರೇ, ಮಕ್ಕಳಾಗಲೂ ಇಷ್ಟೇ ತೂಕವಿರಬೇಕೆಂಬ ನಿಯಮವಿಲ್ಲ. ನಿಮ್ಮ ಎತ್ತರ ಎಷ್ಟೆಂದು ತಿಳಿಸಿಲ್ಲ. ಒಬ್ಬ ವ್ಯಕ್ತಿಯ ಎತ್ತರಕ್ಕೆ ತಕ್ಕ ಹಾಗೇ ತೂಕ ಇದೆಯೇ ಎಂದು ನೋಡಲು ಬಿಎಂಐ (ಬಾಡಿ ಮಾಸ್ ಇಂಡೆಕ್ಸ್) ಸೂಚಿಯನ್ನು ಬಳಸಲಾಗುತ್ತದೆ. ಆರೋಗ್ಯವಂತ ಶರೀರದ ಬಿಎಂಐ 20 ರಿಂದ 25ರವರೆಗೆ ಇರಬಹುದು. ಇಂಥವರಲ್ಲಿ ಸಂತಾನೋತ್ಪತ್ತಿ ಕ್ರಿಯೆ ಸೇರಿದಂತೆ ದೇಹದ ಎಲ್ಲ ಪ್ರಮುಖ ಕ್ರಿಯೆಗಳು ಸರಾಗವಾಗಿ ನಡೆಯುತ್ತವೆ.

ಬಿಎಂಐ 18.5 ಕ್ಕಿಂತ ಕಡಿಮೆ ಇದ್ದರೆ ಕೃಶದೇಹ ಎನಿಸಿಕೊಳ್ಳುತ್ತದೆ. ಈ ತೂಕವಿದ್ದವರಿಗೆ ದೇಹದಲ್ಲಿ ಪ್ರಮುಖ ಕ್ರಿಯೆಗಳಾದ ಉಸಿರಾಟ, ಜೀರ್ಣಕ್ರಿಯೆಗೆ ಹೆಚ್ಚಿನ ಶಕ್ತಿ ವ್ಯಯವಾಗಿ ಸಂತಾನೋತ್ಪತ್ತಿ ಕ್ರಿಯೆಗೆ ಕೊನೆಯ ಪ್ರಾಮುಖ್ಯ ಸಿಗುತ್ತದೆ. (ಉದಾಹರಣೆ: ನೀರಿನ ಕೊರತೆಯಿದ್ದಾಗ ಕುಡಿಯಲು ಮೊದಲು ಆದ್ಯತೆ ಕೊಟ್ಟು, ಸ್ನಾನಕ್ಕೆ ಕೊನೆಯ ಆದ್ಯತೆಯನ್ನಾಗಿ ಪರಿಗಣಿಸುತ್ತೇವಲ್ಲ ಹಾಗೆ). ಕಡಿಮೆ ತೂಕವಿದ್ದಾಗ ಹಾರ್ಮೋನ್‌ಗಳಲ್ಲಿ ಅಸಮತೋಲನ ಉಂಟಾಗುತ್ತದೆ. ಇದರಿಂದ ಅಂಡಾಣು ಉತ್ಪತ್ತಿಯಾಗುವುದಕ್ಕೆ ಅಡ್ಡಿಯಾಗಬಹುದು. ಹಾಗಾಗಿ ಗರ್ಭಧಾರಣೆಗೆ ಹೆಚ್ಚಿನ ಸಮಯ ಬೇಕಾಗಬಹುದು.

ಮೊದಲಿಗೆ ಈ ಬಗ್ಗೆ ಚಿಂತೆ ಮಾಡುವುದನ್ನು ಬಿಡಿ. ಶರ್ಕರಪಿಷ್ಟ ಜತೆಗೆ ಅಕ್ಕಿ, ಗೋಧಿ, ರಾಗಿ, ಜೋಳ , ಪ್ರೋಟಿನ್‌ಯುಕ್ತ ಬೇಳೆಕಾಳು, ಕೊಬ್ಬು ಇರುವ ಬಾದಾಮಿ, ಶೇಂಗಾ, ಎಳ್ಳು ಸೇವಿಸಿ. ಖನಿಜ, ವಿಟಮಿನ್ ಹೇರಳವಾಗಿರುವ ಹಸಿರುಸೊಪ್ಪು, ತರಕಾರಿ ಹೆಚ್ಚು ಸೇವಿಸಿ. ಸಂತುಲಿತ ಆಹಾರದಿಂದ ದೇಹಾರೋಗ್ಯ ಉತ್ತಮಗೊಂಡು ಮಗು ಪಡೆಯಲು ಸಹಾಯವಾಗುತ್ತದೆ.

• ವಯಸ್ಸು 21. ಪತಿಗೆ 28 ವರ್ಷ. ಮದುವೆಯಾಗಿ ಎರಡು ವರ್ಷಗಳಾಗಿವೆ. ಮಕ್ಕಳಾಗಿಲ್ಲ. ಒಂದು ಬಾರಿ ಗರ್ಭಪಾತವಾಗಿತ್ತು. ನಿಶ್ಯಕ್ತಿಯ ಕಾರಣದಿಂದ ಗರ್ಭಪಾತವಾಗಿದೆ ಎಂದು ವೈದ್ಯರು ಹೇಳಿದ್ದರು. ಇದಾಗಿ ಒಂದೂವರೆ ವರ್ಷವಾದರೂ ಮಕ್ಕಳಾಗಿಲ್ಲ. ಪತಿಗೂ ಯಾವುದೇ ಸಮಸ್ಯೆ ಇಲ್ಲ. ಈಗ ಮಕ್ಕಳಾಗಿಲ್ಲವೆಂದರೆ ಇನ್ನು ಮಕ್ಕಳು ಆಗುವುದೇ ಇಲ್ಲ ಎಂದು ಕುಟುಂಬದ ಸದಸ್ಯರು ಹೇಳುತ್ತಿದ್ದಾರೆ. ಮುಂದಿನ ಭವಿಷ್ಯದ ಬಗ್ಗೆ ಆತಂಕ ಉಂಟಾಗಿದೆ. ದಯಾಮಾಡಿ ಪರಿಹಾರ ಹೇಳಿ.
ಹೆಸರು, ಊರು ತಿಳಿಸಿಲ್ಲ

ನಿಮಗಿನ್ನು 21 ವರ್ಷವಷ್ಟೆ. ನಿಮಗೆ ರಕ್ತಹೀನತೆ ಅಥವಾ ಅಪೌಷ್ಟಿಕತೆ ಇರಬಹುದು. ವೈದ್ಯರ ಸಲಹೆಯ ಮೇರೆಗೆ ಹೆಚ್ಚು ಹಸಿರು ಸೊಪ್ಪು, ತರಕಾರಿ, ಮೊಳಕೆಕಾಳು ಸೇವಿಸಬೇಕು. ಪ್ರತಿ ತಿಂಗಳು ಅಂಡಾಣು ಬಿಡುಗಡೆಯಾಗಲು ವೈದ್ಯರ ಸಲಹೆಯ ಮೇರೆಗೆ ಮಾತ್ರೆಗಳನ್ನು ಸೇವಿಸಿ. ತಿಂಗಳಿಗೊಮ್ಮೆ ಸರಿಯಾಗಿ ಮುಟ್ಟಾಗುತ್ತೀರಾ ಎಂದಾದರೆ ಮುಟ್ಟಾದ ದಿನದಿಂದ 8 ರಿಂದ 18 ದಿನದೊಳಗೆ (ಋತುಫಲಪ್ರದ ದಿನಗಳು) ಪತಿಯೊಡನೆ ನಿಯಮಿತವಾಗಿ ಲೈಂಗಿಕ ಸಂಪರ್ಕ ಮಾಡಿ. ಖಂಡಿತವಾಗಿಯೂ 6 ತಿಂಗಳ ಒಳಗೆ ಗರ್ಭಧಾರಣೆಯಾಗುತ್ತದೆ. ಆಗದೇ ಇದ್ದಲ್ಲಿ ಮತ್ತೊಮ್ಮೆ ತಜ್ಞವೈದ್ಯರ ಸಲಹೆ ಪಡೆಯಿರಿ.

• 45 ವರ್ಷ. ಅಂಡಾಶಯದಲ್ಲಿ 5.7 ಸೆಂ.ಮೀ ಗಾತ್ರದ ನೀರಿನ ಗುಳ್ಳೆ ಇದೆ. ಅದು ಎಷ್ಟು ಗಾತ್ರದವರೆಗೆ ಇರಬಹುದು. ಯಾವಾಗ ಸರ್ಜರಿ ಮಾಡಿಸಬೇಕು. ಮುಟ್ಟಿನ ವೇಳೆ ತುಂಬಾ ಹೊಟ್ಟೆ ನೋವು ಇರುತ್ತದೆ. ಗರ್ಭಕೋಶ ದಪ್ಪ ಆಗಿದೆ ಎಂದು ವೈದ್ಯರು ಹೇಳಿದ್ದಾರೆ. ಇದನ್ನು ತಪ್ಪಿಸಲು ಏನು ಮಾಡಬೇಕು?
ಹೆಸರು, ಊರು ತಿಳಿಸಿಲ್ಲ

ಗರ್ಭಕೋಶ ದಪ್ಪಗಿದ್ದರೆ ಏನೂ ತೊಂದರೆ ಇಲ್ಲ. ಅಂಡಾಶಯದಲ್ಲಿ 5.7 ಸೆಂ.ಮೀ ನೀರು ಗುಳ್ಳೆ ಇರುವುದು ಅಪಾಯಕಾರಿ ಅಲ್ಲ. ಈ ಗುಳ್ಳೆ 8 ಸೆಂ.ಮೀಗಿಂತ ದೊಡ್ಡದಿದ್ದರೆ , ಗುಳ್ಳೆ ಏನಾದರೂ ತಿರುಚಿಕೊಂಡು ತೀವ್ರತರದ ಹೊಟ್ಟೆ ನೋವು ಉಂಟು ಮಾಡಿದರೆ ಆಗ ವೈದ್ಯರು ಶಸ್ತ್ರಚಿಕಿತ್ಸೆ ಮಾಡಲು ಹೇಳುತ್ತಾರೆ. ಅಲ್ಲಿಯವರೆಗೆ ಶಸ್ತ್ರಚಿಕಿತ್ಸೆ ಬೇಡ. ಮುಟ್ಟಿನ ಸಮಯದಲ್ಲಿ ಹೊಟ್ಟೆ ನೋವು ಬರುತ್ತಿದ್ದರೆ, ಅದು ಗರ್ಭಕೋಶದಲ್ಲಿ ಏನಾದರೂ ಸೋಂಕು ಉಂಟಾಗಿದ್ದರೂ ಹೀಗೆ ನೋವು ಬರಬಹುದು. ತಜ್ಞ ವೈದ್ಯರನ್ನು ಸಂಪರ್ಕಿಸಿದರೆ, ಆ್ಯಂಟಿ ಬಯಾಟಿಕ್‌ಗಳನ್ನು ಕೊಡುತ್ತಾರೆ. ಎಂಡೋಮೆಟ್ರಿಯೋಸಿಸ್ ಮತ್ತು ಅಡಿನೋಮಯೋಸಿಸ್ ಕಾರಣಗಳಿಂದಲೂ ಮುಟ್ಟಾಗುವ ಸಂದರ್ಭದಲ್ಲಿ ಹೊಟ್ಟೆ ನೋವು ಬರಬಹುದು. ಸ್ಕ್ಯಾನಿಂಗ್‌ನಿಂದ ಇದನ್ನು ಪತ್ತೆ ಹಚ್ಚಿ ಚಿಕಿತ್ಸೆ ನೀಡಬಹುದು.

ಸ್ಪಂದನ

ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳಿಂದ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ.ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು

ತ್ರಿವರ್ಣದ ಮೊಮೋಸ್

ನಳಪಾಕ

ಚಂದ್ರಕಲಾ ಮಂಜುನಾಥ್

ಕಣಕ ತಯಾರಿಕೆ:

ಬೇಕಾಗುವ ಸಾಮಗ್ರಿಗಳು: ಮೈದಾ ಹಿಟ್ಟು - 1 ಕಪ್ ಉಪ್ಪು - ರುಚಿಗೆ ತಕ್ಕಷ್ಟು.ಪಾಲಕ್ ಸೊಪ್ಪು - 7 ರಿಂದ 8 ಎಲೆಗಳು ಕ್ಯಾರೆಟ್ - 1

ಮೈದಾ ಹಿಟ್ಟಿಗೆ ರುಚಿಗೆ ತಕ್ಕಷ್ಟು ಉಪ್ಪು ಸೇರಿಸಿ 3 ಭಾಗ ಮಾಡಿಕೊಳ್ಳಿ. ಪಾಲಕ್ ಸೊಪ್ಪು ಮತ್ತು ಕ್ಯಾರೆಟ್ ಅನ್ನು ಪ್ರತ್ಯೇಕವಾಗಿ ರುಬ್ಬಿಟ್ಟುಕೊಳ್ಳಬೇಕು. ಒಂದು ಮೈದಾ ಹಿಟ್ಟಿನ ಭಾಗಕ್ಕೆ ರುಬ್ಬಿದ ಕ್ಯಾರೆಟ್ ಸೇರಿಸಿ ಚಪಾತಿ ಹಿಟ್ಟಿನ ಹದಕ್ಕೆ ಕಲಸಿಕೊಳ್ಳಬೇಕು. ಇನ್ನೊಂದು ಮೈದಾ ಹಿಟ್ಟಿನ ಭಾಗಕ್ಕೆ ರುಬ್ಬಿದ ಪಾಲಕ್ ಸೊಪ್ಪಿನ ರಸ ಸೇರಿಸಿ ಚಪಾತಿ ಹಿಟ್ಟಿನ ಹದಕ್ಕೆ ಕಲಸಿಕೊಳ್ಳಬೇಕು. ಮತ್ತೊಂದು ಭಾಗವನ್ನು ಹಾಗೆಯೇ ಚಪಾತಿ ಹಿಟ್ಟಿನ ಹದಕ್ಕೆ ಕಲೆಸಿಟ್ಟುಕೊಳ್ಳಬೇಕು. ಮೂರು ಬಣ್ಣಗಳ ಹಿಟ್ಟು ಸಿದ್ಧವಾಯಿತು.

ಸ್ಟಫಿಂಗ್ ತಯಾರಿಕೆಗೆ

ಬೇಕಾಗುವ ಸಾಮಗ್ರಿಗಳು

ಈರುಳ್ಳಿ - 1, ಬೆಳ್ಳುಳ್ಳಿ - 1 ಪೂರ್ತಿ ಬೀನ್ಸ್ - 100 ಗ್ರಾಂ , ಕ್ಯಾರೆಟ್ - 100 ಗ್ರಾಂ ಬಟಾಣಿ - 100 ಗ್ರಾಂ, ಆಲೂಗಡ್ಡೆ - 1 (ಹೂಕೋಸು, ಬ್ರೊಕೋಲಿ ನಿಮಗೆ ಅಗತ್ಯವೆನಿಸುವ ತರಕಾರಿಗಳನ್ನೂ ಬಳಸಬಹುದು). ಅಡುಗೆ ಎಣ್ಣೆ - 2 ಟೇಬಲ್ ಚಮಚ ಸೋಯಾ ಸಾಸ್ - ಒಂದು ಚಮಚ ರುಚಿಗೆ ತಕ್ಕಷ್ಟು ಉಪ್ಪು.

ತಯಾರಿಸುವ ವಿಧಾನ : ಈರುಳ್ಳಿ, ಬೆಳ್ಳುಳ್ಳಿ, ತರಕಾರಿಗಳೆಲ್ಲವನ್ನೂ ಸಣ್ಣಗೆ ಹೆಚ್ಚಿಟ್ಟುಕೊಳ್ಳಿ. ಬಾಣಲೆಗೆ ಎಣ್ಣೆ ಹಾಕಿ. ಎಣ್ಣೆ ಕಾದ ನಂತರ ಸಣ್ಣಗೆ ಹೆಚ್ಚಿದ ಈರುಳ್ಳಿ, ಬೆಳ್ಳುಳ್ಳಿಯನ್ನು ಹುರಿದುಕೊಳ್ಳಿ. ನಂತರ ಸಣ್ಣಗೆ ಹೆಚ್ಚಿಟ್ಟುಕೊಂಡ ತರಕಾರಿಗಳನ್ನು ಹಾಕಿ. ರುಚಿಗೆ ತಕ್ಕಷ್ಟು ಉಪ್ಪು, ಗರಂ ಮಸಾಲೆ, ಅಚ್ಚಖಾರದ ಪುಡಿ ಹಾಕಿ ಹುರಿದು, ಸ್ವಲ್ಪ ನೀರು ಚಿಮುಕಿಸಿ ತರಕಾರಿಗಳನ್ನು ಬೇಯಿಸಿಕೊಳ್ಳಿ. ಅವು ಬೆಂದ ನಂತರ ಒಂದು ಚಮಚ ಸೋಯಾ ಸಾಸ್ ಹಾಕಿ ಒಂದೆರಡು ನಿಮಿಷ ಹುರಿದುಕೊಂಡರೆ ಸ್ಟಫಿಂಗ್ ಸಿದ್ಧ.



ಮೊಮೋಸ್ ತಯಾರಿ

ಈಗ ಕಲೆಸಿಟ್ಟುಕೊಂಡ ಹಿಟ್ಟನ್ನು ಪೂರಿಯಷ್ಟು ಅಗಲದಲ್ಲಿ ಗುಂಡಗೆ, ತೆಳ್ಳಗೆ ಲಟ್ಟಿಸಿಕೊಳ್ಳಿ. ಕೇಸರಿ, ಬಿಳಿ, ಹಸಿರು ಮೂರು ಬಣ್ಣಗಳ ಸಿದ್ಧವಾಗುತ್ತವೆ. ಲಟ್ಟಿಸಿಕೊಂಡ ಕಣಕದೊಳಗೆ ತಯಾರಿಸಿಕೊಂಡ ತರಕಾರಿ ಮಿಶ್ರಣವನ್ನು ಎರಡು ಚಮಚ ಹಾಕಿ ಮೋದಕದ ಆಕಾರದಲ್ಲಿ ಮಡಚಿಕೊಳ್ಳಿ. ಈಗ ಮಡಚಿಟ್ಟುಕೊಂಡ ಮೊಮೋಸ್‌ಗಳನ್ನು ಇಡ್ಲಿ ಪಾತ್ರೆಯಲ್ಲಿಟ್ಟು ಹಬೆಯಲ್ಲಿ 20 ನಿಮಿಷಗಳ ಕಾಲ ಬೇಯಿಸಿಕೊಳ್ಳಿ.

ಮೊಮೋಸ್ ಚಟ್ನಿ

ಬೇಕಾಗುವ ಸಾಮಗ್ರಿಗಳು: ಒಣಮೆಣಸಿನಕಾಯಿ - 10 ರಿಂದ 12, ಟೊಮೊಟೊ - 1 ಮೀಡಿಯಂ ಗಾತ್ರದ್ದು, ಬೆಳ್ಳುಳ್ಳಿ - 7 ರಿಂದ 8 ಎಸಳುಗಳು, ಶುಂಠಿ - ಅರ್ಧ ಇಂಚು, ಅಡುಗೆಎಣ್ಣೆ - 2 ಚಮಚ, ಸಕ್ಕರೆ - 1 ಚಮಚ ಸೋಯಾ ಸಾಸ್ - 1 ಚಮಚ, ವಿನೇಗರ್ - ಅರ್ಧ ಚಮಚ, ಉಪ್ಪು - ರುಚಿಗೆ ತಕ್ಕಷ್ಟು.


ತಯಾರಿಸುವ ವಿಧಾನ: ಬ್ಯಾಡಗಿ ಮೆಣಸಿನಕಾಯಿ ಮತ್ತು ಟೊಮೆಟೊವನ್ನು ಒಂದು ಕಪ್ ನೀರು ಹಾಕಿ ಬೇಯಿಸಿಕೊಳ್ಳಿ. ಬೆಂದ ನಂತರ ಟೊಮೆಟೊ ಸಿಪ್ಪೆ ತೆಗೆದು, ಬೆಂದ ಮೆಣಸಿನಕಾಯಿಯ ಜೊತೆ ರುಬ್ಬಿಕೊಳ್ಳಿ.

ಒಗ್ಗರಣೆಗೆ ಎರಡು ಚಮಚ ಎಣ್ಣೆ ಹಾಕಿ ಸಣ್ಣಗೆ ಹೆಚ್ಚಿದ ಬೆಳ್ಳುಳ್ಳಿ, ಸಣ್ಣಗೆ ಹೆಚ್ಚಿದ ಶುಂಠಿ ಸೇರಿಸಿ ಹುರಿಯಿರಿ. ನಂತರ ರುಬ್ಬಿಟ್ಟುಕೊಂಡ ಒಣಮೆಣಸಿನಕಾಯಿ ಮತ್ತು ಟೊಮೆಟೊ ಪೇಸ್ಟ್ ಹಾಕಿ ಸ್ವಲ್ಪ ಕುದಿಸಿ. ಕುದಿಯುವಾಗ ರುಚಿಗೆ ತಕ್ಕಷ್ಟು ಉಪ್ಪು, ಅರ್ಧ ಚಮಚ ಸಕ್ಕರೆ ಸೇರಿಸಿ ಕುದಿಸಿ. ಕೊನೆಯಲ್ಲಿ ಒಂದು ಚಮಚ ಸೋಯಾಸಾಸ್, ಅರ್ಧ ಚಮಚ ವಿನೇಗರ್ ಸೇರಿಸಿ ಒಂದೆರಡು ನಿಮಿಷ ತಿರುಗಿಸಿ ಸ್ಟವ್ ಆರಿಸಿ. ಮೊಮೋಸ್ ಚಟ್ನಿ ಸವಿಯಲು ಸಿದ್ಧ.

ಒಂದು ಚಂದದ ಸ್ಟೀಲ್ ಟ್ರೇನಲ್ಲಿ ಕೇಸರಿ, ಬಿಳಿ, ಹಸಿರು ಬಣ್ಣಗಳ ಮೊಮೋಸ್‌ಗಳನ್ನು ಅಲಂಕರಿಸಿ, ಬಣ್ಣದ ಚಟ್ನಿಗಳನ್ನು ಅದರ ಎದುರು ಜೋಡಿಸಿ. ಈಗ ತ್ರಿವರ್ಣದ ಮೊಮೋಸ್ ಸವಿಯಲು ಸಿದ್ಧ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ಒಬ್ಬರು ಮತ್ತೊಬ್ಬರನ್ನು ತುಳಿದು ಬದುಕಬಾರದು, ತಿಳಿದು ಬದುಕಬೇಕು.

-ದ.ರಾ. ಬೇಂದ್ರೆ

ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಲು ಲೋಕಾಯುಕ್ತ ಸಂಸ್ಥೆಯನ್ನು ಬಲಪಡಿಸಿ

ಮುಖ್ಯಮಂತ್ರಿಗೆ ಉತ್ತರದಾಯಿಯಾಗಿದ್ದ ಭ್ರಷ್ಟಾಚಾರ ನಿಗ್ರಹ ದಳವನ್ನು (ಎಸಿಬಿ) ರದ್ದುಗೊಳಿಸಿ ಹೈಕೋರ್ಟ್ ವಿಭಾಗೀಯ ಪೀಠ ಮಹತ್ವದ ಆದೇಶ ನೀಡಿದೆ. ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ದಾಖಲಾಗಿರುವ ಎಲ್ಲ ಪ್ರಕರಣಗಳ ತನಿಖೆಯನ್ನು ಲೋಕಾಯುಕ್ತ ಪೊಲೀಸರಿಗೆ ವರ್ಗಾವಣೆ ಮಾಡಲು ಸೂಚಿಸಿದೆ. ಲೋಕಾಯುಕ್ತ ಪೊಲೀಸರಿಗೆ ಎಫ್‌ಐಆರ್ ದಾಖಲಿಸಿ, ತನಿಖೆ ನಡೆಸುವ ಅಧಿಕಾರವನ್ನು ಪುನಃ ನೀಡಿದೆ. ನ್ಯಾಯಮೂರ್ತಿಗಳಾದ ಬಿ.ವೀರಪ್ಪ ಮತ್ತು ಕೆ.ಎಸ್. ಹೇಮಲೇಖಾ ಅವರಿದ್ದ ವಿಭಾಗೀಯ ಪೀಠ ನೀಡಿರುವ ಈ ಆದೇಶವು ರಾಜ್ಯದಲ್ಲಿ ಸಂಚಲನ ಮೂಡಿಸಿದೆ. ರಾಮಕೃಷ್ಣ ಹೆಗಡೆ ನೇತೃತ್ವದ ಸರ್ಕಾರವು 1984ರಲ್ಲಿ ರೂಪಿಸಿದ್ದ ಕರ್ನಾಟಕ ಲೋಕಾಯುಕ್ತ ಕಾಯ್ದೆಯು ದೇಶಕ್ಕೆ ಮಾದರಿಯನ್ನು ಹಾಕಿಕೊಟ್ಟಿತ್ತು. ಆಡಳಿತಾಂಗದಲ್ಲಿ, ಶಾಸಕಾಂಗದಲ್ಲಿ ಇರುವ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕುವುದು ಹಾಗೂ ಜನರ ಬವಣೆ ಹೆಚ್ಚಿಸುವ ದುರಾಡಳಿತಕ್ಕೆ ಲಗಾಮು ಹಾಕುವುದು ಲೋಕಾಯುಕ್ತ ಸ್ಥಾಪನೆಯ ಹಿಂದಿದ್ದ ಸದಾಶಯ. ನ್ಯಾಯಮೂರ್ತಿ ಎನ್. ವೆಂಕಟಾಚಲ ಅವರು ಲೋಕಾಯುಕ್ತ ರಾಗುವವರೆಗೆ ಇಂತಹದೊಂದು ವ್ಯವಸ್ಥೆ ಇದೆ ಎಂಬುದೇ ಅನೇಕರಿಗೆ ತಿಳಿದಿರಲಿಲ್ಲ. ಜನರ ಸಂಕಷ್ಟ ನಿವಾರಣೆಗೆ ಸ್ಪಂದಿಸಬೇಕಾದ ಸರ್ಕಾರಿ ಸಂಸ್ಥೆಗಳಲ್ಲಿ ತುಂಬಿದ್ದ ಭ್ರಷ್ಟಾಚಾರವನ್ನು, ಭ್ರಷ್ಟರನ್ನು ವೆಂಕಟಾಚಲ ಅವರು ಬಯಲಿಗೆ ತಂದು ನಿಲ್ಲಿಸಿದ್ದರು. ನ್ಯಾಯಮೂರ್ತಿ ಸಂತೋಷ ಹೆಗ್ಡೆ ಅವರು ಲೋಕಾಯುಕ್ತರಾದ ಬಳಿಕ, ಕಾಯ್ದೆಯ ನೈಜಶಕ್ತಿಯ ದರ್ಶನವಾಯಿತು. ಅಕ್ರಮಗಳ ಬೆನ್ನುಹತ್ತಿದ ಲೋಕಾಯುಕ್ತ ತನಿಖಾ ತಂಡವು ಹೆಗ್ಡೆ ಅವರ ಮಾರ್ಗದರ್ಶನದಲ್ಲಿ ಭ್ರಷ್ಟರ ಪಾಲಿಗೆ ದುಃಸ್ವಪ್ನದ ರೀತಿ ಕಾಡಿತ್ತು. ಹೀಗಾಗಿ, ಅಂದು ಮುಖ್ಯಮಂತ್ರಿ ಯಾಗಿದ್ದವರು ಮತ್ತು ಸಚಿವರಾಗಿದ್ದವರು ಜೈಲಿನ ಕಂಬಿ ಎಣಿಸಬೇಕಾಯಿತು. ಸಂತೋಷ ಹೆಗ್ಡೆಯವರ ನಂತರ 2013ರಲ್ಲಿ ನ್ಯಾಯಮೂರ್ತಿ ಭಾಸ್ಕರರಾವ್ ಅವರು ಈ ಹುದ್ದೆಗೆ ಬಂದರು. ಅವರ ಅವಧಿಯಲ್ಲಿ ಲೋಕಾಯುಕ್ತ ಸಂಸ್ಥೆಯ ಮೇಲಿನ ಗೌರವಕ್ಕೆ ದೊಡ್ಡ ರೀತಿಯಲ್ಲಿ ಧಕ್ಕೆಯಾಯಿತು. ಭಾಸ್ಕರರಾವ್ ಪುತ್ರ ಅಶ್ವಿನ್ ರಾವ್ ಅವರು ಲೋಕಾಯುಕ್ತ ಕಚೇರಿ ಮತ್ತು ಅಧಿಕೃತ ನಿವಾಸವನ್ನೇ ಅಕ್ರಮಗಳಿಗೆ ಬಳಸಿಕೊಂಡ ಆರೋಪಕ್ಕೆ ಗುರಿಯಾದರು. ಭ್ರಷ್ಟಾಚಾರವನ್ನು ನಿಗ್ರಹಿಸಲು ಸ್ಥಾಪನೆಯಾದ ಸಂಸ್ಥೆಯೇ ಭ್ರಷ್ಟಾಚಾರದ ಆರೋಪಕ್ಕೆ ಒಳಗಾಗುವಂತಹ ಸನ್ನಿವೇಶವು ಆಗ ಸೃಷ್ಟಿಯಾಗಿತ್ತು.



ಎಸಿಬಿಯನ್ನು ರದ್ದುಪಡಿಸಿದ ಹೈಕೋರ್ಟ್ ನ್ಯಾಯಪೀಠವು ಲೋಕಾಯುಕ್ತ ಬಲವರ್ಧನೆಗೆ ನೀಡಿರುವ ಸಲಹೆಗಳನ್ನು ಸರ್ಕಾರವು ಪರಿಗಣಿಸಬೇಕು

ಆಗ ಅಸ್ತಿತ್ವದಲ್ಲಿದ್ದ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ವಿರುದ್ಧ ಭ್ರಷ್ಟಾಚಾರದ ಆರೋಪಗಳು ಕೇಳಿಬಂದಿದ್ದವು. ಲೋಕಾಯುಕ್ತಕ್ಕೆ ಅಂಟಿದ್ದ ಕಳಂಕವನ್ನೇ ಮುಂದಿಟ್ಟುಕೊಂಡು, ಅದಕ್ಕಿದ್ದ ಪೊಲೀಸ್ ಬಲವನ್ನು ಕಸಿದುಕೊಳ್ಳಲಾಯಿತು. ಲೋಕಾಯುಕ್ತಕ್ಕೆ ಪರ್ಯಾಯವಾಗಿ ಎಸಿಬಿಯನ್ನು ರಚಿಸಲಾಯಿತು. ಸದನದಲ್ಲಿ ಚರ್ಚೆಯನ್ನೂ ಮಾಡದೆ ಕೇವಲ ಒಂದು ಅಧಿಸೂಚನೆ ಮೂಲಕ ಇದನ್ನು ಸ್ಥಾಪಿಸಿದ್ದು ಸಾರ್ವಜನಿಕರ ಆಕ್ರೋಶಕ್ಕೂ ಕಾರಣವಾಗಿತ್ತು. ಲೋಕಾಯುಕ್ತರ ವಿರುದ್ಧವೇ ಭ್ರಷ್ಟಾಚಾರದ ಆರೋಪಗಳಿದ್ದ ಹೊತ್ತಿನಲ್ಲಿ, ಎಸಿಬಿ ರಚನೆಯ ಹಿಂದಿದ್ದ ರಾಜಕೀಯ ಲೆಕ್ಕಾಚಾರವು ಹೆಚ್ಚು ಚರ್ಚೆಗೆ ಬರಲಿಲ್ಲ. ಶೋಧ- ಟ್ರ್ಯಾಪ್- ದಾಳಿಯ ಅಧಿಕಾರವನ್ನು ಲೋಕಾಯುಕ್ತದಿಂದ ಕಿತ್ತುಕೊಂಡು ಅದನ್ನು ಹಲ್ಲಿಲ್ಲದ ಹಾವಿನಂತಾಗಿಸಿದ್ದು ಸಿದ್ದರಾಮಯ್ಯ ನೇತೃತ್ವದ ಸರ್ಕಾರದ ಕೊಡುಗೆ. ಸರ್ಕಾರದ ಮೂಗಿನಡಿಯೇ ಕೆಲಸ ಮಾಡುವ ಎಸಿಬಿ, ಸರ್ಕಾರಕ್ಕೆ ಆಗದವರ ವಿರುದ್ಧವಷ್ಟೇ ಕತ್ತಿ ಮಸೆಯುತ್ತದೆ ಎಂಬುದು ರಹಸ್ಯವಾಗಿ ಉಳಿದಿಲ್ಲ. ಜಮೀರ್ ಅಹಮದ್ ಖಾನ್ ಅವರನ್ನು ಬಿಟ್ಟರೆ, ಆರು ವರ್ಷಗಳಲ್ಲಿ ಶಾಸಕ-ಸಚಿವರ ಪೈಕಿ ಯಾರೊಬ್ಬರನ್ನೂ ವಿಚಾರಣೆಗೆ ಒಳಪಡಿಸಿದ ನಿದರ್ಶನವೇ ಇಲ್ಲ. ಆಳುವ ಪಕ್ಷದ ತೊತ್ತಿನಂತೆ ಕೆಲಸ ಮಾಡುತ್ತಿದ್ದ ಎಸಿಬಿಯನ್ನು ರದ್ದು ಪಡಿಸಬೇಕು ಎಂಬ ಕೂಗಿಗೆ ಹೈಕೋರ್ಟ್, ನ್ಯಾಯದ ಠಸ್ಸೆ ಒತ್ತಿದೆ. ಇದು, ಜನರ ಆಶೋತ್ತರಗಳಿಗೆ ಸಂದ ಜಯವೂ ಹೌದು. 2018ರ ವಿಧಾನಸಭೆ ಚುನಾವಣೆಯ ವೇಳೆ ವಿರೋಧ ಪಕ್ಷವಾಗಿದ್ದ ಬಿಜೆಪಿ ಮತ್ತು ಜೆಡಿಎಸ್ ನಾಯಕರು ತಮ್ಮ ಪಕ್ಷದ ಪ್ರಣಾಳಿಕೆಯಲ್ಲಿ, ತಾವು ಅಧಿಕಾರಕ್ಕೆ ಬಂದರೆ 24 ಗಂಟೆಗಳಲ್ಲಿ ಎಸಿಬಿ ರದ್ದುಪಡಿಸಿ, ಲೋಕಾಯುಕ್ತ ಬಲಪಡಿಸುವ ವಾಗ್ದಾನ ನೀಡಿದ್ದರು. ಮೈತ್ರಿ ಸರ್ಕಾರದ ಮೂಲಕ ಜೆಡಿಎಸ್ ಒಂದು ವರ್ಷ, ಬಿಜೆಪಿಯು ಸ್ವತಂತ್ರವಾಗಿ ಮೂರು ವರ್ಷ ಆಳ್ವಿಕೆ ನಡೆಸಿದರೂ ಅದು ಕಾರ್ಯಗತ ವಾಗಲೇ ಇಲ್ಲ. ಕಾಮಗಾರಿ ಗುತ್ತಿಗೆಯಲ್ಲಿ ಶೇ 40ರಷ್ಟು ಕಮಿಷನ್, ನೇಮಕಾತಿಯಲ್ಲಿ ಭ್ರಷ್ಟಾಚಾರದಂತಹ ಆಪಾದನೆಗಳು ಬಿಜೆಪಿ ನೇತೃತ್ವದ ಸರ್ಕಾರವನ್ನು ಸುತ್ತಿಕೊಂಡಿವೆ. ಇಂತಹ ಹೊತ್ತಿನಲ್ಲಿ ಹೈಕೋರ್ಟ್ ಆದೇಶ ಹೊರಬಿದ್ದಿದೆ. ಆದರೆ, ಲೋಕಾಯುಕ್ತವನ್ನು ಬಲಪಡಿಸುವುದು ರಾಜ್ಯದ ಮೂರೂ ಪ್ರಬಲ ಪಕ್ಷಗಳಿಗೆ ಅಪಥ್ಯವಾಗಿರುವ ವಿಷಯ. ಎಸಿಬಿಯನ್ನು ರದ್ದುಪಡಿಸಿದ ನ್ಯಾಯಪೀಠವು ಲೋಕಾಯುಕ್ತ ಬಲವರ್ಧನೆಗೆ ನೀಡಿರುವ ಸಲಹೆಗಳನ್ನು ಸರ್ಕಾರವು ಪರಿಗಣಿಸಬೇಕು. ಹೈಕೋರ್ಟ್ ಮುಖ್ಯನ್ಯಾಯಮೂರ್ತಿ ಯವರ ಜತೆ ಸಮಾಲೋಚಿಸಿ, ಲೋಕಾಯುಕ್ತ ಬಲಗೊಳಿಸುವ ದಿಸೆಯಲ್ಲಿ ಕಾರ್ಯಪ್ರವೃತ್ತವಾಗಲಿ. ಭ್ರಷ್ಟಾಚಾರ ನಿವಾರಣೆಗೆ ಸರ್ಕಾರ ಬದ್ಧ ಎಂದು ಹೇಳುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, ಲೋಕಾಯುಕ್ತಕ್ಕೆ ಬಲ ಕೊಟ್ಟು ತಮ್ಮ ಹಾಗೂ ಪಕ್ಷದ ಬದ್ಧತೆಯನ್ನು ಪ್ರದರ್ಶಿಸಲಿ.

ದಿನದ ಟ್ವೀಟ್

ಸಾಲದ ಶೂಲ



ಇದು ಆತಂಕಕಾರಿ ಸಂಗತಿ! ಕೇಂದ್ರ ಸರ್ಕಾರದ ಏರುತ್ತಿರುವ ಸಾಲ ಮತ್ತು ಬಡ್ಡಿ ಹೊರೆಯ ಬಗ್ಗೆ ಮಹಾಲೇಖಪಾಲರು ಕಳವಳ ವ್ಯಕ್ತಪಡಿಸಿದ್ದಾರೆ. ಕೇಂದ್ರ ಸರ್ಕಾರವು ಸಾಲಕ್ಕೆ ಕಟ್ಟುವ ಬಡ್ಡಿಯ ಮೊತ್ತವು 2021ನೇ ಹಣಕಾಸು ವರ್ಷದಲ್ಲಿ ₹ 6.80 ಲಕ್ಷ ಕೋಟಿ ಇದ್ದಿದ್ದು, 2022ನೇ ಹಣಕಾಸು ವರ್ಷದಲ್ಲಿ ₹ 8.05 ಲಕ್ಷ ಕೋಟಿಗೆ ಏರಿದೆ. 2022ನೇ ಹಣಕಾಸು ವರ್ಷದಲ್ಲಿ ಅದರ ಒಟ್ಟು ವರಮಾನದ ಶೇ 37ರಷ್ಟು ಬಡ್ಡಿ ಪಾವತಿಗೇ ಬಳಕೆಯಾಗುತ್ತದೆ!

ಕತ್ಯೂಷಾ, ಶಿಕ್ಷಕಿ

ಕಿಡಿನುಡಿ



ಭ್ರಷ್ಟಾಚಾರ ನಿಗ್ರಹ ದಳವನ್ನು (ಅಧಿಕಾರಕ್ಕೆ ಬಂದ) ತಕ್ಷಣವೇ ರದ್ದು-ಗೊಳಿಸುವುದಾಗಿ ಮತ್ತು ಲೋಕಾಯುಕ್ತಕ್ಕೆ ಇದ್ದ ಪ್ರಾಮುಖ್ಯವನ್ನು ಪುನಃ ಕಲ್ಪಿಸುವುದಾಗಿ ಈಗ ಆಡಳಿತದಲ್ಲಿರುವ ಬಿಜೆಪಿಯು 2018ರ ತನ್ನ ಪ್ರಣಾಳಿಕೆಯಲ್ಲಿ ಭರವಸೆ ನೀಡಿತ್ತು. ಈ ಸಂಬಂಧ ವಿಶ್ವಾಸ ಉಳಿಸಿಕೊಳ್ಳುವ ಮತ್ತು ಪ್ರಯೋಜನ ಪಡೆದುಕೊಳ್ಳುವ ಸುವರ್ಣಾ-ವಕಾಶವನ್ನು ಬಿಜೆಪಿಯವರು ಕಳೆದುಕೊಂಡರು. ನಮ್ಮ ವಿಶ್ವಾಸವನ್ನು ಹೈಕೋರ್ಟ್ ಮರುಸ್ಥಾಪಿಸಿದೆ ಮತ್ತು ಅಪವಿತ್ರ ಎಸಿಬಿಯನ್ನು ಮುಚ್ಚಲು ಆದೇಶಿಸಿದೆ.

ಭಾಸ್ಕರ್ ರಾವ್, ಎಎಪಿ ಮುಖಂಡ, ಮಾಜಿ ಪೊಲೀಸ್ ಅಧಿಕಾರಿ

25 ವರ್ಷಗಳ ಹಿಂದೆ

ಬುಧವಾರ, 13-8-1997

● **ಸೆಂಟ್ರಲ್ ಜೈಲ್‌ನಲ್ಲಿ ಸಿಡಿದೆದ್ದ ಕೈದಿಗಳ ದಾಂದಲೆ: ಧ್ವಂಸ**

ಬೆಂಗಳೂರು, ಆಗಸ್ಟ್ 12– ನಗರದ ಸೆಂಟ್ರಲ್ ಜೈಲಿನಲ್ಲಿ ಉದ್ರಿಕ್ತ ಕೈದಿಗಳ ಗುಂಪೊಂದು ಇಂದು ದಾಂದಲೆ ನಡೆಸಿ, ಒಳಭಾಗದ ಗೋಡೆ ಹಾಗೂ ಗೇಟನ್ನು ಒಡೆದುಹಾಕಿತು.

ಕಾರಾಗೃಹದಲ್ಲಿ ಒಟ್ಟು 2,337 ಕೈದಿಗಳಿದ್ದರು. ನೀಡುತ್ತಿರುವ ಆಹಾರದ ಗುಣಮಟ್ಟ ಹಾಗೂ ಅಸಮರ್ಪಕತೆಯ ವಿರುದ್ಧ ಕಾರಾಗೃಹದ ಎಡಭಾಗದ 'ಇ' ಬ್ಯಾರಕ್‌ನ ಸುಮಾರು 300 ಕೈದಿಗಳು ಬೆಳಗಿನ ಆಹಾರ ಬಹಿಷ್ಕರಿಸಿದರು. ನಂತರ ಮಧ್ಯಾಹ್ನ 12.15ರ ವೇಳೆಗೆ ದಾಂದಲೆ ಪ್ರಾರಂಭಿಸಿದರು. ಕಾರಾಗೃಹದ ಒಳಭಾಗದಲ್ಲಿ ಬ್ಯಾರಕ್‌ನ ಗೋಡೆಯನ್ನು ಕಲ್ಲಿನಿಂದ ಗುದ್ದಿ ಒಡೆದುಹಾಕಿ ಹೊರಬಂದು ತಪ್ಪಿಸಿಕೊಂಡು ಹೋಗಲು ಯತ್ನಿಸಿದರು. ಪೊಲೀಸರು ಈ ಯತ್ನವನ್ನು ವಿಫಲಗೊಳಿಸಿದರು.

● **ಗುಲ್ಶನ್ ಕುಮಾರ್ ಕಗ್ಗೊಲೆ**

ಮುಂಬೈ, ಆಗಸ್ಟ್ 12 (ಪಿಟಿಐ, ಯುಎನ್‌ಐ)– ಜನಪ್ರಿಯ 'ಟಿ ಸೀರೀಸ್' ಧ್ವನಿಸುರುಳಿ ತಯಾರಿಕೆ ಸಂಸ್ಥೆಯ ಮಾಲೀಕ ಹಾಗೂ ಚಿತ್ರ ನಿರ್ಮಾಪಕ ಗುಲ್ಶನ್ ಕುಮಾರ್ ಅವರನ್ನು ನಾಲ್ವರು ಅಪರಿಚಿತರು ಇಂದು ಹಾಡಹಗಲೇ ಗುಂಡಿಕ್ಕಿ ಕೊಂದಿದ್ದಾರೆ.

ಅಬು ಸಲೇಮ್ ಗುಂಪಿನ ಇಬ್ಬರು ಹಾಗೂ ಇತರ ಏಳು ಮಂದಿಯನ್ನು ಈ ಸಂಬಂಧ ಬಂಧಿಸಲಾಗಿದೆ.

50 ವರ್ಷಗಳ ಹಿಂದೆ

ಭಾನುವಾರ, 13-8-1972

● **13 ಲಕ್ಷ ರೂ. ವೆಚ್ಚದ ಸಮುದ್ರ ಸಮೀಕ್ಷೆಗೆ ಕೇಂದ್ರ ಒಪ್ಪಿಗೆ**

ಮಂಗಳೂರು, ಆಗಸ್ಟ್ 12– ಕುದುರೆಮುಖ ಕಬ್ಬಿಣ ಅದಿರು ಯೋಜನೆಗೆ ಪೂರಕವಾಗಿ ಮಂಗಳೂರು ಬೃಹತ್ ಬಂದರು ಸಮೀಪದಲ್ಲಿ ಸಮುದ್ರ ಸಮೀಕ್ಷೆ ನಡೆಸಲು ಭಾರತ ಸರ್ಕಾರ ಒಪ್ಪಿಗೆ ನೀಡಿದೆ.

13 ಲಕ್ಷ ರೂ. ವೆಚ್ಚದಲ್ಲಿ ಸಮೀಕ್ಷೆಯನ್ನು ಎರಡು ಹಂತಗಳಲ್ಲಿ ನಡೆಸಲಾಗುತ್ತದೆ ಎಂದು ಯೋಜನೆ ಅಧಿಕಾರಿ ಒ.ಪಿ. ವಾಸುದೇವ ಅವರು ಇಂದು ಪತ್ರಕರ್ತರಿಗೆ ತಿಳಿಸಿದರು.

'ಪ್ರಥಮ ಹಂತದಲ್ಲಿ ಸಮುದ್ರದ ಆಳದಲ್ಲಿ ಏನಿದೆ? ಭಾರ-ಇಳಿತಗಳ ಸ್ಥಿತಿ ಎಷ್ಟರ ಮಟ್ಟಿಗೆ ಸಾಗಾಣಿಕೆಗೆ ಸಹಕಾರಿ ಇತ್ಯಾದಿ ಪರಿಶೀಲಿಸಲಾಗುವುದು. ಅದಿರನ್ನು ಸ್ಲರಿ ವಿಧಾನದಲ್ಲಿ ಸಾಗಿಸುವುದರಿಂದ ನೆಲೆಯಲ್ಲಿ ಈ ಸಮೀಕ್ಷೆ ಅಗತ್ಯವಾಗಿದೆ' ಎಂದು ಅವರು ಹೇಳಿದರು.

ಈ ವಿನಾಯಿತಿ ಅನ್ವಯವಾಗುವುದು ಲಸಿಕೆಗಳಿಗಷ್ಟೇ ಎಂಬುದು ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ

ಟ್ರಿಪ್ಸ್ ವಿನಾಯಿತಿ: ಅತ್ಯಲ್ಪ ಪ್ರಯೋಜನ



ವಿಶ್ಲೇಷಣೆ

ಡಾ. ಎಚ್‌.ಆರ್‌.ಕೃಷ್ಣಮೂರ್ತಿ

ಸ್ವಿಟ್ಜರ್ಲೆಂಡ್‌ನ ಜಿನೀವಾದಲ್ಲಿ ಈ ವರ್ಷದ ಜೂನ್ 17ರಂದು ಸಭೆ ಸೇರಿದ್ದ ವಿಶ್ವ ವ್ಯಾಪಾರ ಸಂಘಟನೆಯ ಸದಸ್ಯ ರಾಷ್ಟ್ರಗಳ ಸಚಿವರು, ಕೋವಿಡ್- 19ರ ಲಸಿಕೆಗೆ ಸಂಬಂಧಿಸಿದಂತೆ ಒಮ್ಮತದ ನಿರ್ಧಾರವೊಂದನ್ನು ಕೈಗೊಂಡಿದ್ದಾರೆ. ಅದರಂತೆ ಮುಂದಿನ ಐದು ವರ್ಷಗಳ ಕಾಲ ಕೋವಿಡ್ ಲಸಿಕೆಯ ಉತ್ಪಾದನೆಗೆ ಬೌದ್ಧಿಕ ಹಕ್ಕಿನ ನಿರ್ಬಂಧಗಳಿಂದ ವಿನಾಯಿತಿ ದೊರೆತಿದೆ.

ಕೋವಿಡ್ ಲಸಿಕೆಗಳ ವ್ಯಾಪಕ ಲಭ್ಯತೆಗೆ ಸಂಬಂಧಿಸಿದಂತೆ ಪ್ರಪಂಚದ ವಿವಿಧ ದೇಶಗಳಲ್ಲಿ ಇಂದಿಗೂ ಕಂಡುಬರುತ್ತಿರುವ, ನೈತಿಕವಾಗಿ ಒಪ್ಪಲಾಗದ ಅಸಮಾನತೆಯನ್ನು ನಿವಾರಿಸಲು ಇಂತಹ ವಿನಾಯಿತಿ ಅಗತ್ಯವಾಗಿತ್ತು ಎಂದು ಸಂಘಟನೆಯ ಮಹಾನಿರ್ದೇಶಕ ಡಾ. ಎನ್‌ಗೋಜಿ ಒಕೋಂಜೋ ಇವೇಲಾ ಶ್ಲಾಘಿಸಿದ್ದಾರೆ. ಆದರೆ ಒಮ್ಮತದ ನಿರ್ಧಾರವಷ್ಟೇ ಆಗಬೇಕೆಂಬ ಒತ್ತಡಕ್ಕೆ ಮಣಿದು ನಿರ್ಧಾರವನ್ನು ಬೆಂಬಲಿಸಿದ ಅನೇಕ ದೇಶಗಳು, ಆರೋಗ್ಯ ಕ್ಷೇತ್ರದಲ್ಲಿನ ಜಾಗತಿಕ ಸಂಘಟನೆಗಳು, ಈ ವಿನಾಯಿತಿಯ ಬಗ್ಗೆ ತಮ್ಮ ನಿರಾಸೆ, ಅಸಮಾಧಾನ ವ್ಯಕ್ತಪಡಿಸಿವೆ. ಈ ನಿರ್ಧಾರ ತೀವ್ರ ಟೀಕೆಗೂ ಒಳಗಾಗಿದೆ.

ಎರಡು ವರ್ಷಗಳ ಹಿಂದೆ, ಪ್ರಪಂಚದ 175ಕ್ಕೂ ಹೆಚ್ಚು ದೇಶಗಳು ಕೋವಿಡ್- 19ರ ಬಿಗಿ ಹಿಡಿತದಲ್ಲಿ ಸಿಲುಕಿ, ಜೀವರಕ್ಷಕ ಲಸಿಕೆಗಾಗಿ ಹಾತೊರೆಯುತ್ತಿದ್ದ ಸನ್ನಿವೇಶದಲ್ಲಿ ಭಾರತ ಮತ್ತು ದಕ್ಷಿಣ ಆಫ್ರಿಕಾ, ವಿಶ್ವ ವ್ಯಾಪಾರ ಸಂಘಟನೆಯ 'ಟ್ರೇಡ್ ರಿಲೇಟೆಡ್ ಆ್ಯಸ್ಪೆಕ್ಟ್ಸ್ ಆಫ್ ಇಂಟಲೆಕ್ಚುಯಲ್ ಪ್ರಾಪರ್ಟಿ ರೈಟ್ಸ್' (ಟ್ರಿಪ್ಸ್) ಮಂಡಳಿಯ ಮುಂದೆ ಪ್ರಸ್ತಾವವೊಂದನ್ನು ಮಂಡಿಸಿದವು. ಕೋವಿಡ್ ರೋಗ ನಿರ್ಣಯ, ಲಸಿಕೆಯ ಉತ್ಪಾದನೆ, ಚಿಕಿತ್ಸಾ ವಿಧಾನ, ವೈರಸ್‌ನಿಂದ ರಕ್ಷಿಸುವ ಸಾಧನಗಳು ಮುಂತಾದವುಗಳಿಗೆ ಸಂಬಂಧಿಸಿದಂತೆ ಔಷಧ ತಯಾರಿಕಾ ಕಂಪನಿಗಳು, ಸಂಶೋಧನಾ ಸಂಸ್ಥೆಗಳು ಪಡೆದುಕೊಂಡಿರುವ ಪೇಟೆಂಟ್‌ಗಳನ್ನು, ಪ್ರಪಂಚದ ಎಲ್ಲ ದೇಶಗಳ ಒಳಿತಿನ ದೃಷ್ಟಿಯಿಂದ ಮೂರು ವರ್ಷಗಳ ಕಾಲ ರದ್ದುಪಡಿಸುವಂತೆ ಕೋರಲಾಗಿತ್ತು. ನೂರಕ್ಕೂ ಹೆಚ್ಚು ಸದಸ್ಯ ರಾಷ್ಟ್ರಗಳು ಈ ಪ್ರಸ್ತಾವಕ್ಕೆ ಬೆಂಬಲ ಸೂಚಿಸಿದರೂ, ಅಮೆರಿಕ, ಇಂಗ್ಲೆಂಡ್, ಸ್ವಿಟ್ಜರ್ಲೆಂಡ್, ನಾರ್ವೆ, ಆಸ್ಟ್ರೇಲಿಯಾ, ಜಪಾನ್ ಮತ್ತು ಐರೋಪ್ಯ ಒಕ್ಕೂಟದ ದೇಶಗಳು ತೀವ್ರವಾಗಿ ವಿರೋಧಿಸಿದವು. ಸಂಶೋಧನೆ ಮತ್ತು ಅಭಿವೃದ್ಧಿಯಲ್ಲಿ ಬೃಹತ್ ಬಂಡವಾಳ ಹೂಡಿರುವ ಔಷಧ ತಯಾರಿಕಾ ಕಂಪನಿಗಳ ಪರಿಶ್ರಮಕ್ಕೆ ಈ ಪ್ರಸ್ತಾವ ತೀವ್ರ ಹಿನ್ನಡೆ ಉಂಟುಮಾಡುತ್ತದೆ ಎಂಬುದು ಅವುಗಳ ವಾದವಾಗಿತ್ತು.

ಭಾರತ ಮತ್ತು ದಕ್ಷಿಣ ಆಫ್ರಿಕಾದ ಪ್ರಸ್ತಾವ ಸಲ್ಲಿಕೆಯಾದ ಸುಮಾರು ಒಂದು ವರ್ಷದ ನಂತರ, 2021ರ ನವೆಂಬರ್‌ನಲ್ಲಿ ಜಾಗತಿಕ ಮಟ್ಟದ ಪೀಪಲ್ ವ್ಯಾಕ್ಸಿನ್ ಅಲಯನ್ಸ್ ಸಂಸ್ಥೆ ವರದಿಯೊಂದನ್ನು ಪ್ರಕಟಿಸಿತು. ಆಫ್ರಿಕನ್ ಅಲಯನ್ಸ್, ಗ್ಲೋಬಲ್ ಜಸ್ಟಿಸ್ ನೌ, ಆಕ್ಸ್‌ಫಾಮ್ ಮುಂತಾದ 80 ಸದಸ್ಯರನ್ನು ಒಳಗೊಂಡಿರುವ ಪೀಪಲ್ ವ್ಯಾಕ್ಸಿನ್ ಅಲಯನ್ಸ್ ತನ್ನ ವರದಿಯಲ್ಲಿ, ಫೈಜರ್, ಬಯೋಎನ್‌ಟೆಕ್ ಮತ್ತು ಮೊಡೆರ್ನಾ ಕಂಪನಿಗಳು ಒಟ್ಟಾಗಿ, ಕೋವಿಡ್ ಲಸಿಕೆಗಳ ಮಾರಾಟದಿಂದ ಪ್ರತೀ ಒಂದು ನಿಮಿಷಕ್ಕೆ ಸುಮಾರು ₹ 47 ಲಕ್ಷ ಲಾಭ ಪಡೆಯುತ್ತಿರುವುದನ್ನು ದಾಖಲೆಗಳ ಸಮೇತ ವಿವರಿಸಿತು.

ಮೊಡೆರ್ನಾ ತಾನು ಉತ್ಪಾದಿಸಿದ ಒಟ್ಟು ಲಸಿಕೆಯಲ್ಲಿ ಶೇ 0.2, ಫೈಜರ್ ಹಾಗೂ ಬಯೋಎನ್‌ಟೆಕ್ ಕಂಪನಿಗಳು ಶೇ 1ಕ್ಕಿಂತ ಕಡಿಮೆ ಪ್ರಮಾಣದ ಲಸಿಕೆಗಳನ್ನು ಬಡದೇಶಗಳಿಗೆ ಒದಗಿಸಿದ್ದವು. ಈ ವರದಿಯ ನಂತರ ಮತ್ತೊಮ್ಮೆ ನೂರಕ್ಕೂ ಹೆಚ್ಚು ದೇಶಗಳು ಟ್ರಿಪ್ಸ್ ವಿನಾಯಿತಿಗಾಗಿ ಒತ್ತಾಯಿಸಿದವು. ಅಲ್ಲಿಂದ ಮುಂದೆ ನಡೆದ ಮಾತುಕತೆ, ಚರ್ಚೆ, ತೆರೆಮರೆಯ ಸಂಧಾನಗಳು, ಒತ್ತಾಯಗಳ ಫಲವಾಗಿ, ಅಂತಿಮವಾಗಿ ವಿನಾಯಿತಿಯ ಮೊದಲ ಪ್ರಸ್ತಾವ ಬಂದ ಸುಮಾರು 22 ತಿಂಗಳ ನಂತರ, ಅನೇಕ ಮಾರ್ಪಾಡುಗಳೊಂದಿಗೆ ಟ್ರಿಪ್ಸ್ ವಿನಾಯಿತಿಗೆ ಸಂಘಟನೆಯ ಅನುಮೋದನೆ ದೊರೆಯಿತು. ಈ ಪ್ರಸ್ತಾವ ದಲ್ಲಿರುವ ಹಲವಾರು ಅಂಶಗಳು ಇದೀಗ ಗಂಭೀರ ಚರ್ಚೆಗಳಿಗೆ ದಾರಿ ಮಾಡಿಕೊಟ್ಟಿವೆ.

ಅನುಮೋದನೆ ದೊರೆತಿರುವ ಹೊಸ ಪ್ರಸ್ತಾವದಂತೆ, ಕೋವಿಡ್ ವಿರುದ್ಧದ ಲಸಿಕೆಗಳ ಉತ್ಪಾದನೆಗೆ ಮುಂದಿನ ಐದು ವರ್ಷಗಳ ಕಾಲ ಯಾವುದೇ ರೀತಿಯ ಪೇಟೆಂಟ್ ಕಟ್ಟುಪಾಡುಗಳು ಇರುವುದಿಲ್ಲ. ಉತ್ಪಾದಿಸಿದ ಲಸಿಕೆಗಳನ್ನು ಆಯಾ ದೇಶಗಳಲ್ಲೇ ಬಳಸಬೇಕು, ಸಗಟು ಪ್ರಮಾಣದಲ್ಲಿ ಬೇರೆ ದೇಶಗಳಿಗೆ ರಫ್ತು ಮಾಡಬಾರದು ಎಂಬ ಈ ಹಿಂದಿನ ನಿಬಂಧನೆಯೂ ಇರುವುದಿಲ್ಲ. ಮೂಲಸೌಕರ್ಯ, ತಂತ್ರಜ್ಞಾನ, ನುರಿತ, ತಜ್ಞ ಸಿಬ್ಬಂದಿಯಿರುವ ಯಾವುದೇ ದೇಶವಾದರೂ ಲಸಿಕೆಗಳನ್ನು ಉತ್ಪಾದಿಸಬಹುದು. ಹೊರನೋಟಕ್ಕೆ ಈ ವಿನಾಯಿತಿ ಸ್ವಾಗತಾರ್ಹ ಎನಿಸಿದರೂ ಅದರಿಂದ ಹೆಚ್ಚಿನ ಪ್ರಯೋಜನವಿಲ್ಲ ಎಂಬುದು ತಜ್ಞರ ಅಭಿಪ್ರಾಯ.

ಲಸಿಕೆಯ ಕೊರತೆ ಇಂದು ಸಮಸ್ಯೆಯಲ್ಲ. ತೊಂದರೆ ಗಳಿರುವುದು ಈ ಲಸಿಕೆಗಳನ್ನು ದೇಶವೊಂದರ ಮೂಲೆ ಮೂಲೆಗಳಲ್ಲಿರುವ ಜನರಿಗೆ ಮುಟ್ಟಿಸುವ ವಿತರಣಾ ವ್ಯವಸ್ಥೆಗಳಲ್ಲಿ. ಉದಾಹರಣೆಗೆ, ವಿಶ್ವ ಆರೋಗ್ಯ ಸಂಸ್ಥೆಯ, ಆಫ್ರಿಕಾ ದೇಶಗಳಿಗೆ ಸಂಬಂಧಿಸಿದ ಪ್ರಾದೇಶಿಕ ನಿರ್ದೇಶಕ ಡಾ. ಮಟ್ಶಿಡಿಸೋ ಮೊಯೇಟ 'ವಿಶ್ವ ಆರೋಗ್ಯ ಸಂಸ್ಥೆಯ ಗುರಿಯಂತೆ ಆಫ್ರಿಕಾ ದೇಶಗಳ ಶೇ 70ರಷ್ಟು ಪ್ರಜೆಗಳಿಗೆ ನೀಡುವಷ್ಟು ಪ್ರಮಾಣದಲ್ಲಿ ಲಸಿಕೆ ಲಭ್ಯವಿದೆ. ಅದು ಸಮಸ್ಯೆಯೇ ಅಲ್ಲ. ವಿತರಣೆಯ ಜಾಲದಲ್ಲಿರುವ ಅಡೆತಡೆ ಗಳನ್ನು ನಿವಾರಿಸುವುದು ನಮ್ಮ ಬಹುಮುಖ್ಯ ಆದ್ಯತೆ' ಎನ್ನುತ್ತಾರೆ. ಜಾಗತಿಕ ಮಟ್ಟದಲ್ಲಿ ಅಗತ್ಯಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಕೋವಿಡ್ ವಿರುದ್ಧದ ಲಸಿಕೆ ಲಭ್ಯವಿರುವ ಇಂದಿನ ಪರಿಸ್ಥಿತಿಯಲ್ಲಿ, ಬಹಳ ತಡವಾಗಿ ಬಂದಿರುವ ಟ್ರಿಪ್ಸ್ ವಿನಾಯಿತಿಗೆ ಹೆಚ್ಚಿನ ಮಹತ್ವವಿಲ್ಲ ಎನ್ನುವ ಅಭಿಪ್ರಾಯ ವ್ಯಾಪಕವಾಗಿ ವ್ಯಕ್ತವಾಗುತ್ತಿದೆ.



ಈಗ ದೊರೆತಿರುವ ವಿನಾಯಿತಿ ಅನ್ವಯವಾಗು-ವುದು ಲಸಿಕೆಗಳಿಗೆ ಮಾತ್ರ ಎಂಬ ಅಂಶ ಜಾಗತಿಕ ಮಟ್ಟದ ಆರೋಗ್ಯ ಸಂಘಟನೆಗಳ ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ. ಕೋವಿಡ್ ರೋಗ ನಿರ್ಣಯದ ಪರೀಕ್ಷೆಗಳು, ಚಿಕಿತ್ಸಾ ವಿಧಾನಗಳು, ವೈದ್ಯಕೀಯ ಸಾಧನಗಳು ಮುಂತಾದವುಗಳಿಗೆ ಸಂಬಂಧಿಸಿದಂತೆ, ಔಷಧ ತಯಾರಿಕಾ ಕಂಪನಿಗಳು, ಸಂಶೋಧನಾ ಸಂಸ್ಥೆಗಳು ಪಡೆದುಕೊಂಡಿರುವ ಪೇಟೆಂಟ್‌ಗಳಿಗೆ ಈ ವಿನಾಯಿತಿ ಅನ್ವಯಿಸುವುದಿಲ್ಲ. ಇದರ ಪರಿಣಾಮವಾಗಿ, ಕೋವಿಡ್ ಚಿಕಿತ್ಸೆಯಲ್ಲಿ ಬಳಸುವ ವಿವಿಧ ಔಷಧಗಳು, ವಿಶೇಷ ಸಾಧನಗಳು ಕೈಗೆಟುಕುವ ದರದಲ್ಲಿ ಬಡ ದೇಶಗಳಿಗೆ ಸುಲಭವಾಗಿ ಲಭ್ಯವಾಗುವುದಿಲ್ಲ. ಭಾರತ ಮತ್ತು ದಕ್ಷಿಣ ಆಫ್ರಿಕಾದ ಮೊದಲ ಪ್ರಸ್ತಾವದಲ್ಲಿ ಬಹು ಮುಖ್ಯವಾಗಿದ್ದ ಈ ಬೇಡಿಕೆಗೆ ಒಪ್ಪಿಗೆ ದೊರೆತಿಲ್ಲ. ರೋಗ ನಿರ್ಣಯ ಮತ್ತು ಚಿಕಿತ್ಸಾ ವಿಧಾನಗಳಿಗೆ ಪೇಟೆಂಟ್ ವಿನಾಯಿತಿ ನೀಡುವುದಕ್ಕೆ ಸಂಬಂಧಿಸಿದಂತೆ ಐರೋಪ್ಯ ಒಕ್ಕೂಟದ ದೇಶಗಳಿಂದ ತೀವ್ರ ವಿರೋಧ ಬಂದ ಹಿನ್ನೆಲೆಯಲ್ಲಿ ಚರ್ಚೆಯನ್ನು ಮುಂದೂಡಿದ ವಿಶ್ವ ವ್ಯಾಪಾರ ಸಂಘಟನೆಯು ಮುಂದಿನ ಆರು ತಿಂಗಳ ಒಳಗಾಗಿ ಈ ವಿಷಯವನ್ನು ಪರಿಶೀಲಿಸುವುದಾಗಿ ತಿಳಿಸಿದೆ.

ಈ ಎಲ್ಲ ಬೆಳವಣಿಗೆಗಳ ನಡುವೆಯೇ ಫೈಜರ್ ಕಂಪನಿ 'ಅಕಾರ್ಡ್ ಫಾರ್ ಹೆಲ್ತಿಯರ್ ವರ್ಲ್ಡ್' ಎಂಬ ಯೋಜನೆಯೊಂದನ್ನು ಘೋಷಿಸಿದೆ. ಪ್ರಪಂಚದ 45 ಅಲ್ಪ ಆದಾಯದ ದೇಶಗಳ ಆರೋಗ್ಯ ರಕ್ಷಣೆಯೇ ಈ ಯೋಜನೆಯ ಉದ್ದೇಶವೆಂದು ಹೇಳಿಕೊಂಡಿರುವ ಫೈಜರ್, ಕೋವಿಡ್ ಮತ್ತು ಇನ್ನಿತರ ಸಾಂಕ್ರಾಮಿಕ ರೋಗಗಳಿಗೆ ಸಂಬಂಧಿಸಿದಂತೆ ತಾನು ಪೇಟೆಂಟ್ ಪಡೆದುಕೊಂಡು ಉತ್ಪಾದಿಸುತ್ತಿರುವ ಎಲ್ಲ 23 ಲಸಿಕೆ ಮತ್ತು ಔಷಧಗಳನ್ನು 'ಲಾಭವಿಲ್ಲದಂತೆ ಉತ್ಪಾದನೆಯ ಬೆಲೆಯಲ್ಲೇ' ಈ ದೇಶಗಳಿಗೆ ನೀಡುವುದಾಗಿ ಹೇಳಿದೆ. ಆದರೆ ಇದರ ನಿಜವಾದ ಉದ್ದೇಶವೇ ಬೇರೆ ಎಂದು ಯೋಜನೆಯನ್ನು ಜಾಗತಿಕ ಆರೋಗ್ಯ ಸಂಘಟನೆಗಳು ಕಟುವಾಗಿ ಟೀಕಿಸಿವೆ. ಈ ಯೋಜನೆಯಿಂದ, ವಿಶ್ವಸಂಸ್ಥೆಯ 'ಅತಿ ಕಡಿಮೆ ಅಭಿವೃದ್ಧಿ ಹೊಂದಿದ' ಪಟ್ಟಿ-ಯಲ್ಲಿರುವ ದೇಶಗಳು, ಜನೌಷಧವನ್ನು ಉತ್ಪಾದಿಸುವ ತಮ್ಮ ಪ್ರಯತ್ನಗಳನ್ನು ಕೈಬಿಟ್ಟು, ಫೈಜರ್ ಮೇಲೆಯೇ ಸದಾಕಾಲ ಅವಲಂಬಿತವಾಗಿರುವಂತಹ ಪರಿಸ್ಥಿತಿ ಸೃಷ್ಟಿಯಾಗಲಿದೆ ಎಂಬುದು ಈ ಸಂಘಟನೆಗಳ ದೂರು.

ಮುಂದಿನ ಆರು ತಿಂಗಳ ಒಳಗಾಗಿ ಕೋವಿಡ್ ಲಸಿಕೆಯ ಜೊತೆಗೆ ರೋಗ ನಿರ್ಣಯ, ಚಿಕಿತ್ಸಾ ವಿಧಾನ ಮುಂತಾದವುಗಳಿಗೂ ಸಂಪೂರ್ಣ ವಿನಾಯಿತಿಯ ಪ್ರಶ್ನೆಯನ್ನು ಪರಿಶೀಲಿಸಿ ನಿರ್ಣಯ ಕೈಗೊಳ್ಳುವ ಭರವಸೆಯ ಮೇರೆಗೆ, ಆಂಶಿಕ ಟ್ರಿಪ್ಸ್ ವಿನಾಯಿತಿಗೆ ಸದಸ್ಯ ರಾಷ್ಟ್ರಗಳು ಒಪ್ಪಿಗೆ ನೀಡಿವೆ. ಆ ಭರವಸೆಯನ್ನು ಈಡೇರಿಸುವ ಜವಾಬ್ದಾರಿ ಇದೀಗ ವಿಶ್ವ ವ್ಯಾಪಾರ ಸಂಘಟನೆಯ ಮೇಲಿದೆ.

ಚುರುಮುರಿ



ಶಾಸಕರಿಗೆ ಸಲಹೆ

● ಸಿ.ಎನ್.ರಾಜು

ಚಟ್ನಹಳ್ಳಿ ಕೆರೆ ತುಂಬಿ ಕೋಡಿ ಹರಿದಿತ್ತು. ಊರ ಜನ ಆನಂದಪಟ್ಟಿದ್ದರು. ಆದರೆ ನಂತರ ನಡೆದ ಬೆಳವಣಿಗೆಯಿಂದ ಶಾಸಕರಿಗೆ ಚಳಿಜ್ವರ ಬಂದಿತ್ತು.

ಕಳೆದ ಚುನಾವಣೆಯಲ್ಲಿ ಶಾಸಕರೆದುರು ಸೋತು ಸುಣ್ಣವಾಗಿದ್ದ ಎದುರು ಪಕ್ಷದ ಮುಖಂಡ ಈಗ ಮೈಕೊಡವಿ ಎದ್ದಿದ್ದ. ಕೆರೆಯಲ್ಲಿ ಗಂಗಾಪೂಜೆ ಏರ್ಪಡಿಸಿ ಹೆಣ್ಣುಮಕ್ಕಳಿಗೆ ಸೀರೆ ವಿತರಿಸಿ, ಬಾಗಿನ ನೀಡಿದ್ದ. ಕೆರೆ ಏರಿ ಮೇಲೆ ಅನ್ನಸಂತರ್ಪಣೆ ವ್ಯವಸ್ಥೆ ಮಾಡಿದ್ದ. ಊರಜನ ಉಂಡು ಮುಖಂಡರ ಸೇವೆ ಕೊಂಡಾಡಿದ್ದರು.

ಸಾಲದ್ದಕ್ಕೆ ಊರಿನಲ್ಲಿ ಹೆಲ್ತ್ ಕ್ಯಾಂಪ್ ವ್ಯವಸ್ಥೆ ಮಾಡಿದ್ದ. ಇತ್ತೀಚಿನ ಮಳೆಯಲ್ಲಿ ನೆಂದು ನೊಂದು ಶೀತ, ನೆಗಡಿ, ಜ್ವರದಿಂದ ಬಳಲುತ್ತಿದ್ದ ಜನ ಆರೋಗ್ಯ ತಪಾಸಣೆ ಮಾಡಿಸಿಕೊಂಡು ಆರೋಗ್ಯ ಸುಧಾರಿಸಿಕೊಂಡಿದ್ದರು.

ಶಾಸಕರ ಜೊತೆಗಿದ್ದು ಜೈಕಾರ ಹಾಕುತ್ತಿದ್ದ ಜನರೆಲ್ಲಾ ಎದುರು ಪಕ್ಷದ ಮುಖಂಡನ ತೆಕ್ಕೆಗೆ ಬೀಳತೊಡಗಿದ್ದು ಶಾಸಕರ ನಿದ್ದೆ, ನೆಮ್ಮದಿ ಕೆಡಿಸಿತ್ತು.

ಮಳೆಯಲ್ಲಿ ಹಾಳಾಗಿದ್ದ ಊರ ರಸ್ತೆ ರಿಪೇರಿ-ಯನ್ನಾಗಲೀ, ಕುಸಿದುಬಿದ್ದ ಸೇತುವೆ ದುರಸ್ತಿ-ಯನ್ನಾಗಲೀ ಮಾಡುವ ಪ್ರಯತ್ನ ಮಾಡಿರಲಿಲ್ಲ ಅಂತ ಶಾಸಕರ ವಿರುದ್ಧ ಜನ ಸಿಟ್ಟಿಗೆದ್ದಿದ್ದರು. ಚುನಾವಣೆ ಸನಿಹದಲ್ಲಿ ಜನರ ವಿರೋಧ ಕಟ್ಟಿ-ಕೊಳ್ಳುವುದು ತರವಲ್ಲ, ಊರಿಗೆ ಬಂದು ಜನರ ಕಷ್ಟಸುಖ ಕೇಳಿ ಅಂತ ಬೆಂಬಲಿಗರು ಶಾಸಕರ ಬೆನ್ನಿಗೆ ಬಿದ್ದಿದ್ದರು.

'ಕೊರೊನಾ ಟೈಮಿನಲ್ಲಿ ಫುಡ್ ಕಿಟ್ ವಿತರಣೆ ಮಾಡಿದ್ದು ಬಿಟ್ಟರೆ ನೀವು ಊರ ಜನರಿಗೆ ಯಾವುದೇ ಕೊಡುಗೆ ನೀಡಿಲ್ಲ, ಹಿಂಗಾದ್ರೆ ಜನ ನಮ್ಮ ಕೈಗೆ ಸಿಗ್ತಾರಾ?' ಅಂತೆಲ್ಲಾ ಆತ್ಮೀಯರು ಶಾಸಕರ ಗಮನಕ್ಕೆ ತಂದು ಗಾಬರಿ ಹುಟ್ಟಿಸಿದರು.

ಡ್ಯಾಮೇಜ್ ಸರಿಮಾಡಿಕೊಳ್ಳಲು ಏನು ಮಾಡೋದು? ಶಾಸಕರು ಪ್ರಶ್ನೆ ಮಾಡಿಕೊಂಡರು.

'ಪಕ್ಷದ ನಾಯಕರನ್ನು ಊರಿಗೆ ಆಹ್ವಾನಿಸಿ ಅದ್ಧೂರಿಯಾಗಿ ನಿಮ್ಮ ಜನ್ಮದಿನ ಆಚರಿಸಿ. ಆಮೇಲೆ ಊರಿನ ದೇವರ ಉತ್ಸವದ ವ್ಯವಸ್ಥೆ ಮಾಡಿ, ಬಡವರಿಗೆ ಏನಾದರೂ ಕಾಣಿಕೆ ಕೊಡಿ. ಜನ ಮತ್ತೆ ನಿಮ್ಮ ಬುಡದಲ್ಲೇ ಇರುತ್ತಾರೆ' ಎಂದು ಆತ್ಮೀಯರು ಸಲಹೆ ಮಾಡಿದರು. ಶಾಸಕರು ಸಲಹೆ ಸ್ವೀಕರಿಸಿದರು.

ಸಂಗತ

ಮಳೆ ಎಂಬ ಕ್ರಿಯೆಗೆ ಹಾನಿಯ ಪ್ರತಿಕ್ರಿಯೆ!

ಮಳೆನೀರಿನಿಂದ ತುಂಬಿ ಹರಿವ ಒಳಚರಂಡಿಗಳಲ್ಲಿ, ಅವೈಜ್ಞಾನಿಕವಾಗಿ ನಿರ್ಮಿಸುವ ಬಡಾವಣೆಗಳಲ್ಲಿ ಭ್ರಷ್ಟಾಚಾರದ ಬ್ರಹ್ಮಾಂಡ ಸ್ವರೂಪವನ್ನೇ ಕಾಣಬಹುದು

● ನಾ.ದಿವಾಕರ

ಮಳೆಗಾಲ ಎಂದರೆ ನಿಸರ್ಗ ಜೀವಿಗಳಿಗೆ ವರದಾನ-ವಾಗಬೇಕು. ಪ್ರಾಣಿ ಪಕ್ಷಿಗಳಿಗೆ, ಜಾನುವಾರುಗಳಿಗೆ, ವ್ಯವಸಾಯವನ್ನೇ ನಂಬಿ ಬದುಕುವ ಕೋಟ್ಯಂತರ ಜನರಿಗೆ ಮತ್ತು ನಗರಗಳಲ್ಲಿ ವಾಸಿಸುವ ಹಿತವಲಯ ದವರಿಗೆ ನಿಸರ್ಗ ಒದಗಿಸುವ ಒಂದು ಸವಲತ್ತೆಂದರೆ ಕಾಲಕಾಲಕ್ಕೆ ನಾವು ಕಾಣುವ ಮಳೆ.

ಕಳೆದ 50 ವರ್ಷಗಳಲ್ಲಿ ಕೆಲವು ಸಮಯವಾದರೂ ಮಳೆಯಿಲ್ಲದೆ, ಒಣಗಿದ ವೃಕ್ಷಗಳ ನಡುವೆ, ಸುರುಟಿಹೋದ ಬೆಳೆಗಳ ನಡುವೆ ಆಹಾರ ಕ್ಷಾಮವನ್ನು ಸಮಾಜ ಎದುರಿಸಿದೆ. ಕುಡಿಯುವ ನೀರಿಲ್ಲದೆ ಜಾನುವಾರುಗಳು ಸಂಕಷ್ಟ ಅನುಭವಿಸಿರುವುದನ್ನು ನೋಡಿದ್ದೇವೆ. ಒಣಗಿದ ಭೂಮಿಯಲ್ಲಿ ತಲೆಯ ಮೇಲೆ ಕೈಹೊತ್ತು ಕುಳಿತ ರೈತನ ಚಿತ್ರಗಳನ್ನು ಕಂಡಿದ್ದೇವೆ. ಕುಡಿಯುವ ನೀರಿಗಾಗಿ ಮೈಲಿಗಟ್ಟಲೆ ನಡೆಯುವ ಅಸಹಾಯಕ ಜನರನ್ನು ಕಂಡಿದ್ದೇವೆ. ಹಾಗೆಯೇ 'ಮಹಾಸ್ಫೋಟ, ಮೇಘಸ್ಫೋಟ, ಕುಂಭದ್ರೋಣ' ಹೀಗೆ ಹಲವು ವಿಶೇಷಣಗಳನ್ನು ಹೊತ್ತು ಧರೆಗೆ ಅಪ್ಪಳಿಸುವ ಅತಿವೃಷ್ಟಿಯೂ ಕರ್ನಾಟಕದ ಹಲವೆಡೆ ತನ್ನ ಬಲಪ್ರದರ್ಶನ ಮಾಡುತ್ತಲೇ ಬಂದಿದೆ. ಈ ವರ್ಷವೂ ಇದೇ ಕತೆ ಮರುಕಳಿಸಿದೆ.

ನಮ್ಮ ಸರ್ಕಾರಗಳು ಅಂಕಿಅಂಶಗಳನ್ನು ಅದ್ಭುತವಾಗಿ ಸಂಗ್ರಹಿಸುತ್ತವೆ. ಮಳೆ ಹಾನಿಯಿಂದ ಎಷ್ಟು ಬೆಳೆ ನಾಶವಾಗಿದೆ, ಎಷ್ಟು ಜಾನುವಾರುಗಳು ಸತ್ತಿವೆ, ಎಷ್ಟು ಜನ ಬಲಿಯಾಗಿದ್ದಾರೆ, ಎಷ್ಟು ಮನೆಗಳು ಕುಸಿದಿವೆ, ಎಷ್ಟು ಕಡೆ ಗುಡ್ಡಗಳು ಕುಸಿದಿವೆ, ಸೇತುವೆಗಳು ಭಗ್ನವಾಗಿವೆ ಹೀಗೆ ಪುಂಖಾನುಪುಂಖವಾಗಿ ಹೊರಬೀಳುವ ದತ್ತಾಂಶಗಳ ಬೆನ್ನಲ್ಲೇ ಸತ್ತವರ ಕುಟುಂಬದವರಿಗೆ, ಮನೆ ಕಳೆದು ಕೊಂಡವರಿಗೆ, ಬೆಳೆ ನಷ್ಟ ಅನುಭವಿಸಿದವರಿಗೆ ಪರಿಹಾರದ ಹಣ ನೀಡಲು ಚೆಕ್ಕುಗಳು ಸಿದ್ಧವಾಗುತ್ತಿರು ತ್ತವೆ. ವಾಯುವಿಹಾರದಂತೆ ಒಮ್ಮೆ ಪ್ರವಾಹಪೀಡಿತ ಅಥವಾ ಮಳೆಪೀಡಿತ ಪ್ರದೇಶಗಳಿಗೆ ವೈಮಾನಿಕ ಭೇಟಿ ನೀಡುವ ಮೂಲಕ ದೂರದಿಂದಲೇ ಹಾನಿಯನ್ನು ಅಳೆಯುವ ಮಾಪಕಗಳನ್ನೂ ಸರ್ಕಾರಗಳು ಹೊಂದಿರುವುದರಿಂದ, ಅಂದಾಜುಗಳ ಪಟ್ಟಿ ಸಿದ್ಧವಾಗು ತ್ತಲೇ ಇರುತ್ತದೆ. ಸತ್ತವರಿಗೆ ಕಂಬನಿ, ಸಂತ್ರಸ್ತರಿಗೆ ಸಾಂತ್ವನ, ಉಳಿದವರಿಗೆ ಸಂತಾಪಗಳ ಸಾಹಿತ್ಯಕ ಸಾಲುಗಳು ಹವಾನಿಯಂತ್ರಿತ ಕೊಠಡಿಗಳಲ್ಲಿ ಗೂಗಲ್ ಡಾಕ್‌ಗಳಲ್ಲಿ ಸಿದ್ಧವಾಗುತ್ತವೆ.

ಇತ್ತ ಜನಸಾಮಾನ್ಯರು ರಸ್ತೆಗಳಲ್ಲಿ ತೆಪ್ಪಗಳನ್ನು ಬಳಸುತ್ತಾರೆ, ಶಾಲಾ ಮಕ್ಕಳು ಅಪಾಯಕಾರಿ ಹೊಳ್ಳಗಳನ್ನು ದಾಟಿ ಹೋಗುತ್ತಿರುತ್ತಾರೆ. ಪಶ್ಚಿಮ ಘಟ್ಟಗಳಲ್ಲಿ ಗುಡ್ಡ ಕುಸಿತದಿಂದ ಹತ್ತು ಹಲವಾರು ಮನೆಗಳು ಭೂಗತವಾಗುತ್ತವೆ. ಇಡೀ ಗ್ರಾಮಗಳೇ ಜಲಾವೃತವಾಗುತ್ತವೆ. ಇತ್ತೀಚಿನ ದಿನಗಳಲ್ಲಿ ನಗರ ಪ್ರದೇಶಗಳಲ್ಲೂ ಜಲಾವೃತ ಪ್ರದೇಶಗಳು ನಿರ್ಮಾಣ ವಾಗುವುದನ್ನು ಕಾಣುತ್ತಿದ್ದೇವೆ. ಒಂದೆರಡು ತಿಂಗಳ ಎಳೆ ವಯಸ್ಸಿನ ಡಾಂಬರು ರಸ್ತೆಗಳಿಗೂ ಆದಷ್ಟು ಬೇಗ ಬಾಯ್ದೆರೆಯುವ ಹಂಬಲ ಇರುವುದರಿಂದ, ರಸ್ತೆಗಳ ಬದಿಯ ಚರಂಡಿಗೆ ಪೈಪೋಟಿ ನೀಡುತ್ತಾ ಹೊಂಡಗಳು ಮದುವಣಗಿತ್ತಿಯರಂತೆ ಸಿದ್ಧವಾಗುತ್ತವೆ. ಅತಿವೃಷ್ಟಿಯಾದ ಸಂದರ್ಭದಲ್ಲೆಲ್ಲಾ ಅವು ಸಾವಿನ ಕೂಪಗಳಾಗಿ ಪರಿಣಮಿಸುತ್ತವೆ.

ಪತ್ರಿಕೆಗಳಲ್ಲಿ 'ಪ್ರಧಾನಿಯಿಂದ ಉದ್ಘಾಟನೆಯಾದ ಸೇತುವೆ ಆರು ತಿಂಗಳಲ್ಲೇ ಕುಸಿತ' ಎಂಬ ಸುದ್ದಿ ಬರುತ್ತದೆ. ಸೇತುವೆಗೆ ಬೇಕಿರುವುದು ಉದ್ಘಾಟಕರ ಕೃಪೆ ಅಲ್ಲ, ನಿರ್ಮಾಣದಲ್ಲಿ ಕೈಹಾಕುವ ಎಂಜಿನಿಯರುಗಳು, ಹಣಕಾಸು ಒದಗಿಸುವ ಅಧಿಕಾರಿಶಾಹಿ ಮತ್ತು ಶಾಸನಸಭೆಯಲ್ಲಿ ಅನುಮೋದನೆ ನೀಡುವ ಜನಪ್ರತಿನಿಧಿಗಳ ಕೃಪೆ. ಈ ಕೂಟದ ಭ್ರಷ್ಟಾಚಾರದ ಬ್ರಹ್ಮಾಂಡ ಸ್ವರೂಪವನ್ನು ಕುಸಿದ ಸೇತುವೆಗಳಲ್ಲಿ, ಮಳೆನೀರಿನಿಂದ ತುಂಬಿ ಹರಿವ ರಾಜಕಾಲುವೆಗಳಲ್ಲಿ, ಒಳಚರಂಡಿಗಳಲ್ಲಿ ಮತ್ತು ಅವೈಜ್ಞಾನಿಕವಾಗಿ ನಿರ್ಮಿಸುವ ಬಡಾವಣೆಗಳಲ್ಲಿ, ರಸ್ತೆಗಳಲ್ಲಿ ಕಾಣಬಹುದು.



1990ರ ನಂತರ ನಗರೀಕರಣಕ್ಕೆ ಬಲಿಯಾದ ಮೊದಲ ನಿಸರ್ಗ ಶಿಶು ಎಂದರೆ ಕೆರೆಗಳೇ ಆಗಿರುವುದನ್ನು ಒಪ್ಪಲೇಬೇಕಲ್ಲವೇ? ಒಣಗಿದ ಕೆರೆಗಳಲ್ಲಿ ಇಟ್ಟಿಗೆ ಗೂಡು ಮಾಡುವುದ ಕ್ಕಿಂತಲೂ ಹೆಚ್ಚು ಲಾಭದಾಯಕ ಉದ್ದಿಮೆಯಾಗಿ ರಿಯಲ್ ಎಸ್ಟೇಟ್ ಕಂಡಿದ್ದರಿಂದಲೇ ಎಲ್ಲೆಂದರಲ್ಲಿ 'ಕೆರೆಯಂಗಳದ ಸುಂದರ ನಗರಿಗಳು' ತಲೆಎತ್ತಿದ್ದನ್ನು ಬೀದರ್‌ನಿಂದ ಚಾಮರಾಜ ನಗರದವರೆಗೂ ಕಾಣಬಹುದು. ಒಳಚರಂಡಿ ನಿರ್ಮಾಣದಲ್ಲಿ ಸಿಮೆಂಟು, ಜಲ್ಲಿ, ಗಾರೆಯೊಂದಿಗೆ ಹಣವನ್ನೂ ನುಂಗಿಹಾಕುವ ಒಂದು ವರ್ಗವನ್ನೇ ನಮ್ಮ ಪ್ರಜಾ ಪ್ರಭುತ್ವ ವ್ಯವಸ್ಥೆ ಸೃಷ್ಟಿಸಿರುವುದರಿಂದ, ಮಳೆ ಹೆಚ್ಚಾದ ಕೂಡಲೇ ಮನೆಯಂಗಳಗಳೇ ಚರಂಡಿಗಳಾಗಿರುತ್ತ-ವೆ. ಇದಕ್ಕೆ ಹಿತವಲಯದ ಐಷಾರಾಮಿ ಫ್ಲ್ಯಾಟುಗಳೂ ಹೊರತಾಗುವುದಿಲ್ಲ.

ನಿಸರ್ಗದ ಎಲ್ಲ ಕೊಡುಗೆಗಳಿಂದಲೂ ಹಣ ಗಳಿಸುವ ಮನುಷ್ಯನ ಹಪಹಪಿ ಮತ್ತು ಲೋಭಕ್ಕೆ ಬಲಿಯಾಗಿರುವ ಪಶ್ಚಿಮಘಟ್ಟದ ಗುಡ್ಡಗಳು ಬುಡ ಸಡಿಲವಾದರೆ, ಹೆಗಲ ಭಾರ ಹೆಚ್ಚಾದರೆ ಸಹಜವಾಗಿಯೇ ಕುಸಿಯುತ್ತವೆ. ಇಲ್ಲಿ ಜೀವನ ಮತ್ತು ಜೀವನೋಪಾಯ ಕಳೆದುಕೊಳ್ಳುವ ಸಂತ್ರಸ್ತರು ವರ್ಷಗಟ್ಟಲೆ ಪರಿಹಾರಕ್ಕಾಗಿ ಅಂಗಲಾಚುತ್ತಲೇ ಇರುತ್ತಾರೆ. ಪ್ರವಾಸೋದ್ಯಮ ಎನ್ನುವುದು ನಿಸರ್ಗದ ದೃಷ್ಟಿಯಿಂದ ಪ್ರಯಾಸೋದ್ಯಮ ವಾಗಿರುವುದಕ್ಕೆ ಈ ಅಮಾಯಕ ಜನರು ಬೆಲೆ ತೆರುವಂತಾಗಿದೆ.

ಯಾರನ್ನು ದೂಷಿಸುವುದು? ಪ್ರಕೃತಿಯನ್ನೋ? ಪ್ರಕೃತಿಯ ನಿಯಮಾನುಸಾರ ಸಮಾಜವನ್ನು ನಿರ್ಮಿಸುವ ಕ್ಷಮತೆ ಮತ್ತು ಅರ್ಹತೆ ಇಲ್ಲದ ಆಡಳಿತ ವ್ಯವಸ್ಥೆಯನ್ನೋ? ಅಥವಾ ಎಲ್ಲವನ್ನೂ ಅನುಭವಿಸು ತ್ತಲೂ ಮತ್ತೊಂದು ಮಹಾಮಳೆಯ ನಿರೀಕ್ಷೆಯಲ್ಲಿ ಬದುಕು ಸವೆಸುವ ನಿಷ್ಕ್ರಿಯ ಜನತೆಯನ್ನೋ?

ವಾಚಕರ ವಾಣಿ

ಅಂಬೇಡ್ಕರ್ ಹೇಳಿಕೆ ಎಲ್ಲರಿಗೂ ಅನ್ವಯ

'ಕಾಂಗ್ರೆಸ್ ಮುಖಂಡರ ತ್ಯಾಗ- ಬಲಿದಾನದ ಫಲವಾಗಿ ದೇಶಕ್ಕೆ ಸ್ವಾತಂತ್ರ್ಯ ಬಂದಿರುವುದರಿಂದ ಸ್ವಾತಂತ್ರ್ಯ, ಸಂವಿಧಾನ, ರಾಷ್ಟ್ರಗೀತೆ, ರಾಷ್ಟ್ರಧ್ವಜದ ಮೇಲೆ ಕಾಂಗ್ರೆಸ್‌ಗೆ ಜಾಸ್ತಿ ಹಕ್ಕಿದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಹೇಳಿರುವುದು ವರದಿಯಾಗಿದೆ (ಪ್ರ.ವಾ., ಆ. 11). ಆದರೆ, ಸಂವಿಧಾನ ರಚನಾ ಸಮಿತಿಯ ಪ್ರಥಮ ಸಭೆಯಲ್ಲಿ, ಡಾ. ರಾಜೇಂದ್ರ ಪ್ರಸಾದ್ ಅವರು ಅಧ್ಯಕ್ಷರಾದ ಬಳಿಕ, ಸಂವಿಧಾನದ ವಿಧಿ ವಿಧಾನಗಳ ನಿಯಮಾವಳಿ ರಚನೆಗೆ ಸಮಿತಿಯೊಂದನ್ನು ರಚಿಸುವ ಪ್ರಸ್ತಾವವನ್ನು ನೆಹರೂ ಮಂಡಿಸಿದರು. ಕಾಂಗ್ರೆಸ್ ಸೇರಿದಂತೆ, ಹಿಂದೂ ಮಹಾಸಭಾದ ಡಾ. ಎಸ್.ಪಿ.ಮುಖರ್ಜಿ ಕೂಡ ಪ್ರಸ್ತಾವವನ್ನು ಬೆಂಬಲಿಸಿದರು. ಆ ಹಂತದಲ್ಲಿ ಸಭೆಯ ಅಧ್ಯಕ್ಷರು ಡಾ. ಬಿ.ಆರ್.ಅಂಬೇಡ್ಕರ್ ಅವರನ್ನು ಆಹ್ವಾನಿಸಿ, ಅಭಿಪ್ರಾಯ ಮಂಡಿಸಲು ಕೋರಿದರು. ಆಗ ಅಂಬೇಡ್ಕರ್ ಮಾತನಾಡಿ, 'ಇಡೀ ದೇಶದ, ಸಮಸ್ತ ಜನಸಮುದಾಯಗಳ ಭವಿಷ್ಯವನ್ನು ನಿರ್ಧಾರ ಮಾಡುವ ತೀರ್ಮಾನವನ್ನು ತೆಗೆದುಕೊಳ್ಳುವ ಸಂದರ್ಭದಲ್ಲಿ, ಯಾರೊಬ್ಬರ ಅತಿ ಆಸಕ್ತಿ, ಅವಸರ ಪ್ರವೃತ್ತಿ, ಪ್ರತಿಷ್ಠೆ ಹಾಗೂ ಸಂಖ್ಯಾಬಲ ಪ್ರಧಾನವಾಗಿಬಿಡಬಾರದು. ದೇಶದ ಹಾಗೂ ಸಮಸ್ತ ಜನತೆಯ ಹಿತಾಸಕ್ತಿಯ ಮುಂದೆ ಪಕ್ಷ, ಜಾತಿ, ಧರ್ಮ, ವ್ಯಕ್ತಿ ಎಲ್ಲರೂ ಗೌಣ' ಎಂದು ಹೇಳಿದರು. ಈ ಮಾತು ಎಲ್ಲರಿಗೂ ಅನ್ವಯಿಸುವಂಥದ್ದು.

ಕೆಲವರು ಹಿಂದೂ ಧರ್ಮವನ್ನು ಗುತ್ತಿಗೆ ಹಿಡಿದವರ ರೀತಿಯಲ್ಲಿ, ಇನ್ನು ಕೆಲವರು ದೇಶದ ಸಂವಿಧಾನ, ರಾಷ್ಟ್ರಗೀತೆ, ರಾಷ್ಟ್ರಧ್ವಜ ಇತ್ಯಾದಿ ನಮ್ಮಿಂದಲೇ ಎಂಬ ಭ್ರಮೆಯಲ್ಲಿರುವುದನ್ನು ಬಿಡಬೇಕು. ಅನೇಕರು ಪಕ್ಷಭೇದ ಮರೆತು ತ್ಯಾಗ, ಬಲಿದಾನದ ಮೂಲಕ ದೇಶಕ್ಕೆ ಸ್ವಾತಂತ್ರ್ಯವನ್ನು ದೊರಕಿಸಿಕೊಟ್ಟಿದ್ದಾರೆ. ಹಾಗೆ, ಸಂವಿಧಾನವು ಕೂಡ. ಇದರಲ್ಲಿ ನನ್ನ ಪಾಲು ಹೆಚ್ಚು, ನಿನ್ನ ಪಾಲು ಕಡಿಮೆ ಎಂಬ ತಾರತಮ್ಯ ಮಾಡಬಾರದು. ಇದು ಜನರಲ್ಲಿ ಅಶಾಂತಿ ಸೃಷ್ಟಿಗೆ ಕಾರಣವಾಗುತ್ತದೆ. ಇಡೀ ದೇಶದ ಅಖಂಡ ಪ್ರಜಾಪ್ರಭುತ್ವದ ರಕ್ಷಣೆಗೆ ಕಂಕಣಬದ್ಧರಾಗಿ ಶ್ರಮಿಸ-ಬೇಕಾಗಿರುವುದು ಪ್ರತಿಯೊಬ್ಬರ ಮೂಲಭೂತ ಕರ್ತವ್ಯ ಎನ್ನುವುದನ್ನು ಮರೆಯಬಾರದು.

ಭೀಮಾಶಂಕರ ದಾದೆಲಿ ಹಳಿಸಗರ, ಶಹಾಪುರ

ಫಲಿತಾಂಶ ಶೀಘ್ರ ಪ್ರಕಟವಾಗಲಿ

ಖಾಲಿ ಇರುವ ಅಗ್ನಿಶಾಮಕದಳದ ಹುದ್ದೆಗಳನ್ನು ಆರು ತಿಂಗಳಲ್ಲಿ ಭರ್ತಿ ಮಾಡಲಾಗುವುದು ಎಂದು ರಾಜ್ಯ ಗೃಹ ಸಚಿವರು ಹೇಳಿದ್ದರು. ಅದರಂತೆ ಅಗ್ನಿಶಾಮಕ ಠಾಣಾಧಿಕಾರಿ ಹುದ್ದೆಗೆ 2020ರ ಜೂನ್‌ನಲ್ಲಿ ಅಧಿಸೂಚನೆ ಹೊರಡಿಸಲಾಗಿತ್ತು. 2021ರ ಮಾರ್ಚ್‌ನಲ್ಲಿ ದೈಹಿಕ ಪರೀಕ್ಷೆ ನಡೆಸಲಾಗಿತ್ತು. ಈ ಪರೀಕ್ಷೆಯಲ್ಲಿ ಪಾಸಾದ ಅಭ್ಯರ್ಥಿಗಳು ಅದೇ ವರ್ಷದ ಆಗಸ್ಟ್‌ನಲ್ಲಿ ಪರೀಕ್ಷೆ ಬರೆದಿದ್ದರು. ಈ ಆಗಸ್ಟ್‌ಗೆ ಪರೀಕ್ಷೆ ಬರೆದು ಒಂದು ವರ್ಷ ಕಳೆದರೂ ಸಂಬಂಧಿಸಿದವರು ಇನ್ನೂ ಫಲಿತಾಂಶವನ್ನು ಪ್ರಕಟಿಸಿಲ್ಲ. ಈ ಕುರಿತು ವಿಚಾರಿಸಲು ನೇಮಕಾತಿ ವಿಭಾಗಕ್ಕೆ ಕರೆ ಮಾಡಿದರೂ ಪ್ರಯೋಜನ ಆಗಿಲ್ಲ. ಉದ್ಯೋಗ ಆಕಾಂಕ್ಷಿಗಳು ಫಲಿತಾಂಶಕ್ಕಾಗಿ ಬಕಪಕ್ಷಿಗಳಂತೆ ಕಾಯುತ್ತಿದ್ದಾರೆ. ಇದನ್ನು ಅರಿತು, ಫಲಿತಾಂಶವನ್ನು ತ್ವರಿತವಾಗಿ ಪ್ರಕಟಿಸಲು ಸರ್ಕಾರವು ಸಂಬಂಧಿಸಿದವರಿಗೆ ಸೂಚನೆ ನೀಡಬೇಕು.

ಬಸವರಾಜ ಎಸ್.ಎನ್., ಬೆಳಗಾವಿ

ತಾವೇ ಸ್ವಚ್ಛ ಮಾಡಬಹುದಿತ್ತು!

ಭ್ರಷ್ಟಾಚಾರ ನಿಗ್ರಹ ದಳವನ್ನು (ಎಸಿಬಿ) ಹೈಕೋರ್ಟ್ ರದ್ದು ಮಾಡಿರುವ ವಿಷಯಕ್ಕೆ ಸಂಬಂಧಿಸಿದಂತೆ ಜೆಡಿಎಸ್ ಮುಖಂಡ ಎಚ್.ಡಿ.ಕುಮಾರಸ್ವಾಮಿ ಅವರು, 'ವಿಧಾನಸೌಧದ ಮೂರನೇ ಮಹಡಿಯನ್ನು ಮೊದಲು ಸ್ವಚ್ಛ ಗೊಳಿಸಲಿ' ಎಂದು ಹೇಳಿಕೆ ನೀಡಿದ್ದಾರೆ. ವಿಧಾನಸೌಧದ ಮೂರನೇ ಮಹಡಿ ಸ್ವಚ್ಛವಾಗಿಲ್ಲವೆಂಬ ಕಾರಣದಿಂದಲೇ ತಾವು ಮುಖ್ಯಮಂತ್ರಿಯಾಗಿದ್ದಾಗ ಕುಮಾರಸ್ವಾಮಿ ಅವರು ಫೈವ್‌ಸ್ಟಾರ್ ಹೋಟೆಲ್‌ವೊಂದರಲ್ಲಿ ಆಡಳಿತ ನಡೆಸಿರುವ ಸಾಧ್ಯತೆ ಇದ್ದಿರಬಹುದು. ಅವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ವಿಧಾನಸೌಧದ ಮೂರನೇ ಮಹಡಿಯನ್ನು ಸ್ವಚ್ಛ ಮಾಡಿ ವಿಧಾನಸೌಧದಿಂದಲೇ ಕಾರ್ಯಭಾರ ನಡೆಸಬಹುದಿತ್ತಲ್ಲವೇ?

ವಡ್ನಾಳ್ ರಮೇಶ, ಚನ್ನಗಿರಿ

ಜನರ ಬೇಡಿಕೆಗೆ ಸಂದ ವಿಜಯ

ಮುಖ್ಯಮಂತ್ರಿ ಆಗಿದ್ದವರನ್ನೇ ಜೈಲಿಗೆ ಕಳುಹಿಸುವಂಥ ನಿಖಾ ಸಾಮರ್ಥ್ಯ ಹೊಂದಿದ್ದ ಲೋಕಾಯುಕ್ತವನ್ನು ದುರ್ಬಲಗೊಳಿಸಲು ಭ್ರಷ್ಟಾಚಾರ ನಿಗ್ರಹ ದಳವನ್ನು (ಎಸಿಬಿ) ರಚಿಸಲಾಗಿತ್ತು. ಈಗ ಎಸಿಬಿಯನ್ನು ರದ್ದುಗೊಳಿಸಿ ಹೈಕೋರ್ಟ್ ವಿಭಾಗೀಯ ಪೀಠ ನೀಡಿರುವ ಆದೇಶವು ಕರ್ನಾಟಕದ ಜನರ ಬೇಡಿಕೆಗೆ ಮತ್ತು ಭ್ರಷ್ಟಾಚಾರದ ವಿರುದ್ಧ ದನಿ ಎತ್ತಿದ ಹೋರಾಟಗಾರರಿಗೆ ಸಂದ ವಿಜಯ.

ಅಮರ ನಾಯಿಕ, ರಾಯಬಾಗ

ಆದ್ಯತೆ ತೆರಿಗೆಗಷ್ಟೇ ಅಲ್ಲ ಸೌಲಭ್ಯಕ್ಕೂ ಇರಲಿ

ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಆಸ್ತಿ ಮತ್ತು ನೀರಿನ ತೆರಿಗೆ ಸಂಗ್ರಹ ಪ್ರಮಾಣವನ್ನು ಶೇ 90ಕ್ಕೆ ಏರಿಸಲು ಗುರಿ ನಿಗದಿ ಮಾಡಲಾಗಿದೆ ಎಂದು ಪೌರಾಡಳಿತ ಸಚಿವ ಎಂ.ಟಿ.ಬಿ. ನಾಗರಾಜ್ ಅವರು ಹೇಳಿರುವುದು ವರದಿಯಾಗಿದೆ (ಪ್ರ.ವಾ., ಆ. 12). ಬೊಕ್ಕಸಕ್ಕೆ ತೆರಿಗೆ ರೂಪದಲ್ಲಿ ಹಣ ತುಂಬುವುದೇನೋ ಸರಿ. ಎಷ್ಟೋ ಮಂದಿ ಭಾರಿ ಪ್ರಮಾಣದ ತೆರಿಗೆ ಉಳಿಸಿಕೊಂಡಿರುವುದೂ ಗಮನಾರ್ಹ. ಬೊಕ್ಕಸ ತುಂಬುವುದಕ್ಕೆ ಉತ್ಸಾಹ ತೋರುವ ಸಚಿವರು, ನಾಗರಿಕರ ನಿತ್ಯ ಬದುಕಿಗೆ ತೊಂದರೆ ಆಗುತ್ತಿರುವುದರ ಕುರಿತೂ ಗಮನಹರಿಸಲಿ.


ತೆರಿಗೆ ಪ್ರಮಾಣ ಏರಿಸುವಂತೆಯೇ ಸೌಲಭ್ಯಗಳನ್ನೂ ನೀಡಲಿ. ಹಳ್ಳ ಬಿದ್ದ ರಸ್ತೆಗಳು, ವರ್ಷಗಳೇ ಕಳೆದರೂ ಮುಗಿಯದ ಕಾಮಗಾರಿಗಳು, ಮಳೆ ಬಂದರೆ ಸಾಕು ರಸ್ತೆಯೇ ನದಿಯಾಗುವ ಮತ್ತು ಕೊಳಚೆ ನೀರು ಮನೆಗೆ ನುಗ್ಗುವ, ರಾಜಕಾಲುವೆ ತುಂಬಿಕೊಳ್ಳುವಂತಹ ತೊಂದರೆಗಳಿಂದ ಜನ ರೋಸಿಹೋಗಿದ್ದಾರೆ. ತೆರಿಗೆ ಹಣವು ಅಪವ್ಯಯ ವಾಗದಂತೆ ಸಮರ್ಥವಾಗಿ ಬಳಸಿ ಜನರಿಗೆ ಅನುಕೂಲ ಮಾಡಿಕೊಡಲು ಆದ್ಯತೆ ನೀಡಬೇಕು. ಸೌಲಭ್ಯ ಒದಗಿಸಲು ಗುರಿ ನಿಗದಿ ಮಾಡಲಿ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ರಾಜಕೀಯ ಪಕ್ಷಗಳು ಉಚಿತ ಕೊಡುಗೆಗಳ ಭರವಸೆ ಕೊಡುವುದು ಸರಿಯೇ?

ಉಚಿತ ಕೊಡುಗೆ ಕೊಟ್ಟರೆ ತಪ್ಪೇನು?



ಅತ್ಯಂತ ಮೂಲಭೂತ ಪ್ರಶ್ನೆ ಎನೆಂದರೆ, ಉಚಿತ ಕೊಡುಗೆಗಳು ಎಂದರೆ ಏನು ಮತ್ತು ಪ್ರಜಾಪ್ರಭುತ್ವದಲ್ಲಿ ಅದು ಇದ್ದರೆ ತಪ್ಪೇನು ಎಂಬುದಾಗಿದೆ. ಜನರಿಗೆ ಉಚಿತವಾಗಿ ಏನನ್ನಾದರೂ ಕೊಡುವುದಾದರೆ ಅದಕ್ಕೆ ಆಕ್ಷೇಪ ಏಕೆ? ಬಂಡವಾಳಶಾಹಿ ದೇಶಗಳಲ್ಲಿ ಕೂಡ ಪೊಲೀಸ್ ಮತ್ತು ಸೇನೆಯ ಸೇವೆಯನ್ನು ಜನರಿಗೆ ಉಚಿತವಾಗಿಯೇ ಒದಗಿಸಲಾಗುತ್ತಿದೆ. ಅದಕ್ಕೆ ಯಾವ ಆಕ್ಷೇಪವೂ ಇರುವುದಿಲ್ಲ

ಪ್ರಜಾವಾಣಿ ಚರ್ಚೆ

• ಯೋಗೇಂದ್ರ ಯಾದವ್

‘ಉಚಿತ ಕೊಡುಗೆ’ಗಳ ಕುರಿತು ನಡೆಯುತ್ತಿರುವ ರಾಷ್ಟ್ರೀಯ ಚರ್ಚೆಯಿಂದ ಈವರೆಗೆ ಒಂದು ಸಕಾರಾತ್ಮಕ ಫಲ ಉಂಟಾಗಿದೆ. ಅದೆಂದರೆ, ರುಚಿಯಲ್ಲಿ ಚಾಕೊಲೇಟ್ ಅಥವಾ ಮಿಠಾಯಿಯನ್ನು ಸೋಲಿಸಬಲ್ಲ ನನ್ನ ಅಚ್ಚುಮೆಚ್ಚಿನ ‘ರೆವ್ಡಿ’– ಎಳ್ಳು ಮತ್ತು ಬೆಲ್ಲ ಬಳಸಿ ತಯಾರಿಸಿದ ಸಿಹಿತಿಂಡಿ– ಕುರಿತು ಇಡೀ ದೇಶಕ್ಕೆ ತಿಳಿಯಿತು. ಉಳಿದಂತೆ ಈ ವಿಚಾರದಲ್ಲಿ ನಡೆಯುತ್ತಿರುವ ಚರ್ಚೆ ಅಭಿರುಚಿಹೀನ ಮತ್ತು ಅರ್ಥಹೀನ.

‘ಉಚಿತ ಕೊಡುಗೆ’ಗಳ ಬಗ್ಗೆ ಗಂಭೀರ ಪ್ರಶ್ನೆ ಇರುವುದರಿಂದ ಚರ್ಚೆ ಈ ರೀತಿ ಆಗಬೇಕಾಗಿರಲಿಲ್ಲ: ರಾಜಕೀಯ ಪಕ್ಷಗಳು ಮತದಾರರ ಸ್ಥಿತಿಯಲ್ಲಿ ದೀರ್ಘಾವಧಿಯಲ್ಲಿ ಗಮನಾರ್ಹ ಸುಧಾರಣೆ ಸಾಧ್ಯವಾಗುವ ಕ್ರಮಗಳನ್ನು ಕೈಗೊಳ್ಳುವ ಬಲು ಸಣ್ಣ ಸಣ್ಣ ಉಡುಗೊರೆಗಳನ್ನು ನೇರವಾಗಿ ನೀಡುವುದು ಏಕೆ? ಇಲ್ಲಿ ಇರುವ ಸಮಸ್ಯೆ ಏನೆಂದರೆ, ಈ ಪ್ರಶ್ನೆ ಕೇಳುವ ಅರ್ಹತೆ ಇಲ್ಲದ ಜನರು, ಈ ಪ್ರಶ್ನೆ ಕೇಳಲು ಸೂಕ್ತವಲ್ಲದ ವೇದಿಕೆಯಲ್ಲಿ ಈ ಪ್ರಶ್ನೆಯನ್ನು ಕೇಳುತ್ತಿದ್ದಾರೆ. ಹಾಗಾಗಿ, ಈ ಕುರಿತು ಅರ್ಥಪೂರ್ಣ ಚರ್ಚೆ ಅಸಾಧ್ಯವಾಗಿಬಿಟ್ಟಿದೆ.

ನಾವು ಈ ಎರಡೂ ತೊಡಕುಗಳನ್ನು ಬದಿಗೆ ಸರಿಸೋಣ. ಮತದಾರರನ್ನು ಆಕರ್ಷಿಸುವುದಕ್ಕಾಗಿ ರಾಜಕೀಯ ಪಕ್ಷಗಳು ಉಚಿತ ಕೊಡುಗೆಗಳನ್ನು ನೀಡುವ ‘ರೆವ್ಡಿ ಸಂಸ್ಕೃತಿ’ಯ ಕುರಿತು ಪ್ರಶ್ನೆಗಳನ್ನು ಎತ್ತಲು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಯಾವ ನೈತಿಕ ಹಕ್ಕೂ ಇಲ್ಲ ಎಂಬುದು ಸ್ಪಷ್ಟ. ಅವರು ಮತ್ತು ಅವರ ಪಕ್ಷವು ಈ ವಿಚಾರದಲ್ಲಿ ಎಸಗಿರುವ ತಪ್ಪು ಇತರ ಪಕ್ಷಗಳಿಗಿಂತ ಕಡಿಮೆ ಏನಲ್ಲ. ಪ್ರತಿಯೊಬ್ಬರ ಬ್ಯಾಂಕ್ ಖಾತೆಗೆ ₹15 ಲಕ್ಷ ಜಮೆ ಮಾಡುವ ಬಗ್ಗೆ ಮಾತನಾಡಿದವರು ಮೋದಿ ಅವರೇ. ಉತ್ತರ ಪ್ರದೇಶ ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ಸಾಲ ಮನ್ನಾ ಭರವಸೆಯನ್ನು ಅವರೇ ಕೊಟ್ಟಿದ್ದರು. ಅವರ ಪಕ್ಷವು ವಿಧಾನಸಭೆ ಚುನಾವಣೆಗಳ ಸಂದರ್ಭದಲ್ಲಿ ಎಲ್ಲ ರೀತಿಯ ಉಚಿತ ಕೊಡುಗೆಗಳ ಭರವಸೆಗಳನ್ನೂ ಮತದಾರರಿಗೆ ನೀಡಿದೆ.

ಈ ವಿಚಾರ ಚರ್ಚೆಯಾಗಬೇಕಾದ ವೇದಿಕೆ ಸುಪ್ರೀಂ ಕೋರ್ಟ್ ಖಂಡಿತವಾಗಿಯೂ ಅಲ್ಲ. ಉಚಿತ ಕೊಡುಗೆಗಳ ಭರವಸೆ ಕೊಟ್ಟ ರಾಜಕೀಯ ಪಕ್ಷದ ಮಾನ್ಯತೆ ರದ್ದುಮಾಡಬೇಕು ಎಂದು ಅರ್ಜಿದಾರರೊಬ್ಬರು ಸುಪ್ರೀಂ ಕೋರ್ಟನ್ನು ಕೋರಿದ್ದಾರೆ. ಚುನಾವಣಾ ಬಾಂಡ್ ಕುರಿತ ಅರ್ಜಿಗಳ ವಿಚಾರಣೆಗೆ ಸಮಯ ಕೊಡಲಾಗದ ಸುಪ್ರೀಂ ಕೋರ್ಟ್, ಉಚಿತ ಕೊಡುಗೆಗಳ ಕುರಿತ ಅರ್ಜಿಯ ವಿಚಾರಣೆ ನಡೆಸುತ್ತಾ ಕೂತಿದೆ.

ಇಂತಹ ಪ್ರಸ್ತಾವಗಳ ಉಲ್ಲೇಖವಾದಾಗಲೆಲ್ಲ, ಕಳೆದು ಹೋದ ಬೀಗದ ಕೈಗಳನ್ನು ದೀಪದ ಕಂಬದ ಕೆಳಗೆ ಹುಡುಕುವ ವ್ಯಕ್ತಿಯ ಪ್ರಸಂಗ ನನಗೆ ನೆನಪಾಗುತ್ತದೆ. ‘ಬೀಗದ ಕೈ ಕಳೆದು ಹೋದದ್ದು ಎಲ್ಲಿ?’ ಎಂದು ಕೇಳಿದರೆ, ಆತ ದೂರದ ಕತ್ತಲಿನ ಪ್ರದೇಶದತ್ತ ಬೊಟ್ಟು ಮಾಡುತ್ತಾನೆ. ‘ಹಾಗಾದರೆ ಇಲ್ಲಿ ಏಕೆ ಹುಡುಕುತ್ತಿರುವೆ?’ ಎಂದು ಕೇಳಿದರೆ ‘ಏಕೆಂದರೆ ಇಲ್ಲಿ ಬೆಳಕು ಇದೆ’ ಎಂದು ಮುಗ್ಧವಾಗಿ ಹೇಳುತ್ತಾನೆ. ರಾಜಕೀಯದಲ್ಲಿರುವ ಅನಿಷ್ಟಗಳಿಗೆ ನ್ಯಾಯಾಂಗ ಅಥವಾ ಸಾಂಸ್ಥಿಕ ಪರಿಹಾರಗಳನ್ನು ಬಯಸುವ ಜನರನ್ನು ಕಂಡರೆ ನನಗೆ ಆ ಮುಗ್ಧನಂತೆ ಇವರೂ ಅಮಾಯಕರು ಅನಿಸುತ್ತದೆ.

ರಾಜಕೀಯ ಪಕ್ಷಗಳ ಚಿಹ್ನೆಯನ್ನು ರದ್ದುಪಡಿಸುವ ಮೂಲಕ ಆ ಪಕ್ಷಕ್ಕೆ ರಾಜಕೀಯ ಯಶಸ್ಸು ದಕ್ಕದಂತೆ ಮಾಡುವುದು ರೋಗಕ್ಕಿಂತ ಕೆಟ್ಟದಾದ ಔಷಧ ಎಂಬುದು ಒಂದು ನಿಮಿಷ ಯೋಚಿಸಿದರೆ ತಿಳಿಯುತ್ತದೆ. ಪ್ರಜಾಪ್ರಭುತ್ವದಲ್ಲಿ ಈ ಖಡ್ಗವನ್ನು ಯಾರೂ ಝುಳಪಿಸಬಾರದು. ರಾಜಕೀಯ ಪ್ರತಿಸ್ಪರ್ಧಿಗಳು ಚುನಾವಣೆಯಲ್ಲಿ ಸ್ಪರ್ಧಿಸುವುದರಿಂದ ಒಂದಲ್ಲ ಒಂದು ನೆಪ ಒಡ್ಡಿ ತಡೆಯುವುದು ಪ್ರಜಾಪ್ರಭುತ್ವವನ್ನು ಕೊಲೆ ಮಾಡುವ ಅತ್ಯಂತ ಸಾಮಾನ್ಯ ತಂತ್ರ. ಇಂತಹ ಅವಕಾಶ ನಮ್ಮ ದೇಶದಲ್ಲಿ ಇಲ್ಲ. ಇಂತಹ ಅವಕಾಶವು ತೆರೆದುಕೊಳ್ಳಲೇಬಾರದು.

ಬಾಹ್ಯ ಬೆದರಿಕೆಗಳು, ಅಲ್ಪಾವಧಿ ಲೋಪಗಳು, ವೈಯಕ್ತಿಕ ಇಷ್ಟಾನಿಷ್ಟಗಳು, ಬಹುಸಂಖ್ಯಾತವಾದದ ಅತಿರೇಕಗಳಿಂದೆಲ್ಲ ಪ್ರಜಾಪ್ರಭುತ್ವವನ್ನು ದೂರ ಇರಿಸಬಹುದು. ಆದರೆ, ಪ್ರಜಾಸತ್ತೆಯನ್ನು ಜನರಿಂದ ದೂರ ಇರಿಸಲು ಸಾಧ್ಯವಾಗದು. ‘ಉಚಿತ ಕೊಡುಗೆ’ಗಳು ಜನರನ್ನು ಆಕರ್ಷಿಸುತ್ತವೆ ಎಂದಾದರೆ, ಜನರಲ್ಲಿ ಜಾಗೃತಿ ಮೂಡಿಸಿ. ಬಹಿರಂಗಪಡಿಸಬೇಕಾದ ಅಂಶಗಳನ್ನು ಇನ್ನಷ್ಟು ಹೆಚ್ಚಿಸಿ, ಈ ಭರವಸೆಗಳ ಟೊಳ್ಳುತನವನ್ನು ಬಯಲಾಗಿಸಬಹುದು. ಅಸಾಧ್ಯವಾದ ಭರವಸೆಗಳನ್ನು ನೀಡಿದ ರಾಜಕೀಯ ಪಕ್ಷಗಳ ಕುರಿತು ತನಿಖಾ ವರದಿ ಪ್ರಕಟಿಸುವಂತೆ ಮಾಧ್ಯಮವನ್ನು ಸಶಕ್ತಗೊಳಿಸಬಹುದು.

ಅತ್ಯಂತ ಮೂಲಭೂತ ಪ್ರಶ್ನೆ ಏನೆಂದರೆ, ಉಚಿತ ಕೊಡುಗೆಗಳು ಎಂದರೆ ಏನು ಮತ್ತು ಪ್ರಜಾಪ್ರಭುತ್ವದಲ್ಲಿ ಅದು ಇದ್ದರೆ ತಪ್ಪೇನು ಎಂಬುದಾಗಿದೆ. ಜನರಿಗೆ ಉಚಿತವಾಗಿ ಏನನ್ನಾದರೂ ಕೊಡುವುದಾದರೆ ಅದಕ್ಕೆ ಆಕ್ಷೇಪ ಏಕೆ? ಬಂಡವಾಳಶಾಹಿ ದೇಶಗಳಲ್ಲಿ ಕೂಡ ಪೊಲೀಸ್ ಮತ್ತು ಸೇನೆಯ ಸೇವೆಯನ್ನು ಜನರಿಗೆ ಉಚಿತವಾಗಿಯೇ ಒದಗಿಸಲಾಗುತ್ತಿದೆ. ಅದಕ್ಕೆ ಯಾವ ಆಕ್ಷೇಪವೂ ಇರುವುದಿಲ್ಲ. ಶಿಕ್ಷಣ, ಆರೋಗ್ಯ, ಜೀವನೋಪಾಯ ಮತ್ತು ಘನತೆಯಿಂದ ಬದುಕುವ ಸ್ಥಿತಿಯನ್ನು ಪ್ರತಿಯೊಬ್ಬರಿಗೂ ಉಚಿತವಾಗಿ ಒದಗಿಸುವ ಕಲ್ಯಾಣ ರಾಜ್ಯವಾಗಿಯೇ ಇರಬೇಕು ಎಂದು ನಮ್ಮ ಸಂವಿಧಾನವೂ ಹೇಳುತ್ತದೆ. ಶಿಕ್ಷಣ, ವೈದ್ಯಕೀಯ ಸೇವೆ ಮತ್ತು ಇತರ ಸೇವೆಗಳನ್ನು ಉಚಿತವಾಗಿ ನೀಡಿದರೆ ಅದಕ್ಕೆ ಯಾರ ಅಭ್ಯಂತರವೂ ಇಲ್ಲ. ಸರ್ಕಾರವು ತನ್ನ ಸಾಂವಿಧಾನಿಕ ಕರ್ತವ್ಯಗಳನ್ನು ಈ ಮೂಲಕ ಪೂರೈಸುತ್ತಿದೆ ಅಷ್ಟೇ.

ಆದರೆ, ಆಕ್ಷೇಪ ವ್ಯಕ್ತಪಡಿಸಲೇಬೇಕಾದ ಉಚಿತ ಕೊಡುಗೆಗಳ ಬೇರೊಂದು ಬಗೆ ಇದೆ. ಶ್ರೀಮಂತರಿಗೆ ಸದ್ದಿಲ್ಲದೆ ನೀಡುವ ಭಾರಿ ಮೊತ್ತದ ಸಹಾಯಧನ ಅದು. ಸರ್ಕಾರವು ಪ್ರತಿ ವರ್ಷವೂ ಕೋಟ್ಯಂತರ ರೂಪಾಯಿ ಕಾರ್ಪೊರೇಟ್ ತೆರಿಗೆಯನ್ನು ಅಧಿಕೃತವಾಗಿಯೇ ಮನ್ನಾ ಮಾಡುತ್ತದೆ. ಈ ಕಂಪನಿಗಳು ಕೋಟ್ಯಂತರ ರೂಪಾಯಿ ಲಾಭ ಮಾಡಿಕೊಳ್ಳುತ್ತವೆ. ಕಳೆದ ಐದು ವರ್ಷಗಳಲ್ಲಿ ಸುಮಾರು ₹10 ಲಕ್ಷ ಕೋಟಿ ಸಾಲವನ್ನು ವಸೂಲಿ ಮಾಡಲಾಗದ ಸಾಲ ಎಂಬ ವರ್ಗಕ್ಕೆ ಸೇರಿಸಲಾಗಿದೆ. ಇದು ಅತ್ಯಂತ ಶ್ರೀಮಂತರಿಗೆ ಅರ್ಹತೆ ಇಲ್ಲದಿದ್ದರೂ ನೀಡುವ ಉಚಿತ ಕೊಡುಗೆಗಳಾಗಿವೆ. ಉಚಿತ ಕೊಡುಗೆಗಳ ಬಗ್ಗೆ ಆಕ್ಷೇಪ ಇರುವವರ ಪಟ್ಟಿಯಲ್ಲಿ ಈ ರೀತಿಯ ಉಚಿತ ಕೊಡುಗೆಗಳು ಮೊದಲಿಗೇ ಇರಬೇಕು. ಆದರೆ, ಇದರ ಬಗ್ಗೆ ಮಾಧ್ಯಮದಲ್ಲಿಯಾಗಲಿ ಸುಪ್ರೀಂ ಕೋರ್ಟ್‌ನಲ್ಲಿಯಾಗಲಿ ಚರ್ಚೆಯೇ ಆಗುತ್ತಿಲ್ಲ.

ಟಿ.ವಿ, ಚಿನ್ನದ ಸರ, ಮಿಕ್ಸರ್, ಕಂಪ್ಯೂಟರ್, ಟ್ಯಾಬ್ಲೆಟ್ ಇತ್ಯಾದಿಗಳನ್ನು ಉಚಿತವಾಗಿ ನೀಡುವುದರ ಬಗ್ಗೆ ಏನೆನ್ನಬೇಕು? ಖಂಡಿತವಾಗಿಯೂ ಇವು ಕೆಟ್ಟದಾದ ಸಹಾಯಧನಗಳು ಮತ್ತು ಸರ್ಕಾರದ ಹಣದ ಸರಿಯಾದ ರೀತಿಯ ಬಳಕೆ ಅಲ್ಲ. ಇಂತಹ ಉಚಿತ ಕೊಡುಗೆಗಳಿಗೆ ವೆಚ್ಚ ಮಾಡುವ ಮೊತ್ತವನ್ನು ಮೂಲಸೌಕರ್ಯ ಸೃಷ್ಟಿಗೆ ಮತ್ತು ಇತರ ಸೌಲಭ್ಯಗಳನ್ನು ಉತ್ತಮಪಡಿಸಲು ಬಳಸಿದರೆ ಅದರಿಂದ ಬಡವರಿಗೆ ಹೆಚ್ಚಿನ ಅನುಕೂಲ ಆಗುತ್ತದೆ.

ಕೊನೆಯದಾಗಿ, ಬಡಜನರು ಉಚಿತ ಕೊಡುಗೆ ಸಂಸ್ಕೃತಿಯನ್ನು ಇಷ್ಟಪಡಲು ಕಾರಣಗಳೇನು ಎಂಬುದರ ಬಗ್ಗೆ ಯೋಚಿಸೋಣ. ಈ ‘ವಿಚಾರಹೀನ’ ಉಚಿತ ಕೊಡುಗೆಗಳ ಭರವಸೆಗಳಿಗೆ ಬಲಿ ಬೀಳುವವರು ವಿವೇಕಹೀನರು ಆಗಿರಲಿಕ್ಕಿಲ್ಲ ಅಲ್ಲವೇ? ಪ್ರಜಾಪ್ರಭುತ್ವದ ತರ್ಕವನ್ನು ಪರಿಣತರಿಗಿಂತ ಹೆಚ್ಚು ಚೆನ್ನಾಗಿ ಇವರು ಅರ್ಥ ಮಾಡಿಕೊಂಡಿರಬಹುದು. ಹಣವು ತಮ್ಮವರೆಗೆ ಇಳಿದು ಬರುವುದರ ಅಸಾಧ್ಯತೆಯ ಅರಿವು ಅವರಿಗೆ ಇರಬಹುದು. ‘ತರ್ಕಬದ್ಧ’ ನೀತಿಯ ಸಹಜ ಕಾರ್ಯನಿರ್ವಹಣೆಯಲ್ಲಿ ತಮ್ಮ ವರೆಗೆ ಏನೂ ಹರಿದು ಬಾರದು ಎಂಬುದರ ಅರಿವೂ ಅವರಿಗೆ ಇರಬಹುದು. ಈಗ, ತಮಗೆ ಎಷ್ಟನ್ನು ದಕ್ಕಿಸಿಕೊಳ್ಳಲು ಸಾಧ್ಯವೋ ಅಷ್ಟನ್ನು ಪಡೆದುಕೊಳ್ಳೋಣ ಎಂಬುದೂ ಆಗಿರಬಹುದು. ಉಚಿತ ಕೊಡುಗೆಗಳು ಮಾತ್ರ ಅವರಿಗೆ ವಾಸ್ತವದಲ್ಲಿ ದೊರೆಯುವ ಲಾಭ. ಹಾಗಾಗಿಯೇ ಅವರು ಉಚಿತ ಕೊಡುಗೆಗಳ ಪರವಾಗಿಯೇ ಇರುತ್ತಾರೆ. ಉಚಿತ ಕೊಡುಗೆಗಳ ಕುರಿತು ಆಕ್ಷೇಪ ಇರುವವರು ಅಮರ್ತ್ಯ ಸೇನ್ ಒಮ್ಮೆ ಹೇಳಿರುವಂತೆ ‘ವಿವೇಕವಂತ ಮುಟ್ಠಾಳರೇ’?

ಲೇಖಕ: ಸ್ವರಾಜ್ ಇಂಡಿಯಾ ಸದಸ್ಯ







ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 198

ಮೇನಾದೇವಿಯನ್ನು ಹರಸಿದ ದುರ್ಗೆ

ಹಿಮವಂತ ಮತ್ತು ಮೇನಾದೇವಿಯರು ತಪಸ್ಸನ್ನಾಚರಿಸಿದರು. ರಾತ್ರಿ ಹಗಲು ದುರ್ಗಾದೇವಿ ಮತ್ತು ಪರಮೇಶ್ವರನನ್ನು ಚಿಂತಿಸುತ್ತಾ ಭಕ್ತಿಯಿಂದ ಆರಾಧಿಸಿದರು. ಮೇನಾದೇವಿಯು ಗಂಗಾನದಿಯ ಓಷಧಿಪ್ರಸ್ಥದ ದಡದಲ್ಲಿ ದೊಡ್ಡದಾದ ಉಮಾದೇವಿಯ ಮೂರ್ತಿಯನ್ನು ನಿರ್ಮಿಸಿದಳು. ಚೈತ್ರಮಾಸದಲ್ಲಿ ತಪಸ್ಸು ಪ್ರಾರಂಭಿಸಿದಳು. ಅಷ್ಟಮಿಯ ದಿನ ಉಪವಾಸವಿದ್ದು, ನವಮಿಯಲ್ಲಿ ಮೋದಕ, ತಂಬಿಟ್ಟು, ಪಾಯಸ, ಗಂಧ, ಪುಷ್ಪ ಮುಂತಾದುವುಗಳಿಂದ ಉಮಾದೇವಿಯನ್ನು ಪೂಜಿಸಿದಳು.

ಒಮ್ಮೆ ಯಾವ ಆಹಾರವನ್ನೂ ಸೇವಿಸದೆ ದೇವಿಯನ್ನರ್ಚಿಸಿದರೆ, ಒಮ್ಮೆ ನೀರನ್ನು ಮಾತ್ರ ಸೇವಿಸಿ ಭಕ್ತಿಯಿಂದ ಉಮಾದೇವಿಯನ್ನು ಆರಾಧಿಸುತ್ತಾ ಇಪ್ಪತ್ತೇಳು ವರ್ಷಗಳನ್ನು ಕಳೆದಳು. ಇವಳ ಭಕ್ತಿಗೆ ಮೆಚ್ಚಿ ಜಗನ್ಮಾತೆಯು ಪ್ರತ್ಯಕ್ಷಳಾಗಿ, ‘ಮೇನಾದೇವಿ, ನೀನು ಏನನ್ನು ಪ್ರಾರ್ಥಿಸಿಕೊಂಡಿರುವೆಯೋ, ಅದೆಲ್ಲವನ್ನೂ ಅನುಗ್ರಹಿಸುವೆ’ ಎನ್ನುತ್ತಾಳೆ. ಮೇನಾದೇವಿಯು ‘ನಿನ್ನ ದಿವ್ಯರೂಪವನ್ನು ಪ್ರತ್ಯಕ್ಷಳಾಗಿ ನೋಡಿ ಧನ್ಯಳಾದೆ’ ಎನ್ನುತ್ತಾಳೆ. ಮೇನಾದೇವಿಯನ್ನು ತನ್ನ ಬಾಹುಗಳಿಂದ ಜಗನ್ಮಾತೆ ಆಲಿಂಗಿಸಿದಳು.

ಮೇನಾದೇವಿಯು ‘ಓ ದೇವಿ, ಜಗತ್ತನ್ನು ಸೃಷ್ಟಿಸುವವಳು ನೀನೇ, ರಕ್ಷಿಸುವವಳು ನೀನೇ. ಭಕ್ತರಿಗೆ ಸಕಲ ಇಷ್ಟಾರ್ಥಗಳನ್ನೂ ನೀಡಿ, ನಿತ್ಯಾನಂದವನ್ನು ಉಂಟುಮಾಡುವವಳು ನೀನೇ. ಓ ದೇವಿ, ನೀನು ಜಗತ್ತಿಗೆ ಕಾರಣಳು. ಜಗತ್ತು ನಿನ್ನಲ್ಲಿಯೇ ನಿಂತಿರುವುದು. ಸಾಂಖ್ಯರು ಹೇಳುವ ಪ್ರಕೃತಿಯೂ ನೀನು, ಪುರುಷನೂ ನೀನು, ಬ್ರಹ್ಮವಸ್ತುವನ್ನು ದೊರಕಿಸಿಕೊಡುವವಳು ನೀನು. ಅಗ್ನಿಯಲ್ಲಿರುವ ಜ್ವಲನಶಕ್ತಿ, ಸೂರ್ಯನಲ್ಲಿರುವ ತಾಪನಶಕ್ತಿ ಹಾಗೂ ಚಂದ್ರನಲ್ಲಿರುವ ಆಹ್ಲಾದನಶಕ್ತಿಯೂ ನೀನೇ. ಜಗತ್ತಿಗೆ ಮಾತಾಮಹಿಯಾದ ನೀನು, ಆಯಾಯ ಕಾಲದಲ್ಲಿ ಬೇಕಾದ ರೂಪಗಳನ್ನು ಧರಿಸಿ ಸೃಷ್ಟಿ, ಸ್ಥಿತಿ, ಪ್ರಳಯಗಳನ್ನು ಮಾಡುವೆ. ಬ್ರಹ್ಮ ವಿಷ್ಣು, ರುದ್ರರ ಶರೀರಗಳಿಗೂ ನೀನೇ ಕಾರಣಳು. ನಿನ್ನ ಅನುಗ್ರಹಕ್ಕೆ ನಾನು ಯೋಗ್ಯಳಾಗಿದ್ದರೆ ವರವನ್ನು ಕೇಳುವೆನು. ಅವುಗಳನ್ನು ಈಡೇರಿಸು.

‘ಮೊದಲು ನನಗೆ ನೂರು ಪುತ್ರರು ಜನಿಸಬೇಕು. ಅವರೆಲ್ಲರೂ ದೀರ್ಘಾಯುಷ್ಯವಂತರೂ ಬಲಶಾಲಿಗಳೂ ಸರ್ವಸಮೃದ್ಧಿಯುಳ್ಳವರೂ ಆಗಿರಬೇಕು. ಆಮೇಲೆ ಓರ್ವ ಪುತ್ರಿಯು ಜನಿಸಬೇಕು. ಅವಳು ರೂಪಗುಣಗಳಿಂದ ಕೂಡಿ ಮಾತೃಕುಲ ಪಿತೃಕುಲಗಳೆರಡಕ್ಕೂ ಗೌರವ ತರುವಂಥವಳಾಗಿರಬೇಕು. ಮೂರು ಲೋಕಗಳೂ ಅವಳನ್ನು ಪೂಜಿಸಬೇಕು. ಇದಕ್ಕಾಗಿ ಓ ದೇವಿ, ನೀನೇ ನನ್ನ ಪುತ್ರಿಯಾಗಿ ಜನಿಸು. ಆಮೇಲೆ ರುದ್ರನ ಪ್ರಿಯಮಡದಿಯಾಗಿ ಬೇಕಾದಂತಹ ಲೀಲೆಯನ್ನಾಚರಿಸು’ ಎಂದು ಪ್ರಾರ್ಥಿಸಿದಳು.

‘ಎಲೈ ಮೇನಾದೇವಿ, ನೀನು ಕೇಳಿದಂತೆ ನಿನಗೆ ಬಲಿಷ್ಠರಾದ ನೂರು ಪುತ್ರರು ಜನಿಸುವರು. ಅವರಲ್ಲಿ ಮೊದಲನೆಯವನು ತುಂಬಾ ಬಲವಂತನಾಗಿರುವನು. ನಿನ್ನ ಭಕ್ತಿಗೆ ಸಂತುಷ್ಟಳಾದ ನಾನು ನಿನ್ನ ಪುತ್ರಿಯಾಗಿ ಜನಿಸುವೆ’ ಎಂದು ಹೇಳಿ ಜಗನ್ಮಾತೆ ಪರಮೇಶ್ವರಿಯೂ ಅಂತರ್ಧಾನಳಾದಳು. ಮೇನಾದೇವಿ ಪತಿ ಹಿಮವಂತನಿಗೆ ದುರ್ಗೆಯಿಂದ ವರ ಪಡೆದುದನ್ನು ಹೇಳಿದಳು. ಮುಂದೆ ಯೋಗ್ಯವಾದ ಕಾಲದಲ್ಲಿ ಮೇನಾದೇವಿಗೆ ಗರ್ಭೋತ್ಪತ್ತಿಯಾಯಿತು. ಶುಭದಿವಸದಲ್ಲಿ ಮೈನಾಕ ಎಂಬ ಪುತ್ರರತ್ನವೊಂದನ್ನು ಹಡೆದಳು. ಮೈನಾಕನು ದೊಡ್ಡವನಾದಾಗ ನಾಗಕನ್ಯೆಯರ ಭೋಗವನ್ನನುಭವಿಸುತ್ತಾ ಪಾತಾಳದಲ್ಲಿ ನೆಲಸಿದನು. ಸಮುದ್ರನಿಗೂ ಅವನಿಗೂ ದೃಢವಾದ ಸಖ್ಯವಾಯಿತು. ಇದರಿಂದ ಕೋಪಗೊಂಡ ಇಂದ್ರ ವಜ್ರಾಯುಧವನ್ನು ಹಿಡಿದು ಪರ್ವತಗಳ ರೆಕ್ಕೆಗಳನ್ನು ಕತ್ತರಿಸತೊಡಗಿದರೂ, ಮೈನಾಕನಿಗೆ ವಜ್ರಾಯುಧದ ಪ್ರಹಾರವೇ ತಾಕಲಿಲ್ಲ. ಇಂದೂ ಮೈನಾಕನು ರೆಕ್ಕೆಗಳುಳ್ಳವನಾಗಿಯೇ ಇರುವನು. ಮೈನಾಕನೇ ಮೇನಾದೇವಿಯ ನೂರು ಮಕ್ಕಳಲ್ಲಿ ಶ್ರೇಷ್ಠನು. ಮಹಾ ಬಲಿಷ್ಠನು. ಅನೇಕ ಪರ್ವತಗಳಿಗೆ ಆಶ್ರಯನಾಗಿರುವನು ಎಂಬಲ್ಲಿಗೆ ಶ್ರೀ ಶಿವಮಹಾಪುರಾಣದಲ್ಲಿ, ಎರಡನೆಯದಾದ ರುದ್ರಸಂಹಿತೆಯ ಮೂರನೇ ಪಾರ್ವತೀಖಂಡದ ಐದನೆಯ ಅಧ್ಯಾಯ ಮುಗಿಯುತ್ತದೆ.

ಉಚಿತ ಕೊಡುಗೆಯಿಲ್ಲ, ಬದಲು ಪೂರ್ಣ ಬೆಂಬಲ



ಬೇರೊಬ್ಬರ ವೆಚ್ಚದಲ್ಲಿ ಉಚಿತ ಕೊಡುಗೆಗಳನ್ನು ನೀಡುವ ವ್ಯವಸ್ಥೆಯ ಬದಲಿಗೆ, ಸಮಾನ ಅವಕಾಶ ನೀಡುವ ವ್ಯವಸ್ಥೆಯನ್ನು ಭಾರತೀಯ ನಾಗರಿಕರು ಬಯಸುತ್ತಾರೆ. ಇದು ಅವಲಂಬಿತರ ಭಾರತವಲ್ಲ, ಬದಲಿಗೆ ಅಭಿವೃದ್ಧಿ ಮತ್ತು ಸಮರ್ಥರಿಗಾಗಿ ಮತ ನೀಡುವ ನವ ಭಾರತವಾಗಿದೆ

• ಡಾ.ಸಮೀರ್ ಕಾಗಲ್ಕರ್

ಶ್ರೀಮಂತರಲ್ಲಿರುವ ಹೆಚ್ಚುವರಿ ಸಂಪತ್ತನ್ನು ತೆಗೆದುಕೊಂಡು ಬಡವರಿಗೆ ಹಂಚುವುದು ಎಂದು ಸಮಾಜವಾದವನ್ನು ಅರ್ಥೈಸಬಹುದು. ಹೀಗೆ ಶ್ರೀಮಂತರ ಹೆಚ್ಚುವರಿ ಸಂಪತ್ತನ್ನು ಬಡವರಿಗೆ ಹಂಚುವುದು, ಉದ್ಯಮಶೀಲ ವ್ಯಕ್ತಿಗಳನ್ನು ಶಿಕ್ಷಿಸುವ ಮೂಲಕ ಬಡತನವನ್ನು ಹಂಚುವುದೂ ಆಗಿದೆ. ಈ ಮೂಲಕ ಸಮಾನತೆಯನ್ನು ತರುತ್ತೇವೆ ಎನ್ನುವುದು ಭ್ರಮೆ.

ಮತ್ತೊಂದೆಡೆ ಸಮಾನತೆಯನ್ನು ಸಾಧಿಸುವುದಕ್ಕಾಗಿ ಎಲ್ಲರಿಗೂ ಸಮಾನ ಅವಕಾಶ ನೀಡಬೇಕು ಎಂಬ ತತ್ವವನ್ನು ಬಿಜೆಪಿ ನಂಬಿದೆ ಮತ್ತು ಅದಕ್ಕಾಗಿ ದುಡಿಯುತ್ತಿದೆ. ಸಾಮಾನ್ಯವಾಗಿ ಪ್ರತಿಯೊಬ್ಬರಲ್ಲೂ ಸ್ವಾಭಾವಿಕವಾದ ಸಾಮರ್ಥ್ಯಗಳಿರುತ್ತವೆ. ಆದರೆ, ಆ ಸಾಮರ್ಥ್ಯವನ್ನು ಜಾಗೃತಗೊಳಿಸುವ ಕೆಲಸವಾಗಬೇಕು. ಜನರು ತಮ್ಮ ಗುರಿ ಸಾಧಿಸಲು ಅವರಲ್ಲಿರುವ ಈ ಸಾಮರ್ಥ್ಯಕ್ಕೆ ಅವಕಾಶ ನೀಡುವುದು ಇಂದಿನ ಅಗತ್ಯ. ಅಂದರೆ, ಪ್ರತಿಯೊಬ್ಬರಿಗೂ ಸಮಾನ ಅವಕಾಶ ನೀಡುವುದಕ್ಕಾಗಿ ಎಲ್ಲಾ ಸ್ವರೂಪದ ಪ್ರೋತ್ಸಾಹವನ್ನು ನೀಡಬೇಕು ಎಂದು ಬಿಜೆಪಿ ನಂಬಿದೆ.

ಉದಾಹರಣೆಗೆ ಒಬ್ಬ ಬಡ ಮನುಷ್ಯನಿಗೆ, ನಲ್ಲಿ ನೀರು, ವಿದ್ಯುತ್, ಬ್ಯಾಂಕ್ ಖಾತೆ, ಸಹಾಯಧನದ ಮೂಲಕ ಘನತೆಯಿಂದ ಬದುಕುವುದು, ಆರೋಗ್ಯ ವಿಮೆ, ಕನಿಷ್ಠ ವೈದ್ಯಕೀಯ ಸೇವೆಗಳ ಲಭ್ಯತೆ, ಶೌಚಾಲಯ, ಸೂರು, ಅಡುಗೆ ಅನಿಲ ಸಂಪರ್ಕ, ಕಡಿಮೆ ಬಡ್ಡಿದರದ ಸಾಲ, ಸುಲಭವಾಗಿ ಉದ್ಯಮ ನಡೆಸುವ ಅವಕಾಶಗಳಂತಹ ಸೌಕರ್ಯಗಳೂ ಲಭ್ಯವಿರುವುದಿಲ್ಲ. ಆತ ತನ್ನ ಸಾಮರ್ಥ್ಯದ ಬಹುಪಾಲನ್ನು, ಈ ಸೌಕರ್ಯಗಳಿಗಾಗಿ ವ್ಯಯಿಸುತ್ತಾನೆ. ಆದರೆ ಅದೇ ಸಂದರ್ಭದಲ್ಲಿ, ಉಳ್ಳವರು ಉತ್ತಮ ಜೀವನದತ್ತ ನಡೆದಿರುತ್ತಾರೆ.

ಉತ್ತಮ ಜೀವನದತ್ತ ಸಾಗಲು ಬಡವನಿಗೂ ಸಮಾನ ಅವಕಾಶವನ್ನು ನೀಡುವ ಕೆಲಸವನ್ನು ಸರ್ಕಾರ ಮಾಡಬೇಕು ಎಂಬುದು ಪ್ರಧಾನಿ ಮೋದಿ ಅವರ ಪ್ರತಿಪಾದನೆ. ನೇರ ನಗದು ವರ್ಗಾವಣೆ (ಡಿಬಿಟಿ) ಕಾರ್ಯಕ್ರಮವನ್ನು ಇದಕ್ಕೆ ಉದಾಹರಿಸಬಹುದು. ಒಬ್ಬ ಬಡ ವಿಧವೆಯು ಸರ್ಕಾರಿ ಕಚೇರಿಗೆ ಹತ್ತಾರು ಬಾರಿ ಅಲೆಯದೆ ಮತ್ತು ಲಂಚ ನೀಡದೆಯೇ ಒಂದು ಸಣ್ಣ ಮೊತ್ತ ಅವರ ಬ್ಯಾಂಕ್ ಖಾತೆಗೆ ನೇರವಾಗಿ ಜಮೆಯಾಗುತ್ತದೆ. ಒಬ್ಬ ಬಡ ಮಹಿಳೆಗೆ ಅಡುಗೆ ಅನಿಲ ಸಂಪರ್ಕ ದೊರೆಯುವುದರಿಂದ, ಆಕೆ ಉರುವಲಿಗಾಗಿ ಪ್ರತಿದಿನ ಹಲವು ಗಂಟೆ ಅಲೆದಾಡುವುದು ತಪ್ಪುತ್ತದೆ ಮತ್ತು ಆಕೆಯ ಆರೋಗ್ಯವೂ ಸುಧಾರಿಸುತ್ತದೆ. ಮನೆಗೆ ನಲ್ಲಿ ನೀರಿನ ಸಂಪರ್ಕ ನೀಡುವುದರಿಂದ ಮಹಿಳೆಯರು ಪ್ರತಿದಿನ ನೀರಿಗಾಗಿಯೇ ಎರಡು ಗಂಟೆ ವ್ಯಯಿಸುವುದನ್ನು ತಪ್ಪಿಸಬಹುದು. ಈ ಎಲ್ಲಾ ಸೌಲಭ್ಯಗಳಿಂದ ಒಬ್ಬ ಬಡ ಮಹಿಳೆಗೆ ದಿನವೊಂದರಲ್ಲಿ ಐದರಿಂದ ಆರು ಗಂಟೆ ಬಿಡುವು ಸಿಗುತ್ತದೆ. ಅವರು ತಮ್ಮ ಮಕ್ಕಳ ಶಿಕ್ಷಣದತ್ತ ಹೆಚ್ಚು ಗಮನ ಹರಿಸಬಹುದು, ಸಣ್ಣಪುಟ್ಟ ಕೆಲಸ ಮಾಡುವ ಮೂಲಕ ಆದಾಯ ಗಳಿಸಬಹುದು ಅಥವಾ ಮುದ್ರಾ, ಸ್ವನಿಧಿ, ಸ್ಟಾಂಡ್‌ಅಪ್ ಇಂಡಿಯಾದಂತಹ ಕಾರ್ಯಕ್ರಮದ ಮೂಲಕ ಸ್ವಉದ್ಯೋಗ ಆರಂಭಿಸಬಹುದು.

ಬಡ ರೈತನಿಗೆ ಪ್ರತಿವರ್ಷ ₹ 6,000 (ಮೂರು ಕಂತುಗಳಲ್ಲಿ) ನೀಡಲಾಗುತ್ತಿದೆ. ಬೇಸಾಯಕ್ಕೆ ಅಗತ್ಯವಾದ ಸಣ್ಣಪುಟ್ಟ ವೆಚ್ಚಗಳನ್ನು ನಿರ್ವಹಿಸಲು ಅದು ನೆರವಾಗುತ್ತದೆ. ಜತೆಗೆ ಆತ ಸಣ್ಣ–ಪುಟ್ಟ ಖರ್ಚುಗಳಿಗೂ ಸಾಲದ ಸುಳಿಗೆ ಸಿಲುಕುವುದನ್ನು ಈ ಕಾರ್ಯಕ್ರಮ ತಪ್ಪಿಸುತ್ತದೆ.

ಉಚಿತ ಕೊಡುಗೆಗಳು ಮತ್ತು ಸಬಲೀಕರಣಕ್ಕೆ ಬೆಂಬಲ ನೀಡುವುದರ ನಡುವಣ ವ್ಯತ್ಯಾಸವನ್ನು ಪರಿಶೀಲಿಸೋಣ. ಹಿಂದಿನ ಕಾಂಗ್ರೆಸ್ ಸರ್ಕಾರ ‘ಶಾದಿ ಭಾಗ್ಯ’ ಎಂಬ ಕಾರ್ಯಕ್ರಮದ ಮೂಲಕ ಜನರಿಗೆ ನೇರವಾಗಿ ನೀಡುತ್ತಿದ್ದ ಹಣವು ಒಂದು ದುಂದುವೆಚ್ಚವಾಗಿತ್ತು ಮತ್ತು ಸರ್ಕಾರಕ್ಕೂ ಹೊರೆಯಾಗಿತ್ತು. ಬದಲಿಗೆ ಮನೆಯೊಂದರಲ್ಲಿ ಶೌಚಾಲಯ ನಿರ್ಮಿಸಿಕೊಡುವುದರಿಂದ (ಫಲಾನುಭವಿಗಳ ಕೊಡುಗೆಯೂ ಸೇರಿ) ಒಂದು ಸ್ವತ್ತು ನಿರ್ಮಾಣವಾದಂತಾಗುತ್ತದೆ. ಮಹಿಳೆಯರ ಆರೋಗ್ಯ ಸುಧಾರಿಸುತ್ತದೆ ಮತ್ತು ಅವರ ಘನತೆ ಹೆಚ್ಚುತ್ತದೆ.

ಈ ಪರಿಕಲ್ಪನೆಯನ್ನು, ಜನರು ತಮ್ಮ ಸಾಮರ್ಥ್ಯವನ್ನು ಕಂಡುಕೊಳ್ಳಲು ಮತ್ತು ಗುರಿಯನ್ನು ತಲುಪಲು ನಡೆಸುವ ಪೈಪೋಟಿ ಎಂದು ಅರ್ಥಮಾಡಿಕೊಳ್ಳಬೇಕು. ದೇಶ ಪ್ರಗತಿ ಸಾಧಿಸಲು ಇರುವುದು ಇದೊಂದೇ ಮಾರ್ಗ. ಆದರೆ, ಇದನ್ನು ಸಾಧಿಸಲು ಬಡವರ ಎದುರು ಹಲವು ತಡೆಗಳಿವೆ. ಈ ತಡೆಗಳನ್ನು ನಿವಾರಿಸಲು ಸರ್ಕಾರವು ಮುಂದಾಗಲೇಬೇಕು. ‘ಒಬ್ಬ ಮನುಷ್ಯನಿಗೆ ಮೀನು ನೀಡಿದರೆ, ಅದು ಆ ದಿನಕ್ಕಷ್ಟೇ ಆಗುತ್ತದೆ. ಆದರೆ ಮೀನು ಹಿಡಿಯುವುದು ಹೇಗೆ ಎಂಬುದನ್ನು ಆತನಿಗೆ ಕಲಿಸಿದರೆ, ಅದರಿಂದ ಜೀವನಪೂರ್ತಿ ಹಸಿವು ನೀಗಿಸಲು ಸಾಧ್ಯವಾಗುತ್ತದೆ’ ಎಂಬ ಮಾತಿನಂತೆ ಇದನ್ನು ಅರ್ಥೈಸಬಹುದು.

ನಿರುದ್ಯೋಗಿಗಳಿಗೆ ಪ್ರತಿ ತಿಂಗಳು ತಲಾ ₹1,000 ನಿರುದ್ಯೋಗ ಭತ್ಯೆ ನೀಡಲಾಗುತ್ತಿದೆ ಎಂದಿಟ್ಟುಕೊಳ್ಳೋಣ. ಆ ಹಣದಿಂದ ಯಾವುದೇ ರೀತಿಯ ಸ್ವತ್ತು ನಿರ್ಮಾಣ ಸಾಧ್ಯವಿಲ್ಲ ಅಥವಾ ಅವರ ಭವಿಷ್ಯ ರೂಪುಗೊಳ್ಳುವುದಿಲ್ಲ ಅಥವಾ ಅದು ಅವರ ಆದಾಯದ ಮೂಲವನ್ನೂ ರೂಪಿಸುವುದಿಲ್ಲ. ಇಂತಹ ಉಚಿತ ಕೊಡುಗೆಗಳು ಮತಗಳ ಖರೀದಿಯಷ್ಟೆ.

ಇತ್ತೀಚಿನ ಸಾಂಕ್ರಾಮಿಕವನ್ನೇ ಗಮನಿಸೋಣ. ಅದು ಎಲ್ಲರಿಗೂ ಕಷ್ಟಕರವಾಗಿದ್ದರೂ ತೀರಾ ಸಂಕಷ್ಟ ಎದುರಿಸಿದ್ದು, ದಿನದ ಊಟವನ್ನು ಸಂಪಾದಿಸಿಕೊಳ್ಳಲೂ ಸಾಧ್ಯವಾಗದಿದ್ದ ಕಡುಬಡವರು. ಅಂತಹ 80 ಕೋಟಿ ಜನರಿಗೆ 25 ತಿಂಗಳವರೆಗೆ, ಉಚಿತವಾಗಿ ದವಸಧಾನ್ಯವನ್ನು ಪ್ರಧಾನಿ ಮೋದಿ ಅವರು ನೀಡಿದರು. ಬಡವರೂ ಈ ಸಾಂಕ್ರಾಮಿಕದಲ್ಲಿ ಬದುಕಲಿ ಎಂದು ದವಸ ಧಾನ್ಯಗಳನ್ನು ಉಚಿತವಾಗಿ ನೀಡಲಾಯಿತು. ಆದರೆ, ಶ್ರೀಮಂತರಿಗೂ ಉಚಿತವಾಗಿ ಪಡಿತರ ನೀಡಿದ್ದರೆ ಹೇಗಿರುತ್ತಿತ್ತು? ಬಡವರು ತಮ್ಮ ಊಟವನ್ನು ತಾವೇ ಸಂಪಾದಿಸಿಕೊಳ್ಳುವ ಉತ್ತಮ ಅವಕಾಶವನ್ನು ಸರ್ಕಾರ ಮಾಡಿಕೊಡಬೇಕು.


‘ಉಚಿತ ಕೊಡುಗೆಯಿಲ್ಲ, ಬದಲಿಗೆ ಸಂಪೂರ್ಣ ಬೆಂಬಲ’ ಎಂಬ ನೀತಿಯನ್ನು ಪ್ರಧಾನಿ ಮೋದಿ ಅವರು ಪಟ್ಟುಹಿಡಿದು ಪಾಲಿಸುತ್ತಿದ್ದಾರೆ. ಅವರು ಗುಜರಾತ್‌ನ ಮುಖ್ಯಮಂತ್ರಿಯಾಗಿದ್ದಾಗ ಚುನಾವಣೆ ಸಂದರ್ಭದಲ್ಲಿ ವಿರೋಧ ಪಕ್ಷಗಳು, ತಾವು ಅಧಿಕಾರಕ್ಕೆ ಬಂದರೆ ರೈತರಿಗೆ ಉಚಿತ ವಿದ್ಯುತ್ ಕೊಡುತ್ತೇವೆ ಎಂದವು. ಆದರೆ ಮೋದಿ ಅಂತಹ ಘೋಷಣೆ ಮಾಡಲಿಲ್ಲ. ಬದಲಿಗೆ ರೈತರೊಂದಿಗೆ ನೇರವಾಗಿ ಸಂವಾದ ನಡೆಸಿದರು. ‘ನಾನು ಉಚಿತ ವಿದ್ಯುತ್ ನೀಡುವುದಿಲ್ಲ. ಬದಲಿಗೆ ದಿನದ 24 ಗಂಟೆಯೂ ಕೈಗೆಟಕುವ ದರದಲ್ಲಿ ವಿದ್ಯುತ್ ನೀಡುತ್ತೇನೆ. ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾದರೆ ನಾನು ಅದಕ್ಕೆ ಉತ್ತರದಾಯಿ’ ಎಂದರು. 2012ರ ಚುನಾವಣೆಯಲ್ಲಿ ಅವರು ಮತ್ತೆ ಮುಖ್ಯಮಂತ್ರಿಯಾದರು. ಮೋದಿ ಅವರು ಈ ಸಬಲೀಕರಣದ ನೀತಿಯ ಮೂಲಕ, ಉತ್ತರದಾಯಿ ರಾಜಕಾರಣದ ಸಂಸ್ಕೃತಿಯನ್ನು ರೂಪಿಸುತ್ತಿದ್ದಾರೆ. ಉಚಿತ ಕೊಡುಗೆಗಳು ಊಳಿಗಮಾನ್ಯ ಮನಸ್ಥಿತಿಯನ್ನು ಉತ್ತೇಜಿಸುತ್ತವೆ.

ಬೇರೊಬ್ಬರ ವೆಚ್ಚದಲ್ಲಿ ಉಚಿತ ಕೊಡುಗೆಗಳನ್ನು ನೀಡುವ ವ್ಯವಸ್ಥೆಯ ಬದಲಿಗೆ, ಸಮಾನ ಅವಕಾಶ ನೀಡುವ ವ್ಯವಸ್ಥೆಯನ್ನು ಭಾರತೀಯ ನಾಗರಿಕರು ಬಯಸುತ್ತಾರೆ. ಇದು ಅವಲಂಬಿತರ ಭಾರತವಲ್ಲ, ಬದಲಿಗೆ ಅಭಿವೃದ್ಧಿ ಮತ್ತು ಸಮರ್ಥರಿಗಾಗಿ ಮತ ನೀಡುವ ನವ ಭಾರತವಾಗಿದೆ.

ಲೇಖಕ: ಕರ್ನಾಟಕ ಬಿಜೆಪಿ ಆರ್ಥಿಕ ಘಟಕದ ಸಂಚಾಲಕ

ಪದಬಂಧ 5048

– ವಿದ್ಯಾ ವಿನಯ್



ಎಡದಿಂದ ಬಲಕ್ಕೆ

1. ತೆನಾಲಿ ರಾಮನಿಗಿದ್ದ ಬಿರುದು (5)
4. ಈತ ಸಂಪ್ರದಾಯ ವಿರೋಧಿ (3)
5. ಅವಸರವನ್ನು ಹೀಗೆ ಹೇಳಿ (3)
6. ಕೆಸರಿನಲ್ಲಿ ಅರಳಿದ ನೈದಿಲೆ (3)
8. ಅವನ ಜೊತೆಯಲ್ಲಿ ನೋಡಿರುವ ಅರಣ್ಯ (2)
9. ಜಾಗರೂಕತೆಯಿಂದ ವೀಕ್ಷಿಸಿದ ಸ್ಥಳ (2)
10. ಓಬವ್ವನ ಆಯುಧ (3)
14. ಲಂಗ ಧರಿಸಿದವಳನ್ನು ಬೆನ್ನಟ್ಟಿದ ದುರಾಚಾರಿ 3)
15. ಆಯಾಳಿಗಾಗಿರುವ ಸುಸ್ತು (3)
16. ಕಳಿಸಿದರೂ ಹೀಗೆ ಮರಳಿ ಸಂಭವಿಸು! (5)

ಮೇಲಿಂದ ಕೆಳಕ್ಕೆ

1. ಪಾಂಡಿತ್ಯವನ್ನು ಹೊಂದಿದವಳು (3)
2. ಮೋಸಗಾರಿಕೆಯಿದು (4)
3. ವಿಧಿಯನ್ನು ಬರೆಯುವಾತ (3)
4. ಪಾಕದಲ್ಲಿರುವ ದೋಷ ಕಾಣುತ್ತಿದೆಯಲ್ಲ (3)
7. ಸವತಿಯ ಸುತನಿವನು (4)
8. ವನದಲ್ಲಿರುವ ತೀರ್ಥಂಕರ (4)
9. ಜಗತ್ತಿಗೆ ಸಂಬಂಧಿಸಿದ್ದು (4)
11. ಕೆಲವರು ಮಾಡುವ ಕಾರ್ಯ (3)
12. ಮಗನಿಗೆ ಕಾಣಿಸುತ್ತಿರುವ ವೇದ (3)
13.ಯತಿಗೆ ಬಂದಿರುವ ಕೋಪ (3)

5047ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಜಾಯಮಾನ
3.ಕಲಗಚ್ಚು 5.ಸುಗುಣ
6.ದ್ರವ 8.ಕಲಹ
10.ಸಂತ್ರಸ್ತ 11.ಅಮಲು
12.ರಮಿಸು 15.ರಸ
17.ಪರೋಕ್ಷ 18.ಅವಭೃಥ
19.ರಸಹೀನ

ಮೇಲಿಂದ ಕೆಳಕ್ಕೆ:
1.ಜಾಲಂಧ್ರ 2.ನಸುಕು
3.ಕಣಕ 7.ವರ್ಣಸಂಕರ
9.ಹಲಾಲುಕೋರ
13.ಸುಪಥ 14.ಅಕ್ಷರ
16.ಸದನ

ಸುಡೊಕು 5434

3				8		9		1
							6	
	4		9			3		8
6								9
	5		7		9		8	
8						6		
9			2			7		6
	6			9	7		3	
		7				4		5

5433 ಸುಡೊಕು

4	5	6	9	7	1	8	3	2
1	9	2	6	8	3	5	7	4
8	7	3	4	2	5	9	6	1
7	2	1	3	4	9	6	5	8
3	8	5	1	6	2	4	9	7
6	4	9	7	5	8	2	1	3
2	3	8	5	1	6	7	4	9
9	6	4	8	3	7	1	2	5
5	1	7	2	9	4	3	8	6

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶನಿವಾರ ಆಗಸ್ಟ್ 13, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಕೃಷ್ಣ ದ್ವಿತೀಯಾ ಗಂ. 24-54 ನಕ್ಷತ್ರ: ಶತಭಿಷ ಗಂ. 23-28 ಯೋಗ: ಶೋಭನ ಗಂ. 07-49 ಕರಣ: ತೈತಿಲ ಗಂ. 14-17, ಕರ್ಕಾಟಕ ಮಾಸದ 27 ನೇ ದಿನ.
ರಾಹುಕಾಲ : ಬೆಳಿಗ್ಗೆ 09:00 – 10:30 ಸೂರ್ಯೋದಯ : 06-21 ಸೂರ್ಯಾಸ್ತ : 06-49
ಮುಸ್ಲಿಂ ದಿನಾಂಕ : 14 ಮೊಹರಮ್
ದಿನ ವಿಶೇಷ : ಗಾಥಾ ಗಹಂಬರ್ (ಪಾರ್ಸಿ)
ಅದೃಷ್ಟ ಸಂಖ್ಯೆ : 1, 6

ಮೇಷ: ನಿಮ್ಮ ಇಂದಿನ ಯೋಜನೆಗಳಿಗೆ ಮನೆಯವರಿಂದ ವಿರೋಧಾಭಾವ ವ್ಯಕ್ತವಾಗಬಹುದು. ರಾಜಕಾರಣಿಗಳಿಗೆ ಈ ದಿನ ತಮ್ಮ ಪಕ್ಷದ ಬಗೆಗಿನ ಪ್ರಚಾರಕ್ಕಾಗಿ ಉತ್ತಮ ಭಾಷಣ ನಡೆಸಿ ಮನಗೆಲ್ಲುವ ಸದವಕಾಶ ಲಭಿಸುವುದು.

ವೃಷಭ: ವೃತ್ತಿರಂಗದಲ್ಲಿ ಹೊಸ ವಿಚಾರಗಳ ಅನ್ವೇಷಣೆಯ ಕೈಗೂಡುವಿಕೆ ಆರ್ಥಿಕವಾಗಿ ತೊಂದರೆ ಕೊಟ್ಟರೂ, ಮುಂದಿನ ದಿನದಲ್ಲಿ ಲಾಭ ತರಲಿದೆ. ಕುಟುಂಬದಲ್ಲಿದ್ದಂತಹ ವೈಮನಸ್ಸು, ಭಿನ್ನಾಭಿಪ್ರಾಯಗಳು ದೂರಾಗಲಿವೆ.

ಮಿಥುನ: ಕಷ್ಟಗಳಿಗೆ ಮಿತ್ರರಿಂದ ಉತ್ತಮ ಸಹಾಯ ದೊರೆಯುವುದು. ಹಿಂದೆ ಮಾಡಿದ ತಪ್ಪುಗಳಿಗೆ ಪಶ್ಚಾತ್ತಾಪ ಪಡುತ್ತಿದ್ದರೂ ಪುನಃ ತಪ್ಪುಗಳು ಪುನರಾವರ್ತನೆಯಾಗುತ್ತಿದೆ. ಇನ್ನೊಬ್ಬರಲ್ಲಿ ಕೇಳಿ ಸರಿಪಡಿಸಿಕೊಳ್ಳುವ ಪ್ರಯತ್ನ ಮಾಡಿ.

ಕರ್ಕಾಟಕ: ಇಂದಿನ ಜೀವನದಲ್ಲಿ ನಿಮಗೆದುರಾಗಿ ಬರುತ್ತಿರುವ ಅದೃಷ್ಟದ ಲಾಭವನ್ನು ವ್ಯರ್ಥವಾಗದಂತೆ ಪಡೆದುಕೊಳ್ಳಲು ನಿಮ್ಮ ಪರಿಪೂರ್ಣ ಪ್ರಯತ್ನ ಹಾಕುವುದು ಅಗತ್ಯ. ಮಹಾಗಣಪತಿಯನ್ನು ಆರಾಧಿಸಿ ಶುಭವಾಗುವುದು.

ಸಿಂಹ: ಬೆಳ್ಳಿ-ಬಂಗಾರದ ಮಾರಾಟಗಾರರಿಗೆ ಬಿಡುವಿಲ್ಲದಂತಹ ವ್ಯಾಪಾರ ಆಗುವುದು. ವೈದ್ಯಕೀಯ ವಿದ್ಯಾರ್ಥಿಗಳು ಓದಿನಲ್ಲಿ ಪರಿ ಶ್ರಮ ಪಡಬೇಕಾಗುತ್ತದೆ. ಧಾರ್ಮಿಕ ವಿಚಾರದಲ್ಲಿ ಆಸಕ್ತಿ ತೋರಿದಷ್ಟೂ ಶಾಂತಿ ಹೆಚ್ಚುವುದು.

ಕನ್ಯಾ: ಗುರು ಜೀವನಕ್ಕೆ ಹೊಸ ಹುರುಪನ್ನು ನೀಡಲಿದ್ದಾನೆ. ಯೋಚಿಸುತ್ತಿದ್ದ ಕಾರ್ಯವು ದೇವತಾ ಅನುಗ್ರಹದಿಂದ ನಡೆಯಲಿದೆ. ನ್ಯಾಯಾಲಯಕ್ಕೆ ಸಂಬಂಧಿಸಿದ ಕೆಲಸಕ್ಕೆ ತಯಾರಿ ಮಾಡಲು ಸೂಕ್ತದಿನ.

ತುಲಾ: ವಿದ್ಯಾರ್ಥಿಗಳ ಉತ್ತಮ ಶ್ರೇಣಿಯ ಕನಸು ನನಸಾಗುವುದು. ಹಾಗೆಯೇ ಇಷ್ಟಪಟ್ಟಂತಹ ರೀತಿಯಲ್ಲಿ ಉದ್ಯೋಗಾವಕಾಶಗಳು ದೊರಕುವ ಸಾಧ್ಯತೆ ಇದೆ. ಜೀವನ ಚರಿತ್ರೆಯಲ್ಲಿ ಹೊಸದೊಂದು ಅಧ್ಯಾಯ ಪ್ರಾರಂಭವಾಗಲಿದೆ.

ವೃಶ್ಚಿಕ: ಹಂತ ಹಂತವಾಗಿ ಸಮಸ್ಯೆಯ ಸರಪಳಿಯಿಂದ ಹೊರಬರುವಿರಿ. ನಿಮ್ಮ ಆದರ್ಶ ವ್ಯಕ್ತಿಗಳ ತತ್ವವನ್ನು ಅನುಸರಿಸುವ ಜತೆಗೆ ಹಿರಿಯರ ಉತ್ತಮ ಅನುಭವ ಹಾಗೂ ಸಲಹೆಯನ್ನು ಅಳವಡಿಸಿಕೊಂಡಲ್ಲಿ ಕಾರ್ಯಗಳು ನೆರವೇರುವುದು.

ಧನು: ಕಷ್ಟಗಳನ್ನು ಎದುರಿಸುವ ಉತ್ತಮ ಆತ್ಮವಿಶ್ವಾಸವನ್ನು ನೀವು ಹೊಂದುವಿರಿ. ದುಃಖಗಳ ತೀವ್ರತೆ ಕಡಿಮೆಯಾಗಲಿದೆ. ಶಾರೀರಿಕವಾಗಿ ಆರೋಗ್ಯದ ಬಗ್ಗೆ ಆಲಸ್ಯ ಮಾಡುವುದು ಸರಿಯಲ್ಲ.

ಮಕರ: ಬಂಡವಾಳ ಹೂಡಿಕೆ, ಷೇರು ಖರೀದಿ ವಿಚಾರಗಳತ್ತ ಆಸಕ್ತಿ ಹೆಚ್ಚಲಿದ್ದೂ ಯೋಚಿಸಿ ವ್ಯವಹರಿಸಿ. ಧಾರ್ಮಿಕ ಕಾರ್ಯವನ್ನು ಮಾಡಿ ಪುಣ್ಯ ಸಂಪಾದನೆ ಮಾಡುವ ಯೋಚನೆ ಬರುವುದು.

ಕುಂಭ: ಪಿತ್ರಾರ್ಜಿತ ಆಸ್ತಿಯು ನಿಮ್ಮ ಪಾಲಾಗಲಿದೆ. ತಾಳಿದವನು ಬಾಳಿಯಾನು ಎಂಬಂತೆ ದುಡುಕದೇ ಸಮಾಧಾನದಿಂದ ವ್ಯವಹರಿಸಿ. ಇಂದು ಚೋರ ಕೃತ್ಯಗಳು ನಡೆಯುವ ಸಂಭವವಿದೆ. ಜಾಗ್ರತೆಯಿಂದ ಇರುವುದು ಉತ್ತಮ.

ಮೀನ: ಸಕಾರಾತ್ಮಕ ಮನೋಭಾವದಿಂದ ಮತ್ತು ಮಾತುಗಾರಿಕೆಯಿಂದ ಎಲ್ಲರ ಮನಸ್ಸು ಗೆಲ್ಲುವಿರಿ. ನೂತನ ಮನೆ ನಿರ್ಮಾಣ ಅಥವಾ ನಿವೇಶನಗಳ ಖರೀದಿಯ ಆಲೋಚನೆಗಳಿಗೆ ಪೂರಕವಾದ ವಾತಾವರಣ ಸಿಗಲಿದೆ.

ಹಂದಿ ಚರ್ಮದ ಕಾರ್ನಿಯಾ ಕಸಿ: ಭಾರತ, ಇರಾನಿನ 20 ಜನರಿಗೆ ದೃಷ್ಟಿ

ನವದೆಹಲಿ (ಪಿಟಿಐ): ಕಾರ್ನಿಯಾ ಹಾನಿಯಿಂದ ದೃಷ್ಟಿ ಕಳೆದುಕೊಂಡಿದ್ದ ಭಾರತ ಮತ್ತು ಇರಾನಿನ 20 ಮಂದಿ ಅಂಧರಿಗೆ ಸಂಶೋಧಕರು ಹಂದಿಯ ಚರ್ಮದಿಂದ ರೂಪಿಸಿದ ಜೈವಿಕ ಕಾರ್ನಿಯಾ (ಕಣ್ಣಿನ ಅತ್ಯಂತ ಪಾರದರ್ಶಕ ಪದರ) ಕಸಿ ಮಾಡಿ, ದೃಷ್ಟಿ ಮರಳಿ ತಂದುಕೊಡುವಲ್ಲಿ ಯಶಸ್ವಿಯಾಗಿದ್ದಾರೆ.

ಅತ್ಯಂತ ವಿರಳವಾದ ಈ ಪ್ರಯೋಗ ಕಾರ್ನಿಯಾ ದೃಷ್ಟಿ ದೋಷ ಮತ್ತು ಮಂದ ದೃಷ್ಟಿ ಸಮಸ್ಯೆ ಅನುಭವಿಸುತ್ತಿರುವವರಿಗೆ ಆಶಾಕಿರಣ ಮೂಡಿಸಿದೆ.

ನವದೆಹಲಿಯ ಏಮ್ಸ್‌ನ ಸಂಶೋಧಕರು ಸೇರಿ ಅಂತರರಾಷ್ಟ್ರೀಯ ಸಂಶೋಧಕರ ತಂಡವು, ಕಾರ್ನಿಯಾ ಕಸಿ ಶಸ್ತ್ರಚಿಕಿತ್ಸೆಗೆ ಎರಡು ವಾರಗಳವರೆಗೆ ಮಾತ್ರ ಸಂಗ್ರಹಿಸಿಡಬಹುದಾದ ದಾನಿಗಳ ಕಾರ್ನಿಯಾಕ್ಕೆ ಪರ್ಯಾಯವಾಗಿ ಜೈವಿಕ ಕಾರ್ನಿಯಾ ಕಸಿ ಮಾಡಿದ ಪ್ರಯೋಗದಲ್ಲಿ ಯಶಸ್ಸು ಸಾಧಿಸಿದೆ.

ಭಾರತದ 8 ಮತ್ತು ಇರಾನಿನ 12 ಅಂಧರಿಗೆ ಎರಡು ವರ್ಷಗಳ ಹಿಂದೆ ಸಂಗ್ರಹಿಸಿಟ್ಟಿದ್ದ ಜೈವಿಕ ಕಾರ್ನಿಯಾವನ್ನು ಕಸಿ ಮಾಡಲಾಗಿದೆ. ಇದರ ಸಂಶೋಧನಾ ವರದಿಯೂ ನೇಚರ್ ಬಯೋಟೆಕ್ನಾಲಜಿ ಪತ್ರಿಕೆಯಲ್ಲಿ ಗುರುವಾರ ಪ್ರಕಟವಾಗಿದೆ.

ಜೈವಿಕ ಕಾರ್ನಿಯಾ ಕಸಿ ಶಸ್ತ್ರಚಿಕಿತ್ಸೆಯಿಂದ ದೃಷ್ಟಿ ಮರಳಿ ಪಡೆದ 20 ಮಂದಿಯಲ್ಲಿ 14 ಜನರಿಗೆ ಯಾವುದೇ ದೃಷ್ಟಿ ಸಮಸ್ಯೆ ಕಾಣಿಸಿಲ್ಲ. ಇದರಲ್ಲಿ ಮೂವರು ಭಾರತೀಯರಿಗೆ ಪೂರ್ಣ ದೃಷ್ಟಿ ಮರಳಿದೆ ಎಂದು ಸಂಶೋಧಕರು ಹೇಳಿದ್ದಾರೆ.

‘ಈ ಸಂಶೋಧನೆಯಲ್ಲಿ ಲಭಿಸಿರುವ ಫಲಿತಾಂಶದಿಂದ ಒಂದು ಜೀವರಾಶಿ ಅಭಿವೃದ್ಧಿ ಸಾಧ್ಯವಾಗಲಿದೆ. ಇದು ಮಾನವ ಅಂಗಾಂಗಗಳ ಕಸಿಯ ಮಾನದಂಡಗಳಿಗೆ ಅನುಗುಣವಾಗಿದ್ದು, ಜೈವಿಕ ಕಸಿ ಕಾರ್ನಿಯಾಗಳನ್ನು ಸಮೂಹವಾಗಿ ಉತ್ಪಾದಿಸಲು ಮತ್ತು ಎರಡು ವರ್ಷಗಳವರೆಗೆ ಸಂಗ್ರಹಿಸಿಡಲು ಸಾಧ್ಯವೆನ್ನುವುದು ಸಾಬೀತಾಗಿದೆ’ ಎಂದು ಸಂಶೋಧಕರ ತಂಡದಲ್ಲಿ ಒಬ್ಬರಾದ ಸ್ವೀಡನ್‌ನ ಲಿಂಕೊಪಿಂಗ್ ಯುನಿವರ್ಸಿಟಿಯ ಪ್ರೊಫೆಸರ್ ನೀಲ್ ಲಾಗಾಲಿ ಹೇಳಿದ್ದಾರೆ.

‘ವಿಶ್ವದಾದ್ಯಂತ ಅಂದಾಜು 1.27 ಕೋಟಿ ಜನರು ಕಾರ್ನಿಯಾ ಸಮಸ್ಯೆಯ ಅಂಧತ್ವದಿಂದ ಬಳಲುತ್ತಿದ್ದಾರೆ. ಹಂದಿ ಚರ್ಮದ ಜೈವಿಕ ಕಾರ್ನಿಯಾ ಕಸಿಯಿಂದ ಹೆಚ್ಚಿನವರಿಗೆ ದೃಷ್ಟಿ ಮರಳಿಸಲು ಸಾಧ್ಯವಾಗಲಿದೆ. ಆಹಾರೋದ್ಯಮದಲ್ಲಿ ಹಂದಿಯ ಚರ್ಮ ಉಪ ಉತ್ಪನ್ನವಾಗಿ ಬಳಕೆಯಲ್ಲಿದ್ದು, ಇದು ಸುಲಭವಾಗಿ ಲಭಿಸುತ್ತದೆ. ಜತೆಗೆ ಆರ್ಥಿಕವಾಗಿಯೂ ಲಾಭದಾಯಕ’ ಎಂದು ಹೇಳಿದರು.

ವಿಪಕ್ಷಗಳ ಒಮ್ಮತದ ಅಭ್ಯರ್ಥಿ ಚರ್ಚೆ ಮುನ್ನೆಲೆಗೆ: ನಿತೀಶ್ ಮತ್ತೆ ನಿರಾಕರಣೆ

‘ಪ್ರಧಾನಿ ಹುದ್ದೆ ಆಕಾಂಕ್ಷಿಯಲ್ಲ’

ಪಟ್ನಾ, ಬಲಿಯಾ, ನವದೆಹಲಿ (ಪಿಟಿಐ): ಬಿಹಾರದಲ್ಲಿ ಬಿಜೆಪಿ ಮೈತ್ರಿಕೂಟವನ್ನು ತೊರೆದು ಜೆಡಿಯು ವಿರೋಧ ಪಕ್ಷಗಳ ಮಹಾಮೈತ್ರಿಕೂಟದ ಸರ್ಕಾರ ರಚಿಸಿದ ನಂತರ, ಪಕ್ಷದ ನಾಯಕ ನಿತೀಶ್ ಕುಮಾರ್ ಅವರು ಮುಂದಿನ ಲೋಕಸಭಾ ಚುನಾವಣೆಯಲ್ಲಿ ವಿರೋಧ ಪಕ್ಷಗಳ ಒಮ್ಮತದ ಪ್ರಧಾನಿ ಅಭ್ಯರ್ಥಿಯಾಗುತ್ತಾರೆಯೇ ಎಂಬುದು ಮತ್ತೆ ಚರ್ಚೆಗೆ ಬಂದಿದೆ. ಆದರೆ, ತಾನು ಪ್ರಧಾನಿ ಹುದ್ದೆಯ ಆಕಾಂಕ್ಷಿ ಅಲ್ಲ ಎಂದು ನಿತೀಶ್ ಕುಮಾರ್ ಅವರು ಶುಕ್ರವಾರ ಮತ್ತೊಮ್ಮೆ ಹೇಳಿದ್ದಾರೆ.

ಉತ್ತರ ಪ್ರದೇಶದಲ್ಲಿ ವಿರೋಧ ಪಕ್ಷಗಳ ಒಕ್ಕೂಟದಲ್ಲಿರುವ ಸುಹೇಲ ದೇವ್ ಭಾರತೀಯ ಸಮಾಜ ಪಾರ್ಟಿಯ ಅಧ್ಯಕ್ಷ ಓಂ ಪ್ರಕಾಶ್ ರಾಜ್‌ಭರ್ ಅವರು ನಿತೀಶ್ ಅವರು ಪ್ರಧಾನಿ ಅಭ್ಯರ್ಥಿಯಾಗಲಿ ಎಂದಿದ್ದಾರೆ. ಪತ್ರಕರ್ತರ ಜತೆ ಮಾತನಾಡಿದ ಅವರು, ‘ಮುಂದಿನ ಲೋಕಸಭಾ ಚುನಾವಣೆಯಲ್ಲಿ ನಿತೀಶ್ ಕುಮಾರ್ ಅವರು ವಿರೋಧ ಪಕ್ಷಗಳ ಒಮ್ಮತದ ಪ್ರಧಾನಿ ಅಭ್ಯರ್ಥಿಯಾದರೆ, ಅವರಿಗೆ ಬೆಂಬಲ ನೀಡುವ ಕುರಿತು ಪರಿಶೀಲನೆ ನಡೆಸುತ್ತೇವೆ’ ಎಂದು ಹೇಳಿದ್ದಾರೆ.

ಗುರುವಾರ ತಡರಾತ್ರಿ ಮಾತನಾಡಿದ್ದ ಬಿಹಾರ ಉಪಮುಖ್ಯಮಂತ್ರಿ ತೇಜಸ್ವಿ ಯಾದವ್ ಅವರು, ‘ನಿತೀಶ್ ಅವರು ಪ್ರಧಾನಿ ಯಾಕಾಗಬಾರದು. ಮುಖ್ಯಮಂತ್ರಿಯಾಗಿ ಅವರು ಹಲವು ಅವಧಿಗಳನ್ನು ಪೂರೈಸಿದ್ದಾರೆ. ಮೋದಿ ಅವರು ಪ್ರಧಾನಿಯಾಗಬಹುದಾದರೆ, ನಿತೀಶ್ ಯಾಕಾಗಬಾರದು’ ಎಂದು ಪ್ರಶ್ನಿಸಿದ್ದರು.

ಈ ಬಗ್ಗೆ ಪತ್ರಕರ್ತರು ಶುಕ್ರವಾರ ನಿತೀಶ್ ಅವರನ್ನು ಪ್ರಶ್ನಿಸಿದರು. ಆಗ ಅವರು, ‘ನಾನು ಪ್ರಧಾನಿ ಹುದ್ದೆಗೆ ಹೋಗಬೇಕು ಎಂದು ಹಲವರು ಬಯಸುತ್ತಾರೆ. ನನ್ನ ಜತೆಗಾರರೂ ನನ್ನ ಬಳಿಯೇ ಈ ಮಾತನ್ನು ಹೇಳಿದ್ದಾರೆ. ಆದರೆ, ನಾನು ಪ್ರಧಾನಿ ಹುದ್ದೆಯ ಆಕಾಂಕ್ಷಿ ಅಲ್ಲ ಎಂದು ಈ ಹಿಂದೆಯೇ ಹೇಳಿದ್ದೇನೆ. ಈಗಲೂ ಅದೇ ಮಾತು ಹೇಳುತ್ತೇನೆ’ ಎಂದರು. ‘ಆದರೆ, ದೇಶದಾದ್ಯಂತ ವಿರೋಧ ಪಕ್ಷಗಳನ್ನು ಒಗ್ಗೂಡಿಸುತ್ತೇನೆ’ ಎಂದು ಅವರು ಮತ್ತೆ ಹೇಳಿದ್ದಾರೆ.

ಗಿರಿರಾಜ್–ತೇಜಸ್ವಿ ವಾಗ್ವಾದ: 10 ಲಕ್ಷ ಉದ್ಯೋಗ ನೀಡುವ ಭರವಸೆಯನ್ನು ಈಡೇರಿಸುತ್ತೇವೆ ಎಂದು ತೇಜಸ್ವಿ ಯಾದವ್ ಅವರು ಗುರುವಾರ ನೀಡಿದ್ದ ಹೇಳಿಕೆ ಸಂಬಂಧ, ಅವರು ಮತ್ತು ಬಿಜೆಪಿ ಸಂಸದ ಗಿರಿರಾಜ್ ಸಿಂಗ್ ಅವರ ನಡುವೆ ಟ್ವೀಟ್ ವಾಗ್ವಾದ ನಡೆದಿದೆ.

ದಿನದ ಬೆಳವಣಿಗೆ:

- ಬಿಹಾರ ಉಪಮುಖ್ಯಮಂತ್ರಿ ತೇಜಸ್ವಿ ಯಾದವ್ ಅವರಿಗೆ ಜಡ್ ಪ್ಲಸ್ ಶ್ರೇಣಿಯ ಭದ್ರತೆ ಒದಗಿಸಲಾಗಿದೆ. ಇದಕ್ಕೆ ಬಿಜೆಪಿ ಆಕ್ಷೇಪ ವ್ಯಕ್ತಪಡಿಸಿದೆ. ಮುಖ್ಯಮಂತ್ರಿ ನಿತೀಶ್ ಕುಮಾರ್ ಈ ಕ್ರಮವನ್ನು ಸಮರ್ಥಿಸಿಕೊಂಡಿದ್ದಾರೆ
- ತೇಜಸ್ವಿ ಅವರು ಗುರುವಾರ ರಾತ್ರಿಯೇ ದೆಹಲಿಗೆ ತೆರಳಿದ್ದಾರೆ. ಶುಕ್ರವಾರ ಬೆಳಿಗ್ಗೆ ಅವರು ಸಿಪಿಎಂ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ ಮತ್ತು ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ.ರಾಜಾ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ
- ತೇಜಸ್ವಿ ಅವರು ಶುಕ್ರವಾರ ಮಧ್ಯಾಹ್ನ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರನ್ನು ಭೇಟಿ ಮಾಡಿ, ಮಾತುಕತೆ ನಡೆಸಿದ್ದಾರೆ. ಬಿಹಾರ ಸರ್ಕಾರದ ಸಚಿವ ಸಂಪುಟದ ಸದಸ್ಯರಲ್ಲಿ ಮಿತ್ರಪಕ್ಷಗಳಿಗೆ ಖಾತೆ ಹಂಚಿಕೆ ಬಗ್ಗೆ ಮಾತುಕತೆ ನಡೆದಿದೆ ಎಂದು ಜೆಡಿಯು, ಆರ್‌ಜೆಡಿ ಮತ್ತು ಕಾಂಗ್ರೆಸ್ ಮೂಲಗಳು ಹೇಳಿವೆ

‘ವಿಪಕ್ಷಗಳು ಒಟ್ಟಾಗಲಿವೆ’

‘ಬಿಹಾರದಲ್ಲಿ ವಿರೋಧ ಪಕ್ಷಗಳು ಒಟ್ಟಾಗುವ ಮೂಲಕ ಪ್ರಜಾಪ್ರಭುತ್ವದ ಉಳಿವಿನ ಹಾದಿಯನ್ನು ತೋರಿಸಿವೆ. ಮುಂದಿನ ದಿನಗಳಲ್ಲಿ ವಿರೋಧ ಪಕ್ಷಗಳು ಮತ್ತು ಪ್ರಾದೇಶಿಕ ಪಕ್ಷಗಳು ಒಟ್ಟಾಗುವ ವಿದ್ಯಮಾನವು ದೇಶದಾದ್ಯಂತ ಪುನರಾವರ್ತನೆಯಾಗಲಿದೆ’ ಎಂದು ತೇಜಸ್ವಿ ಯಾದವ್ ಹೇಳಿದ್ದಾರೆ. ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರನ್ನು ಭೇಟಿ ಮಾಡಿದ ನಂತರ ಅವರು ಈ ಮಾತು ಹೇಳಿದ್ದಾರೆ.

ಅದಕ್ಕೂ ಮುನ್ನ ಎಡಪಕ್ಷಗಳ ನಾಯಕರನ್ನೂ ಅವರು ಭೇಟಿ ಮಾಡಿ ಮಾತುಕತೆ ನಡೆಸಿದ್ದರು.

‘ದೇಶದಲ್ಲಿರುವ ಎಲ್ಲಾ ಪ್ರಾದೇಶಿಕ ಪಕ್ಷಗಳು ಹಿಂದುಳಿದ ವರ್ಗಗಳು ಮತ್ತು ದಲಿತರಿಗೆ ಸೇರಿದ್ದಾಗಿವೆ. ಬಿಜೆಪಿ ಎಲ್ಲಾ ಪ್ರಾದೇಶಿಕ ಪಕ್ಷಗಳನ್ನು ಮುಗಿಸಲು ಸಂಚು ಮಾಡಿತ್ತು. ಅದು ಈಗ ಎಲ್ಲಾ ಪಕ್ಷಗಳಿಗೂ ಗೊತ್ತಾಗಿದೆ. ಮೊದಲು ಶಿವಸೇನಾವನ್ನು ಒಡೆಯಲಾಯಿತು. ಅದಕ್ಕೂ ಮೊದಲು ಎಲ್‌ಜೆಪಿಯನ್ನು ಮುಗಿಸಲಾಯಿತು. ಈಗ ಜೆಡಿಯು ಅನ್ನು ಒಡೆಯಲು ಮುಂದಾಗಿತ್ತು. ಆದರೆ ಅದು ವಿಫಲವಾಯಿತು’ ಎಂದು ತೇಜಸ್ವಿ ಹೇಳಿದ್ದಾರೆ.

‘ಬಿಜೆಪಿಯು ಹೀಗೆ ಎಲ್ಲಾ ಪ್ರಾದೇಶಿಕ ಪಕ್ಷಗಳನ್ನು ನಿರ್ನಾಮ ಮಾಡಲು ಮುಂದಾಗಿತ್ತು. ಅವು ಇಲ್ಲದಿದ್ದರೆ, ಅದು ಬಿಜೆಪಿಯ ಸರ್ವಾಧಿಕಾರಕ್ಕೆ ದಾರಿ ಮಾಡಿಕೊಡುತ್ತದೆ. ಈ ತಂತ್ರ ಎಲ್ಲಾ ಪ್ರಾದೇಶಿಕ ಪಕ್ಷಗಳಿಗೂ ಅರ್ಥವಾಗಿದೆ. ಹಾಗಾಗಿ ಅವೆಲ್ಲವೂ ಒಟ್ಟಾಗಲಿವೆ’ ಎಂದು ಅವರು ಹೇಳಿದ್ದಾರೆ.



ಗಾಯನ ಸ್ವಾತಂತ್ರ್ಯದ ಅಮೃತ ಮಹೋತ್ಸವ ಅಂಗವಾಗಿ ರಾಜಸ್ಥಾನದ ಜೈಪುರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಶಾಲಾ ವಿದ್ಯಾರ್ಥಿಗಳು ದೇಶ ಭಕ್ತಿಗೀತೆ ಹಾಡಿದರು –ಪಿಟಿಐ ಚಿತ್ರ

₹20ಕ್ಕೆ ಕಾನೂನು ಹೋರಾಟ: 22 ವರ್ಷದ ಬಳಿಕ ಜಯ!

ನವದೆಹಲಿ (ಎಎಫ್‌ಪಿ): ಭಾರತೀಯ ರೈಲ್ವೆಯು ₹20 ಹೆಚ್ಚುವರಿ ಶುಲ್ಕ ವಿಧಿಸಿದೆ ಎಂದು ಆರೋಪಿಸಿ ಕೋರ್ಟ್ ಮೆಟ್ಟಿಲೇರಿದ್ದ ವಕೀಲರೊಬ್ಬರು ಬರೋಬ್ಬರಿ 22 ವರ್ಷಗಳ ಕಾನೂನು ಹೋರಾಟದ ಬಳಿಕ ಜಯ ಸಾಧಿಸಿದ್ದಾರೆ.

1999ರಲ್ಲಿ ತಾರಾನಾಥ ಚತುರ್ವೇದಿ ಅವರು ಮಥುರಾದಿಂದ ಮೊರಾದಾಬಾದ್‌ಗೆ 2 ಟಿಕೆಟ್ ಪಡೆದಿದ್ದರು. ₹70 ಬದಲಾಗಿ ₹90 ಶುಲ್ಕ ಪಡೆಯಲಾಗಿತ್ತು. ರಸೀದಿ ನೀಡಿದರೂ ಅಧಿಕಾರಿಗಳು ಹೆಚ್ಚುವರಿ ಹಣ ವಾಪಸ್ ನೀಡಿರಲಿಲ್ಲ. ಹೀಗಾಗಿ ತಾರಾನಾಥ್ ಕೋರ್ಟ್ ಮೆಟ್ಟಿಲೇರಿದ್ದರು.

ಪ್ರಕರಣವನ್ನು ಮಥುರಾ ಗ್ರಾಹಕರ ನ್ಯಾಯಾಲಯವು ಎರಡು ದಶಕಕ್ಕೂ ಹೆಚ್ಚು ಕಾಲ 120 ಬಾರಿ ವಿಚಾರಣೆ ನಡೆಸಿದೆ. ಅಂತಿಮವಾಗಿ ಚತುರ್ವೇದಿ ಅವರಿಗೆ 20 ರುಪಾಯಿ ಹೆಚ್ಚುವರಿ ಶುಲ್ಕದ ಜೊತೆಗೆ ಬಡ್ಡಿ ಸೇರಿ ₹15,000 ಪರಿಹಾರ ನೀಡಲು ನ್ಯಾಯಾಲಯ ಆದೇಶಿಸಿದೆ. ‘ಸ್ವತಃ ವಕೀಲನಾದರೂ ಈ ಪ್ರಕರಣದಿಂದ ಶ್ರಮ, ₹20,000ಕ್ಕೂ ಹೆಚ್ಚು ಹಣ ವ್ಯಯವಾಗಿದೆ. ಇದು ಹಣದ ಪ್ರಶ್ನೆ ಅಲ್ಲ. ಹಕ್ಕಿನ ಪ್ರಶ್ನೆ’ ಎಂದು ಚತುರ್ವೇದಿ ತಿಳಿಸಿದ್ದಾರೆ.

ಇವಿಎಂ ಸಿಂಧುತ್ವ ಪ್ರಶ್ನಿಸಿದ್ದ ಅರ್ಜಿ ವಜಾ

ನವದೆಹಲಿ (ಪಿಟಿಐ): ದೇಶದಲ್ಲಿ ಚುನಾವಣೆಗಳಿಗೆ ಮತಪತ್ರಗಳ (ಬ್ಯಾಲೆಟ್ ಪೇಪರ್) ಬದಲು ವಿದ್ಯುನ್ಮಾನ ಮತಯಂತ್ರಗಳನ್ನು (ಇವಿಎಂ) ಬಳಸಲು ಪ್ರಜಾಪ್ರತಿನಿಧಿ ಕಾಯ್ದೆಯಲ್ಲಿ ಅವಕಾಶ ನೀಡಿರುವ ಪ್ರಸ್ತಾವನೆಯ ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಶುಕ್ರವಾರ ವಜಾಗೊಳಿಸಿದೆ.

ಅರ್ಜಿದಾರರು ಇವಿಎಂ ಬಳಕೆಯ ಕಾಯ್ದೆಯನ್ನು ಅಸಂವಿಧಾನಿಕವೆಂದು ಘೋಷಿಸಬೇಕೆಂದು ಕೋರಿದ್ದರು.

ಕಾಶ್ಮೀರದಲ್ಲಿ ವಲಸೆ ಕಾರ್ಮಿಕನ ಗುಂಡಿಕ್ಕಿ ಹತ್ಯೆ

ಶ್ರೀನಗರ: ಉತ್ತರ ಕಾಶ್ಮೀರದ ಬಂಡಿಪೋರಾ ಜಿಲ್ಲೆಯಲ್ಲಿ ವಲಸೆ ಕಾರ್ಮಿಕರೊಬ್ಬರನ್ನು ಉಗ್ರರು ಗುಂಡಿಕ್ಕಿ ಹತ್ಯೆ ಮಾಡಿದ್ದಾರೆ ಎಂದು ಅಧಿಕಾರಿಗಳು ಶುಕ್ರವಾರ ಹೇಳಿದ್ದಾರೆ.

ಬಿಹಾರದ ಮಾಧೇಪುರದ ಮೊಹಮ್ಮದ್ ಅಮ್ರೇಜ್ ಮೃತ ಕಾರ್ಮಿಕ. ಉಗ್ರರ ಗುಂಡೇಟಿನಿಂದ ಗಾಯಗೊಂಡಿದ್ದ ಇವರನ್ನು ಕೂಡಲೇ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಲ್ಲಿ ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ದಕ್ಷಿಣ ಕಾಶ್ಮೀರದ ಪುಲ್ವಾಮಾ ಜಿಲ್ಲೆಯಲ್ಲಿ ಕಳೆದ ವಾರ ಉಗ್ರರು ನಡೆಸಿದ ಗುಂಡಿನ ದಾಳಿಯಲ್ಲಿ ಬಿಹಾರದ ವಲಸೆ ಕಾರ್ಮಿಕರೊಬ್ಬರು ಮೃತಪಟ್ಟು, ಇತರ ಇಬ್ಬರು ಗಾಯಗೊಂಡಿದ್ದರು.

ಕಾಶ್ಮೀರದಲ್ಲಿ ಕಳೆದ ಅಕ್ಟೋಬರ್ ತಿಂಗಳಿನಿಂದ ಉಗ್ರರು ವಲಸೆ ಕಾರ್ಮಿಕರನ್ನು ಗುರಿಯಾಗಿಸಿಕೊಂಡು ದಾಳಿ ನಡೆಸುತ್ತಿದ್ದಾರೆ.

₹2ಲಕ್ಷ ಪರಿಹಾರ: ಬಂಡಿಪೋರಾ ಜಿಲ್ಲೆಯಲ್ಲಿ ಉಗ್ರರು ಹತ್ಯೆ ಮಾಡಿರುವ ಕಾರ್ಮಿಕ ಮೊಹಮ್ಮದ್ ಅಮ್ರೇಜ್ ಅವರ ಕುಟುಂಬಕ್ಕೆ, ಬಿಹಾರ ಮುಖ್ಯ ಮಂತ್ರಿ ನಿತೀಶ್ ಕುಮಾರ್ ಅವರು ₹ 2 ಲಕ್ಷ ಪರಿಹಾರ ಘೋಷಿಸಿದ್ದಾರೆ.

2,251 ಜೀವಂತ ಗುಂಡು ವಶಕ್ಕೆ

ನವದೆಹಲಿ (ಪಿಟಿಐ): ಸ್ವಾತಂತ್ರ್ಯ ದಿನಾಚರಣೆ ಸಮೀಪಿಸುತ್ತಿರುವ ಬೆನ್ನಲ್ಲೆ ದೆಹಲಿಯಲ್ಲಿ 2,251 ಜೀವಂತ ಗುಂಡುಗಳನ್ನು ಪೊಲೀಸರು ವಶಕ್ಕೆ ಪಡೆದು, 6 ಮಂದಿಯನ್ನು ಬಂಧಿಸಿದ್ದಾರೆ.

ಈ ಬಂಧಿತರು ಮೇಲ್ನೋಟಕ್ಕೆ ಕ್ರಿಮಿನಲ್ ಜಾಲದ ಭಾಗವಾಗಿರುವುದು ಗೊತ್ತಾಗಿದೆ ಎಂದು ಶುಕ್ರವಾರ ಹೆಚ್ಚುವರಿ ಪೊಲೀಸ್ ಆಯುಕ್ತ (ಪೂರ್ವ ವಲಯ) ವಿಕ್ರಂಜಿತ್ ಸಿಂಗ್ ಮಾಹಿತಿ ನೀಡಿದರು. ಆದರೆ ಆರೋಪಿಗಳಿಗೆ ಭಯೋತ್ಪಾದಕರ ಸಂಪರ್ಕ ಇತ್ತೇ ಎಂಬ ಬಗ್ಗೆ ಅವರು ಸ್ಪಷ್ಟ ಮಾಹಿತಿ ನಿಡಲಿಲ್ಲ.

ಆರು ಬಂಧಿತರ ಪೈಕಿ ರಶಿದ್ ಮತ್ತು ಅಜ್ಮಲ್ ಹೆಸರು ಗೊತ್ತಾಗಿದೆ ಎಂದು ಹೇಳಿದ ಅವರು, ಆಟೊ ರಿಕ್ಷಾ ಚಾಲಕರೊಬ್ಬರಿಂದ ಈ ಕುರಿತು ಸುಳಿವು ದೊರೆತಿತ್ತು ಎಂದರು.

ಸಂಕ್ಷಿಪ್ತ ಸುದ್ದಿ

ಕೇರಳ: ‘ಆಜಾದ್ ಕಾಶ್ಮೀರ’ ಹೇಳಿಕೆ ವಿವಾದ

ತಿರುವನಂತಪುರ: ಕೇರಳದ ಎಡಪಕ್ಷ ಬೆಂಬಲಿತ ಶಾಸಕ ಮತ್ತು ಮಾಜಿ ಪ್ರೌಢ ಶಿಕ್ಷಣ ಸಚಿವ ಕೆ.ಟಿ. ಜಲೀಲ್ ಅವರು ಪಾಕಿಸ್ತಾನ ಆಕ್ರಮಿತ ಕಾಶ್ಮೀರವನ್ನು ‘ಆಜಾದ್ ಕಾಶ್ಮೀರ’ ಎಂದು ಕರೆದಿರುವುದು ವಿವಾದಕ್ಕೆ ಕಾರಣವಾಗಿದೆ.

ಕೇರಳದ ಬಿಜೆಪಿ ನಾಯಕರು ಜಲೀಲ್ ಅವರ ಹೇಳಿಕೆಯನ್ನು ತೀವ್ರವಾಗಿ ಖಂಡಿಸಿದ್ದಾರೆ. ಇನ್ನೂ ಕೆಲವರು ನಿಷೇಧಿತ ಸ್ಟುಡೆಂಟ್ ಇಸ್ಲಾಮಿಕ್ ಮೂವ್‌ಮೆಂಟ್ ಆಫ್ ಇಂಡಿಯಾ (ಎಸ್‌ಐಎಂಐ) ಸಂಘಟನೆಯೊಂದಿಗಿನ ಅವರ ಹಿಂದಿನ ಸಂಪರ್ಕವನ್ನು ಉಲ್ಲೇಖಿಸಿ ಟೀಕಿಸಿದ್ದಾರೆ. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಕೆ.ಸುರೇಂದ್ರನ್ ಅವರು ಜಲೀಲ್ ವಿರುದ್ಧ ದೇಶದ್ರೋಹ ಪ್ರಕರಣ ದಾಖಲಿಸಲು ಒತ್ತಾಯಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಸಿಪಿಎಂ ರಾಜ್ಯ ಕಾರ್ಯದರ್ಶಿ ಕೊಡಿಯೇರಿ ಬಾಲಕೃಷ್ಣ ಅವರು, ‘ಜಲೀಲ್ ಹೇಳಿಕೆ ಬಗ್ಗೆ ಪಕ್ಷ ವಿಚಾರಣೆ ನಡೆಸಲಿದೆ’ ಎಂದಿದ್ದಾರೆ. ಜಲೀಲ್ ಮಲಪ್ಪುರಂ ಜಿಲ್ಲೆಯ ತವನೂರಿನ ಸಿಪಿಎಂ ಬೆಂಬಲಿತ ಪಕ್ಷೇತರ ಶಾಸಕರಾಗಿದ್ದಾರೆ.

ಕೊಯಮತ್ತೂರಲ್ಲಿ ಗೋ ಫಸ್ಟ್ ವಿಮಾನ ತುರ್ತು ಭೂಸ್ಪರ್ಶ

ಕೊಯಮತ್ತೂರು/ನವದೆಹಲಿ: ಬೆಂಗಳೂರಿನಿಂದ ಮಾಲ್ದೀವ್ಸ್‌ಗೆ ಹೊರಟಿದ್ದ ಗೋ ಫಸ್ಟ್ ವಿಮಾನವೊಂದರಲ್ಲಿ ಶುಕ್ರವಾರ ಎಚ್ಚರಿಕೆ ಗಂಟೆ ಮೊಳಗಿದ ಪರಿಣಾಮ, ವಿಮಾನವನ್ನು ಕೊಯಮತ್ತೂರಿನಲ್ಲಿ ಇಳಿಸಲಾಯಿತು.

ಈ ವಿಮಾನದಲ್ಲಿ 92 ಮಂದಿ ಪ್ರಯಾಣಿಕರಿದ್ದರು. ವಿಮಾನವನ್ನು ಸುರಕ್ಷಿತವಾಗಿ ಇಳಿಸಲಾಗಿದೆ ಮತ್ತು ಅದರ ಕಾರ್ಯಾಚರಣೆ ವ್ಯವಸ್ಥೆ ಸರಿಯಾಗಿದೆ ಎಂದು ಮೂಲಗಳು ತಿಳಿಸಿವೆ.

ಉಕ್ರೇನ್ ಪರಮಾಣು ಘಟಕ ಸಮೀಪ ದಾಳಿ: ಭಾರತ ಕಳವಳ

ವಿಶ್ವಸಂಸ್ಥೆ (ಪಿಟಿಐ): ಉಕ್ರೇನಿನ ಝಪೋರಿಝ್ಯಾ ಪರಮಾಣು ವಿದ್ಯುತ್ ಸ್ಥಾವರ ಸಮೀಪವೇ ರಷ್ಯಾ–ಉಕ್ರೇನ್ ಗುಂಡಿನ ದಾಳಿ ನಡೆಸುತ್ತಿರುವ ಬಗ್ಗೆ ಭಾರತ ತೀವ್ರ ಕಳವಳ ವ್ಯಕ್ತಪಡಿಸಿದೆ. ಇದು ಜನರ ಮೇಲೆ ಗಂಭೀರ ಪರಿಣಾಮ ಬೀರಲಿದೆ. ಹಾಗಾಗಿ ಉಭಯ ದೇಶಗಳು ಪರಮಾಣು ಘಟಕದ ಸುರಕ್ಷತೆ ಮತ್ತು ಭದ್ರತೆಗೆ ಗಮನ ನೀಡಬೇಕು ಎಂದು ಕರೆ ನೀಡಿದೆ.

ಈ ಸಂಬಂಧ ಚರ್ಚೆಗೆ ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಗುರುವಾರ ತುರ್ತು ಸಭೆ ಕರೆದಿತ್ತು. ಈ ವೇಳೆ ವಿಶ್ವಸಂಸ್ಥೆಯ ಭಾರತದ ಕಾಯಂ ಪ್ರತಿನಿಧಿ ರುಚಿರಾ ಕಂಬೋಜ್, ‘ಉಭಯ ದೇಶಗಳ ದಾಳಿಯಿಂದ ಉಂಟಾಗುವ ಯಾವುದೇ ಹಾನಿಯು ಸಾರ್ವಜನಿಕ ಆರೋಗ್ಯ ಮತ್ತು ಪರಿಸರದ ಮೇಲೆ ಗಂಭೀರ ಪರಿಣಾಮ ಬೀರಲಿದೆ’ ಎಂದು ಎಚ್ಚರಿಸಿದ್ದಾರೆ.

ಝಪೋರಿಝ್ಯಾ ಸಮೀಪವೇ ರಷ್ಯಾ ಮತ್ತು ಉಕ್ರೇನ್ ಸೇನಾ ಚಟುವಟಿಕೆ ನಡೆಸುತ್ತಿರು ವುದನ್ನು ವಿಶ್ವಸಂಸ್ಥೆ ಖಂಡಿಸಿದ್ದು, ಈ ಬಗ್ಗೆ ಎಚ್ಚರಿಕೆ ನೀಡಿದೆ. ಇದು ಇಡೀ ಪ್ರದೇಶಕ್ಕೆ ಅಪಾಯಕಾರಿ. ಕೂಡಲೇ ಉಭಯ ದೇಶಗಳು ಇಲ್ಲಿ ಸಂಘರ್ಷವನ್ನು ನಿಲ್ಲಿಸಬೇಕು ಎಂದಿದೆ.

ಸುಪ್ರೀಂಕೋರ್ಟ್ ಮೆಟ್ಟಿಲೇರಿದ ನಳಿನಿ

ನವದೆಹಲಿ (ಪಿಟಿಐ): ಮಾಜಿ ಪ್ರಧಾನಿ ರಾಜೀವ್ ಗಾಂಧಿ ಹತ್ಯೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿರುವ ದೋಷಿ ನಳಿನಿ ಶ್ರೀಹರನ್ ಅವಧಿಪೂರ್ವ ಬಿಡುಗಡೆ ಕೋರಿ ಸುಪ್ರೀಂಕೋರ್ಟ್ ಮೆಟ್ಟಿಲೇರಿದ್ದಾರೆ.

ಜೂನ್ 17ರಂದು ಮದ್ರಾಸ್ ಹೈಕೋರ್ಟ್ ಅವಧಿಪೂರ್ವ ಬಿಡುಗಡೆ ಮನವಿಯನ್ನು ತಿರಸ್ಕರಿಸಿತ್ತು. ಇದನ್ನು ಪ್ರಶ್ನಿಸಿ ನಳಿನಿ ಸುಪ್ರೀಂಕೋರ್ಟ್ ಮೆಟ್ಟಿಲೇರಿದ್ದಾರೆ.

ಎಫ್‌ಬಿಐ ಕಚೇರಿಗೆ ನುಗ್ಗಲು ಯತ್ನಿಸಿದ ಶಸ್ತ್ರಧಾರಿಯ ಹತ್ಯೆ

ವಿಲ್ಮಿಂಗ್ಟನ್(ಅಮೆರಿಕ): ಇಲ್ಲಿನ ಸಿನ್ಸಿನಾಟಿಯಲ್ಲಿರುವ ಎಫ್‌ಬಿಐ ಕಚೇರಿಗೆ ನುಗ್ಗಲು ಯತ್ನಿಸಿದ ಶಸ್ತ್ರಧಾರಿ ವ್ಯಕ್ತಿಯೊಬ್ಬನನ್ನು ಗಂಡು ಹಾರಿಸಿ ಹತ್ಯೆಗೈಯಲಾಗಿದೆ ಎಂದು ಪೊಲೀಸರು ಶುಕ್ರವಾರ ತಿಳಿಸಿದ್ದಾರೆ.

ರಿಕಿ ಶಿಫರ್(42) ಮೃತ ವ್ಯಕ್ತಿ. ಈತ ಈ ಹಿಂದೆ ಯಾವುದೇ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿರುವ ಬಗ್ಗೆ ಮಾಹಿತಿ ಇಲ್ಲ ಎಂದು ತಿಳಿಸಿದ್ದಾರೆ.

ತೈವಾನ್ ಸಂಘರ್ಷ ಶಮನಕ್ಕೆ ಭಾರತ ಕರೆ

ನವದೆಹಲಿ (ಪಿಟಿಐ): ಚೀನಾ–ತೈವಾನ್ ನಡುವಿನ ಬಿಕ್ಕಟ್ಟಿನ ಬಗ್ಗೆ ಮೊದಲ ಪ್ರತಿಕ್ರಿಯೆ ನೀಡಿರುವ ಭಾರತವು, ತೈವಾನ್ ಕೇಂದ್ರಿತ ಬೆಳವಣಿಗೆಯ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದೆ. ಈ ಪ್ರದೇಶದಲ್ಲಿ ಯಥಾಸ್ಥಿತಿ ಬದಲಾಯಿಸಲು ಏಕಪಕ್ಷೀಯ ಕ್ರಮಕ್ಕೈಗೊಳ್ಳಬಾರದು ಎಂದು ಒತ್ತಾಯಿಸಿದೆ.

ಇತರ ಹಲವು ರಾಷ್ಟ್ರಗಳಂತೆಯೇ ಭಾರತ ಕೂಡ ತೈವಾನಿನ ಇತ್ತೀಚಿನ ಬೆಳವಣಿಗೆಗಳಿಗೆ ಕಳವಳ ವ್ಯಕ್ತಪಡಿಸಿದೆ. ಈ ಪ್ರದೇಶದಲ್ಲಿ ಶಾಂತಿ ಮತ್ತು ಸ್ಥಿರತೆ ಕಾಪಾಡಲು ನಿರಂತರ ಪ್ರಯತ್ನ ನಡೆಸುವ ಅಗತ್ಯವನ್ನು ಭಾರತ ಒತ್ತಿ ಹೇಳಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ ಹೇಳಿದ್ದಾರೆ.

ಸ್ವಾತಂತ್ರ್ಯೋತ್ಸವದಲ್ಲಿ ಹೆಚ್ಚು ಜನರು ಸೇರದಿರಲು ಸೂಚನೆ

ನವದೆಹಲಿ: ಆಹಾರ ಮೇಳ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜನೆ, ರಾಜಭವನದಲ್ಲಿ ಸಾಧಕರಿಗೆ ಸನ್ಮಾನ, ದೇಶಭಕ್ತಿ ಗೀತೆಗಳ ಮೂಲಕ ಆಗಸ್ಟ್ 15ರಂದು ಸ್ವಾತಂತ್ರ್ಯೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಲು ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಕೇಂದ್ರ ಸರ್ಕಾರ ಶುಕ್ರವಾರ ಸೂಚನೆ ನೀಡಿದೆ.

ದೇಶದಲ್ಲಿ ಕೋವಿಡ್ ಪ್ರಕರಣಗಳು ಏರಿಕೆಯಾಗುತ್ತಿವೆ. ಹೀಗಾಗಿ ಸ್ವಾತಂತ್ರ್ಯ ದಿನಾಚರಣೆ ಸಮಾರಂಭದಲ್ಲಿ ಅಪಾರ ಸಂಖ್ಯೆಯಲ್ಲಿ ಜನರು ಒಟ್ಟುಗೂಡದಂತೆ, ಕೋವಿಡ್ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆಯೂ ಕೇಂದ್ರ ಗೃಹ ಸಚಿವಾಲಯ ಎಲ್ಲ ರಾಜ್ಯಗಳಿಗೆ ಕಳುಹಿಸಿರುವ ಸೂಚನಾ ಪತ್ರದಲ್ಲಿ ತಿಳಿಸಿದೆ.

ಸ್ವಾತಂತ್ರ್ಯದ 75ನೇ ವರ್ಷದ ಸಂಭ್ರಮಾಚರಣೆ ಭಾಗವಾಗಿ, ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಪ್ರತಿ ಜಿಲ್ಲೆಯ ಪ್ರಮುಖ ಸ್ಥಳದಲ್ಲಿ ‘ಸ್ವಚ್ಛ ಭಾರತ’ ಅಭಿಯಾನವನ್ನು ತಿಂಗಳು ಪೂರ್ತಿ ನಡೆಸಬೇಕು. ವಿವಿಧ ಇಲಾಖೆಗಳು ಮತ್ತು ಶಿಕ್ಷಣ ಸಂಸ್ಥೆಗಳ ಸಹಯೋಗದಲ್ಲಿ ಸಸಿಗಳ ನೆಡುವಿಕೆ ಮೂಲಕ ಹವಾಮಾನ ಬದಲಾವಣೆ ವಿರುದ್ಧದ ಹೋರಾಟದಲ್ಲಿ ಕೈಜೋಡಿಸಬೇಕು ಎಂದು ತಿಳಿಸಿದೆ.

ಕನ್ಹಯ್ಯ ಲಾಲ್ ಕೊಲೆ ಸೂತ್ರದಾರಿ ಬಂಧನ

ನವದೆಹಲಿ (ಪಿಟಿಐ): ರಾಜಸ್ಥಾನದ ಉದಯಪುರದ ಟೇಲರ್ ಕನ್ಹಯ್ಯ ಲಾಲ್ ಕೊಲೆಯ ಪ್ರಮುಖ ಸೂತ್ರದಾರಿ ಎನ್ನಲಾಗಿರುವ ಮುಸ್ಲಿಂ ಖಾನ್ (41) ಎಂಬಾತನನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಬಂಧಿಸಿದೆ ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ.

ರಾಜ್ಯ ಸೀನಿಯರ್ ಈಜು ಚಾಂಪಿಯನ್‌ಷಿಪ್: ನೀನಾ ವೆಂಕಟೇಶ್ ದಾಖಲೆ

ಶ್ರೀಹರಿಗೆ ಚಿನ್ನ; ಅನೀಷ್ 'ಡಬಲ್' ಸಾಧನೆ

ಪ್ರಜಾವಾಣಿ ವಾರ್ತೆ



ಶ್ರೀಹರಿ ನಟರಾಜ್



ಕೂಟ ದಾಖಲೆ ಸ್ಥಾಪಿಸಿದ ಅನೀಷ್ ಎಸ್ ಗೌಡ

ಬೆಂಗಳೂರು: ಬರ್ಮಿಂಗ್‌ಹ್ಯಾಮ್‌ನಲ್ಲಿ ಈಚೆಗೆ ಮುಗಿದ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಸ್ಪರ್ಧಿಸಿ ಮರಳಿರುವ ಶ್ರೀಹರಿ ನಟರಾಜ್ ಶುಕ್ರವಾರ ಇಲ್ಲಿ ಆರಂಭವಾದ ರಾಜ್ಯ ಸೀನಿಯರ್ ಈಜು ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಜಯಿಸಿದರು. ಜೊತೆಗೆ ತಮ್ಮದೇ ಹಳೆಯ ದಾಖಲೆಯನ್ನೂ ಉತ್ತಮಪಡಿಸಿಕೊಂಡರು.

ಕರ್ನಾಟಕ ಈಜು ಸಂಸ್ಥೆಯ ಆಶ್ರಯದಲ್ಲಿ ಪಡುಕೋಣೆ-ದ್ರಾವಿಡ್ ಕ್ರೀಡಾ ಉತ್ಕೃಷ್ಟತಾ ಕೇಂದ್ರದಲ್ಲಿ ಆಯೋಜಿಸಲಾಗಿರುವ ರಾಜ್ಯ ಸೀನಿಯರ್ ಈಜು ಚಾಂಪಿಯನ್‌ಷಿಪ್ ಮೊದಲ ದಿನವಾದ ಶುಕ್ರವಾರ ಪುರುಷರ 200 ಮೀಟರ್ಸ್ ಬ್ಯಾಕ್‌ಸ್ಟ್ರೋಕ್‌ನಲ್ಲಿ ಮೊದಲ ಸ್ಥಾನ ಪಡೆದರು.

ಬಸವನಗುಡಿ ಈಜುಕೇಂದ್ರದ ಅನೀಷ್ ಗೌಡ ಎರಡು ಚಿನ್ನ ಗೆದ್ದರು. ಪುರುಷರ 800 ಮೀ ಫ್ರೀಸ್ಟೈಲ್‌ನಲ್ಲಿ ಅವರು ನೂತನ ಕೂಟ ದಾಖಲೆ (8ನಿ,24.97ಸೆ) ಬರೆದರು. ಅವರು 200 ಮೀ ಫ್ರೀಸ್ಟೈಲ್ ವಿಭಾಗದಲ್ಲಿಯೂ ಚಿನ್ನದ ಪದಕ ಜಯಿಸಿದರು.

ಮಹಿಳೆಯರ 50 ಮೀಟರ್ಸ್ ಬಟರ್‌ಫ್ಲೈ ವಿಭಾಗದಲ್ಲಿ ಡಾಲ್ಫಿನ್ ಕ್ಲಬ್‌ನ ನೀನಾ ವೆಂಕಟೇಶ್ ನೂತನ ಕೂಟ ದಾಖಲೆ (28.59ಸೆ)ಯೊಂದಿಗೆ ಚಿನ್ನದ ಪದಕ ಕೊರಳಿಗೇರಿಸಿಕೊಂಡರು.

ಫಲಿತಾಂಶಗಳು:

ಪುರುಷರು: 50 ಮೀ ಬಟರ್‌ಫ್ಲೈ: ಎಂ.ಪೃಥ್ವಿ (ಬಸವನಗುಡಿ; 25.62ಸೆ)-1, ಆರ್. ಸಂಭವ್ (ಡಾಲ್ಫಿನ್)-2, ನಯನ್ ವಿಘ್ನೇಶ್ (ನೆಟ್ಟಕಲ್ಲಪ್ಪ ಅಕ್ವೆಟಿಕ್ ಸೆಂಟರ್)-3. 100 ಮೀ ಬ್ರೆಸ್ಟ್‌ಸ್ಟ್ರೋಕ್: ವಿದಿತ್ ಎಸ್ ಶಂಕರ್ (ಡಾಲ್ಫಿನ್; 1ನಿ,08.61ಸೆ;)-1, ಕಲ್ಪ್ ಎಸ್ ಬೊಹ್ರಾ (ಬಸವನಗುಡಿ)-2, ಡಿ.ಎಸ್. ಪೃಥ್ವಿಕ್ (ಬಸವನಗುಡಿ)-3.

200 ಮೀ ಬ್ಯಾಕ್‌ಸ್ಟ್ರೋಕ್: ಶ್ರೀಹರಿ ನಟರಾಜ್ (ಡಾಲ್ಫಿನ್; ದಾಖಲೆ: 2ನಿ,04.08ಸೆ)-1, ಎಸ್. ಶಿವಾ (ಬಸವನಗುಡಿ)-2, ಉತ್ಕರ್ಷ ಸಂತೋಷ್ ಪಾಟೀಲ (ಬಸವನಗುಡಿ)-3.

200 ಮೀ ಫ್ರೀಸ್ಟೈಲ್: ಅನೀಶ್ ಗೌಡ (ಬಸವನಗುಡಿ; 1ನಿ,53.30ಸೆ)-1, ಆರ್. ಸಂಭವ (ಡಾಲ್ಫಿನ್)-2, ಶಿವಾಂಕ್ ವಿಶ್ವನಾಥ್ (ಗಾಫ್ರೆ)-3.

400 ಮೀ ಮೆಡ್ಲೆ: ಎಸ್. ಶಿವಾ (ಬಸವನಗುಡಿ; ದಾಖಲೆ-4ನಿ,33.77ಸೆ)-1, ಅನೀಶ್ ಎಸ್ ಗೌಡ (ಬಸವನಗುಡಿ)-2, ಕಲ್ಪ್ ಬೊಹ್ರಾ (ಬಸವನಗುಡಿ)-3.

800 ಮೀ ಫ್ರೀಸ್ಟೈಲ್: ಅನೀಶ್ ಎಸ್ ಗೌಡ (ಬಸವನಗುಡಿ; ನೂತನ ದಾಖಲೆ 8ನಿ,24.97ಸೆ. ಹಳೆಯದು: ಎ.ಪಿ. ಗಗನ್ 8ನಿ,26.03ಸೆ) -1, ಶಿವಾಂಕ್ ವಿಶ್ವನಾಥ್ (ಗಾಫ್ರೆ ಸ್ವಿಮಿಂಗ್ ಪ್ರೊಗ್ರಾಂ)-2, ಧ್ಯಾನ್ ಬಾಲಕೃಷ್ಣ (ಬಸವನಗುಡಿ)-3.

4X100 ಮೀ ಫ್ರೀಸ್ಟೈಲ್: ಬಸವನಗುಡಿ ಎ (ಉತ್ಕರ್ಷ ಸಂತೋಷ ಪಾಟೀಲ, ರಾಜವಿನಾಯಕ ರೆಲೆಕರ್, ಎಸ್. ಶಿವಾ, ಅನೀಶ್ ಗೌಡ; 3ನಿ,32.65ಸೆ)-1, ಡಾಲ್ಫಿನ್ (ಆರ್. ಸಂಭವ್, ರಿಷಭ್ ಸಿಂಗ್ ದಡ್ವಾಲ್, ಕಾರ್ತಿಕೆಯನ್ ನಾಯರ್, ಶ್ರೀಹರಿ ನಟರಾಜ್)-2, ಬಸವನಗುಡಿ ಬಿ (ಧ್ಯಾನ್ ಬಾಲಕೃಷ್ಣ, ಪವನ್ ಧನಂಜಯ, ಎಸ್. ವಿಶ್ವನಾಥನ್, ಅನಿರುದ್ಧ ಮುರಳಿ)-3.

4X200 ಮೀ ಫ್ರೀಸ್ಟೈಲ್: ಬಸವನಗುಡಿ ಎ (ಧ್ಯಾನ್ ಬಾಲಕೃಷ್ಣ, ಪವನ್ ಧನಂಜಯ, ಎಸ್. ಶಿವಾ, ಅನೀಶ್ ಎಸ್ ಗೌಡ ; 7ನಿ,56.33ಸೆ)-1, ಡಾಲ್ಫಿನ್ (ಕಾರ್ತಿಕೆಯನ್ ನಾಯರ್, ರಿಷಭ್ ಸಿಂಗ್ ದಡ್ವಾಲ್, ಆರ್. ಸಂಭವ್, ಶ್ರೀಹರಿ ನಟರಾಜ್)-2, ಬಸವನಗುಡಿ ಬಿ (ಕಲ್ಪ್ ಬೊಹ್ರಾ, ಎಸ್. ಧಕ್ಷನ್, ಮನೋಜ್ ಬಿ ನಾಯಕ, ಜಿ. ವರುಣಗೌಡ)-3.

ಮಹಿಳೆಯರು: 50 ಮೀ ಬಟರ್‌ಫ್ಲೈ: ನೀನಾ ವೆಂಕಟೇಶ್ (ಡಾಲ್ಫಿನ್; ದಾಖಲೆ-28.59ಸೆ)-1, ತನಿಷಿ ಗುಪ್ತಾ (ಡಾಲ್ಫಿನ್)-2, ಎ. ಜೆಡಿಡಾ (ಡಿಕೆವಿ)-3.

100 ಮೀ ಬ್ರೆಸ್ಟ್‌ಸ್ಟ್ರೋಕ್: ಮಾನವಿ ವರ್ಮಾ (ಡಾಲ್ಫಿನ್; ನೂತನ ದಾಖಲೆ: 1ನಿ,16.73ಸೆ.)-1, ವಿನಿತಾ ನಯನಾ -2, ಎಸ್. ಲಕ್ಷ್ಯ -3 (ಇಬ್ಬರೂ ಬಸವನಗುಡಿ).

200 ಮೀ ಬ್ಯಾಕ್‌ಸ್ಟ್ರೋಕ್: ರಿಧಿಮಾ ವೀರೇಂದ್ರಕುಮಾರ್ (ಬಸವನಗುಡಿ; ದಾಖಲೆ: 2ನಿ,24.54ಸೆ)-1, ಶಾಲಿನಿ ಆರ್ ದೀಕ್ಷಿತ್ (ಡಾಲ್ಫಿನ್)-2, ರಿತು ಭರಮರಡ್ಡಿ (ಬಸವನಗುಡಿ)-3.

200 ಮೀ ಫ್ರೀಸ್ಟೈಲ್: ದಿನಿಧಿ ದೇಶಿಂಗು (2ನಿ,11.96ಸೆ)-1, ಶಾಲಿನಿ ದೀಕ್ಷಿತ್ -2, ಎಸ್. ಖುಜುಲಾ -3 (ಎಲ್ಲರೂ ಡಾಲ್ಫಿನ್ ಕೇಂದ್ರದವರು).

400 ಮೀ ಮೆಡ್ಲೆ: ಎ. ಜೆಡಿಡಾ (ಡಿಕೆವಿ ಈಜುಕೇಂದ್ರ; ದಾಖಲೆ: 5ನಿ,18.76ಸೆ)-1, ಎಸ್. ಲಕ್ಷ್ಯ (ಬಸವನಗುಡಿ)-2, ಶಿರಿನ್ (ಬಸವನಗುಡಿ)-3

800 ಮೀ ಫ್ರೀಸ್ಟೈಲ್: ಅಶ್ಮಿತಾ ಚಂದ್ರಾ (ಗಾಫ್ರೆ ಎಸ್‌ಪಿ; 9ನಿ,34.89ಸೆ.)-1, ಶಿರಿನ್ (ಬಸವನಗುಡಿ)-2, ಎಸ್. ಖುಜುಲಾ (ಡಾಲ್ಫಿನ್)-3

4X100 ಮೀ ಫ್ರೀಸ್ಟೈಲ್: ಡಾಲ್ಫಿನ್ (ಸುವನಾ ಭಾಸ್ಕರ್, ಶಾಲಿನಿ ದೀಕ್ಷಿತ್, ಎಸ್. ಖುಜುಲಾ, ನೀನಾ ವೆಂಕಟೇಶ್; 4ನಿ,6.94ಸೆ)-1, ಡಾಲ್ಫಿನ್ (ತನಿಷಿ ಗುಪ್ತಾ, ಮಾನವಿ ವರ್ಮಾ, ಅರುಷಿ ಅಗರವಾಲ್, ಹಷಿಕಾ ರಾಮಚಂದ್ರ)-2, ಬಸವನಗುಡಿ ಎ (ಶಿರಿನ್, ನೈಶಾ, ವಿನಿತಾ ನಯನ, ರಿದಿಮಾ ವೀರೇಂದ್ರ ಕುಮಾರ್)-3

4X200 ಮೀ ಫ್ರೀಸ್ಟೈಲ್: ಡಾಲ್ಫಿನ್1 (ಸುವನಾ ಭಾಸ್ಕರ್, ಶಾಲಿನಿ ದೀಕ್ಷಿತ್, ಎಸ್. ಖುಜುಲಾ, ದಿನಿಧಿ ದೇಶಿಂಗು; 9ನಿ,9.25ಸೆ)-1, ಡಾಲ್ಫಿನ್2 (ತನಿಷಿ ಗುಪ್ತಾ, ಆರುಷಿ ಅಗರವಾಲ್, ಸಬಾ ಸುಹಾನಾ, ಹಷಿಕಾ ರಾಮಚಂದ್ರ)-2, ಬಸವನಗುಡಿ ಎ (ಅನುಮತಿ ಚೌಗುಲೆ, ನೈಷಾ, ವಿಹಿತಾ ನಯನಾ, ಶಿರಿನ್)-3.

ಲಯಕ್ಕೆ ಮರಳಿದ ಪಡಿಕ್ಕಲ್

ರೋಹನ್ ಸಮಯೋಚಿತ ಆಟ: ಗುಲ್ಬರ್ಗಾಕ್ಕೆ ಜಯ

● ಮೋಹನ್ ಕುಮಾರ ಸಿ.



ಹುಬ್ಬಳ್ಳಿ ಟೈಗರ್ಸ್ ವಿರುದ್ಧ ಶುಕ್ರವಾರ ನಡೆದ ಪಂದ್ಯದಲ್ಲಿ ಸಿಕ್ಸರ್ ಸಿಡಿಸಿದ ಗುಲ್ಬರ್ಗಾ ಮಿಸ್ಟಿಕ್ಸ್‌ನ ದೇವದತ್ ಪಡಿಕ್ಕಲ್ –ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.

ಮೈಸೂರು: ಲಯದ ಆಟಕ್ಕೆ ಮರಳಿದ ದೇವದತ್ತ ಪಡಿಕ್ಕಲ್ ಗಳಿಸಿದ ಅರ್ಧಶತಕದ ಬಲದಿಂದ ಗುಲ್ಬರ್ಗಾ ಮಿಸ್ಟಿಕ್ಸ್ ತಂಡವು ಇಲ್ಲಿ ನಡೆಯುತ್ತಿರುವ ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಹ್ಯಾಟ್ರಿಕ್ ಜಯ ಸಾಧಿಸಿತು.

ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಗುಲ್ಬರ್ಗಾ ತಂಡವು ಹುಬ್ಬಳ್ಳಿ ಟೈಗರ್ಸ್ ವಿರುದ್ಧ 9 ವಿಕೆಟ್‌ಗಳಿಂದ ಗೆದ್ದಿತು.

ಟಾಸ್ ಗೆದ್ದ ಗುಲ್ಬರ್ಗಾ ನಾಯಕ ಮನೀಷ್ ಪಾಂಡೆ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಹುಬ್ಬಳ್ಳಿ ತಂಡವು ಆರಂಭಿಕ ಬ್ಯಾಟರ್ ಲವ್‌ನಿತ್ ಸಿಸೊಡಿಯಾ (30 ರನ್), ಕೆಳಕ್ರಮಾಂಕದ ತುಷಾರ್ ಸಿಂಗ್ (42) ಹಾಗೂ ಎಂ.ಜಿ.ನವೀನ್ (24) ಅವರ ಚುರುಕಿನ ಬ್ಯಾಟಿಂಗ್‌ನಿಂದಾಗಿ 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 145 ರನ್ ಗಳಿಸಿತು.

ಸಾಧಾರಣ ಗುರಿ ಬೆನ್ನಟ್ಟಿದ ಗುಲ್ಬರ್ಗಾ ತಂಡದ ಆರಂಭಿಕ ಜೋಡಿ ದೇವದತ್ತ ಪಡಿಕ್ಕಲ್ (62; 47ಎ, 4x8, 6x2), ರೋಹನ್ ಪಾಟೀಲ (ಅಜೇಯ 60; 40ಎ, 4x5, 6x2) ಮೊದಲ ವಿಕೆಟ್‌ಗೆ 91 ರನ್ ಸೇರಿಸಿದರು. ಅವರ ಆಟಕ್ಕೆ ಪ್ರೇಕ್ಷಕರ ಮೆಚ್ಚುಗೆ ಚಪ್ಪಾಳೆಗಳ ಸದ್ದು ಪ್ರತಿಧ್ವನಿಸಿತು.

ಮೈಸೂರು ವಾರಿಯರ್ಸ್ ವಿರುದ್ಧದ ಪಂದ್ಯದಲ್ಲಿ ವೇಗದ ಶತಕ ಸಿಡಿಸಿ ದಾಖಲೆ ಬರೆದಿದ್ದ ರೋಹನ್ ಇಂದು ತಾಳ್ಮೆಯ ಆಟವಾಡಿ ಅನುಭವಿ ಬ್ಯಾಟರ್ ಎಂಬುದನ್ನು ಸಾಬೀತು ಮಾಡಿದರು. ಜಸ್ವಂತ್ ಆಚಾರ್ಯ (ಅಜೇಯ 17) ಜೊತೆಗೂಡಿ ಇನಿಂಗ್ಸ್ ಕಟ್ಟಿದ ಅವರು 16.4 ಓವರ್‌ಗಳಲ್ಲಿ ತಂಡವನ್ನು ಗೆಲುವಿನ ದಡ ಸೇರಿದರು.

ಮುಖ್ಯಾಂಶಗಳು

- ಗೆಲುವಿನ ಇನಿಂಗ್ಸ್ ಕಟ್ಟಿದ ಪಡಿಕ್ಕಲ್– ರೋಹನ್
- ಗುಲ್ಬರ್ಗಾ ತಂಡಕ್ಕೆ ಜಯದ ಹ್ಯಾಟ್ರಿಕ್
- ಹುಬ್ಬಳ್ಳಿ ಟೈಗರ್ಸ್‌ಗೆ ಸತತ ಸೋಲು

ಮಯಂಕ್ ಶತಕ: ಅನುಭವಿ ಆಟಗಾರ ಮಯಂಕ್ ಅಗರ್‌ವಾಲ್‌ರ ಸ್ಫೋಟಕ ಶತಕ (102 ರನ್; 49ಎ, 4x10, 6x6) ನೆರವಿನಿಂದ ದಿನದ ಎರಡನೇ ಪಂದ್ಯದಲ್ಲಿ ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್ 9 ವಿಕೆಟ್‌ಗಳಿಂದ ಶಿವಮೊಗ್ಗ ಸ್ಟ್ರೈಕರ್ಸ್ ತಂಡವನ್ನು ಮಣಿಸಿತು.

ಸಂಕ್ಷಿಪ್ತ ಸ್ಕೋರ್: ಹುಬ್ಬಳ್ಳಿ ಟೈಗರ್ಸ್ 20 ಓವರ್‌ಗಳಲ್ಲಿ 8ಕ್ಕೆ 145 (ತುಷಾರ್ ಸಿಂಗ್ 42, ಲವ್‌ನಿತ್ ಸಿಸೊಡಿಯಾ 30. ಮನೋಜ್ ಭಾಂಡಗೆ 19ಕ್ಕೆ 2) ಗುಲ್ಬರ್ಗಾ ಮಿಸ್ಟಿಕ್ಸ್ 16.4 ಓವರ್‌ಗಳಲ್ಲಿ 1ಕ್ಕೆ 146 (ದೇವದತ್ತ ಪಡಿಕ್ಕಲ್ 62, ರೋಹನ್ ಪಾಟೀಲ ಅಜೇಯ 60. ಅಭಿಮನ್ಯು ಮಿಥುನ್ 26ಕ್ಕೆ 1) ಫಲಿತಾಂಶ: ಗುಲ್ಬರ್ಗಾ ಮಿಸ್ಟಿಕ್ಸ್‌ಗೆ 9 ವಿಕೆಟ್ ಜಯ

ಇಂದಿನ ಪಂದ್ಯಗಳು: ಹುಬ್ಬಳ್ಳಿ ಟೈಗರ್ಸ್– ಶಿವಮೊಗ್ಗ ಸ್ಟ್ರೈಕರ್ಸ್ (ಮಧ್ಯಾಹ್ನ 3ರಿಂದ), ಮೈಸೂರು ವಾರಿಯರ್ಸ್– ಬೆಂಗಳೂರು ಬ್ಲಾಸ್ಟರ್ಸ್ (ರಾತ್ರಿ 7ರಿಂದ)



ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಡಿವೈಇಎಸ್ ಮೈಸೂರು ಹಾಗೂ ಸಿಜಿಸಿ ಪಂದ್ಯದಲ್ಲಿ ಚೆಂಡಿನ ಮೇಲೆ ಹಿಡಿತ ಸಾಧಿಸಲು ಆಟಗಾರ್ತಿಯರ ಪೈಪೋಟಿ

ರಾಜ್ಯ ಯೂತ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್

ಸೆಮಿಗೆ ಮೈಸೂರು, ಮೌಂಟ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರಿನ ಡಿವೈಇಎಸ್ ವಸತಿ ನಿಲಯ ಹಾಗೂ ಮೌಂಟ್ಸ್ ಕ್ಲಬ್ ತಂಡಗಳು ಕಂಠೀರವ ಕ್ರೀಡಾಂಗಣದ ಒಳಾಂಗಣದಲ್ಲಿ ನಡೆಯುತ್ತಿರುವ ರಾಜ್ಯ ಯೂತ್ ಬ್ಯಾಸ್ಕೆಟ್‌ಬಾಲ್ ಟೂರ್ನಿಯ ಬಾಲಕಿಯರ ವಿಭಾಗದ ಸೆಮಿಫೈನಲ್ ಲೀಗ್ ಪ್ರವೇಶಿಸಿದರು.

ಶುಕ್ರವಾರ ನಡೆದ ಎಂಟರ ಘಟ್ಟದ ಪಂದ್ಯದಲ್ಲಿ ಯಶಸ್ವಿನಿ (30 ಅಂಕ) ಅಮೋಘ ಆಟದ ಬಲದಿಂದ ಮೈಸೂರಿನ ತಂಡವು 42-18(28-9) ರಿಂದ ಸಿಜಿಸಿ ವಿರುದ್ಧ ಗೆಲುವು ಸಾಧಿಸಿತು. ಮೈಸೂರು ತಂಡದ ಬೃಂದಾ 10 ಅಂಕ ಗಳಿಸಿದರು. ಸಿಜಿಸಿಯ ಆಧ್ಯಾ ಗೌಡ 13 ಅಂಕ ಕಲೆಹಾಕಿದರು.

ಇನ್ನೊಂದು ಪಂದ್ಯದಲ್ಲಿ ಮೌಂಟ್ಸ್ ಕ್ಲಬ್ ತಂಡವು 56-50ರಿಂದ ಬಿ.ಸಿ ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡವು ಗೆದ್ದಿತು. ಮೌಂಟ್ಸ್ ತಂಡದ ಮೃದ್ಯಾ ಹಾಗೂ ನಕ್ಷತ್ರಾ ತಲಾ 15 ಅಂಕ ಗಳಿಸಿದರು.

ಮೂರನೇ ಪಂದ್ಯದಲ್ಲಿ ಸದರ್ನ್ ಬ್ಲ್ಯೂಸ್ 61-35 (38-12) ರಿಂದ ಅಪ್ಪಯ್ಯ ಬಿ.ಸಿ. ವಿರುದ್ಧ ಜಯಗಳಿಸಿದರು. ಸದರ್ನ್ ತಂಡದ ನಿಧಿ (26) ಹಾಗೂ ಸಾಕ್ಷಿ (11) ಮಿಂಚಿದರು. ಅಪ್ಪಯ್ಯ ತಂಡದ ಪರ ಹಾಸಿನಿ (13) ಮತ್ತು ಲಿಂಷಾ (10) ಅಂಕಗಳ ಕಾಣಿಕೆ ನೀಡಿದರು.

ಶನಿವಾರದ ಪಂದ್ಯಗಳು

ಬಾಲಕರ ವಿಭಾಗ: ವಿಎನ್‌ಎಸ್‌ಸಿ–ವಿವೇಕ್ಸ್. ಪಿಪಿಇಸಿ–ಬೀಗಲ್ಸ್

ಬಾಲಕಿಯರ ವಿಭಾಗ: ಡಿವೈಇಎಸ್ ಮಂಡ್ಯ–ಸದರ್ನ್ ಬ್ಲ್ಯೂಸ್

ಮೌಂಟ್ಸ್ ಕ್ಲಬ್ –ಡಿವೈಇಎಸ್ ಮೈಸೂರು

ಪಂದ್ಯಗಳ ಆರಂಭ: ಬೆಳಿಗ್ಗೆ 10ರಿಂದ

ನ.20ರಿಂದ ಫಿಫಾ ವಿಶ್ವಕಪ್

ಜೂರಿಚ್ (ಎಪಿ): ದೋಹಾದಲ್ಲಿ ನಡೆಯಲಿರುವ ಫಿಫಾ ವಿಶ್ವಕಪ್ ಟೂರ್ನಿಯ ಆರಂಭವನ್ನು ಒಂದು ದಿನ ಮುಂದೂಡಲಾಗಿದೆ.

ಇದರಿಂದಾಗಿ ಟೂರ್ನಿಯು ನವೆಂಬರ್ 20ರಂದು ಆರಂಭವಾಗಲಿದೆ. ಮೊದಲ ಪಂದ್ಯದಲ್ಲಿ ಆತಿಥೇಯ ಕತಾರ್ ಹಾಗೂ ಇಕ್ವೆಡಾರ್ ತಂಡಗಳು ಮುಖಾಮುಖಿಯಾಗಲಿವೆ. ಫಿಫಾ ಈ ನಿರ್ಧಾರವನ್ನು ಗುರುವಾರ ಕೈಗೊಂಡಿತು. ಕತಾರ್ ದೇಶದವರಿಗಾಗಿ ಭಾನುವಾರದ ಸಂಜೆಯೊಂದನ್ನು ಮೀಸಲಿಡಲು ಈ ತೀರ್ಮಾನ ಮಾಡಲಾಗಿದೆ.

'ಹಾಕಿ ವಿಶ್ವಕಪ್‌ಗೆ ಸಿದ್ಧತೆ ಅಗತ್ಯ'

ನವದೆಹಲಿ (ಪಿಟಿಐ): 'ಮುಂದಿನ ವರ್ಷ ನಡೆಯಲಿರುವ ವಿಶ್ವಕಪ್ ಹಾಕಿ ಟೂರ್ನಿಯನ್ನು ಗಮನದಲ್ಲಿಟ್ಟುಕೊಂಡು ಭಾರತ ತಂಡ ಈಗಿನಿಂದಲೇ ತಯಾರಿ ನಡೆಸುವುದು ಅಗತ್ಯ' ಎಂದು ಯುವ ಆಟಗಾರ ಅಭಿಷೇಕ್ ಅಭಿಪ್ರಾಯಪಟ್ಟಿದ್ದಾರೆ.


'ನಾವೆಲ್ಲರೂ ಶೀಘ್ರದಲ್ಲೇ ತರಬೇತಿಗೆ ಮರಳುವುದನ್ನೇ ಎದುರು ನೋಡುತ್ತಿದ್ದೇವೆ. ಮುಂದೆ ಬರಲಿರುವ ಟೂರ್ನಿಗಳಿಗೆ ಸಿದ್ಧರಾಗಬೇಕಿದೆ' ಎಂದು ಹಾಕಿ ಇಂಡಿಯಾ ಹೊರಡಿಸಿದ ಪ್ರಕಟಣೆಯಲ್ಲಿ ಅವರು ತಿಳಿಸಿದ್ದಾರೆ.

'ಒಂದು ತಂಡವಾಗಿ ಇನ್ನಷ್ಟು ಸುಧಾರಣೆ ಬಯಸುತ್ತಿದ್ದೇವೆ. ಮುಂದಿನ ವರ್ಷ ವಿಶ್ವಕಪ್ ನಡೆಯಲಿರುವ ಕಾರಣ, ಎಲ್ಲ ಆಟಗಾರರು ಉತ್ತಮ ಫಾರ್ಮ್ ಕಂಡುಕೊಳ್ಳುವ ಪ್ರಯತ್ನದಲ್ಲಿದ್ದಾರೆ' ಎಂದರು.

22 ವರ್ಷದ ಫಾರ್ವರ್ಡ್ ಆಟಗಾರ ಅಭಿಷೇಕ್ ಅವರು ಇತ್ತೀಚೆಗೆ ನಡೆದ ಕಾಮನ್‌ವೆಲ್ತ್ ಕೂಟದಲ್ಲಿ ಭಾರತದ ಎಲ್ಲ ಆರೂ ಪಂದ್ಯಗಳಲ್ಲಿ ಆಡಿದ್ದರಲ್ಲದೆ, ಎರಡು ಗೋಲುಗಳನ್ನು ಗಳಿಸಿದ್ದರು. ಕಾಮನ್‌ವೆಲ್ತ್ ಕೂಟದ ಫೈನಲ್‌ನಲ್ಲಿ ಆಸ್ಟ್ರೇಲಿಯಾ ಎದುರು ಸೋತಿದ್ದ ಭಾರತ, ಬೆಳ್ಳಿ ಪದಕ ಪಡೆದುಕೊಂಡಿತ್ತು.

'ಕಾಮನ್‌ವೆಲ್ತ್‌ನಂತಹ ದೊಡ್ಡ ಕೂಟದಲ್ಲಿ ಆಡಲು ಅವಕಾಶ ಲಭಿಸಿದ್ದು, ಸ್ಮರಣೀಯ ಅನುಭವ ನೀಡಿದೆ. ನನ್ನ ಆಟದಲ್ಲಿ ಎಲ್ಲೆಲ್ಲಿ ಸುಧಾರಣೆಗೆ ಅವಕಾಶವಿದೆ ಎಂಬುದನ್ನು ಮನಗಂಡಿದ್ದೇನೆ' ಎಂದು ನುಡಿದರು.

ಷೇರುಪೇಟೆ ವಹಿವಾಟು 130



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,659
ಇಂದಿನ ಅಂತ್ಯ	17,698
▲	39
ದಿನದ ಗರಿಷ್ಠ	17,724

ವಿನಿಮಯ ದರ

$ ಡಾಲರ್	79.74
£ ಪೌಂಡ್	97.04
€ ಯುರೊ	82.06
¥ ಯೆನ್ (100ಕ್ಕೆ)	60

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹425
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹428

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1650 (1640)
ಸೋಯಾ (ರಿಫೈನ್ಡ್)	₹1275 (1275)
ಸೂರ್ಯಕಾಂತಿ (ರಿಫೈನ್ಡ್)	₹1600 (1600)
ಪಾಮೋಲಿನ್	₹1255 (1250)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹260-610
ದ್ವಿತಳಿ (ಬಿ.ವಿ)	₹266-777

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹165
ಆರ್‌ಎಸ್‌ಎಸ್-5	₹155
ಗುಡ್ ಲಾಟ್	₹147

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1200-1500
ಮಧ್ಯಮ	₹800-1200
ಸಣ್ಣ	₹400-800

ತೊಗರಿಬೇಳೆ: ದಾಸ್ತಾನಿನ ಮೇಲೆ ನಿಗಾ ಇರಿಸಲು ಸೂಚನೆ

ನವದೆಹಲಿ (ಪಿಟಿಐ): ತೊಗರಿ ಬೇಳೆ ಬೆಲೆಯು ಹೆಚ್ಚಾಗುತ್ತಿರುವ ಕಾರಣ, ದಾಸ್ತಾನುಗಾರರು ಮತ್ತು ವರ್ತಕರ ಬಳಿ ಇರುವ ತೊಗರಿಬೇಳೆ ಸಂಗ್ರಹದ ಮಾಹಿತಿ ಬಹಿರಂಗಪಡಿಸುವಂತೆ ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳು ಕ್ರಮ ಕೈಗೊಳ್ಳಬೇಕು ಎಂದು ಕೇಂದ್ರವು ಸೂಚನೆ ನೀಡಿದೆ.

ಕೃತಕ ಅಭಾವ ಸೃಷ್ಟಿಸುವ ಉದ್ದೇಶದಿಂದ ತೊಗರಿ ಬೇಳೆ ಮಾರಾಟವನ್ನು ಮಿತಿಗೊಳಿಸಲಾಗುತ್ತಿದೆ ಎಂಬ ವರದಿಗಳ ಹಿನ್ನೆಲೆಯಲ್ಲಿ ಕೇಂದ್ರವು ಈ ಸೂಚನೆ ನೀಡಿದೆ. ಕೇಂದ್ರವು ಧಾನ್ಯಗಳ ಬೆಲೆಯ ಮೇಲೆ ನಿಗಾ ಇರಿಸಿದೆ.

ದಾಸ್ತಾನಿನ ಮೇಲೆ ನಿಗಾ ಇಡುವುದು ಹಾಗೂ ಅದನ್ನು ತಾಳೆ ನೋಡುವ ಕೆಲಸವು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಆಗಬೇಕು ಎಂದು ಕೂಡ ಕೇಂದ್ರ ಹೇಳಿದೆ.

ತೊಗರಿಬೇಳೆ ಬಿತ್ತನೆಯು ಕಡಿಮೆ ಆಗಿರುವ ಕಾರಣದಿಂದಾಗಿ ಜುಲೈ ಎರಡನೆಯ ವಾರದ ನಂತರದಲ್ಲಿ ಅದರ ಬೆಲೆಯ ಏರುಗತಿಯಲ್ಲಿ ಸಾಗಿದೆ. ಕರ್ನಾಟಕ, ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶದ ತೊಗರಿಬೇಳೆ ಬೆಳೆಯುವ ಪ್ರದೇಶಗಳಲ್ಲಿ ಅತಿಯಾದ ಮಳೆಯ ಕಾರಣದಿಂದಾಗಿ ಬಿತ್ತನೆ ಕಡಿಮೆಯಾಗಿದೆ.

ಧಾನ್ಯಗಳ ಲಭ್ಯತೆಯು ದೇಶಿ ಮಾರುಕಟ್ಟೆಯಲ್ಲಿ ಸಾಕಷ್ಟಿದೆ. ಹೀಗಿದ್ದರೂ, ದಾಸ್ತಾನಿನಿಂದ 38 ಲಕ್ಷ ಟನ್ ಧಾನ್ಯಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಲಾಗುತ್ತಿದೆ ಎಂದು ಕೇಂದ್ರವು ತಿಳಿಸಿದೆ.

ಸೆಮಿಕಂಡಕ್ಟರ್ ಚಿಪ್ ಪೂರೈಕೆಯಲ್ಲಿ ಸುಧಾರಣೆ

ಪ್ರಯಾಣಿಕ ವಾಹನ ಮಾರಾಟ ಹೆಚ್ಚಳ


ನವದೆಹಲಿ (ಪಿಟಿಐ): ಪ್ರಯಾಣಿಕ ವಾಹನಗಳ ಸಗಟು ಮಾರಾಟವು 2021ರ ಜುಲೈಗೆ ಹೋಲಿಸಿದರೆ 2022ರ ಜುಲೈನಲ್ಲಿ ಶೇಕಡ 11ರಷ್ಟು ಏರಿಕೆ ಕಂಡಿದೆ ಎಂದು ಭಾರತೀಯ ವಾಹನ ತಯಾರಕರ ಒಕ್ಕೂಟ (ಎಸ್‌ಐಎಎಂ) ಶುಕ್ರವಾರ ತಿಳಿಸಿದೆ.

ಸೆಮಿಕಂಡಕ್ಟರ್ ಚಿಪ್ ಪೂರೈಕೆ ಸುಧಾರಿಸಿದೆ. ಹೀಗಾಗಿ ಕಂಪನಿಗಳು ಹಬ್ಬದ ಋತುವಿನ ಬೇಡಿಕೆಗಾಗಿ ತಯಾರಿಕೆಯನ್ನು ಹೆಚ್ಚಿಸಲು ಅನುಕೂಲ ಆಗಿದೆ ಎಂದು ಅದು ಹೇಳಿದೆ.

ಪ್ರಯಾಣಿಕ ವಾಹನಗಳ ಸಗಟು ಮಾರಾಟ 2022ರ ಜುಲೈನಲ್ಲಿ 2.93 ಲಕ್ಷ ಆಗಿದೆ. 2021ರ ಜುಲೈನಲ್ಲಿ 2.64 ಲಕ್ಷ ಇತ್ತು. 'ಆರಂಭಿಕ ಹಂತದ ಪ್ರಯಾಣಿಕ ಕಾರು, ದ್ವಿಚಕ್ರ ಮತ್ತು ತ್ರಿಚಕ್ರ ವಾಹನಗಳ ಮಾರುಕಟ್ಟೆಯು ಇನ್ನಷ್ಟೇ ಚೇತರಿಕೆ ಕಂಡುಕೊಳ್ಳಬೇಕಿದೆ' ಎಂದು ಒಕ್ಕೂಟದ ಪ್ರಧಾನ ನಿರ್ದೇಶಕ ರಾಜೇಶ್ ಮೆನನ್ ಹೇಳಿದ್ದಾರೆ.

'ದ್ವಿಚಕ್ರ ವಾಹನಗಳ ಮಾರಾಟವು 2016ರ ಜುಲೈಗೆ ಹೋಲಿಸಿದರೆ 2022ರ ಜುಲೈನಲ್ಲಿ ಕಡಿಮೆ ಇದೆ. ತ್ರಿಚಕ್ರ ವಾಹನಗಳ ಮಾರಾಟವು ಸಹ 2006ಕ್ಕಿಂತಲೂ ಕಡಿಮೆ ಮಟ್ಟದಲ್ಲಿ ಇದೆ. ರೆಪೊ ದರವನ್ನು ಮೂರನೇ ಬಾರಿಗೆ ಹೆಚ್ಚಳ ಮಾಡಿರುವುದು ವಾಹನ ಸಾಲವನ್ನು ತುಟ್ಟಿಯಾಗಿಸಲಿದೆ. ಇದರಿಂದಾಗಿ ಆರಂಭಿಕ ಹಂತದ ವಾಹನಗಳ ಮಾರಾಟದಲ್ಲಿ ಚೇತರಿಕೆಯು ಇನ್ನಷ್ಟು ಕಷ್ಟವಾಗಲಿದೆ' ಎಂದು ಅವರು ಮಾಹಿತಿ ನೀಡಿದ್ದಾರೆ.

'ಪೂರೈಕೆ ವ್ಯವಸ್ಥೆಯಲ್ಲಿ ಸುಧಾರಣೆ ಆಗಿರುವುದರಿಂದ ಪ್ರಯಾಣಿಕ ವಾಹನಗಳ ಮಾರಾಟ ಹೆಚ್ಚಾಗಿದೆ' ಎಂದು ಮೆನನ್ ಹೇಳಿದ್ದಾರೆ.



ಹಣದುಬ್ಬರ ಪ್ರಮಾಣ (%)

ಯಾವುದು	ಜುಲೈ	ಜೂನ್
ಆಹಾರ ವಸ್ತುಗಳು	6.75	7.75
ತರಕಾರಿಗಳು	10.90	17.37
ಎಣ್ಣೆ, ಕೊಬ್ಬಿನ ಅಂಶದ ಪದಾರ್ಥ	7.52	9.36
ಇಂಧನ	11.76	10.39
ಹಣ್ಣುಗಳು	6.41	3.10

ಎಲ್‌ಐಸಿ ಲಾಭ ₹ 682 ಕೋಟಿ

ಮುಂಬೈ (ಪಿಟಿಐ): ಭಾರತೀಯ ಜೀವ ವಿಮಾ ನಿಗಮವು (ಎಲ್‌ಐಸಿ) ಜೂನ್ ತ್ರೈಮಾಸಿಕದ ವಹಿವಾಟಿನಲ್ಲಿ ₹ 682 ಕೋಟಿ ಲಾಭ ಗಳಿಸಿದೆ.

ಹಿಂದಿನ ವರ್ಷದ ಇದೇ ಅವಧಿಯಲ್ಲಿ ಎಲ್‌ಐಸಿ ಕೇವಲ ₹ 2.94 ಕೋಟಿ ಲಾಭ ಗಳಿಸಿತ್ತು.

ಜೂನ್ ತ್ರೈಮಾಸಿಕದಲ್ಲಿ ಕಂಪನಿಯು ₹ 1.68 ಲಕ್ಷ ಕೋಟಿ ವರಮಾನ ಗಳಿಸಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ಕಂಪನಿಯ ವರಮಾನವು ₹ 1.54 ಲಕ್ಷ ಕೋಟಿ ಆಗಿತ್ತು.

ಸಂಕ್ಷಿಪ್ತ ಸುದ್ದಿ

'ವೈಯಕ್ತಿಕ ಬಳಕೆಯ ವಸತಿ ಕಟ್ಟಡಕ್ಕೆ ಜಿಎಸ್‌ಟಿ ಇಲ್ಲ'

ನವದೆಹಲಿ (ಪಿಟಿಐ): ಖಾಸಗಿ ವ್ಯಕ್ತಿಗಳಿಗೆ ವೈಯಕ್ತಿಕ ಬಳಕೆಗಾಗಿ ಬಾಡಿಗೆಗೆ ನೀಡಿರುವ ವಸತಿ ಕಟ್ಟಡಗಳಿಗೆ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಅನ್ವಯವಾಗುವುದಿಲ್ಲ ಎಂದು ಕೇಂದ್ರ ಸರ್ಕಾರವು ಶುಕ್ರವಾರ ಸ್ಪಷ್ಟಪಡಿಸಿದೆ.

ಬಾಡಿಗೆಗೆ ಇರುವವರು ಪಾವತಿ ಮಾಡುವ ಬಾಡಿಗೆ ಮೊತ್ತದ ಮೇಲೆ ಶೇಕಡ 18ರಷ್ಟು ಜಿಎಸ್‌ಟಿ ಕೊಡಬೇಕಾಗುತ್ತದೆ ಎಂಬ ವರದಿಗಳು ತಪ್ಪು ಎಂದು ಸರ್ಕಾರವು ಹೇಳಿದೆ.

ವಸತಿ ಕಟ್ಟಡವನ್ನು ವಾಣಿಜ್ಯ ಸಂಸ್ಥೆಗೆ ಬಾಡಿಗೆಗೆ ನೀಡಿದಾಗ ಮಾತ್ರ ಜಿಎಸ್‌ಟಿ ಸಂಗ್ರಹ ಮಾಡಲಾಗುತ್ತದೆ ಎಂದು ಕೇಂದ್ರವು ಟ್ವೀಟ್ ಮಾಡಿದೆ.

ಸಾಲ ವಸೂಲಿ: ಆರ್‌ಬಿಐ ತಾಕೀತು

ಮುಂಬೈ (ಪಿಟಿಐ): ಸಾಲ ವಸೂಲಿ ಏಜೆಂಟರು ಸಾಲ ಪಡೆದವರಿಗೆ ಬೆದರಿಕೆ ಹಾಕುವಂತೆ ಇಲ್ಲ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಶುಕ್ರವಾರ ತಾಕೀತು ಮಾಡಿದೆ. ಅಲ್ಲದೆ, ವಸೂಲಿ ಏಜೆಂಟರು ಸಾಲಗಾರರಿಗೆ ಬೆಳಿಗ್ಗೆ 8 ಗಂಟೆಯ ಮೊದಲು ಹಾಗೂ ಸಂಜೆ 7 ಗಂಟೆಯ ನಂತರ ಕರೆ ಮಾಡುವಂತಿಲ್ಲ ಎಂದು ಕೂಡ ಹೇಳಿದೆ.

ಬ್ಯಾಂಕ್, ಬ್ಯಾಂಕೇತರ ಹಣಕಾಸು ಸಂಸ್ಥೆಗಳು ಮತ್ತು ಆಸ್ತಿ ಪುನರ್‌ರಚನಾ ಕಂಪನಿಗಳಿಗೆ (ಎಆರ್‌ಸಿ) ಈ ಹೆಚ್ಚುವರಿ ಸೂಚನೆಗಳು ಅನ್ವಯವಾಗುತ್ತವೆ. ಸಾಲದ ವಸೂಲಾತಿಗೆ ಸಂಬಂಧಿಸಿದಂತೆ ತಾನು ನೀಡಿದ್ದ ಸೂಚನೆಗಳನ್ನು ಏಜೆಂಟರು ಪಾಲಿಸುತ್ತಿಲ್ಲ ಎಂದು ಆರ್‌ಬಿಐ ಹೇಳಿದೆ.

ಈ ಸೂಚನೆಗಳು ಎಲ್ಲ ವಾಣಿಜ್ಯ ಬ್ಯಾಂಕ್‌ಗಳಿಗೆ (ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳು ಸೇರಿದಂತೆ), ಸಹಕಾರ ಬ್ಯಾಂಕ್‌ಗಳಿಗೆ ಕೂಡ ಅನ್ವಯವಾಗುತ್ತವೆ ಎಂದು ಆರ್‌ಬಿಐ ಸ್ಪಷ್ಟಪಡಿಸಿದೆ.

ವಂಡರ್‌ಲಾ ಆದಾಯ ಹೆಚ್ಚಳ

ರಾಮನಗರ: ವಂಡರ್‌ಲಾ ಹಾಲಿಡೇಸ್, ಜೂನ್ ತ್ರೈಮಾಸಿಕದಲ್ಲಿ ಶೇ 26ರಷ್ಟು ಆದಾಯ ಹೆಚ್ಚಿಸಿಕೊಂಡಿದ್ದು, ಒಟ್ಟಾರೆ ₹ 150 ಕೋಟಿ ಗಳಿಕೆ ಮಾಡಿದೆ.

ಕಳೆದ ವರ್ಷ ಇದೇ ತ್ರೈಮಾಸಿಕದಲ್ಲಿ ಕೋವಿಡ್ ಕಾರಣಕ್ಕೆ ₹ 5.43 ಕೋಟಿ ಆದಾಯ ಬಂದಿತ್ತು. ಈ ತ್ರೈಮಾಸಿಕ ಅವಧಿಯಲ್ಲಿ ಇಲ್ಲಿಗೆ ಒಟ್ಟಾರೆ 11 ಲಕ್ಷಕ್ಕೂ ಹೆಚ್ಚು ಮಂದಿ ಭೇಟಿ ನೀಡಿದ್ದಾರೆ ಎಂದು ಕಂಪನಿ ತಿಳಿಸಿದೆ.

ಅಡುಗೆ ಎಣ್ಣೆ ಆಮದು ಶೇ 31ರಷ್ಟು ಏರಿಕೆ



ನವದೆಹಲಿ (ಪಿಟಿಐ): ಅಡುಗೆ ಎಣ್ಣೆಗಳ ಆಮದು ಜುಲೈನಲ್ಲಿ ಶೇಕಡ 31ರಷ್ಟು ಹೆಚ್ಚಾಗಿದ್ದು 12.05 ಲಕ್ಷ ಟನ್‌ಗೆ ತಲುಪಿದೆ. ಹಿಂದಿನ ವರ್ಷದ ಜುಲೈನಲ್ಲಿ ಅಡುಗೆ ಎಣ್ಣೆಗಳ ಆಮದು ಪ್ರಮಾಣವು 9.17 ಲಕ್ಷ ಟನ್ ಇತ್ತು.

ಜೂನ್‌ನಿಂದ ಜಾಗತಿಕ ಮಾರುಕಟ್ಟೆಯಲ್ಲಿ ತಾಳೆ, ಸೋಯಾ ಮತ್ತು ಸೂರ್ಯಕಾಂತಿ ಎಣ್ಣೆಗಳ ಬೆಲೆಯು ಇಳಿಕೆ ಕಂಡಿದೆ. ಹೀಗಾಗಿ ಭಾರತವು ಹೆಚ್ಚಿನ ಪ್ರಮಾಣದಲ್ಲಿ ಆಮದು ಮಾಡಿಕೊಂಡಿದೆ ಎಂದು ಸಾಲ್ವೆಂಟ್ ಎಕ್ಸ್‌ಟ್ರ್ಯಾಕ್ಟರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ (ಎಸ್‌ಇಎ) ಶುಕ್ರವಾರ ತಿಳಿಸಿದೆ.

2021ರ ನವೆಂಬರ್‌ನಿಂದ 2022ರ ಜುಲೈ ಅವಧಿಯಲ್ಲಿ ಅಡುಗೆ ಎಣ್ಣೆಗಳ ಆಮದು 96.95 ಲಕ್ಷ ಟನ್‌ಗೆ ತಲುಪಿದೆ. ಹಿಂದಿನ ಅವಧಿಯಲ್ಲಿ 93.70 ಲಕ್ಷ ಟನ್‌ಗಳಷ್ಟು ಇತ್ತು.

ಒಟ್ಟಾರೆ ಆಮದಿನಲ್ಲಿ ಸಂಸ್ಕರಿಸಿದ ತಾಳೆ ಎಣ್ಣೆ ಪಾಲು 11.44 ಲಕ್ಷ ಟನ್, ಕಚ್ಚಾ ತಾಳೆ ಎಣ್ಣೆ ಪಾಲು 36.59 ಲಕ್ಷ ಟನ್, ಕಚ್ಚಾ ಸೋಯಾಬೀನ್ ಎಣ್ಣೆ 33.30 ಲಕ್ಷ ಟನ್ ಹಾಗೂ ಕಚ್ಚಾ ಸೂರ್ಯಕಾಂತಿ ಎಣ್ಣೆ 15.03 ಲಕ್ಷ ಟನ್ ಆಗಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಎರಡು ತಿಂಗಳಿನಲ್ಲಿ ಅಡುಗೆ ಎಣ್ಣೆಗಳ ದರವು ಗಣನೀಯವಾಗಿ ಇಳಿಕೆ ಕಂಡಿದೆ. ತಾಳೆ ಎಣ್ಣೆ ದರವು ಪ್ರತಿ ಟನ್‌ಗೆ 625 ಡಾಲರ್ ಮತ್ತು ಸೋಯಾಬೀನ್ ಎಣ್ಣೆ ದರವು ಟನ್‌ಗೆ 370 ಡಾಲರ್ ಕಡಿಮೆ ಆಗಿದೆ ಎಂದು ತಿಳಿಸಿದೆ.

ಕೈಗಾರಿಕಾ ಉತ್ಪಾದನೆ ಇಳಿಕೆ



ನವದೆಹಲಿ (ಪಿಟಿಐ): ದೇಶದ ಕೈಗಾರಿಕಾ ವಲಯದ ಉತ್ಪಾದನೆಯು 2022ರ ಜೂನ್‌ನಲ್ಲಿ ಶೇಕಡ 12.3ರಷ್ಟು ಬೆಳವಣಿಗೆ ಕಂಡಿದೆ. ಆದರೆ, ಇದೇ ವರ್ಷದ ಮೇ ತಿಂಗಳು ಮತ್ತು 2021ರ ಜೂನ್ ತಿಂಗಳಿಗೆ ಹೋಲಿಸಿದರೆ ಬೆಳವಣಿಗೆ ಪ್ರಮಾಣದಲ್ಲಿ ಇಳಿಕೆ ಆಗಿದೆ.

ಕೈಗಾರಿಕಾ ಉತ್ಪಾದನಾ ಸೂಚ್ಯಂಕದ (ಐಐಪಿ) ಆಧಾರದ ಮೇಲೆ ಲೆಕ್ಕ ಹಾಕುವ ಕೈಗಾರಿಕಾ ಉತ್ಪಾದನೆಯು 2022ರ ಮೇನಲ್ಲಿ ಶೇ 19.6ರಷ್ಟು ಬೆಳವಣಿಗೆ ದಾಖಲಿಸಿತ್ತು. 2021ರ ಜೂನ್‌ನಲ್ಲಿ ಶೇ 13.8ರಷ್ಟು ಬೆಳವಣಿಗೆ ಕಂಡಿತ್ತು.

ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯವು ಶುಕ್ರವಾರ ಈ ಅಂಕಿ–ಅಂಶಗಳನ್ನು ಬಿಡುಗಡೆ ಮಾಡಿದೆ.

ತಯಾರಿಕಾ ವಲಯದ ಬೆಳವಣಿಗೆಯು ಶೇ 12.5ರಷ್ಟಾಗಿದೆ. 2021ರ ಜೂನ್‌ನಲ್ಲಿ ಶೇ 13.2ರಷ್ಟು ಬೆಳವಣಿಗೆ ಕಂಡಿತ್ತು. ಗಣಿ ಉತ್ಪಾದನೆಯು ಶೇ 23.1ರಿಂದ ಶೇ 7.5ಕ್ಕೆ ಇಳಿಕೆ ಆಗಿದ್ದರೆ ವಿದ್ಯುತ್ ಉತ್ಪಾದನೆ ಶೇ 8.3ರಿಂದ ಶೇ 16.4ಕ್ಕೆ ಏರಿಕೆ ಕಂಡಿದೆ.

ಐಐಪಿಯು 2021ರ ಏಪ್ರಿಲ್–ಜೂನ್‌ನಲ್ಲಿ ಕಂಡಿದ್ದ ಶೇ 44.4ರಷ್ಟು ಬೆಳವಣಿಗೆಗೆ ಹೋಲಿಸಿದರೆ 2022ರ ಏಪ್ರಿಲ್–ಜೂನ್ ಅವಧಿಯಲ್ಲಿ ಶೇ 12.7ರಷ್ಟು ಬೆಳವಣಿಗೆ ಕಂಡಿದೆ.

2020ರ ಮಾರ್ಚ್‌ನಿಂದ ಶುರುವಾದ ಕೋವಿಡ್ ಸಾಂಕ್ರಾಮಿಕದ ಅಸಾಧಾರಣ ಪರಿಸ್ಥಿತಿಯನ್ನು ಗಮನದಲ್ಲಿ ಇಟ್ಟುಕೊಂಡು ಹಿಂದಿನ ವರ್ಷದ ಜೂನ್ ತಿಂಗಳ ಬೆಳವಣಿಗೆ ದರವನ್ನು ಪರಿಗಣಿಸಬೇಕು ಎಂದು ಸಚಿವಾಲಯ ತಿಳಿಸಿದೆ.

ಕ್ರೋಮಾ: ವಿಶೇಷ ಮಾರಾಟ ಮೇಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟಾಟಾ ಸಮೂಹಕ್ಕೆ ಸೇರಿದ ಕ್ರೋಮಾ ಮಳಿಗೆಗಳಲ್ಲಿ ಸ್ವಾತಂತ್ರ್ಯದ ಅಮೃತ ಮಹೋತ್ಸದ ಪ್ರಯುಕ್ತ ಇದೇ 16ರವರೆಗೆ ವಿಶೇಷ ಮಾರಾಟ ಮೇಳ ನಡೆಯಲಿದೆ.

ಇದರ ಭಾಗವಾಗಿ ಸ್ಮಾರ್ಟ್‌ಫೋನ್, ಲ್ಯಾಪ್‌ಟಾಪ್, ಟಿ.ವಿ. ಮತ್ತು ಇತರ ಉಪಕರಣಗಳ ಖರೀದಿ ಮೇಲೆ ವಿಶೇಷ ಕೊಡುಗೆಗಳು ಇರಲಿವೆ. ಕ್ರೋಮಾದ 265ಕ್ಕೂ ಹೆಚ್ಚಿನ ಮಳಿಗೆಗಳಲ್ಲಿ ಹಾಗೂ croma.com ಜಾಲತಾಣದಲ್ಲಿ ಈ ಕೊಡುಗೆಗಳು ದೊರೆಯಲಿವೆ ಎಂದು ಪ್ರಕಟಣೆ ತಿಳಿಸಿದೆ.

ಆಡಿಯೊ ಉತ್ಪನ್ನಗಳ ಮೇಲೆ ಗರಿಷ್ಠ ಶೇಕಡ 80ರವರೆಗೆ ರಿಯಾಯಿತಿ ಸಿಗಲಿದೆ. ಮೊಬೈಲ್‌ಗಳು ಮತ್ತು ಅವುಗಳ ಆ್ಯಕ್ಸೆಸರಿಗಳಿಗೆ ಗರಿಷ್ಠ ಶೇ 50ರವರೆಗೆ ರಿಯಾಯಿತಿ ಇರಲಿದೆ.

ಸೆನ್ಸೆಕ್ಸ್, ನಿಫ್ಟಿ ಗಳಿಕೆ

ಮುಂಬೈ (ಪಿಟಿಐ): ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ ಶುಕ್ರವಾರ 130 ಅಂಶ ಏರಿಕೆ ಕಂಡಿತು. ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ ಕೂಡ ಸತತ ಐದನೇ ದಿನವೂ ಗಳಿಕೆ ದಾಖಲಿಸಿತು.

ತೈಲ ಮತ್ತು ಅನಿಲ ಹಾಗೂ ವಿದ್ಯುತ್ ವಲಯದ ಷೇರುಗಳ ಮೌಲ್ಯ ಹೆಚ್ಚಳದಿಂದ ಸೂಚ್ಯಂಕಗಳು ಏರಿಕೆ ಕಂಡವು. ಸೆನ್ಸೆಕ್ಸ್ 59,462 ಅಂಶಗಳಲ್ಲಿ ವಹಿವಾಟು ಅಂತ್ಯಗೊಳಿಸಿದರೆ, ನಿಫ್ಟಿ 17,698 ಅಂಶಗಳಿಗೆ ತಲುಪಿತು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-420
ನಡುಗೋಲು	450-480
ರಾಶಿ	500-600
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	485
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-56000
ಕಾರ್ಕಳ	
ಹಳತು	46000-56000
ಹೊಸನಗರ	
ಬಿಳಿಗೋಟು	24899-26399
ಚಾಲಿ	37099-37899
ಕೆಂಪುಗೋಟು	37069-38109
ರಾಶಿ	49799-52099
ಸಿಪ್ಪೆಗೋಟು	19799-19799
ಪುತ್ತೂರು	
ಹೊಸತು	33000-46000
ಸಿದ್ದಾಪುರ	
ಬಿಳಿಗೋಟು	26699-33689
ಚಾಲಿ	36599-41599
ಕೋಕ	26099-33700
ಕೆಂಪುಗೋಟು	32498-34699
ರಾಶಿ	48699-51299
ತಟ್ಟಿಬೆಟ್ಟೆ	39199-49599
ಶಿರಸಿ	
ಬೆಟ್ಟೆ	34290-46600
ಬಿಳಿಗೋಟು	27139-34869
ಚಾಲಿ	35777-42501
ರಾಶಿ	44549-52899
ಯಲ್ಲಾಪುರ	
ಬಿಳಿಗೋಟು	28899-34818
ಚಾಲಿ	38119-41999
ಕೋಕ	18600-31869
ಕೆಂಪುಗೋಟು	30769-35899
ರಾಶಿ	50390-56900
ತಟ್ಟಿಬೆಟ್ಟೆ	37719-48419

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16500	15800	15700	220.45 ಸೆಂಟ್ಸ್
ಎಸಿ	9100	8400	8750	
ಆರ್‌ಪಿ	9900	9500	9750	ಲಂಡನ್
ಆರ್‌ಸಿ	4865	4500	4625	2145 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ 12–8-2022

ಜಾವಾ 70/80(ಹೊಸ)	11300-11350
ಜಾವಾ 80/90(ಹೊಸ)	10700-10750
ದಪ್ಪ ಮಧ್ಯಪ್ರದೇಶ(ಹೊಸ)	10000-10050
ದಪ್ಪ ಗುಜರಾತ್(ಹೊಸ)	10700-10750

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1660 (1650)
ಒಂದು ವಾರದ ಡೆಲಿವರಿ	1655 (1645)
ಸೋಯಾ ಕಚ್ಚಾ	1240 (1230)
ಪಾಮ್ ವಾರದ ಡೆಲಿವರಿ	1253 (1248)
ಸೂರ್ಯಕಾಂತಿ ಎಣ್ಣೆ ಕಚ್ಚಾ	1500 (1500)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 52,350 (52,150)

ಬೆಳ್ಳಿ ಕೆ.ಜಿ 58,350 (58,600)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಗ್ರ್ಯಾನ್ ಪ್ರಿ ಬ್ಯಾಡ್ಮಿಂಟನ್: ಫರೀದ್ ಮಣಿಸಿದ ಅನಿರುದ್ಧ್

ಮಂಡ್ಯ ಬುಲ್ಸ್ ಶುಭಾರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೊಗಸಾದ ಆಟವಾಡಿದ ಮಂಡ್ಯ ಬುಲ್ಸ್ ತಂಡದವರು ಚೊಚ್ಚಲ ಗ್ರ್ಯಾನ್ ಪ್ರಿ ಬ್ಯಾಡ್ಮಿಂಟನ್ ಲೀಗ್‌ನಲ್ಲಿ ಶುಭಾರಂಭ ಮಾಡಿದರು.

ಕರ್ನಾಟಕ ಬ್ಯಾಡ್ಮಿಂಟನ್ ಸಂಸ್ಥೆ ಕೋರ್ಟ್‌ನಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಬುಲ್ಸ್ ತಂಡ ಬಂಡೀಪುರ ಟಸ್ಕರ್ಸ್ ತಂಡವನ್ನು ಮಣಿಸಿತು.

ಮೊದಲು ನಡೆದ ಮಹಿಳೆಯರ ಸಿಂಗಲ್ಸ್‌ನಲ್ಲಿ ಬುಲ್ಸ್ ತಂಡದ ಅನನ್ಯಾ ಪ್ರವೀಣ್ ಅವರು 14–15, 8–15 ರಲ್ಲಿ ಟಸ್ಕರ್ಸ್ ತಂಡದ ಅಲ್ಫಿಯಾ ರಿಯಾಸ್ ಎದುರು ಸೋತರು.

ಆದರೆ ಪುರುಷರ ಡಬಲ್ಸ್ ವಿಭಾಗದಲ್ಲಿ ಆಶಿತ್ ಸೂರ್ಯ–ಸಾಯಿ ಪ್ರತೀಕ್ ಅವರು 15–11, 15–12 ರಲ್ಲಿ ಕಿಶಲ್ ಗಣಪತಿ– ವಿ.ವೈಭವ್ ಅವರನ್ನು ಮಣಿಸಿ ಬುಲ್ಸ್ ತಂಡಕ್ಕೆ ಸಮಬಲ ತಂದಿತ್ತರು.

ಬಳಿಕ ನಡೆದ ಪುರುಷರ ಸಿಂಗಲ್ಸ್ ಪಂದ್ಯದಲ್ಲಿ ಅನಿರುದ್ಧ್ ದೇಶಪಾಂಡೆ ಅವರು 15–9, 15–6 ರಲ್ಲಿ ಅಂತರರಾಷ್ಟ್ರೀಯ ಆಟಗಾರ ಡೇನಿಯಲ್ ಫರೀದ್ ವಿರುದ್ಧ ಅಚ್ಚರಿಯ ಗೆಲುವು ಸಾಧಿಸಿ ತಮ್ಮ ತಂಡಕ್ಕೆ 2–1 ರಲ್ಲಿ ಮೇಲುಗೈ ನೀಡಿದರು.



ಮಂಡ್ಯ ಬುಲ್ಸ್ ತಂಡದ ಅನಿರುದ್ಧ್ ದೇಶಪಾಂಡೆ ಆಟದ ವೈಖರಿ

ಮಿಶ್ರ ಡಬಲ್ಸ್‌ನಲ್ಲಿ ಬುಲ್ಸ್ ತಂಡದ ಮಧುಸೂದನ್– ರುತ್ ಮಿಶಾ ವಿನೋದ್ 10-15, 15-14, 15-12 ರಲ್ಲಿ ಅಭಿಷೇಕ್ ಯೆಲಿಗಾರ್ ಹಾಗೂ ಅಪೇಕ್ಷಾ ನಾಯಕ್ ಅವರನ್ನು ಸೋಲಿಸಿದರು.

ಕೊನೆಯ ಪಂದ್ಯದಲ್ಲಿ ಆಶಿತ್ ಸೂರ್ಯ/ ಸಾಯಿ ಪ್ರತೀಕ್ ಮತ್ತು ಮಧುಸೂದನ್ ಅವರು 21–16 ರಲ್ಲಿ ಅಭಿಷೇಕ್ ಯೆಲಿಗಾರ್/ ವಿ. ವೈಭವ್/ ಗಣೇಶ್ ವಿಠಲ್‌ಜಿ ಅವರನ್ನು ಮಣಿಸಿದರು.

ದಿನದ ಇನ್ನೊಂದು ಪಂದ್ಯದಲ್ಲಿ ಮಂಗಳೂರು ಶಾರ್ಕ್ಸ್ ತಂಡ ಕೊಡಗು ಟೈಗರ್ಸ್ ತಂಡವನ್ನು ಸೋಲಿಸಿತು.

ಉದ್ಘಾಟನೆ: ಚೊಚ್ಚಲ ಜಿಪಿಬಿಎಲ್ ಟೂರ್ನಿಯಲ್ಲಿ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರು ಉದ್ಘಾಟಿಸಿದರು. ಮೊದಲ ವರ್ಷದ ಟೂರ್ನಿಯಲ್ಲಿ ಎಂಟು ತಂಡಗಳು ಪಾಲ್ಗೊಂಡಿವೆ.

ಟೆನಿಸ್: ರಾಜ್ಯ ತಂಡದಲ್ಲಿ ಶರ್ಮದಾ, ಪ್ರಜ್ವಲ್ ದೇವ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶರ್ಮದಾ ಬಾಲು ಮತ್ತು ಪ್ರಜ್ವಲ್ ದೇವ್ ಅವರು ಗುಜರಾತ್‌ನಲ್ಲಿ ಸೆ.27 ರಿಂದ ಅ.10ರ ವರೆಗೆ ನಡೆಯಲಿರುವ 36ನೇ ರಾಷ್ಟ್ರೀಯ ಕ್ರೀಡಾಕೂಟದ ಟೆನಿಸ್ ಟೂರ್ನಿಯಲ್ಲಿ ಕರ್ನಾಟಕದ ಸವಾಲನ್ನು ಮುನ್ನಡೆಸಲಿದ್ದಾರೆ.

ಕರ್ನಾಟಕ ರಾಜ್ಯ ಟೆನಿಸ್ ಸಂಸ್ಥೆಯ ಆಯ್ಕೆಯ ಸಮಿತಿಯು ಯುವ ಹಾಗೂ ಅನುಭವಿ ಆಟಗಾರರನ್ನು ಒಳಗೊಂಡ ಪುರುಷರ ಹಾಗೂ ಮಹಿಳೆಯರ ತಂಡಗಳನ್ನು ಶುಕ್ರವಾರ ಪ್ರಕಟಿಸಿತು.

ಕರ್ನಾಟಕ ತಂಡ ಅಹಮದಾಬಾದ್‌ಗೆ ಪ್ರಯಾಣಿಸುವ ಮುನ್ನ ಕೆಎಸ್‌ಎಲ್‌ಟಿಎನಲ್ಲಿ ಮೂರು ದಿನಗಳ ತರಬೇತಿ ಶಿಬಿರದಲ್ಲಿ ಪಾಲ್ಗೊಳ್ಳಲಿದೆ.

ತಂಡ ಹೀಗಿದೆ: ಮಹಿಳೆಯರು: ಶರ್ಮದಾ ಬಾಲು, ಸೋಹಾ ಸಾದಿಕ್, ವಿದುಲಾ ಅಮರ್, ವಂಶಿತಾ ಪಠಾನಿಯ, ರೇಷ್ಮಾ ಮರೂರಿ. ರಿಸರ್ವ್: ಪ್ರತಿಭಾ ಪ್ರಸಾದ್ ನಾರಾಯಣ, ಎಸ್. ಶ್ರೀನಿಧಿ

ಪುರುಷರು: ಪ್ರಜ್ವಲ್ ದೇವ್, ರಿಷಿ ರೆಡ್ಡಿ, ಆದಿಲ್ ಕಲ್ಯಾಣಪುರ್, ಜಿ.ಮನೀಷ್, ರಶೀನ್ ಸ್ಯಾಮುಯೆಲ್. ರಿಸರ್ವ್: ಸೂರಜ್ ಪ್ರಬೋದ್, ತಥಾಗತ್ ಸಿ.ಟಿ. ಪೀಟರ್ ವಿಜಯಕುಮಾರ್ (ನಾನ್ ಪ್ಲೇಯಿಂಗ್ ನಾಯಕ), ಕಿರಣ್ ನಂದಕುಮಾರ್ (ಕೋಚ್).

ಮುಂದಿನ ಮಾರ್ಚ್‌ನಲ್ಲಿ ಮಹಿಳಾ ಐಪಿಎಲ್

ನವದೆಹಲಿ (ಪಿಟಿಐ): ಸಾಕಷ್ಟು ನಿರೀಕ್ಷೆ ಮೂಡಿಸಿರುವ ಮಹಿಳಾ ಇಂಡಿಯನ್ ಪ್ರೀಮಿಯರ್ ಲೀಗ್ (ಡಬ್ಲ್ಯುಐಪಿಎಲ್) ಟಿ20 ಕ್ರಿಕೆಟ್ ಲೀಗ್ 2023ರ ಮಾರ್ಚ್ ತಿಂಗಳಲ್ಲಿ ನಡೆಯಲಿದೆ.

‘ದಕ್ಷಿಣ ಆಫ್ರಿಕಾದಲ್ಲಿ ಮುಂದಿನ ಫೆ. 9 ರಿಂದ 26ರ ವರೆಗೆ ಮಹಿಳಾ ಟಿ20 ವಿಶ್ವಕಪ್ ಟೂರ್ನಿ ನಡೆಯಲಿದೆ. ಆ ಟೂರ್ನಿಯ ಬೆನ್ನಲ್ಲೇ ಡಬ್ಲ್ಯುಐಪಿಎಲ್ ಆಯೋಜಿಸಲು ನಿರ್ಧರಿಸಲಾಗಿದೆ’ ಎಂದು ಬಿಸಿಸಿಐ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕಬಡ್ಡಿ ಶಿಬಿರ

ಮಂಗಳೂರು: ಬಿಹಾರದಲ್ಲಿ ನವೆಂಬರ್ 1ರಿಂದ 4ರವರಗೆ ನಡೆಯಲಿರುವ ಜೂನಿಯರ್ ಬಾಲಕಿಯರ ರಾಷ್ಟ್ರೀಯ ಕಬಡ್ಡಿ ಟೂರ್ನಿಯಲ್ಲಿ ಪಾಲ್ಗೊಳ್ಳುವ ಕರ್ನಾಟಕ ತಂಡದ ಆಯ್ಕೆ ಮತ್ತು ತರಬೇತಿ ಶಿಬಿರ ಮೂಡುಬಿದಿರೆಯ ಆಳ್ವಾಸ್ ಶಿಕ್ಷಣ ಸಂಸ್ಥೆಯಲ್ಲಿ ನಡೆಯಲಿದೆ.

ಇದೇ 16ರಂದು ಆಯ್ಕೆ ಪ್ರಕ್ರಿಯೆ ನಡೆಯಲಿದ್ದು 17ರಿಂದ 28ರವರೆಗೆ ತರಬೇತಿ ಶಿಬಿರ ಆಯೋಜಿಸಲಾಗಿದೆ. ಆಯ್ಕೆ ಪ್ರಕ್ರಿಯೆಗೆ ಹಾಜರಾಗುವವರು ಬೆಳಿಗ್ಗೆ 8ರ ಒಳಗೆ ಹಾಜರಿರಬೇಕು. ಪಾಲ್ಗೊಳ್ಳುವವರ ವಯಸ್ಸು ಮುಂಬರುವ ಸೆ. 4ಕ್ಕೆ ಅನ್ವಯವಾಗುವಂತೆ 20 ವರ್ಷ ದಾಟಿರಬಾರದು ಮತ್ತು ದೇಹತೂಕ 65 ಕೆ.ಜಿ. ಒಳಗೆ ಇರಬೇಕು. ಆಧಾರ್ ಕಾರ್ಡ್ ಮತ್ತು ಪಾಸ್‌ಪೋರ್ಟ್ ಅಳತೆಯ ಎರಡು ಭಾವಚಿತ್ರಗಳನ್ನು ತರಬೇಕು.

ಮಾಹಿತಿಗೆ ಆಳ್ವಾಸ್ ಕಾಲೇಜಿನ ಮಹಿಳಾ ಕಬಡ್ಡಿ ಕೋಚ್ ಹಂಸ ಸಿ. (9916087513) ಅಥವಾ ರತನ್ (9448529625) ಅವರನ್ನು ಸಂಪರ್ಕಿಸಬಹುದು ಎಂದು ರಾಜ್ಯ ಅಮೆಚೂರ್ ಕಬಡ್ಡಿ ಸಂಸ್ಥೆಯ ಆಡಳಿತಾಧಿಕಾರಿ ಎಸ್.ಜಿ. ಮಂಜುನಾಥ ಸಿಂಗ್ ತಿಳಿಸಿದ್ದಾರೆ.

ಎಎಸ್‌ಸಿಗೆ ರೋಚಕ ಜಯ

ಬೆಂಗಳೂರು: ಜಶನ್‌ದೀಪ್ ಸಿಂಗ್ ಅವರು ಕೊನೆಯ ಕ್ಷಣದಲ್ಲಿ ಗಳಿಸಿದ ಗೋಲಿನ ನೆರವಿನಿಂದ ಎಎಸ್‌ಸಿ ಮತ್ತು ಸೆಂಟರ್ ತಂಡ ಸಿ.ಪುಟ್ಟಯ್ಯ ಸ್ಮಾರಕ ಟ್ರೋಫಿ ಫುಟ್‌ಬಾಲ್ ಟೂರ್ನಿಯಲ್ಲಿ ಜಯ ಸಾಧಿಸಿತು.

ಶುಕ್ರವಾರ ನಡೆದ ಪಂದ್ಯದಲ್ಲಿ ಎಎಸ್‌ಸಿ 3–2 ಗೋಲುಗಳಿಂದ ಬೆಂಗಳೂರು ಡ್ರೀಮ್ ಯುನೈಟೆಡ್ ತಂಡವನ್ನು ಮಣಿಸಿತು. ಎಎಸ್‌ಸಿ ಪರ ಮೊದಲ ಎರಡು ಗೋಲುಗಳನ್ನು ರಾಜ್‌ಸಿಂಗ್ 21 ಮತ್ತು 88ನೇ ನಿಮಿಷದಲ್ಲಿ ಗಳಿಸಿದರು.

ಡ್ರೀಮ್ ಯುನೈಟೆಡ್ ತಂಡದ ಎಲ್ವಿಸ್ ನಾಂಗ್ದು ಅವರು 70 ಮತ್ತು 76ನೇ ನಿಮಿಷದಲ್ಲಿ ಗೋಲು ಗಳಿಸಿ ಪಂದ್ಯವನ್ನು ಸಮಸ್ಥಿತಿಗೆ ತಂದರು. ಪಂದ್ಯ ಇನ್ನೇನು ಡ್ರಾದಲ್ಲಿ ಕೊನೆಗೊಳ್ಳಲಿದೆ ಅನ್ನುವಷ್ಟರಲ್ಲಿ ಜಶನ್‌ದೀಪ್ (90 + 4 ನಿ.) ಅವರು ಎಎಸ್‌ಸಿ ತಂಡಕ್ಕೆ ಗೆಲುವಿನ ಗೋಲು ತಂದಿತ್ತರು.

ಎಂಇಜಿ ಮತ್ತು ಸೆಂಟರ್ ಹಾಗೂ ಬೆಂಗಳೂರು ಈಗಲ್ಸ್ ಎಫ್‌ಸಿ ನಡುವಿನ ದಿನದ ಇನ್ನೊಂದು ಪಂದ್ಯ ಗೋಲುರಹಿತ ಡ್ರಾದಲ್ಲಿ ಕೊನೆಗೊಂಡಿತು.

ಶನಿವಾರ ನಡೆಯುವ ಪಂದ್ಯಗಳಲ್ಲಿ ಕೊಡಗು ಎಫ್‌ಸಿ– ಕಿಕ್‌ಸ್ಟಾರ್ಟ್ ಎಫ್‌ಸಿ ಹಾಗೂ ಬಿಎಫ್‌ಸಿ –ರೂಟ್ಸ್ ಎಫ್‌ಸಿ ತಂಡಗಳು ಪೈಪೋಟಿ ನಡೆಸಲಿವೆ.

ಸ್ವಾತಂತ್ರ್ಯದ 'ಅಮೃತ'ದಲ್ಲಿ ಬೆಂಗಳೂರಿಗೂ ಪಾಲು !


ಗುರುರಾಜ್ ಎಸ್ ದಾವಣಗೆರೆ

ಇಡೀ ದೇಶವೇ ಸ್ವಾತಂತ್ರ ದಿನಾಚರಣೆಯ ಅಮೃತ ಮಹೋತ್ಸವದ ಸಂಭ್ರಮದಲ್ಲಿ ಮಿಂದೇಳುತ್ತಿದೆ. ಮನೆಗಳ ಮೇಲೆ ತ್ರಿವರ್ಣಧ್ವಜಗಳು ಹಾರಾಡುತ್ತಿವೆ. ಜನ – ಮಾಧ್ಯಮ - ಸಂಘ ಸಂಸ್ಥೆ - ಸರ್ಕಾರಗಳು, ಸ್ವಾತಂತ್ರ್ಯಕ್ಕಾಗಿ ಹೋರಾಡಿ, ತ್ಯಾಗ ಬಲಿದಾನ ಗೈದವರನ್ನು ವಿನೂತನ ರೀತಿಯಲ್ಲಿ ನೆನಪಿಸಿಕೊಳ್ಳುತ್ತಿವೆ. ಬ್ರಿಟಿಷರ ಆಡಳಿತದ ವಿರುದ್ಧ ತೊಡೆ ತಟ್ಟಿ ನಿಂತು ಚರಿತ್ರೆಯ ಪುಟ ಸೇರಿದ ದೇಶಭಕ್ತರ ಹೋರಾಟಕ್ಕೆ ಸ್ಫೂರ್ತಿ ನೀಡಿದ ಅನೇಕ ಜಾಗಗಳು ದೇಶಾದ್ಯಂತ ಇವೆ. ಸ್ವಾತಂತ್ರ್ಯ ಸಂಗ್ರಾಮ ಎಂದಾಕ್ಷಣ ದಂಡಿ, ವಿದುರಾಶ್ವತ್ಥ, ಈಸೂರು, ಮುಂಬೈ, ಕೋಲ್ಕತ್ತಾ, ದೆಹಲಿ, ಅಲಹಾಬಾದ್, ಪುಣೆ ಇತ್ಯಾದಿ ಹೆಸರುಗಳು ಅನಾಯಾಸವಾಗಿ ಕಣ್ಣಮುಂದೆ ಸುಳಿಯುತ್ತವೆ. ಹಾಗೆಯೇ ಆಧುನಿಕ ಭಾರತದ ಪ್ರಗತಿಗೆ ತನ್ನ ಐಟಿ - ಬಿಟಿ - ಶಿಕ್ಷಣ ಕ್ಷೇತ್ರಗಳಿಂದ ಅಪಾರ ಕೊಡುಗೆ ನೀಡುತ್ತಿರುವ ಬೆಂಗಳೂರಿಗೂ ದೇಶದ ಸ್ವಾತಂತ್ರ್ಯ ಹೋರಾಟದ ಪಾಲಿನಲ್ಲಿ ದೊಡ್ಡ ಹೆಸರಿದೆ. ಇಲ್ಲಿನ ಐದು ಪ್ರಮುಖ ಸ್ಥಳಗಳು ಭಾರತದ ಸ್ವಾತಂತ್ರ್ಯ ಹೋರಾಟದ ದಿನಗಳಿಗೆ ರಂಗಸ್ಥಳವಾಗಿದ್ದವು ಎಂಬುದು ಇತಿಹಾಸದ ಪುಟಗಳಲ್ಲಿದೆ. ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂದರ್ಭದಲ್ಲಿ ಈ ಕುರಿತ ಒಂದಷ್ಟು ನೆನಪುಗಳು ಇಲ್ಲಿವೆ..



ಬನ್ನಪ್ಪ ಪಾರ್ಕ್

ಕಬ್ಬನ್ ಪೇಟೆಯ ಬನ್ನಪ್ಪ ಪಾರ್ಕ್ ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟಿಷರ ವಿರುದ್ಧದ ಹಲವಾರು ಪ್ರತಿಭಟನೆ, ಹೋರಾಟಗಳಿಗೆ ಸಾಕ್ಷಿಯಾಗಿದ್ದ ನೆಲ. ಸಾವಿರಾರು ಜನ ಸೇರಲು ಸಾಕಷ್ಟು ಜಾಗವಿದ್ದುದರಿಂದ ಪ್ರತಿಭಟನೆ, ಸತ್ಯಾಗ್ರಹಗಳ ಯೋಜನೆ, ಸಿದ್ಧತೆಗಳೆಲ್ಲ ಅಲ್ಲಿಯೇ ನಡೆದು ಬೃಹತ್ ಜನ ಜಾಥಾ ನಡೆಯುತ್ತಿದ್ದವು. ಸ್ವಾತಂತ್ರ್ಯಕ್ಕಾಗಿ ಪ್ರಾಣ ತೆತ್ತ ವೀರರ ನೆನಪಿಗೆ ಈಗ ಅಲ್ಲೊಂದು ಸ್ಮಾರಕ ಸ್ಥಾಪಿಸಲಾಗಿದೆ. ಈಗಲೂ ಸಹ ಬೆಂಗಳೂರಿಗರ ಹಲವು ಪ್ರತಿಭಟನೆಗಳು ಬನ್ನಪ್ಪ ಪಾರ್ಕ್‌ನಿಂದಲೇ ಶುರುವಾಗುತ್ತವೆ.



ಗಾಂಧಿ ಭವನ – ಕುಮಾರ ಪಾರ್ಕ್ ಅತಿಥಿಗೃಹ

1927ರಲ್ಲಿ ಬೆಂಗಳೂರಿಗೆ ಬಂದಿದ್ದ ಗಾಂಧೀಜಿ, ಕುಮಾರ ಕೃಪಾ ಅತಿಥಿ ಗೃಹದಲ್ಲಿ ಸುಮಾರು ಮೂರು ತಿಂಗಳು ವಾಸ್ತವ್ಯ ಹೂಡಿದ್ದರು. ಪ್ರತಿದಿನ ಸಂಜೆ ಅಲ್ಲಿಯೆ ಸಾಮೂಹಿಕ ಪ್ರಾರ್ಥನೆ ಮಾಡುತ್ತಿದ್ದರು. ಊರಿನ ಸಾವಿರಾರು ಜನ ಅಲ್ಲಿ ಜಮಾಯಿಸುತ್ತಿದ್ದರು. ಬೆಳಗಿನ ಹೊತ್ತು ರಾಜಕೀಯ ಹಾಗೂ ಸ್ವಾತಂತ್ರ್ಯ ಹೋರಾಟದ ಸಭೆಗಳು ಅಲ್ಲಿಯೇ ನಡೆಯುತ್ತಿದ್ದವು. ಅತಿಥಿ ಗೃಹದ ಪಕ್ಕದಲ್ಲೇ ಇಂಪೀರಿಯಲ್ ಡೇರಿ ಫಾರಂನ ವಿಲಿಯಂ ಸ್ಮಿತ್ ವಾಸವಿದ್ದರು. ಅಲ್ಲಿದ್ದಷ್ಟೂ ದಿನ ಗಾಂಧೀಜಿ ದೇಶದಾದ್ಯಂತ ಇರುವ ದನಗಳ ಸಾಕಣೆ ಕುರಿತು ಸ್ಮಿತ್ ರೊಂದಿಗೆ ಚರ್ಚಿಸುತ್ತಿದ್ದರು. ಈಗಿನ ಗಾಂಧಿಭವನದ ಜಾಗದಲ್ಲಿ ಬಾಪೂ ಬೆಳಗಿನ ವಿಹಾರ ಮಾಡುತ್ತಿದ್ದರು. ಈಗ ಅಲ್ಲಿ ಗಾಂಧೀಜಿ ಬರೆದ ಪತ್ರಗಳ ವಸ್ತು ಸಂಗ್ರಹಾಲಯವಿದ್ದು ಅಪರೂಪದ ಛಾಯಾಚಿತ್ರಗಳು, ಗ್ರಂಥಾಲಯ, ಸಭಾ ಭವನಗಳಿವೆ.

ಫ್ರೀಡಂ ಪಾರ್ಕ್!




ನಗರದ ಶೇಷದ್ರಿ ರಸ್ತೆಯಲ್ಲಿರುವ ಸ್ವಾತಂತ್ರ್ಯ ಉದ್ಯಾನವನ (ಫ್ರೀಡಂ ಪಾರ್ಕ್) ಒಂದು ಶತಮಾನಕ್ಕೂ ಹೆಚ್ಚು ಕಾಲ ಬೆಂಗಳೂರು ಸೆಂಟ್ರಲ್ ಜೈಲ್ ಎಂದು ಪ್ರಸಿದ್ಧವಾಗಿತ್ತು. 1867 ರಲ್ಲಿ ಬ್ರಿಟಿಷರು ನಿರ್ಮಿಸಿದ್ದ ಈ ಜೈಲಿನಲ್ಲಿ ಮೊದಲು ಸಾಮಾನ್ಯ ಖೈದಿಗಳೇ ಇರುತ್ತಿದ್ದರು. ಯಾವಾಗ ಸ್ವಾತಂತ್ರ್ಯ ಸಂಗ್ರಾಮದ ಚಳವಳಿ ಜೋರಾಯಿತೋ ಆಗ ಸಹಸ್ರಾರು ದೇಶಭಕ್ತರನ್ನು ಈ ಜೈಲಿನಲ್ಲಿಡಲಾಯಿತು. ಜೈಲಿನಲ್ಲಿ ಸಾಮಾನ್ಯ ಖೈದಿಗಳಿಗಿಂತ ಸ್ವಾತಂತ್ರ ಹೋರಾಟಗಾರರೇ ಹೆಚ್ಚಾಗಿ, ಅದು ಹೋರಾಟಗಾರರ ನೆಲೆಯಾಗಿ ಬದಲಾಯಿತು. ಸ್ವಾತಂತ್ರ್ಯಾ ನಂತರ 1999ರ ವರೆಗೆ ಅಲ್ಲಿ ಬೇರೆ ಬೇರೆ ಅಪರಾಧಿಗಳನ್ನು ಬಂಧನದಲ್ಲಿಡಲಾಗುತ್ತಿತ್ತು. 2000ದಲ್ಲಿ ಪರಪ್ಪನ ಅಗ್ರಹಾರದಲ್ಲಿ ನೂತನ ಜೈಲು ನಿರ್ಮಿಸಿ ಇಲ್ಲಿದ್ದ ಖೈದಿಗಳನ್ನು ಅಲ್ಲಿಗೆ ಸ್ಥಳಾಂತರಿಸಲಾಯಿತು. ನಂತರ 2009 ರಲ್ಲಿ ಬಿಬಿಎಂಪಿ ಹಳೆಯ ಜೈಲನ್ನು ನವೀಕರಿಸಿ 'ಫ್ರೀಡಂ ಪಾರ್ಕ್' ಅಥವಾ ಸ್ವಾತಂತ್ರ್ಯ ಉದ್ಯಾನ ಎಂದು ನಾಮಕರಣ ಮಾಡಿ ಎಲ್.ಕೆ.ಅಡ್ವಾಣಿ (ತುರ್ತು ಪರಿಸ್ಥಿತಿಯಲ್ಲಿ ಇದೇ ಜೈಲಿನಲ್ಲಿದ್ದರು) ಅವರಿಂದ ಲೋಕಾರ್ಪಣೆ ಮಾಡಿಸಿತು.

ಈಗ 'ಫ್ರೀಡಂ ಪಾರ್ಕ್'ನಲ್ಲಿ ಸ್ವಾತಂತ್ರ್ಯ ಚಳವಳಿ, ಹೋರಾಟ ನೆನಪಿಸುವ ಚಿತ್ರಗಳು, ಮ್ಯೂಸಿಯಂ ಇದೆ. ಈಗ ಅದು ಸಾಮಾಜಿಕ ನ್ಯಾಯಕ್ಕಾಗಿ ನಡೆಯುವ ಹೋರಾಟಗಳ, ಪ್ರತಿಭಟನೆಗಳ, ಉಪವಾಸ ಸತ್ಯಾಗ್ರಹಗಳ ಪ್ರಮುಖ ವೇದಿಕೆಯಾಗಿದೆ.

ನ್ಯಾಷನಲ್ ಹೈಸ್ಕೂಲ್



ಬೆಂಗಳೂರಿನ ನ್ಯಾಷನಲ್ ಹೈಸ್ಕೂಲು ಪ್ರಾರಂಭವಾದದ್ದು 1917 ರಲ್ಲಿ. ಇದನ್ನು ಪ್ರಾರಂಭಿಸಿದ್ದು ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಮೊದಲ ಅಧ್ಯಕ್ಷರಾಗಿದ್ದ ಅನಿ ಬೆಸೆಂಟ್. ವಿದ್ಯಾರ್ಥಿ ದೆಸೆಯಲ್ಲಿ ಅಲ್ಲಿಯೇ ಓದಿದ್ದ ಹನುಮಂತಪ್ಪ ನರಸಿಂಹಯ್ಯ ಎಂಬ ವಿದ್ಯಾರ್ಥಿ ಗಾಂಧೀಜಿಯವರ ಭಾಷಣದಿಂದ ಪ್ರಭವಿತರಾಗಿ ಸ್ವಾತಂತ್ರ ಹೋರಾಟದಲ್ಲಿ ಪಾಲ್ಗೊಂಡಿದ್ದರು. ನಂತರ ಗಾಂಧೀಜಿಯ ಭಾಷಣಗಳನ್ನು ಕನ್ನಡಕ್ಕೆ ಭಾಷಾಂತರಿಸುತ್ತಿದ್ದುದು ನರಸಿಂಹಯ್ಯನವರೇ! ಶತಮಾನ ಪೂರೈಸಿದ ಶಾಲೆಗಳಲ್ಲೊಂದೆನಿಸಿರುವ ನ್ಯಾಷನಲ್ ಹೈಸ್ಕೂಲು ಯುವಕರಲ್ಲಿ ಸ್ವಾತಂತ್ರ್ಯದ ಕಿಡಿ ಹೊತ್ತಿಸಿದ ಜಾಗವೆನಿಸಿದೆ.



ಯಶವಂತಪುರ ರೈಲ್ವೆ ನಿಲ್ದಾಣ (ಸಂಗ್ರಹ ಚಿತ್ರ)

ಯಶವಂತಪುರ ರೈಲ್ವೆ ಸ್ಟೇಷನ್‌ನಲ್ಲಿ ಬಾಪು ಪ್ರಾರ್ಥನೆ

ಭಾರತ ಸ್ವಾತಂತ್ರ ಹೋರಾಟದ ನಾಯಕತ್ವ ವಹಿಸಿದ ಮಹಾತ್ಮ ಗಾಂಧೀಜಿ, ಆ ಸಮಯದಲ್ಲಿ ಹಲವು ಬಾರಿ ಬೆಂಗಳೂರಿಗೂ ಬಂದಿದ್ದರು. ಅದು ಏಪ್ರಿಲ್ 20, 1927. ಗಾಂಧೀಜಿ ರೈಲಿನಿಂದಿಳಿದು ಬೆಂಗಳೂರಿಗೆ ಮೊದಲ ಹೆಜ್ಜೆ ಇಟ್ಟದ್ದು ಈಗಿನ ಯಶವಂತಪುರದ ರೈಲ್ವೆ ಜಂಕ್ಷನ್ನಿನ ಪ್ಲಾಟ್‌ಫಾರ್ಮಿನ ಮೇಲೆ! ಆ ವೇಳೆಗೆ ಗಾಂಧೀಜಿಯವರ ಪ್ರಾರ್ಥನೆಯ ಸಮಯವಾಗಿತ್ತು. ಪ್ಲಾಟ್‌ಫಾರ್ಮ್‌ನಲ್ಲಿ ಮುಖ ಕೈ ಕಾಲು ತೊಳೆದುಕೊಂಡ ಗಾಂಧೀಜಿ ಮತ್ತು ಸಹಚರರು ಅಲ್ಲಿಯೇ ಸಾಮೂಹಿಕ ಪ್ರಾರ್ಥನೆ ಶುರುಮಾಡಿ ಬಿಟ್ಟರು. ಗಾಂಧೀಜಿಯ ಸ್ವಾಗತಕ್ಕೆ ಬಂದಿದ್ದವರೆಗೆಲ್ಲಾ ಅಚ್ಚರಿ. ಜೊತೆಗೆ ಬಾಪೂವಿನ ಜೊತೆ ಪ್ರಾರ್ಥನೆ ಮಾಡುವ ಸುಯೋಗ!!



ಇಂದು, ನಾಳೆ 'ನಂಕಂಪ್ನಿ' ನಾಟಕ ಪ್ರದರ್ಶನ

ಅಸ್ಮಿತಾ ಶಾಂತಿನಗರ

ಕನ್ನಡ ರಂಗಭೂಮಿಗೆ ಮಹತ್ವದ ಕಾಣಿಕೆಗಳನ್ನು ನೀಡಿದ ಖ್ಯಾತ ಸಂಸ್ಥೆ ವೇದಿಕೆ ಫೌಂಡೇಷನ್, 1983ರಲ್ಲಿ 'ಟಿಪಿಕಲ್ ಟಿ.ಪಿ.ಕೈಲಾಸಂ' ನಾಟಕದೊಂದಿಗೆ ಕಾರ್ಯಾರಂಭ ಮಾಡಿ ರಾಜ್ಯ, ರಾಷ್ಟ್ರ, ಅಂತರರಾಷ್ಟ್ರೀಯಮಟ್ಟದಲ್ಲಿ ಪ್ರಸ್ತುತಿಗಳನ್ನ ನೀಡಿ ಗಟ್ಟಿ ನೆಲೆ ಕಂಡುಕೊಂಡಿದೆ.

ರಂಗ ದಂಪತಿಗಳಾದ ಶಾರದಾ ಮತ್ತು ಸಿ.ಆರ್. ಸಿಂಹ ಅವರು ಆರಂಭಿಸಿದ ವೇದಿಕೆ ಫೌಂಡೇಷನ್, ಇಂದು ನೂರಾರು ಕಲಾವಿದರನ್ನು ರೂಪಿಸಿದ ಕೀರ್ತಿ ಹೊಂದಿದೆ . 'ಟಿಪಿಕಲ್ ಟಿ.ಪಿ.ಕೈಲಾಸಂ', 'ಭೈರವಿ', 'ರಸಋಷಿ ಕುವೆಂಪು', 'ಅಗ್ನಿ ಮತ್ತು ಮಳೆ', 'ಮ್ಯಾಕ್‌ಬೆತ್', 'ಡ್ರೀಂ', 'ಮದುವೆ ಮದುವೆ', 'ಹಾವು-ಏಣಿ', 'ಬಹದ್ದೂರ್ ಗಂಡ'... ಹೀಗೆ ವೇದಿಕೆಯ ನಾಟಕ ಕೃತಿಗಳ ಪಟ್ಟಿ ಬೆಳೆಯುತ್ತದೆ.

2001ರಲ್ಲಿ ಫೌಂಡೇಷನ್ ವತಿಯಿಂದ 'ವೇದಿಕೆ ರಂಗ ಮಾಲಿಕೆ' ಎಂಬ ವಾರಾಂತ್ಯ ಪ್ರದರ್ಶನ ನೀಡುವ ಯೋಜನೆ ರೂಪಿಸಲಾಯಿತು. ಸತತವಾಗಿ 125 ವಾರಗಳ ಕಾಲ ನಾಟಕ ಪ್ರದರ್ಶನ ಆಯೋಜಿಸಿ ಆಧುನಿಕ ರಂಗಭೂಮಿಯಲ್ಲಿ ಇತಿಹಾಸ ನಿರ್ಮಿಸಿತು. ಇದರ ರೂವಾರಿಗಳು ಜಸ್ಲೀನ್ – ಋತ್ವಿಕ್ ಸಿಂಹ ದಂಪತಿ.

ವೇದಿಕೆ ಫೌಂಡೇಷನ್ ಮನೆ ತಾರಸಿಗಳಲ್ಲಿ ನಾಟಕ ಪ್ರದರ್ಶನ, ಮಾತುಕತೆ– ಖ್ಯಾತ ಕಲಾವಿದರೊಂದಿಗೆ ಆಪ್ತ ಸಮಾಲೋಚನೆ, ಚಿತ್ರ ಕೂಟ– ಚಲನಚಿತ್ರ ವೀಕ್ಷಣೆ, ಶಿಬಿರಗಳು ಹೀಗೆ ಹಲವು ರೀತಿಯಲ್ಲಿ ಸೃಜನಶೀಲವಾಗಿ ಕಾರ್ಯನಿರ್ವಹಿಸುತ್ತಿದೆ.

ಫೌಂಡೇಷನ್ ವತಿಯಿಂದ 2020ರಲ್ಲಿ ವೇದಿಕೆ ನಾಟಕ ಶಾಲೆ ಆರಂಭಿಸಲಾಯಿತು. ಮೊದಲ ಬ್ಯಾಚ್‌ನಲ್ಲಿ 18 ವಿದ್ಯಾರ್ಥಿಗಳು ಡಿಪ್ಲೊಮಾ ಇನ್ ಥಿಯೇಟರ್ ಆರ್ಟ್ಸ್ ಪದವಿಯನ್ನು ಪೂರೈಸಿದ್ದಾರೆ. ರಂಗಾಸಕ್ತ ವಿದ್ಯಾರ್ಥಿಗಳಿಗೆ ಉಚಿತವಾಗಿ ಎರಡು ವರ್ಷಗಳ ಡಿಪ್ಲೊಮಾ ಪದವಿಯಲ್ಲಿ ತರಬೇತಿ ನೀಡಲಾಗಿದ್ದು, ಇದೇ ಆಗಸ್ಟ್ 13 ಮತ್ತು 14 ವೇದಿಕೆ ನಾಟಕಶಾಲೆಯ ಪ್ರಥಮ ಬ್ಯಾಚ್ ಘಟಿಕೋತ್ಸವ ನಡೆಯಲಿದ್ದು, ಎರಡು ದಿನಗಳ ಕಾಲ ವಿದ್ಯಾರ್ಥಿಗಳು ಟಿ.ಪಿ. ಕೈಲಾಸಂ ಅವರ 'ನಂಕಂಪ್ನಿ' ನಾಟಕವನ್ನು ಪ್ರದರ್ಶಿಸಲಿದ್ದಾರೆ.

'ನಂಕಂಪ್ನಿ' ಕುರಿತು: ಸುಮಾರು ನೂರು ವರುಷ ಹಳೆಯ ನಾಟಕವಾದರೂ 'ನಂಕಂಪ್ನಿ' ನಿತ್ಯನೂತನ ಆಹ್ಲಾದಕರ ರಂಗಕೃತಿಯಾಗಿದೆ. ಸಂಗೀತಮಯ, ಹಾಸ್ಯ, ವಿಡಂಬನಾತ್ಮಕ ನಾಟಕವು ಕನ್ನಡ ರಂಗ ಇತಿಹಾಸದಲ್ಲಿ ಮಹತ್ವದ ಸ್ಥಾನ ಪಡೆದಿದೆ.

ನಾಟಕದೊಳಗೆ ನಾಟಕ ನಡೆಯುವ ಅಂಶ ಹೊಂದಿರುವ ಕೃತಿ ನೋಡುಗರನ್ನು ನಗಿಸುತ್ತದೆ. ವಿಶಿಷ್ಟ ಹಾಡುಗಳಿಂದ ಮುದಗೊಳಿಸುತ್ತದೆ. ನಾಟಕ ಆರಂಭ- ಸೂತ್ರಧಾರನೊಂದಿಗೆ ನಟಿಯ ಪ್ರವೇಶ. 'ನಂಕಂಪ್ನಿ' ತಂಡದಿಂದ 'ಶೂರ್ಪನಖಿ ಕುಲವಿಲಾಸ' ನಾಟಕ ಪ್ರದರ್ಶನ! 'ಆ ನಾಟಕ' ನಡೆಯುವಾಗ ಘಟಿಸುವ ತಪ್ಪು-ಒಪ್ಪುಗಳು, ಅವಘಡಗಳು ಹಾಸ್ಯದ ಹೊನಲನ್ನೇ ಹರಿಸುತ್ತದೆ.

ಸುಮಾರು 30 ಹಾಡುಗಳು – ಕಂದಪದ್ಯಗಳು ಕಂಪನಿ ನಾಟಕದ ಶೈಲಿಯಲ್ಲಿ ರಂಗದ ಮೇಲೆ ಹರಿದು ಬಂದು ಪ್ರೇಕ್ಷಕರನ್ನು ಬೇರೊಂದು ಲೋಕಕ್ಕೆ ಕರೆದೊಯ್ಯುತ್ತದೆ. ರಾಜ-ರಾಣಿಯ ಕತೆ, ಋಷಿಯ ಕೋಪ-ತಾಪ, ವಿಲಕ್ಷಣ ವಿಪ್ರನ ಹಾಸ್ಯ, ಬಗೆಬಗೆಯ ಸಖಿಯರ ನಾಟ್ಯ-ಸಂಗೀತ, ಕೊನೆಗೆ ಶೂರ್ಪನಖಿಯ ಜಾದೂ! ಈ ಎಲ್ಲ ಅಂಶಗಳಿಂದ ನಾಟಕ ಪೂರ್ಣ ರಂಗ ಅನುಭವ ನೀಡುವ ವಿಶಿಷ್ಟ ಪ್ರಸ್ತುತಿ ಆಗಿದೆ.

'ನಂಕಂಪ್ನಿ' ನಾಟಕ ಪ್ರದರ್ಶನ: ರಚನೆ–ಟಿ.ಪಿ. ಕೈಲಾಸಂ, ವಿನ್ಯಾಸ, ನಿರ್ದೇಶನ– ಋತ್ವಿಕ್ ಸಿಂಹ, ಸಂಗೀತ– ವಿ. ಮನೋಹರ್, ಕಲೆ– ಮಾಲತೇಶ್ ಬಡಿಗೇರ್, ವಸ್ತ್ರ, ಧ್ವನಿ ವಿನ್ಯಾಸ, ನಿರ್ಮಾಣ– ಜಸ್ಲೀನ್ ಋತ್ವಿಕ್ ಸಿಂಹ. ಆಯೋಜನೆ– ವೇದಿಕೆ ನಾಟಕ ಶಾಲೆ. ಶನಿವಾರ, ಭಾನುವಾರ, ಸ್ಥಳ– ಪ್ರಭಾತ್ ಕಲಾಸೌಧ, ಹನುಮಂತ ನಗರ. ಸಮಯ– ಸಂಜೆ 7ಕ್ಕೆ. ವಿವರಗಳಿಗೆ– 98458 05442.

ನೃತ್ಯ ಲೋಕದಲ್ಲಿ ‘ಶುಭ್ರ’ ಹೆಜ್ಜೆಗಳು...

ನೃತ್ಯ ವೈಭವ

ಸ್ವಾತಂತ್ರ್ಯದ ಅಮೃತ ಮಹೋತ್ಸವ, ಗಣೇಶ ಹಬ್ಬಗಳು ಸಾಲಿನಲ್ಲಿರುವಾಗ ಅವುಗಳಿಗೊಂದು ಕಲಾ ಸ್ಪರ್ಶ ನೀಡಿ ಗುರುತಿಸಿಕೊಂಡವರು ಶುಭ್ರತಾ ಪಿ.


‘ವಂದೇ ಮಾತರಂ’, ‘ವಿಶ್ವ ವಿನಾಯಕ’ ಅವರ ನೃತ್ಯದ ಹೆಜ್ಜೆಗಳಲ್ಲಿ ಕಲಾಸಕ್ತರ ಮನಸ್ಸಿನಲ್ಲಿ ಚಿತ್ತಾರ ಬರೆದವು. ಸಣ್ಣ ಪುಟ್ಟ ವೇದಿಕೆಗಳಿಂದಲೇ ಮೇಲೇರುತ್ತಾ ಬಂದ ಅವರು, ಅದೇ ಕ್ಷೇತ್ರದಲ್ಲಿ ಪಿಎಚ್‌.ಡಿಯನ್ನೂ ಗಳಿಸಿದರು. ಒಂದಿಷ್ಟು ಶಿಷ್ಯರನ್ನೂ ಸಿದ್ಧಗೊಳಿಸಿ ಹೆಜ್ಜೆಗಳ ಜಗತ್ತಿಗೆ ಕೊಡುಗೆ ನೀಡಿದ್ದಾರೆ. ಸಾಂಸ್ಕೃತಿಕ ಪರಂಪರೆ ಮುಂದುವರಿಯಲು ಸಾಥ್ ನೀಡಿದ್ದಾರೆ.

ಹಾಸನ ಜಿಲ್ಲೆ ಚನ್ನರಾಯಪಟ್ಟಣದವರಾದ ಶುಭ್ರತಾ, ಚಿತ್ರಕಲಾ ಶಿಕ್ಷಕ ದಂಪತಿ ಎಸ್‌.ವೈ. ಪ್ರಭಾಕರ್– ಶೋಭಾ ಆರ್. ಅವರ ಪುತ್ರಿ. ಭರತನಾಟ್ಯದ ಜಾಡಿನಲ್ಲೇ ಮುಂದುವರಿದ ಅವರು ಮೈಸೂರು ವಿಶ್ವವಿದ್ಯಾಲಯದಲ್ಲಿ ಭರತನಾಟ್ಯದಲ್ಲಿ ಸ್ನಾತಕೋತ್ತರ ಪದವಿ, ಪಿಎಚ್‌.ಡಿ ಪಡೆದರು. ಈಗ ಹಳೇಬೀಡು ಮತ್ತು ಚನ್ನರಾಯಪಟ್ಟಣದಲ್ಲಿ ‘ನೃತ್ಯವಿಹಾರ್’ ಪ್ರದರ್ಶಕ ಕಲಾಕೇಂದ್ರ ಸ್ಥಾಪಿಸಿ ನೃತ್ಯ ಶಿಕ್ಷಣವನ್ನು ವಿದ್ಯಾರ್ಥಿಗಳಿಗೆ ಧಾರೆ ಎರೆಯುತ್ತಿದ್ದಾರೆ. ಜೊತೆಗೆ ನೂರಾರು ಕಾರ್ಯಕ್ರಮಗಳನ್ನೂ ನೀಡಿದ್ದಾರೆ. ಪ್ರತಿಭೆ, ಪರಿಶ್ರಮಕ್ಕೆ ಹತ್ತಾರು ಪ್ರಶಸ್ತಿ, ಗೌರವಗಳೂ ಸಂದಿವೆ.

ಅವರ ಪ್ರಮುಖ ನೃತ್ಯ ಸಂಯೋಜನೆಗಳೆಂದರೆ, ‘ವಿನಾಯಕ ನಮನ’, ವಿಶ್ವ ವಿನಾಯಕ’, ‘ಕರ್ನಾಟಿಕ್ ಫೋಕ್ ಫ್ಯೂಷನ್’, ‘ವಂದೇ ಮಾತರಂ’, ‘ಪಂಚಕನ್ಯಾ’.... ಇತರ ನೃತ್ಯಗಳಲ್ಲೂ ಪ್ರಯೋಗಶೀಲತೆ ಮುಂದುವರಿದೇ ಇದೆ.

ಶಂಕರ ಟಿವಿ ಚಾನೆಲ್‌ನ ರಿಯಾಲಿಟಿ ಶೋದಲ್ಲಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ‘ಸಂಸ್ಕೃತಿ ನಮನ’ದಲ್ಲಿ ಸೇರಿದಂತೆ ರಾಜ್ಯಮಟ್ಟದ ಪ್ರತಿಷ್ಠಿತ ವೇದಿಕೆಗಳಲ್ಲಿ, ನಿಧಿ ಸಂಗ್ರಹಕ್ಕಾಗಿ, ಸಹಾಯಾರ್ಥ ಪ್ರದರ್ಶನಗಳಿಗಾಗಿ ನೃತ್ಯದ ಹೆಜ್ಜೆಗಳನ್ನಿಟ್ಟಿದ್ದಾರೆ. ಸಂಸ್ಕೃತಿ ಉತ್ಸವಗಳಲ್ಲಿ ಹತ್ತಾರು ಕಾರ್ಯಕ್ರಮಗಳನ್ನು ನೀಡಿದ್ದಾರೆ.

ಹೀಗೆ ಶುಭ್ರತಾ ಅವರ ಪ್ರಯೋಗಶೀಲ ಮನಸ್ಸು, ಹೊಸ ಹೆಜ್ಜೆಗಳ ಕನಸಿನ ದಾರಿಯಲ್ಲಿ ಮುನ್ನಡೆದಿದೆ.







ತಿನ್ನುವ ಆಹಾರದ ಮೇಲೆ ಗಮನವಿರಲಿ. ನಿಧಾನವಾಗಿ ಆಹಾರ ಸೇವಿಸಿ, ಚೆನ್ನಾಗಿ ಅಗಿದು, ನುಂಗಿದರೆ ಜೀರ್ಣಕ್ರಿಯೆ ಸರಾಗವಾಗುತ್ತದೆ. ಇದರಿಂದ ಹಲವು ರೋಗಗಳು ಬಾರದಂತೆ ಎಚ್ಚರ ವಹಿಸಬಹುದು.

ಅಗಿಯುತ್ತಾ, ನಿಧಾನವಾಗಿ ತಿನ್ನಿ!

ಅಗರ್ತ

ಆರೋಗ್ಯ

‘ನಿಧಾನವಾಗಿ ಊಟಮಾಡಪ್ಪ. ಅದ್ಯಾಕೆ ಹಾಗೆ ಗಬ ಗಬ ತಿನ್ನುತ್ತೀಯ. ಹಾಗೆ ತಿಂದ್ರೆ, ರುಚಿಯೂ ಗೊತ್ತಾಗಲ್ಲ, ಎಷ್ಟು ತಿಂದೆ ಎಂದು ಅಳತೆ ಸಿಗೋಲ್ಲ. ತೂಕ ಹೆಚ್ಚಾಗ್ದೇ ಇನ್ನೇನಾಗುತ್ತದೆ ಹೇಳು...’

ಇದು ಸಾಮಾನ್ಯವಾಗಿ ಮನೆಗಳಲ್ಲಿ ವೇಗವಾಗಿ ತಿನ್ನುವ ಮಕ್ಕಳಿಗೆ ಹಿರಿಯರು ಹೇಳುವ ಮಾತುಗಳು. ಈಗ ಆಹಾರತಜ್ಞರು (ಡಯಟೀಷಿಯನ್ಸ್), ಸಂಶೋಧಕರೂ ಇದೇ ಮಾತುಗಳನ್ನು ಹೇಳುತ್ತಿದ್ದಾರೆ. ತೂಕ ಇಳಿಸುವವರಿಗೆ, ಅಜೀರ್ಣ, ಗ್ಯಾಸ್ಟ್ರಿಕ್‌ನಿಂದ ಬಳಲುತ್ತಿರುವವರಿಗೆ ‘ನಿಧಾನವಾಗಿ ತಿನ್ನಿ‘ ಎಂದು ಸಲಹೆ ನೀಡುತ್ತಿದ್ದಾರೆ.

ಆಹಾರ ಅಗಿಯದೇ, ವೇಗವಾಗಿ ತಿಂದಾಗ, ದೊಡ್ಡ ದೊಡ್ಡ ತುಣುಕುಗಳು ದೊಡ್ಡ ಕರುಳಿನಲ್ಲಿ ಸೇರಿಕೊಂಡು ಬ್ಯಾಕ್ಟೀರಿಯಾಗಳ ಚಟುವಟಿಕೆ ಹೆಚ್ಚುತ್ತದೆ. ಅಜೀರ್ಣ, ಗ್ಯಾಸ್ ಸಮಸ್ಯೆ, ಹೊಟ್ಟೆಯುಬ್ಬರ, ಬೇಧಿ, ಹೊಟ್ಟೆನೋವು, ಮಲಬದ್ಧತೆ ಮುಂತಾದ ಸಮಸ್ಯೆಗಳು ಹೆಚ್ಚಾಗುತ್ತದೆ. ಅಷ್ಟೇ ಅಲ್ಲ, ದೇಹದ ತೂಕ ಹೆಚ್ಚಾಗುತ್ತದೆ ಎನ್ನುತ್ತಾರೆ ತಜ್ಞರು.

ಆಹಾರ ಸೇವನೆ ನಿಧಾನವಾಗಿರಬೇಕು. ಚೆನ್ನಾಗಿ ಅಗಿದು ಅಗಿದು ತಿನ್ನಬೇಕು. ಆಹಾರದ ಸ್ವಾದ, ರುಚಿ, ಬಣ್ಣ ಎಲ್ಲವನ್ನೂ ಅಸ್ವಾದಿಸುತ್ತಾ, ನಿಧಾನವಾಗಿ ಮನಸ್ಸಿಗೆ ತೃಪ್ತಿಯಾಗುವಂತೆ ತಿನ್ನಬೇಕು. ಯಾವುದನ್ನೇ ತಿನ್ನುವಾಗ, ಗಮನ ಆಹಾರದ ಮೇಲೆ ಇರಬೇಕು. ಇನ್ನೂ ಬೇಕು ಎನ್ನುವಾಗಲೇ ತಿನ್ನುವುದನ್ನು ನಿಲ್ಲಿಸಿದರೆ, ಹೊಟ್ಟೆ ಭಾರವಾಗುವುದಿಲ್ಲ. ಮುಂದಿನ ಕೆಲಸಗಳಿಗೂ ತೊಂದರೆಯಾಗುವುದಿಲ್ಲ ಎನ್ನವುದು ಅವರ ಸಲಹೆ.

ಚೆನ್ನಾಗಿ ಅಗಿಯುವುದರಿಂದ..

- ನಾವು ತಿಂದ ಆಹಾರ ಜೀರ್ಣವಾಗಲು ಹೆಚ್ಚಿನ ಶಕ್ತಿ ವ್ಯಯವಾಗುತ್ತದೆ. ಹಾಗಾಗಿ ಆಹಾರವನ್ನು ಅಗಿದು ಚೂರು ಮಾಡಿ ಶರೀರದೊಳಗೆ ಕಳಿಸುವುದರಿಂದ ಜೀರ್ಣಕ್ರಿಯೆಯಲ್ಲಾಗುವ ಶಕ್ತಿಯ ವ್ಯಯ ಕಡಿಮೆಯಾಗುತ್ತದೆ. ಜೀರ್ಣಕ್ರಿಯೆ ಕಿಣ್ವಗಳ ಕಾರ್ಯನಿರ್ವಹಣೆ ಸುಲಭವಾಗಿ, ಜೀರ್ಣಕ್ರಿಯೆ ಚುರುಕಾಗುತ್ತದೆ.
- ಸಾಮಾನ್ಯವಾಗಿ ಆಹಾರ ಸೇವಿಸಿದಾಗ, ನಮ್ಮ ಹೊಟ್ಟೆ ತುಂಬಿದೆ ಎಂದು ಮಿದುಳಿಗೆ ಸಂದೇಶ ರವಾನೆಯಾಗಲು ಕನಿಷ್ಠ 20 ನಿಮಿಷಗಳಾದರೂ ಬೇಕಂತೆ. ಆದರೆ, ಆಹಾರವನ್ನು ಚೆನ್ನಾಗಿ ಅಗಿದು ತಿನ್ನುವುದರಿಂದ ಮಿದುಳಿಗೆ ಬೇಗನೆ ಸಂದೇಶ ರವಾನೆಯಾಗಿ, ಕಡಿಮೆ ಆಹಾರ ತಿನ್ನುವಂತೆ ಮಿದುಳು ಪ್ರಚೋದಿಸುತ್ತದೆ. ಹಾಗಾಗಿ, ನಿಧಾನವಾಗಿ ಆಹಾರ ಸೇವಿಸುವುದ ರಿಂದ, ಮಾಮೂಲಿಗಿಂತ ತುಸು ಕಡಿಮೆ ಆಹಾರ ಸೇವಿಸುತ್ತೇವೆ. ಅಂದರೆ, ದೇಹಕ್ಕೆ ಅವಶ್ಯವಿರುವಷ್ಟು ಆಹಾರ ಸೇವಿಸುತ್ತೇವೆ. ಇದರಿಂದ ಬೊಜ್ಜು, ಸಿಹಿಮೂತ್ರ ರೋಗ ಸೇರಿದಂತೆ ವಿವಿಧ ರೋಗಗಳು ಬರದಂತೆ ತಡೆಗಟ್ಟಬಹುದು.
- ಆಹಾರವನ್ನು ಅಗಿಯುವುದರಿಂದ, ಅದು ಲಾಲಾರಸದೊಡನೆ ಹೆಚ್ಚು ಬೆರೆತು, ನಂತರ ಅನ್ನನಾಳದಲ್ಲಿ ಚಲಿಸುವ ಕ್ರಿಯೆ ಸುಲಭವಾಗುತ್ತದೆ.



ಅಗಿದು ತಿನ್ನುವುದು ಎಂದರೆ ಹೇಗೆ ?

- ಆಹಾರವನ್ನು ಇಡಿಯಾಗಿ ಬಾಯಿಗೆ ತುರುಕುವ ಬದಲು, ಸಣ್ಣ ಸಣ್ಣ ತುಂಡುಗಳನ್ನಾಗಿಸಿ ನಿಧಾನವಾಗಿ ಬಾಯಿಗೆ ಹಾಕಿಕೊಳ್ಳಿ. ನಿಧಾನವಾಗಿ ಅಗಿದು ತಿನ್ನಿರಿ.
- ಹಣ್ಣು, ತರಕಾರಿಯಂತಹ ಮೆತ್ತಗಿನ ಆಹಾರವನ್ನು ಕನಿಷ್ಠ 8 ರಿಂದ 10 ಬಾರಿ ಅಗಿಯಬೇಕು. ಗಟ್ಟಿ ಆಹಾರವಾದರೆ 25 ರಿಂದ 35 ಬಾರಿ ಅಗಿಯಿರಿ.
- ಅಗಿದು ಆಹಾರ ನೀರಾದ ಮೇಲೆ, ನಿಧಾನವಾಗಿ ನುಂಗಿ. ನುಂಗಿದ ಆಹಾರ ಪೂರ್ಣವಾಗಿ ಉದರ ಸೇರಿದ ಮೇಲೆ, ಇನ್ನೊಂದು ತುಂಡು ಆಹಾರ ಸೇವಿಸಿ. ಇದರಿಂದ ಜೀರ್ಣಕ್ರಿಯೆ ಸುಲಲಿತವಾಗಿ ಆಗುತ್ತದೆ.
- ಹೀಗೆ ಕನಿಷ್ಠ ಊಟ ತಿಂಡಿಗೆ 20–25 ನಿಮಿಷಗಳನ್ನಾದರೂ ಅಗಿಯಲು ವ್ಯಯಿಸಿ.
- ಟಿ.ವಿ ನೋಡುತ್ತಾ, ವೃತ್ತ ಪತ್ರಿಕೆ, ನಿಯತಕಾಲಿಕೆಗಳನ್ನು ಓದುತ್ತಾ, ನಡೆದಾಡುತ್ತಾ ತಿನ್ನಬೇಡಿ. ತಿನ್ನುವಾಗ ಊಟ– ತಿಂಡಿಯ ಮೇಲೆ ಗಮನವಿರಲಿ. ಟಿ.ವಿ, ಮೊಬೈಲ್ ಮತ್ತಿತರ ಗ್ಯಾಜೆಟ್‌ಗಳನ್ನು ದೂರವಿಡಿ. ಹೀಗಾಗಿ ನಿಮಗೆ ಅಗತ್ಯವಿರುವಷ್ಟು ತಿನ್ನುವುದರ ಮೇಲೆ ಮನಸ್ಸನ್ನು ಕೇಂದ್ರೀಕರಿಸಬಹುದು.
- ಆಹಾರವನ್ನು ನುಣ್ಣಗೆ ಅಗಿದು ನುಂಗಿದರೆ ನೀವು ಸಂಪೂರ್ಣ ಆರೋಗ್ಯವಾಗಿ, ಆನಂದಮಯವಾಗಿ ಇರಬಹುದಲ್ಲವೇ.




ಜೀರ್ಣ ಕ್ರಿಯೆಯ ಸುಲಭವಾಗುತ್ತದೆ. ದೈಹಿಕ, ಮಾನಸಿಕ ಉಲ್ಲಾಸವನ್ನು ನೀಡುತ್ತದೆ. ಜೀರ್ಣಕ್ರಿಯೆ ಸುಲಭ, ಸರಳವಾದಾಗ ಶಕ್ತಿಯ ವ್ಯಯ ಕಡಿಮೆಯಾಗಿ ಶಕ್ತಿ ಉಳಿತಾಯವಾಗುತ್ತದೆ.

- ಹಲ್ಲು ಮತ್ತು ಒಸಡುಗಳು ಗಟ್ಟಿಯಾಗುತ್ತವೆ. ಅಗಿಯುವಾಗ ಲಾಲರಸ (ಸಲೈವಾ) ಹೆಚ್ಚು ಉತ್ಪತ್ತಿಯಾಗಿ ಅದರಲ್ಲಿರುವ ಲೈಸೋಜೈಮ್ ಬ್ಯಾಕ್ಟೀರಿಯಾಗಳು ಬೆಳೆಯದಂತೆ ತಡೆಯುತ್ತದೆ. ಅದರಲ್ಲಿರುವ ನೈಟ್ರಿಕ್ ಆಕ್ಸೈಡ್ ಕೂಡ ಆಂಟಿಸೆಪ್ಟಿಕ್ ಗುಣವನ್ನು ಹೊಂದಿದ್ದು ಇವೆಲ್ಲವೂ ದಂತಕ್ಷಯ ಹಾಗೂ ದಂತಕುಳಿಗಳಿಂದ ರಕ್ಷಣೆ ನೀಡುತ್ತದೆ.
- ನಿಧಾನವಾಗಿ ತಿಂದರೆ ಎಷ್ಟು ಬೇಕೋ ಅಷ್ಟೇ ತಿನ್ನಬಹುದು. ಹೊಟ್ಟೆ ತುಂಬಿದೆ ಎಂದು ನಮಗೇ ಗೊತ್ತಾಗುತ್ತದೆ. ಅವಸರದಲ್ಲಿ ತಿಂದರೆ ಜಾಸ್ತಿ ಆಹಾರ ಸೇವಿಸುವುದು ಖಚಿತ.

(ಮಾಹಿತಿ ನೆರವು : ಡಾ. ವೀಣಾ ಎಸ್. ಭಟ್, ಭದ್ರಾವತಿ)

ನಾಳೆ ರಾಗಿ ಕಣದಲ್ಲಿ ‘ಧ್ವಜ ಸತ್ಯಾಗ್ರಹ’



ಪ್ರಸನ್ನ

ಸಿಂಥೆಟಿಕ್ ಪಾಲಿಯಸ್ಟರ್ ಬಟ್ಟೆಯಲ್ಲಿ ರಾಷ್ಟ್ರಧ್ವಜ ತಯಾರಿಸಲು ಅನುಮತಿ ನೀಡಿರುವ ‘ಧ್ವಜ ಸಂಹಿತೆ –2021’ ತಿದ್ದುಪಡಿ ವಿರೋಧಿಸಿ ರಾಗಿಕಣ ‘ಸಂತೆ‘ಯಲ್ಲಿ ನಾಳೆ (ಆ.14, ಭಾನುವಾರ) ‘ಧ್ವಜ ಸತ್ಯಾಗ್ರಹ‘ ಹಮ್ಮಿಕೊಳ್ಳಲಾಗಿದೆ.

ಗಾಯಕ ವಾಸು ದೀಕ್ಷಿತ್ ಹಾಡಿನ ಮೂಲಕ, ಕಲಾವಿದೆ ಡಾ. ಪೂಜ ಅವರು ಓಡಿಸ್ಸಿ ನೃತ್ಯ ಹಾಗೂ ಕಲಾವಿದೆ ಅಶ್ವಿನಿ ನವನೀತ್ ಕೂಚುಪುಡಿ ಪ್ರದರ್ಶಿಸುವ ಮೂಲಕ ‘ಧ್ವಜ ಸತ್ಯಾಗ್ರಹ‘ದಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಹಿರಿಯ ರಂಗಕರ್ಮಿ ಪ್ರಸನ್ನ ಇರಲಿದ್ದಾರೆ.



ವಾಸು ದೀಕ್ಷಿತ್

ರಾಷ್ಟ್ರಧ್ವಜವನ್ನು ಕೇವಲ ಖಾದಿಯಿಂದ ತಯಾರಿಸಬೇಕು. ನಮ್ಮ ದೇಶದಲ್ಲೇ ತಯಾರಿಸಬೇಕು. ಅದು ಸ್ವದೇಶಿ ಹಾಗೂ ಸ್ವಾಭಿಮಾನದ ಸಂಕೇತ ಎಂದು ಹಿಂದಿನ ಧ್ವಜ ಸಂಹಿತೆ ಹೇಳುತ್ತಿತ್ತು. 2021 ಡಿಸೆಂಬರ್ ನಲ್ಲಿ ಈ ಸಂಹಿತೆಗೆ ತಿದ್ದುಪಡಿ ತರುವ ಮೂಲಕ ಸಿಂಥೆಟಿಕ್ ಪಾಲಿಸ್ಟರ್ ಹಾಗೂ ವಿದೇಶದಲ್ಲಿ ತಯಾರಿಸಿದ ರಾಷ್ಟ್ರ ಧ್ವಜವನ್ನು ಬಳಸಲು ಅನುಮತಿ ನೀಡಿದೆ.

ಈ ತಿದ್ದುಪಡಿಯನ್ನು ವಿರೋಧಿಸಿ ಸತ್ಯಾಗ್ರಹ ನಡೆಸಲಾಗುತ್ತಿದೆ. ನಮ್ಮ ರಾಷ್ಟ್ರ ಧ್ವಜ ಖಾದಿಯದ್ದೇ ಆಗಬೇಕು, ಅದರ ಹಿಂದಿನ ಲಕ್ಷಾಂತರ ಬಡಜನರ ಜೀವನೋಪಾಯ ಕಸಿಯಬಾರದು ಎಂದು ಆಗ್ರಹಿಸಲಾಗುತ್ತಿದೆ.

ಸ್ಥಳ: ರಾಗಿಕಣ, ಶ್ರೀರಾಮಕೃಷ್ಣ ಸಮಗ್ರ ಶಿಕ್ಷಣ ಕೇಂದ್ರ ಆವರಣ, ಬನ್ನೇರುಘಟ್ಟ ರಸ್ತೆ ಬಳಿ, ಬೆಂಗಳೂರು. ಬೆಳಿಗ್ಗೆ 11ಕ್ಕೆ

‘ಪ್ರಾಬಲ್ಯಂ’ ನೃತ್ಯ ಪ್ರದರ್ಶನ

ಇದೇ 14ರಂದು ಅಲಂಕೃತ ಸೆಂಟರ್ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್ ವತಿಯಿಂದ 'ಪ್ರಾಬಲ್ಯಂ' ನೃತ್ಯ ಪ್ರದರ್ಶನ. ಸಾಹಿತ್ಯ: ಶರತ್ ಪ್ರಭಾತ್, ಸಂಗೀತ ಸಂಯೋಜನೆ: ಪ್ರವೀಣ್ ಡಿ ರಾವ್, ಗಾಯಕಿ: ವಾರಿಜಶ್ರೀ , ತುಕುದಾಸ್, ಪರನ್. ಇತರ ತಾಂತ್ರಿಕ ಸಂಯೋಜನೆಗಳು ಮತ್ತು ಪಢತ್: ಗುರು ಶ್ರೀಮತಿ ಶಾಮಾ ಭಾಟೆ ಮತ್ತು ಪ್ರವೀಣ್ ಡಿ ರಾವ್, ವೇಷಭೂಷಣ: ಶೇಖರ್ ರಾಜೇಂದ್ರನ್, ಪರಿಕಲ್ಪನೆ ಮತ್ತು ನೃತ್ಯ ಸಂಯೋಜನೆ: ಪೂರ್ಣಾ ಆಚಾರ್ಯ.

ಅತಿಥಿಗಳು: ಕಲಾಸೇವಕ ಆಶೀಶ್ ಮೋಹನ್ ಖೋಕರ್, ನಟ ಸಿಹಿಕಹಿ ಚಂದ್ರು.

ಸ್ಥಳ: ಜೆಎಸ್‌ಎಸ್ ಸಭಾಂಗಣ , ಜಯನಗರ 8ನೇ ಬ್ಲಾಕ್ ಬೆಂಗಳೂರು

ಸಮಯ: ಸಂಜೆ 6 ಗಂಟೆ,



ಸ್ಯಾಮ್‌ಸಂಗ್ ಝಡ್ ಫೋಲ್ಡ್–4 ಸ್ಮಾರ್ಟ್ ಫೋನ್



ತಂತ್ರಜ್ಞಾನ

ಸ್ಯಾಮ್‌ಸಂಗ್ ಕಂಪನಿಯು ಗ್ಯಾಲಕ್ಸಿ ಸರಣಿಯ ಎರಡು ಹೊಸ ಸ್ಮಾರ್ಟ್‌ಫೋನ್‌ಗಳನ್ನು ಜಾಗತಿಕವಾಗಿ ಬಿಡುಗಡೆ ಮಾಡಲಾಗಿದೆ. ಸ್ಯಾಮ್‌ಸಂಗ್ ಗ್ಯಾಲಕ್ಸಿ ಝಡ್ ಫ್ಲಿಪ್–4 (Samsung Galaxy Z Flip 4) ಮತ್ತು ಸ್ಯಾಮ್‌ಸಂಗ್ ಗ್ಯಾಲಕ್ಸಿ ಝಡ್ ಫೋಲ್ಡ್–4(Samsung Galaxy Z Fold 4) ಫೋನ್‌ಗಳು ಬಿಡುಗಡೆಯಾಗಿವೆ. ಇವುಗಳಲ್ಲಿ ಫೋಲ್ಡಬಲ್ ಸ್ಮಾರ್ಟ್‌ಫೋನ್ ಫೋಲ್ಡಬಲ್ ಸರಣಿಯಲ್ಲೇ ಅತ್ಯಂತ ಶಕ್ತಿಶಾಲಿಯಾಗಿರುವ ಫೋನ್ ಆಗಿದೆ ಎಂದು ಕಂಪನಿ ಪ್ರಕಟಣೆಯಲ್ಲಿ ತಿಳಿಸಿದೆ.

ಸೋಲ್‌ನಲ್ಲಿ ನಡೆದ ಗ್ಯಾಲಕ್ಸಿ ಫೋನ್ ಬಿಡುಗಡೆ ಕಾರ್ಯಕ್ರಮದಲ್ಲಿ ಕಂಪನಿಯ ಮುಖ್ಯಸ್ಥ ಟಿ.ಎಂ ರೋಹ್ ಫೋನ್‌ಗಳನ್ನು ಬಿಡುಗಡೆ ಮಾಡಿ ಮಾತನಾಡಿದರು. ಗ್ರಾಹಕರ ಅಗತ್ಯತೆಗಳನ್ನು ಗಮನದಲ್ಲಿಟ್ಟುಕೊಂಡು ಕ್ರಿಯಾತ್ಮಕವಾಗಿ ಈ ಡಿವೈಸ್‌ಗಳನ್ನು ರೂಪಿಸಲಾಗಿದೆ. ಈ ಫೋನ್‌ಗಳು ಗ್ರಾಹಕರಿಗೆ ಇಷ್ಟವಾಗಲಿವೆ ಟಿ.ಎಂ ರೋಹ್ ವಿಶ್ವಾಸ ವ್ಯಕ್ತಪಡಿಸಿದರು.

ಸ್ಯಾಮ್‌ಸಂಗ್ ಗ್ಯಾಲಕ್ಸಿ ಝಡ್ ಫೋಲ್ಡ್–4

ಈ ಫೋನ್ ಡ್ಯುಯಲ್ ಸಿಮ್ ಹೊಂದಿದ್ದು ಆ್ಯಂಡ್ರಾಯ್ಡ್–12 ಆಧಾರಿತ ಫೋನ್ ಆಗಿದೆ. One UI 4.1.1 ನಲ್ಲಿ ಕಾರ್ಯನಿರ್ವಹಿಸುವ ಈ ಫೋನ್ 7.6-ಇಂಚಿನ ಡೈನಾಮಿಕ್ AMOLED 2X ಡಿಸ್‌ಪ್ಲೆ ಹೊಂದಿದೆ. 7.6 ಇಂಚು ಹಾಗೂ 6.2 ಇಂಚಿನಲ್ಲಿ ಈ ಫೋನ್ ಲಭ್ಯವಿದೆ.

ಕ್ವಾಲ್ಕಾಮ್ ಸ್ನಾಪ್ಡ್ರಾಗನ್ 8 + Gen 1 SoC ಅನ್ನು ಹೊಂದಿದ್ದು, ಇದನ್ನು 12 ಜಿಬಿ ರ್‍ಯಾಮ್ ಮತ್ತು 1ಟಿಬಿ ವರೆಗಿನ ಆಂತರಿಕ ಸಂಗ್ರಹಣೆಯನ್ನು ಹೊಂದಿದೆ.

256 ಜಿಬಿಯ ಸ್ಟೋರೇಜ್ ಇರುವ ಈ ಫೋನಿನಲ್ಲಿ 50 ಎಂಪಿ ಕ್ಯಾಮೆರಾ ಇರಲಿದೆ. 4400 ಎಂಎಎಚ್ ಬ್ಯಾಟರಿ ಸಾಮರ್ಥ್ಯದ ಈ ಫೋನ್ ಬೆಲೆ ಭಾರತದಲ್ಲಿ ₹ 1,42,700 ಬೆಲೆ ಇರಲಿದೆ ಎಂದು ಕಂಪನಿ ಹೇಳಿದೆ.

ಸ್ಯಾಮ್‌ಸಂಗ್ ಗ್ಯಾಲಕ್ಸಿ ಫ್ಲಿಪ್–4

ಸ್ಯಾಮ್‌ಸಂಗ್ ಗ್ಯಾಲಕ್ಸಿ ಫ್ಲಿಪ್ ಫೋನ್ ಸಹ ಗ್ಯಾಲಕ್ಸಿ ಝಡ್ ಫೋಲ್ಡ್ ಮಾದರಿ ಫೋನಿನ ವೈಶಿಷ್ಟ್ಯಗಳನ್ನು ಹೊಂದಿದೆ. ಈ ಫೋನ್ 5ಜಿಗೆ ಸಪೋರ್ಟ್ ಮಾಡಲಿದೆ ಎಂದು ಕಂಪನಿ ಹೇಳಿಕೆಯಲ್ಲಿ ತಿಳಿಸಿದೆ. 12ಜಿಬಿ ರ್‍ಯಾಮ್, 256 ಜಿಬಿ ಸ್ಟೋರೇಜ್ ಹೊಂದಿರಲಿದೆ.



50 ಎಂಪಿ ಕ್ಯಾಮೆರಾ ಹಾಗೂ 5000 ಎಂಎಎಚ್ ಬ್ಯಾಟರಿ ಸಾಮರ್ಥ್ಯ ಹೊಂದಿದೆ. ಈ ಎರಡು ಫೋನ್‌ಗಳನ್ನು Samsung.com (ವೆಬ್‌ಸೈಟ್) ಮೂಲಕ ಹಾಗೂ ಇತರೆ ಇ-ಕಾಮರ್ಸ್ ತಾಣಗಳ ಮೂಲಕ ಗ್ರಾಹಕರು ಖರೀದಿ ಮಾಡಬಹುದು.

ಪುನೀತ್ ನೆನಪಿಗೆ ‘ಅಪ್ಪು ಎಕ್ಸ್‌ಪ್ರೆಸ್’!

ಎಂ.ಮಹೇಶ

ಪುನೀತ್ ರಾಜ್‌ಕುಮಾರ್ ‘ಅಪ್ಪು ಎಕ್ಸ್‌ಪ್ರೆಸ್’ ಹೆಸರಿನಲ್ಲಿ ಇನ್ನು ಮುಂದೆ ಜನಸಾಮಾನ್ಯರ ಸಂಕಷ್ಟಗಳಿಗೆ ಆಂಬುಲೆನ್ಸ್ ಸಾಥಿಯಾಗಲಿದ್ದಾರೆ.

ರಾಜ್ಯದ ಎಲ್ಲ ಜಿಲ್ಲೆಗಳಿಗೆ ತುರ್ತು ಚಿಕಿತ್ಸೆ ವಾಹನವನ್ನು ಕೊಡುಗೆಯಾಗಿ ನೀಡುವ ಯೋಜನೆಯನ್ನು ನಟ ಪ್ರಕಾಶ್ ರಾಜ್ ರೂಪಿಸಿದ್ದು, ಮೊದಲಿಗೆ ಮೈಸೂರಿನಲ್ಲೇ ಇದನ್ನು ಸಮರ್ಪಣೆಗೊಳಿಸಿದ್ದಾರೆ. ಮೈಸೂರಿನ ಮಂಡಿ ಮೊಹಲ್ಲಾದ ಸಿಎಸ್‌ಐ ಹೋಲ್ಡ್‌ವರ್ತ್ ಸ್ಮಾರಕ (ಮಿಷನ್) ಆಸ್ಪತ್ರೆಯು ವಾಹನವನ್ನು ಪಡೆದುಕೊಂಡಿದೆ.

‘ಅಪ್ಪು ನನ್ನ ಮುಂದೆ ಬೆಳೆದ ಹುಡುಗ. ವಯಸ್ಸಿನಲ್ಲಿ ಕಿರಿಯನಾದರೂ ಆತ ಮಾಡಿದ ಸಮಾಜ ಸೇವೆ ಅನನ್ಯವಾದುದು. ಅವರ ಅಗಲಿಕೆಯ ನೋವನ್ನು ಮಾಗಿಸುವ ಕೆಲಸವಾಗಿ ಸೇವಾ ಕಾರ್ಯದಲ್ಲಿ ಮತ್ತಷ್ಟು ಹೆಚ್ಚಿನ ಪ್ರಮಾಣದಲ್ಲಿ ತೊಡಗುತ್ತಿದ್ದೇನೆ. ನನ್ನ ಪ್ರತಿಷ್ಠಾನದಿಂದ ಒಂದು ವರ್ಷದೊಳಗೆ ರಾಜ್ಯದ ಎಲ್ಲ ಜಿಲ್ಲೆಗಳಿಗೂ ಆಂಬುಲೆನ್ಸ್‌ಗಳನ್ನು ಕೊಡುತ್ತೇನೆ. ಮೈಸೂರಿನ ಮಿಷನ್ ಆಸ್ಪತ್ರೆಗೆ ಇನ್ನೆರಡು ತಿಂಗಳಲ್ಲಿ ಬ್ಲಡ್ ಬ್ಯಾಂಕ್ ಕೂಡ ಸ್ಥಾಪಿಸಿಕೊಡುತ್ತೇನೆ. ಅದರ ಉದ್ಘಾಟನೆಯಂದು ರಕ್ತ ದಾನವನ್ನೂ ಮಾಡುತ್ತೇನೆ’ ಎಂದೂ ಪ್ರಕಟಿಸಿದ್ದಾರೆ.

‘ಆಂಬುಲೆನ್ಸ್‌ಗೆ ಬೇಕಾಗುವ ಹಣಕ್ಕಾಗಿ ನೆರವಾಗುವ ಸ್ನೇಹಿತರಿದ್ದಾರೆ. ಯಾರೂ ಕೊಡದಿದ್ದರೆ ನನ್ನ ದುಡಿಮೆಯ ಹಣದಲ್ಲೇ ಈ ಸತ್ಕಾರ್ಯ ಮಾಡುತ್ತೇನೆ’ ಎನ್ನುತ್ತಾರೆ ಅವರು.

‘ಜನಪರ ಸೇವೆ ಮಾಡಿದ ಅಪ್ಪುಗೆ ಈ ಮೂಲಕ ಧನ್ಯವಾದ ಅರ್ಪಿಸುತ್ತಿದ್ದೇನೆ. ಆ ವ್ಯಕ್ತಿತ್ವದ ಮುಂದೆ ನಾವೆಲ್ಲರೂ ಸಣ್ಣವರು. ಕೋವಿಡ್–19 ಸಂಕಷ್ಟದ ಸಮಯದಲ್ಲಿ ₹ 2 ಲಕ್ಷವನ್ನು ಪ್ರತಿಷ್ಠಾನಕ್ಕೆ ನೀಡಿದ್ದರು. ಅವರು ಮಾಡಬಹುದಾಗಿದ್ದ ಕೆಲಸಗಳನ್ನು ನಾವು ಮುಂದುವರಿಸಿ ಅವರನ್ನು ಉಳಿಸಿಕೊಳ್ಳಬೇಕು’ ಎಂಬ ಆಶಯ ಅವರದು.


‘ಅದೊಂದು ಕ್ಷಣದಲ್ಲಿ ಆಂಬುಲೆನ್ಸ್ ಇದ್ದಿದ್ದರೆ ಅಪ್ಪು ಬದುಕುತ್ತಿದ್ದರೋ ಏನೋ? ಹೀಗಾಗಿಯೇ, ಆಸ್ಪತ್ರೆಗಳಿಗೆ ಆಂಬುಲೆನ್ಸ್ ಕೊಡುತ್ತಿದ್ದೇವೆ. ಬಡವರಿಗಾಗಿ ಕೆಲಸ ಮಾಡುತ್ತಿರುವುದರಿಂದ ಮತ್ತು ನನ್ನ ಚಿಕ್ಕಮ್ಮ 4 ವರ್ಷಗಳವರೆಗೆ ನರ್ಸ್ ಆಗಿ ಕೆಲಸ ಮಾಡಿದ್ದರಿಂದ ಮಿಷನ್ ಆಸ್ಪತ್ರೆ ಆಯ್ಕೆ ಮಾಡಿದ್ದೇವೆ. ತಾಲ್ಲೂಕು ಕೇಂದ್ರಕ್ಕೂ ಸೇವೆ ಒದಗಿಸಲು ಯೋಜಿಸಲಾಗಿದೆ. ಇದರ ಮೂಲಕವೇ ಅಪ್ಪುಗೆ ನನ್ನ ಧನ್ಯವಾದಗಳನ್ನು ಸಲ್ಲಿಸುತ್ತಿದ್ದೇನೆ’ ಎಂದು ಹಂಚಿಕೊಂಡರು.



ಗಾಯನ ಸಮಾಜ: 15ರಂದು ಸಂಗೀತ ಕಛೇರಿ

ನಗರದ ಕೆ.ಆರ್. ರಸ್ತೆಯಲ್ಲಿರುವ ಗಾಯನ ಸಮಾಜದಲ್ಲಿ ಆ.15ರ ಸಂಜೆ 5 ಗಂಟೆಯಿಂದ ರಾತ್ರಿ 8 ಗಂಟೆಯವರೆಗೆ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯನ ಕಾರ್ಯಕ್ರಮ ಆಯೋಜಿಸಲಾಗಿದೆ.

ವಿದ್ವಾನ್ ರಾಹುಲ್ ಕೆ. ರವೀಂದ್ರನ್ ಅವರು ಗಾಯನ ಪ್ರಸ್ತುಪಡಿಸಲಿದ್ದಾರೆ. ಪಕ್ಕವಾದ್ಯದಲ್ಲಿ **ವಯೋಲಿನ್:** ವಿದುಷಿ ಜ್ಯೋತ್ಸ್ನಾ ಮಂಜುನಾಥ್, **ಮೃದಂಗ** – ವಿದ್ವಾನ್ ಪುರಾಣಿಕ ವೆಂಕಟರಮಣ ಭಟ್ಟ, **ಮೋರ್ಚಿಂಗ್**– ವಿದ್ವಾನ್ ಶ್ರೀನಿವಾಸ ಅನಂತರಾಮಯ್ಯ ಸಾಥ್ ನೀಡಲಿದ್ದಾರೆ.



ಕೈಮಗ್ಗದ ಉಳಿವಿಗೊಂದು ‘ಕ್ಯಾಟ್‌ವಾಕ್’



ಕೈಮಗ್ಗದ ಸೀರೆಯಲ್ಲಿ ಪ್ರಿಯಾ ಪ್ರಶಾಂತ್

ಸೌಂದರ್ಯ ಪ್ರದರ್ಶನ, ಸ್ಪರ್ಧೆಗಳು ಹಲವಾರು. ಅವುಗಳ ಹಿಂದೆ ಹತ್ತಾರು ವಾಣಿಜ್ಯ ದೃಷ್ಟಿಕೋನವೂ ಇರುತ್ತದೆ. ಆದರೆ ಅದರಾಚೆಗೂ ಒಂದಿಷ್ಟು ಕಾಳಜಿಯ ಹಿನ್ನೆಲೆಯಲ್ಲಿ ಪ್ರದರ್ಶನವೊಂದು ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆಯಿತು. ಕೈಮಗ್ಗದ ಉತ್ಪನ್ನಗಳಿಗೊಂದು ಕಸುವು ನೀಡುವುದಕ್ಕಾಗಿ ಒಂದಿಷ್ಟು ಮಹಿಳಾ ಉದ್ಯಮಿಗಳು ರ್‍ಯಾಂಪ್ ಮೇಲೆ ಬೆಕ್ಕಿನ ನಡಿಗೆ ಮಾಡಿದರು.

ಈ ಗುಂಪಿನಲ್ಲಿ ಕೆಲವರಷ್ಟೇ ಜವಳಿ ವ್ಯಾಪಾರದಲ್ಲಿದ್ದಾರೆ. ಉಳಿದವರು ಬೇರೆ ಬೇರೆ ಉದ್ಯಮದಲ್ಲಿ ತೊಡಗಿದ್ದವರು. ರೇವತಿ ಕೃಷ್ಣಕುಮಾರ್ ನೇತೃತ್ವದಲ್ಲಿ ಕಟ್ಟಿದ ‘ವಿಮೆನ್ ಎಂಟ್ರಪ್ರನರ್ಸ್ ಲ್ಯಾಡರ್ಸ್’ ಗುಂಪಿನ ಸದಸ್ಯರು ನೇಕಾರರ ಉತ್ಪನ್ನಗಳ ಪ್ರಚಾರಕ್ಕಾಗಿ ಒಂದಾದರು. ಈ ನಡಿಗೆಗೆ ದಂತವೈದ್ಯರು, ಶಸ್ತ್ರಚಿಕಿತ್ಸಕರು, ವಿಜ್ಞಾನಿ, ಸಾಫ್ಟ್‌ವೇರ್ ಎಂಜಿನಿಯರ್‌ಗಳು ಮತ್ತು ಒಂದಿಷ್ಟು ಹವ್ಯಾಸಿ ಮಾಡೆಲ್‌ಗಳೂ ಜೊತೆಯಾದರು. ಕೈಮಗ್ಗದ ಉತ್ಪನ್ನಗಳನ್ನು ಬಳಸಿ. ಯಾವುದೇ ವರ್ಣ, ವಿನ್ಯಾಸ ಮತ್ತು ಗುಣಮಟ್ಟದಲ್ಲಿ ರಾಜಿಯಾಗದ ವಸ್ತ್ರಗಳು ಲಭ್ಯ ಇವೆ ಎಂಬ ಸಂದೇಶ ಸಾರಿದರು.

ಚಿತ್ತಾರದ ಸೀರೆ ಸೇರಿದಂತೆ ಹಲವು ವಸ್ತ್ರ ವೈವಿಧ್ಯಗಳು, ಬ್ಯಾಗ್ ಮತ್ತಿತರ ವಸ್ತುಗಳು ಈ ನಡಿಗೆಯಲ್ಲಿ ವಿಜೃಂಭಿಸಿದವು.

‘ಕೈಮಗ್ಗದ ನೇಕಾರರು ತಮ್ಮ ಉತ್ಪನ್ನಗಳ ಪ್ರಚಾರಕ್ಕಾಗಿ ದುಬಾರಿ ವೆಚ್ಚ ಮಾಡುವ ಸ್ಥಿತಿಯಲ್ಲೂ ಇರುವುದಿಲ್ಲ. ಅವರನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ನಾವು ಖುದ್ದು ಆಸಕ್ತಿಯಿಂದಲೇ ಈ ಫ್ಯಾಷನ್ ವಾಕ್‌ನಲ್ಲಿ ಭಾಗವಹಿಸಿದೆವು. ಒಂದಿಷ್ಟು ಉತ್ಪನ್ನಗಳ ಪ್ರದರ್ಶನ ಹಾಗೂ ಮಾರಾಟವೂ ನಡೆಯಿತು. ನೇಕಾರರಿಗೆ ಒಳ್ಳೆಯ ಸ್ಪಂದನವೂ ಸಿಕ್ಕಿತು’ ಎಂದರು ರೂಪದರ್ಶಿ, ಮಿಸೆಸ್ ಇಂಡಿಯಾ ಗ್ಯಾಲಕ್ಸಿ ರನ್ನರ್ ಅಪ್ ಪ್ರಿಯಾ ಪ್ರಶಾಂತ್.

ಹಬ್ಬಗಳು ಹತ್ತಿರವಾಗುತ್ತಿರುವ ದಿನಗಳಲ್ಲಿ ಗ್ರಾಮೀಣ ಕೈಗಳನ್ನು ಸ್ವಾವಲಂಬಿಯಾಗಿಸುವ ಪುಟ್ಟ ಪ್ರಯತ್ನಗಳು ಅಲ್ಲಲ್ಲಿ ಮುಂದುವರಿದೇ ಇವೆ.



ರೇವತಿ ಕೃಷ್ಣಕುಮಾರ್



ನಂದಿತಾ

ಫ್ಯಾಷನ್





ಕೈಮಗ್ಗ ಸೀರೆ ನಿರ್ವಹಣೆಗೆ ಹೆಚ್ಚು ಕಾಳಜಿ ಇರಲಿ

ಟಿಪ್ಸ್



ಕೈಮಗ್ಗ ಸೀರೆಗಳು ನೋಡಲು ಅತ್ಯಾಕರ್ಷಕವಾಗಿರುತ್ತವೆ. ಅಷ್ಟೆ ಅಲ್ಲ ಉಟ್ಟವರಿಗೂ ಒಂದು ಕ್ಲಾಸಿಕಲ್ ಫೀಲ್ ಬರುವ ಹಾಗೇ ಮಾಡುತ್ತದೆ. ಇದರ ಖರೀದಿ ತುಸು ದುಬಾರಿ. ಹಾಗೇ ನಿರ್ವಹಣೆಯೂ ಅಷ್ಟೂ ಸರಳವಲ್ಲ ಅನ್ನುವ ಮಾತಿದೆ. ಕೆಲವೊಂದು ಟಿಪ್ಸ್‌ಗಳನ್ನು ಪಾಲಿಸಿದರೆ ಕೈಮಗ್ಗದ ಸೀರೆಗಳು ನಿಮ್ಮ ವಾರ್ಡ್ ರೋಬ್‌ನಲ್ಲಿ ದೀರ್ಘಕಾಲ ಉಳಿಯುತ್ತವೆ.

ಕೈಮಗ್ಗದ ಸೀರೆಗಳ ನಿರ್ವಹಣೆ:

- ಕೈಮಗ್ಗದ ಸೀರೆಗಳನ್ನು ಉಪ್ಪು ನೀರಿನಲ್ಲಿ ಹೆಚ್ಚು ಹೊತ್ತು ನೆನಸಬೇಡಿ. ಇದರಿಂದ ಬಣ್ಣ ಬದಲಾಗುವ ಸಾಧ್ಯತೆ ಇದೆ.
- ಒಗೆಯುವ ಮುನ್ನ ತಣ್ಣೀರಿನಲ್ಲಿ ನೆನಸಿಡಿ.
- ಹೆಚ್ಚು ರಾಸಾಯನಿಕವಲ್ಲದ ಬಟ್ಟೆ ಒಗೆಯುವ ಸೋಪುಗಳನ್ನು ಬಳಸಿ.
- ಈ ಬಟ್ಟೆಯನ್ನು ಹೆಚ್ಚು ಮುರುಟಿ ಒಗೆಯಬೇಡಿ.
- ಒಗೆಯುವಾಗ ಬ್ರಷ್ ಬಳಸಬೇಡಿ.
- ವಾಷಿಂಗ್ ಮೆಷಿನ್‌ನಲ್ಲಿ ಈ ಸೀರೆಗಳನ್ನು ಹಾಕದೇ ಇರುವುದು ಉತ್ತಮ.
- ಒಗೆಯುವ ಸಂದರ್ಭದಲ್ಲಿ ಬ್ಲೀಚ್ ಅಥವಾ ಯಾವುದೇ ಬಗೆಯ ರಾಸಾಯನಿಕಗಳನ್ನು ಬಳಸಬೇಡಿ.
- ಸೀರೆ ಒದ್ದೆಯಾಗಿಲ್ಲ ಎಂಬುದನ್ನು ಖಾತ್ರಿಪಡಿಸಿಕೊಂಡ ನಂತರವಷ್ಟೆ ವಾರ್ಡ್‌ರೋಬ್‌ನಲ್ಲಿ ಇಡಿ. ಸಂಪೂರ್ಣ ಒಣಗಿರುವ ಸ್ಥಳಗಳಲ್ಲಿ ಈ ಸೀರೆಗಳನ್ನು ಮಡಚಿಡಿ.
- ಕೈಮಗ್ಗದ ಸೀರೆಗಳನ್ನು ಆದಷ್ಟು ಹ್ಯಾಂಗರ್‌ನಲ್ಲಿ ನೇತುಹಾಕಿ. ಆದರೆ, ಆ ಹ್ಯಾಂಗರ್ ಲೋಹದ್ದಾಗಿರಬಾರದು. ಮಸ್ಲಿನ್ ಅಥವಾ ಕಾಟನ್ ಬಟ್ಟೆಗಳಲ್ಲಿ ಸುತ್ತಿಡಬಹುದು. ಇದು ದೀರ್ಘಕಾಲ ಬಾಳಿಕೆ ಬರಲು ನೆರವಾಗುತ್ತದೆ.
- ಆಗಾಗ್ಗೆ ಸೀರೆಯ ಫೋಲ್ಡ್ ಅನ್ನು ಬದಲಾಯಿಸಿ. ಹೀಗೆ ಮಾಡುವುದರಿಂದ ಫೋಲ್ಡ್‌ನ ಗುರುತು ಬೀಳುವುದು ತಪ್ಪುತ್ತದೆ.
- ಈ ಸೀರೆ ಇಡುವ ಜಾಗದಲ್ಲಿ ಜಿರಳೆ ನಾಶಕಗಳನ್ನು ಬಳಸಬೇಡಿ. ಇದರ ಬದಲು ಒಣಗಿದ ಬೇವಿನ ಎಲೆಗಳನ್ನು ಇಡಿ.
- ಯಾವುದೇ ಪರ್ಫ್ಯೂಮ್, ಸೆಂಟ್‌ಗಳ ಬಳಕೆಯಿಂದ ದೂರವಿರಿ. ಇದು ಕೈಮಗ್ಗ ಸೀರೆಗಳ ಮೇಲೆ ಕಲೆಯನ್ನು ಉಳಿಸಬಹುದು. ಮೇಕಪ್ ಮಾಡಿಕೊಳ್ಳುವಾಗಲೂ ಜಾಗ್ರತೆ ವಹಿಸಿ.

ಜ್ಯುವೆಲರಿ ಬೈ ನಿಕಿತಾ ಈಗ ಜಯನಗರದಲ್ಲಿ



ಜಯನಗರದಲ್ಲಿರುವ ಮಳಿಗೆಯ ಒಳಾಂಗಣ



ನಾಲ್ಕನೇ ತಲೆಮಾರಿನ ಆಭರಣ ವಿನ್ಯಾಸಕಿ ನಿಕಿತಾ ಲಿಂಗಾ ತಮ್ಮ ಜ್ಯುವೆಲರಿ ಬೈ ನಿಕಿತಾ ಆಭರಣ ಮಳಿಗೆಯನ್ನು ಬೆಂಗಳೂರಿನಲ್ಲಿ ಸ್ಥಾಪಿಸಿದರು. ಇವರ ಯಶಸ್ಸಿನ ಹೆಜ್ಜೆಗುರುತುಗಳನ್ನು ಜಯಂತಿ ಮಧುಕರ್ ಇಲ್ಲಿ ಕಟ್ಟಿಕೊಟ್ಟಿದ್ದಾರೆ.

ನೂರು ವರ್ಷಗಳ ಹಿಂದೆ, ನಿಕಿತಾ ಲಿಂಗಾ ಅವರ ಮುತ್ತಜ್ಜ ಹೈದರಾಬಾದ್‌ನಲ್ಲಿ ಹವಳ ಮತ್ತು ಮುತ್ತುಗಳ ಪ್ರಮುಖ ಖರೀದಿದಾರರಾಗಿದ್ದರು. ಇಂದು ನಿಕತಾ ಅವರು ಬೆಂಗಳೂರಿನ ಜಯನಗರದಲ್ಲಿ ತಮ್ಮ ಹೊಸ ಆಭರಣ ಮಳಿಗೆ `ಜ್ಯುವೆಲ್ಲರಿ ಬೈ ನಿಕಿತಾ' ಉದ್ಘಾಟನೆಯ ಸಂಭ್ರಮದಲ್ಲಿದ್ದಾರೆ. ಹೊಸ ಆಭರಣ ಮಳಿಗೆಯಲ್ಲಿ ಒಂದು ಸುತ್ತು ಹಾಕಿದರೆ, ಅಲ್ಲಿನ ವಿನ್ಯಾಸ, ವಾತಾವರಣ ಎಲ್ಲವೂ ಶತಮಾನದ ಪರಂಪರೆಯ ಮುಂದುವರಿಕೆ ಎನಿಸದೇ ಇರದು. ನನ್ನ ಈ ಪ್ರಯತ್ನಕ್ಕೆ ಜನರ ಪ್ರತಿಕ್ರಿಯೆ ಕಂಡು ದಂಗಾಗಿದ್ದೇನೆ ಎನ್ನುತ್ತಾರೆ ನಿಕಿತಾ.



ವಿನ್ಯಾಸಕಿಯಾಗಿ ನಿಕಿತಾ ಹೆಜ್ಜೆ

ಆಭರಣ ವಿನ್ಯಾಸ ಕ್ಷೇತ್ರಕ್ಕೆ ನಿಕಿತಾ ಕಾಲಿಟ್ಟಿದ್ದು ತೀರಾ ಅನಿರೀಕ್ಷಿತ ಎಂದರೆ ತಪ್ಪಲ್ಲ. ಕುಟುಂಬ ಕಸುಬು ಮುಂದುವರಿಸುವಂ ತಂದೆ ಕೇಳಿದಾಗಲೆಲ್ಲ ನನ್ನ ಉತ್ತರ ಖಚಿತವಾಗಿ ಇಲ್ಲ ಎನ್ನುವುದೇ ಆಗಿತ್ತು ಎನ್ನುತ್ತಾರೆ ನಿಕಿತಾ. ಕುಲಕಸುಬನ್ನು ತೊರೆದು ಬರಬೇಕೆಂದು ನಿಕಿತಾ ದೂರದ ಅಮೆರಿಕದಲ್ಲಿ ಇಕನಾಮಿಕ್ಸ್ ಮತ್ತು ಇಂಗ್ಲಿಷ್‌ನಲ್ಲಿ ವ್ಯಾಸಂಗ ಮಾಡಿದರು. ಬಳಿಕ 2014ರಲ್ಲಿ ಹೈದರಾಬಾದಿನಲ್ಲಿ ಬಹುರಾಷ್ಟ್ರೀÃಯ ಕಂಪನಿಯಲ್ಲಿ ಒಂದು ವರ್ಷ ಕೆಲಸ ಮಾಡಿದ ನಂತರ ನಿಕಿತಾ ಕೇವಲ ಒಂದು ಕಂಪನಿಗೆ ಉದ್ಯೋಗಕ್ಕಾಗಿ ಅರ್ಜಿ ಸಲ್ಲಿಸಿದ್ದರು. ಆದರೆ ಅಲ್ಲಿ ಅವರಿಗೆ ಕೆಲಸ ಸಿಗದೆ ಮನೆಯಲ್ಲಿಯೇ ಇರುವಂತಾಯಿತು.

ಹೀಗೆ ಮನೆಯಲ್ಲಿ ಕಾಲ ಕಳೆಯುವ ಬದಲು ಅಂಗಡಿಗೆ ಬರುವಂತೆ ತಂದೆ ಒತ್ತಾಯಿಸಿದರು. ಅಲ್ಲಿ ತಾತ ರತ್ನಗಳ ಬಗ್ಗೆ ನನ್ನ ಅಭಿಪ್ರಾಯ ಕೇಳಿದರು ಎಂದು ತಮ್ಮ ಮೊದಲ ಹೆಜ್ಜೆಯನ್ನು ನಿಕಿತಾ ನೆನಪಿಸಿಕೊಳ್ಳುತ್ತಾರೆ. ನಿಕಿತಾ ಅವರ ತಾತ ತಮ್ಮ ತಂದೆಯ ಪರಂಪರೆಯನ್ನೇ ಮುಂದುವರಿಸಿ ಮುತ್ತು ರತ್ನಗಳ ವ್ಯಾಪಾರ ಮಾಡುತ್ತಿದ್ದರು. ಬಳಿಕ ನಿಕಿತಾ ಅವರ ತಂದೆ 14 ಕ್ಯಾರಟ್ ಚಿನ್ನದಿಂದ ತಯಾರಾದ ವಜ್ರಖಚಿತ ವಿಕ್ಟೋರಿಯನ್ ಆಭರಣಗಳ ವ್ಯಾಪಾರ ಆರಂಭಿಸಿದ್ದರು.

ಹೀಗೆ ತಾತನ ಉತ್ತೇಜನದ ಪರಿಣಾಮವೋ ಏನೋ ನಿಕಿತಾ ಅವರು ರತ್ನಗಲ್ಲುಗಳನ್ನು ಕಾಗದದ ಮೇಲೆ ಒಪ್ಪವಾಗಿ ವಿಧವಿಧ ವಿನ್ಯಾಸಗಳಲ್ಲಿ ಜೋಡಿಸಿ ಕಾರಿಗಾರರನ್ನು ಕರೆದು ಅದರಂತೆ ಆಭರಣ ತಯಾರಿಸಲು ಹೇಳಿದರು. ಒಂಬತ್ತು ತಿಂಗಳ ಅವಧಿಯಲ್ಲಿ ಇಂತಹ ಸುಮಾರು 50 ಆಭರಣ ಸೆಟ್‌ಗಳು ತಯಾರಾದವು. ‘ಇದು ಎಲ್ಲರನ್ನೂ ಆಕರ್ಷಿಸಿತು. ಆ ಕಾರಣಕ್ಕೆ ಮನೆಮಂದಿಗೆ ಮತ್ತು ಮಿತ್ರರಿಗಾಗಿ ಕಚೇರಿಯಲ್ಲಿಯೇ ಒಂದು ಸಣ್ಣ ಶೋ ಆಯೋಜಿಸಿದೆ” ಎಂದು ನಿಕಿತಾ ಹೇಳುತ್ತಾರೆ.

ಇಲ್ಲಿ ಸಿಕ್ಕ ಅದ್ಭುತ ಪ್ರೋತ್ಸಾಹಕ್ಕೆ ಮನಸೋತ ನಿಕಿತಾ ಒಂದು ವಾರದ ಬಳಿಕ ಮಾಸ್ಟರ್ಸ್ ಮಾಡಲು ಅಮೆರಿಕೆಗೆ ಹತ್ತಬೇಕಿದ್ದ ವಿಮಾನವನ್ನು ಹತ್ತಲಿಲ್ಲ.

ಆಭರಣ ವಿನ್ಯಾಸಕ್ಕೆ ಮನಸ್ಸು ಮಾರುಹೋಗಿತ್ತು. ಹಾಗಾಗಿ ಅದನ್ನು ಬಿಟ್ಟು ಬೇರೇನೋ ಓದಿ ಕಾಲಹರಣ ಮಾಡಲು ಮನಸ್ಸಾಗಲಿಲ್ಲ ಎನ್ನುವ ನಿಕಿತಾ ಹೈದರಾಬಾದಿನಲ್ಲಿ ತಮ್ಮ ಮೊದಲ ಆಭರಣ ಮಳಿಗೆ ಸ್ಥಾಪಿಸಿದರು. ಬಳಿಕ ಅವರ ವ್ಯಾಪಾರೋದ್ಯಮದ ಎರಡನೇ ಹೆಜ್ಜೆ ಜಯನಗರದಲ್ಲಿ ಒಡಮೂಡಿದೆ. ಅಬ್ಬರದ ಪ್ರಚಾರವಿಲ್ಲದೇ ಜನರ ಬಾಯಿಂದ ಬಾಯಿಗೆ ಬಂದು ಹೋಗುವ ಪ್ರಶಂಸೆ ಮತ್ತು ಇನ್‌ಸ್ಟಾ ಹ್ಯಾಂಡಲ್ @jewellerybynikitha ಮೂಲಕವೇ ಈ ಪರಿಯ ಜನಸ್ಪಂದನೆ ಸಾಧ್ಯವಾಗಿದೆ ಎನ್ನುತ್ತಾರೆ ನಿಕಿತಾ.

ತಮ್ಮ ಬೆಳವಣಿಗೆಯ ಬಗ್ಗೆ ಮಾತನಾಡುತ್ತಾ “ಜ್ಯುವೆಲರಿ ಬೈ ನಿಕಿತಾ ನಮ್ಮ ಕುಟುಂಬದ ನಾಲ್ಕನೇ ತಲೆಮಾರಿನ ಪ್ರಯೋಗ ಮತ್ತು ದಶಕಕ್ಕೂ ಹೆಚ್ಚಿನ ಕಾಲ ಆಭರಣ ವಿನ್ಯಾಸಕಿಯಾಗಿ ದುಡಿದುಕೊಂಡ ಅನುಭವದ ಕೂಸು. ಮೊದಲು ಹೈದರಾಬಾದ್ ಮತ್ತೆ ಈಗ ಜಯನಗರ, ಹೀಗೆ ನಮ್ಮ ಪ್ರಗತಿಯ ಬಗ್ಗೆ ಹೆಮ್ಮೆ ಇದೆ. ಏಳಿಗೆಯ ಖಚಿತ ಪಥದಲ್ಲಿ ನಾವಿದ್ದೇವೆ ಎನ್ನುವ ನಂಬಿಕೆ ನನ್ನದು” ಎನ್ನುತ್ತಾರೆ ನಿಕಿತಾ.

ಗ್ರಾಹಕ ಸ್ನೇಹಿ ಮಳಿಗೆ

ಸುಮಾರು 4000 ಚದರಡಿ ಪ್ರದೇಶದಲ್ಲಿ ತೆರೆದುಕೊಂಡಿರುವ ಈ ಎರಡು ಮಹಡಿಯ ಮಳಿಗೆ ತನ್ನ ಅತ್ಯುತ್ತಮ ತಯಾರಿಕಾ ಕೌಶಲ್ಯ ಮತ್ತು ಪರಿಶುದ್ಧತೆಗೆ ಸಾಕ್ಷಿಯಾಗಿದೆ. ಕೋವಿಡ್ ನಂತರದ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಮಳಿಗೆಯನ್ನು ವಿನ್ಯಾಸ ಮಾಡಲಾಗಿದ್ದು, ಆರೋಗ್ಯ ಸುರಕ್ಷತೆಗೆ ಆದ್ಯ ಗಮನ ನೀಡಲಾಗಿದೆ. ಆಭರಣಗಳ ದೊಡ್ಡ ಸಾಲು ಇಲ್ಲಿ ಒಡಮೂಡಿದ್ದು ಗ್ರಾಹಕರ ಅಭಿರುಚಿಯನ್ನು ತಣಿಸುವ ತಾಣವಾಗಿದೆ.

ಆಭರಣ ಸಾಲು

ಜ್ಯುವೆಲರಿ ಬೈ ನಿಕಿತಾದಲ್ಲಿರುವ ಆಭರಣಗಳನ್ನು ಸಂಸ್ಥೆಯ ಚಿನಿವಾರರೇ ತಯಾರಿಸುತ್ತಾರೆ. ಇದಕ್ಕೆ ಬಳಸುವ ರತ್ನಕಲ್ಲುಗಳು ನಿಕಿತಾ ಅವರ ತಾತನ ಬಳುವಳಿ. ಕೈಯಿಂದ ತಯಾರಾಗುವ ಆಭರಣ ಮತ್ತು ಅದಕ್ಕೆ ಹೊಂದುವಂತಹ ಕಲ್ಲುಗಳ ಜೋಡಣೆಯ ಕಾರಣ ಇಲ್ಲಿ ಪ್ರತಿಯೊಂದು ಆಭರಣವೂ ವಿಶಿಷ್ಟ ಮತ್ತು ಪರಸ್ಪರ ಭಿನ್ನವಾಗಿರುತ್ತದೆ. ದಿನಬಳಕೆಯಿಂದ ಹಿಡಿದು ಮದುವೆ ಮುಂತಾದ ಶುಭ ಸಮಾರಂಭಗಳವರೆಗೆ ಎಲ್ಲ ಸಂದರ್ಭಗಳಿಗೂ ಹೊಂದುವಂತಹ ಆಭರಣಗಳು ಇಲ್ಲಿವೆ. ಚಿನಿವಾರರ ಕುಶಲಕ್ಷಮತೆ ಈ ಆಭರಣಗಳ ಜೀವಾಳ, ಇಲ್ಲಿ ಪರಿಪೂರ್ಣತೆಗೆ ಮೊದಲ ಆದ್ಯತೆ ಎನ್ನುತ್ತಾರೆ ನಿಕಿತಾ.

ನಮ್ಮ ಮದುವೆ ಸಂಗ್ರಹ, ಚಿನ್ನ ಮತ್ತು ವಜ್ರಾಭರಣಗಳು ಎಲ್ಲ ಸಂದರ್ಭಗಳಿಗೂ ಹೇಳಿ ಮಾಡಿಸಿದಂತಿದೆ. ಬಳೆ, ಉಂಗುರ, ನೆಕ್ಲೇಸ್, ಕಿವಿಯೋಲೆ ಅಷ್ಟೇ ಅಲ್ಲದೇ ನವೀನ ವಿನ್ಯಾಸಗಳು ಸಹ ಇಲ್ಲಿ ಲಭ್ಯವಿದೆ ಎಂದು ನಿಕಿತಾ ಹೇಳುತ್ತಾರೆ. ಮದುವೆ ಆಭರಣ ಸಂಗ್ರಹವನ್ನು ಸಂದರ್ಭಕ್ಕೆ ಅನುಗುಣವಾಗಿ ಅತ್ಯುನ್ನತ ಕೌಶಲ್ಯದಿಂದ ತಯಾರಿಸಲಾಗಿದೆ. ಉದಾಹರಣೆಗೆ ನಕ್ಷಿ ಡಿಸೈನರ್ ನೆಕ್ಲೇಸ್‌ಗಳು ಎಮೆರಾಲ್ಡ್ ಮತ್ತು ಬೀಡ್ಸ್‌ಗಳ ಜೊತೆಗೆ ಸೂಕ್ಷ್ಮ ಕೆತ್ತನೆಯ ಅತ್ಯುತ್ತಮ ಸಂಯೋಜನೆಯಾಗಿದೆ.

ನಕ್ಷಿ ಚೋಕರ್ ಸಂಗ್ರಹದಲ್ಲಿ ದೇವಾಲಯ ಶಿಲ್ಪವನ್ನು ನೆನಪಿಗೆ ತರುವ ಸುಂದರ ಕೆತ್ತನೆಗಳಿವೆ. ಜ್ಯುವೆಲರಿ ಬೈ ನಿಕಿತಾದಲ್ಲಿ ಪೂರ್ಣಾಕಾರದ ವಜ್ರ, ಹವಳ, ರತ್ನಗಲ್ಲುಗಳು, ಟಾಂಜನೈಟ್ ಬೀಡ್‌ಗಳು (ಟಾಂಜನೈಟ್ ಕಲ್ಲಿನಿಂದ ಕೆತ್ತನೆ ಮಾಡಿದ್ದು) ಮತ್ತು ಟೂರ್‌ಮಲೈನ್ ಬೀಡ್ಸ್‌ಗಳ ಬಗೆಬಗೆಯ ಆಭರಣ ಸೆಟ್‌ಗಳಿವೆ. ನಿಕಿತಾ ಅವರ ಮುತ್ತಜ್ಜನ ಪರಂಪರೆಯಂತೆ ಬಹುತೇಕ ಆಭರಣಗಳು ಮುತ್ತು ಮತ್ತು ಹವಳಗಳನ್ನು ಒಳಗೊಂಡಿವೆ.



ನಿಖಿತಾ ಅವರು ಪ್ರದರ್ಶಿಸಿದ ನೂತನ ಆಭರಣ

ಜಯನಗರ ಮಳಿಗೆ ಉದ್ಘಾಟನೆ

ಜಯನಗರ ಮಳಿಗೆಯ ಉದ್ಘಾಟನಾ ಸಮಾರಭದಲ್ಲಿ ಖುದ್ದು ನಿಕಿತಾ ಅವರೇ ಅತಿಥಿಗಳನ್ನು ಬರಮಾಡಿಕೊಂಡು ಮಾತನಾಡಿದರು. “ಜ್ಯುವೆಲರಿ ಬೈ ನಿಕಿತಾ ಬ್ರಾಂಡ್ ಅನ್ನು ಬೆಂಗಳೂರಿನಲ್ಲಿ ಪರಿಚಯಿಸಲು ಬಹಳ ಖುಷಿ ಆಗುತ್ತಿದೆ. ಬೆಂಗಳೂರಿನ ಜನರಿಗೆ ಅತ್ಯುತ್ತಮ ಗುಣಮಟ್ಟ, ವಿನ್ಯಾಸ, ಪರಿಪಕ್ವ ತಯಾರಿಕೆಯ ಆಭರಣ ಬ್ರಾಂಡ್ ಒದಗಿಸಲು ಅವಕಾಶ ಸಿಕ್ಕಿರುವುದು ನಮ್ಮ ಭಾಗ್ಯ. ಗ್ರಾಹಕರು ನಮ್ಮ ಮೇಲೆ ಇಟ್ಟಿರುವ ನಂಬಿಕೆ, ವಿಶ್ವಾಸದ ಆಧಾರದಲ್ಲಿ ರೂಪುಗೊಂಡಿರುವ ಭವ್ಯವಾದ ಪರಂಪರೆಯ ಪ್ರತೀಕವಾಗಿ ನಾವು ಇಲ್ಲಿದ್ದೇವೆ” ಎಂದು ನಿಕಿತಾ ಹೇಳಿದರು. ಈ ಮಳಿಗೆಯಲ್ಲಿ ಎಲ್ಲ ಬಗೆಯ ಚಿತ್ತಾಕರ್ಷಕ ಆಭರಣ ವಿನ್ಯಾಸಗಳು ಲಭ್ಯವಿದೆ. ಚಿನ್ನ, ವಜ್ರ, ಸಾಲಿಟೇರ್ ಆಭರಣಗಳ ವ್ಯಾಪಕ ಶ್ರೇಣಿಯೇ ಇಲ್ಲಿ ಗ್ರಾಹಕರ ಸೆಳೆಯಲು ಸಜ್ಜಾಗಿದೆ. ಆಭರಣ ಮಳಿಗೆಯನ್ನು ಜಯನಗರ ಕ್ಷೇತ್ರದ ಎಂಎಲ್‌ಎ ಸೌಮ್ಯಾ ರೆಡ್ಡಿ ಅವರು ಆಗಸ್ಟ್ 5ರಂದು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು “ ಈ ಭವ್ಯ ಉದ್ಘಾಟನೆಯ ಭಾಗವಾಗಿರುವುದಕ್ಕೆ ಹೆಮ್ಮೆ ಇದೆ. ಇಲ್ಲಿನ ಆಭರಣ ಸಂಗ್ರಹ, ಮೂಲಸೌಕರ್ಯ ಮತ್ತು ಸದಾ ನಗುಮೊಗದ ಸಿಬ್ಬಂದಿ ಆಪ್ಯಾಯವಾದ ವಾತಾವರಣ ಕಲ್ಪಿಸುತ್ತಾರೆ. ಇದಕ್ಕಾಗಿ ನಿಕಿತಾ ಮತ್ತವರ ತಂಡಕ್ಕೆ ಅಭಿನಂದನೆ ಸಲ್ಲಿಸಿ ಶುಭ ಕೋರುತ್ತೇನೆ” ಎಂದರು.



ಮುತ್ತು, ಮಾಣಿಕ್ಯ ಖಚಿತ ಚಿನ್ನದ ನೆಕ್ಲೇಸ್ ಮತ್ತು ಕಿವಿಯೋಲೆ ಸೆಟ್



ಜಯನಗರ ಮಳಿಗೆಯನ್ನು ಎಂಎಲ್‌ಎ ಸೌಮ್ಯಾ ರೆಡ್ಡಿಯವರು (ಬಲತುದಿ) ಉದ್ಘಾಟಿಸಿದರು. ಈ ಸಂದರ್ಭದಲ್ಲಿ ನಿಕಿತಾ ಲಿಂಗಾ ಮತ್ತವರ ಕುಟುಂಬ ಸದಸ್ಯರು ಉಪಸ್ಥಿತರಿದ್ದರು.

ನಿಕಿತಾ ಜ್ಯೂವೆಲರಿ: 9ನೇ ಮುಖ್ಯ ರಸ್ತೆ, 3ನೇ ಬ್ಲಾಕ್, ಜಯನಗರ(ಪ್ರೈಮಾ ಡಯಾಗ್ನೊಸ್ಟಿಕ್ಸ್ ಎದುರು) ಫೋನ್: 9515731845; email: nikithalingajewellery@gmail.com; ಜಾಲತಾಣ : jewellerybynikitha.com; Instagram:@jewellerybynikitha

ವಾತಾವರಣದ ಏರುಪೇರಿನಿಂದ ಸಸ್ಯಗಳಿಗೆ ರೋಗ–ಕೀಟ ಬಾಧೆ ಕಾಡುತ್ತವೆ. ಈ ಸಮಯದಲ್ಲಿ ಕೈತೋಟದ ಗಿಡಗಳನ್ನು ರಕ್ಷಿಸಿಕೊಳ್ಳುವುದು ದೊಡ್ಡ ಸವಾಲು. ಈ ಹಿನ್ನೆಲೆಯಲ್ಲಿ ಔಷಧ ಸಿಂಪಡಿಸುವ ಮತ್ತು ಗಿಡಗಳ ಆರೈಕೆ ಕುರಿತ ಮಾಹಿತಿ ಇಲ್ಲಿದೆ.



ಕೈತೋಟ ನಿರ್ವಹಣೆಗೆ ಸುಲಭ ಸೂತ್ರಗಳು

ಆತ್ರೇಯ

ಮೋಡ ಕವಿದ ವಾತಾವರಣ, ನಿರಂತರವಾದ ಜಿಟಿ, ಜಿಟಿ ಮಳೆ, ಮಂಜು ಬೀಳುವುದು.. ಇಂಥ ವಾತಾವರಣದ ಏರುಪೇರಿನಿಂದಾಗಿ ಸಸ್ಯಗಳಿಗೆ ರೋಗ–ಕೀಟ ಬಾಧೆ ಕಾಡುತ್ತವೆ. ಈ ಸಮಯದಲ್ಲಿ ಕೈತೋಟದ ಗಿಡಗಳನ್ನು ಕಾಪಾಡಿಕೊಳ್ಳುವುದು ಸಸ್ಯ ಪ್ರೇಮಿಗಳಿಗೆ ಬಹುದೊಡ್ಡ ಸವಾಲು. ಆ ಸವಾಲನ್ನು ಸಮರ್ಪಕವಾಗಿ ಎದುರಿಸಲು, ಔಷಧ ಸಿಂಪಡಣೆ ಕುರಿತು ಕೆಲವೊಂದು ಮಾಹಿತಿಯನ್ನು ಅರಿಯಬೇಕಾಗುತ್ತದೆ.

ಮೊದಲನೆಯದಾಗಿ; ಕೈತೋಟದ ಗಿಡಗಳಿಗೆ ತಗುಲುವ ರೋಗ–ಕೀಟ ಬಾಧೆ ನಿಯಂತ್ರಿಸಲು ಆದಷ್ಟು ಸಸ್ಯ ಜನ್ಯ ಕೀಟನಾಶಕಗಳನ್ನೇ ಬಳಸುವುದು ಒಳ್ಳೆಯದು. ಇದರಿಂದ ಗಿಡಗಳು ರಕ್ಷಣೆ ಜೊತೆಗೆ, ಸುತ್ತಲಿನ ಪರಿಸರ ಹಾಗೂ ನಮ್ಮ ಆರೋಗ್ಯವನ್ನೂ ರಕ್ಷಿಸಿಕೊಳ್ಳಬಹುದು.

ಎರಡನೆಯದಾಗಿ; ಗಿಡಗಳಿಗೆ ಔಷಧವನ್ನು ಸಿಂಪಡಿಸಲು ಕೆಲವೊಂದು ವಿಧಾನಗಳಿವೆ. ಇವುಗಳನ್ನು ಅನುಸರಿಸಿದರೆ, ಪರಿಣಾಮಕಾರಿಯಾಗಿ ಕೀಟ–ರೋಗ ಬಾಧೆ ನಿಯಂತ್ರಿಸಬಹುದು. ಅಷ್ಟೇ ಅಲ್ಲ, ಔಷಧ ವ್ಯರ್ಥವಾಗುವುದನ್ನು ತಪ್ಪಿಸಬಹುದು. ಅಂಥ ಕೆಲವು ವಿಧಾನಗಳನ್ನು ಇಲ್ಲಿವೆ.

- ಗಿಡಗಳಿಗೆ ಸಂಜೆ ಅಥವಾ ಬೆಳಗಿನ ವೇಳೆ ಮಾತ್ರ ಔಷಧಗಳನ್ನು ಸಿಂಪಡಿಸಬೇಕು. ಏಕೆಂದರೆ, ಈ ಅವಧಿಯಲ್ಲಿ ಕೀಟಗಳು ಹೆಚ್ಚು ಚಟುವಟಿಕೆಯಿಂದ ಇರುತ್ತವೆ.
- ಗಾಳಿಯ ದಿಕ್ಕನ್ನು ಗಮನದಲ್ಲಿಟ್ಟುಕೊಂಡು ಸಿಂಪಡಣೆ ಮಾಡಿ. ಇಲ್ಲದಿದ್ದರೆ ಸಿಂಪಡಿಸುವ ಔಷಧವೆಲ್ಲ ವ್ಯರ್ಥವಾಗುತ್ತದೆ.
- ಮಳೆ ಬರುತ್ತಿರುವಾಗ, ಮೋಡ ಕವಿದ ವಾತಾವರಣವಿದ್ದಾಗ ಔಷಧ ಸಿಂಪಡಣೆ ಬೇಡ. ಇದರಿಂದ, ಸಿಂಪಡಿಸಿದ ಔಷಧವೆಲ್ಲ ಮಳೆ ನೀರಿನಲ್ಲಿ ಕೊಚ್ಚಿ ಹೋಗುತ್ತದೆ.
- ಕೆಲವು ಔಷಧಗಳಿಗೆ ನೀರು ಮಿಶ್ರ ಮಾಡಿ ಬಳಸಬೇಕು. ಈ ವೇಳೆ ಅಳತೆಗೆ ತಕ್ಕಷ್ಟು (ಅನುಭವಿಗಳು ಅಥವಾ ತಜ್ಞರ ಸಲಹೆ ಮೇರೆಗೆ) ನೀರು ಬೆರೆಸಬೇಕು. ಅತಿಯಾಗಿ ನೀರು ಬೆರೆಸಿದರೆ, ಔಷಧ ಪರಿಣಾಮ ಬೀರುವುದಿಲ್ಲ. ಕಡಿಮೆ ನೀರು ಬಳಸಿದರೆ, ಗಿಡಗಳಿಗೆ ತೊಂದರೆಯಾಗಲೂ ಬಹುದು. ಎಚ್ಚರಿಕೆ ಇರಲಿ.
- ಮೇಲಿಂದ ಮೇಲೆ ಒಂದೇ ಸಮನೆ ಸಿಂಪಡಣೆ ಮಾಡಬೇಡಿ. ಉದಾಹರಣೆಗೆ: ಒಂದು ಔಷಧ ಸಿಂಪಡಣೆಗೆ ಕನಿಷ್ಠ 15 ದಿನಗಳ ಅಂತರವಿರಲಿ.
- ಸಾಧ್ಯವಾದಾಗಲೆಲ್ಲ ಜೈವಿಕ ಕ್ರಮಗಳನ್ನೇ ಅನುಸರಿಸಿ. ಸಿಂಪಡಣೆಯ ಕೆಲಸ ಕಡಿಮೆ ಮಾಡಿಕೊಳ್ಳಿ. ಜೈವಿಕ ಕ್ರಮಗಳು ಎಂದರೆ, ಕೈತೋಟದಲ್ಲಿ ಕೀಟ ವಿಕರ್ಷಕ ಗಿಡಗಳನ್ನು ಬೆಳೆಸುವುದು(ಉದಾಹರಣೆಗೆ ಚೆಂಡುಹೂವು, ಹಳದಿ ಬಣ್ಣದ ಹೂವುಗಳು), ಬೇರೆ ಬೇರೆ ವಿಧದ ಗಿಡಗಳನ್ನ ಬೆಳೆಸುವ ಮೂಲಕ ಜೀವವೈವಿಧ್ಯವನ್ನು ಹೆಚ್ಚಿಸಿ. ಇದರಿಂದ ರೋಗಗಳ ತಾವಾಗಿಯೇ ಕಡಿಮೆಯಾಗುತ್ತವೆ.
- ಸಿಂಪಡಣೆಗೆ ಅಗತ್ಯವಿರುವಷ್ಟೇ ದ್ರಾವಣ ತಯಾರಿಸಿಕೊಳ್ಳಿ. ತಯಾರಿಸಿದ ದ್ರಾವಣವನ್ನು ಹೆಚ್ಚು ದಿನ ಇಟ್ಟರೆ, ಅದರ ಶಕ್ತಿ(ಪರಿಣಾಮ) ಕಡಿಮೆಯಾಗಬಹುದು.
- ಮನೆಯಲ್ಲೇ ಔಷಧ(ದ್ರಾವಣ) ತಯಾರಿಸುವುದು ಉತ್ತಮ ಅಭ್ಯಾಸ.
- ಹೊರಗಿನಿಂದ ತರುವ ಸಿದ್ಧ ದ್ರಾವಣಗಳು ಹೆಚ್ಚು ದುಬಾರಿಯಾಗಬಹುದು.

(ಪೂರಕ ಮಾಹಿತಿ: ಅನುಸೂಯಾ ಎಸ್. ಶರ್ಮಾ)



ಹಸಿರು ಉಸಿರು

ಸಸ್ಯಜನ್ಯ ಔಷಧಗಳ ಮಾದರಿ

ಸುವರ್ಣ ಗೆಡ್ಡೆ ಕಷಾಯ

25 ಗ್ರಾಂ ಸುವರ್ಣಗೆಡ್ಡೆ ಚೂರನ್ನು ತುರಿದುಕೊಳ್ಳಿ. ಅದನ್ನು ಕುದಿಯುತ್ತಿರುವ ಒಂದು ಲೀಟರ್ ನೀರಿಗೆ ಬೆರೆಸಿ. ಹತ್ತು ನಿಮಿಷ ಕುದಿಸಿ. ಮುಚ್ಚಿಡಿ. ಇಪ್ಪತ್ನಾಲ್ಕು ಗಂಟೆಗಳ ನಂತರ ದ್ರಾವಣ ಸಿಂಪಡಣೆಗೆ ಸಿದ್ಧ. ಈ ದ್ರಾವಣವನ್ನು ಒಂಬತ್ತು ಲೀಟರ್ ನೀರಿಗೆ ಬೆರೆಸಿ. ಗಿಡಗಳಿಗೆ ಸಿಂಪಡಿಸಿ. ಈ ದ್ರಾವಣ ಸಿಂಪಡಿಸುವುದರಿಂದ ಗಿಡಗಳಲ್ಲಿ ಹೂವು, ಮೊಗ್ಗು, ಕಾಯಿ ಉದುರುವುದನ್ನು ನಿಲ್ಲಿಸಬಹುದು. ಅಷ್ಟೇ ಅಲ್ಲ, ಚಿಗುರು ಕೊಳೆಯುವುದನ್ನು ತಪ್ಪಿಸಬಹುದು.(ವೆನಿಲ, ವೀಳ್ಯದೆಲೆ ಬಳ್ಳಿಗೆ ಇದೊಂದು ಉಪಯುಕ್ತ)

ಚೆಂಡು ಹೂವು ದ್ರಾವಣ

ಒಂದು ಲೀಟರ್ ಕುದಿಯುವ ನೀರಿಗೆ, ಒಂದು ಹಿಡಿ ಚೆಂಡು ಹೂವು ಹಾಕಿ(8 ರಿಂದ 10 ಹೂವುಗಳಾಗಬಹುದು). 20 ನಿಮಿಷ ಕುದಿಸಿ. ಮುಚ್ಚಿಡಿ. 24 ಗಂಟೆಗಳ ನಂತರ ಈ ಮಿಶ್ರಣವನ್ನು ಒಂಬತ್ತು ಲೀಟರ್ ನೀರಿಗೆ ಬೆರೆಸಿ, ಗಿಡಗಳಿಗೆ ಸಿಂಪಡಿಸಿ.

ಎಲೆ ಮುರುಟು ರೋಗ

- ಡೇಲಿಯಾ, ಟೊಮೆಟೊ, ಮೆಣಸಿನಕಾಯಿ ಗಿಡಗಳಲ್ಲಿ ಹೆಚ್ಚಾಗಿ ಎಲೆ ಮುರುಟು ರೋಗ ಕಾಣಿಸಿಕೊಳ್ಳುತ್ತದೆ. ಬೆಳ್ಳುಳ್ಳಿಯ ದ್ರಾವಣ ತಯಾರಿಸಿ, ಅದನ್ನು ತಿಳಿಗೊಳಿಸಿ(ನೀರಿಗೆ ಬೆರೆಸಿ) ಈ ಗಿಡಗಳಿಗೆ ಸಿಂಪಡಿಸುವುದರಿಂದ ಎಲೆ ಮುರುಟು ರೋಗ ಹತೋಟಿಗೆ ತರಬಹುದು.
- ಅಡುಗೆ ಮನೆಯಲ್ಲಿ ಉಳಿಯುವ ಹುಳಿ ಮಜ್ಜಿಗೆಗೆ ನೀರು ಬೆರೆಸಿ, ಕರಿಬೇವಿನ ಗಿಡಕ್ಕೆ ಹಾಕಿ. ಇದರಿಂದ ಕರಿಬೇವು ಹೆಚ್ಚು ಸುವಾಸಿತವಾಗುತ್ತದೆ.




'ಧಮಾಕ'ದಲ್ಲಿ ಸಿದ್ದು, ಪ್ರಿಯಾ ಹೆಜ್ಜೆ

'ಧಮಾಕ' ದಲ್ಲಿ ಮಿಂಚಿದ್ದಾರೆ ಸಿದ್ದು ಮೂಲಿಮನಿ ಹಾಗೂ ಪ್ರಿಯಾ ಆಚಾರ್. ಹಾಸ್ಯನಟ ಶಿವರಾಜ್ ಕೆ.ಆರ್.ಪೇಟೆ ನಾಯಕರಾಗಿರುವ 'ಧಮಾಕ' ಚಿತ್ರದ ಹಾಡಿನಲ್ಲಿ ಈ ಜೋಡಿ ಕಾಣಿಸಿಕೊಂಡಿದೆ. ಅಂದಹಾಗೆ ಇದು ಚಿತ್ರದ ಎರಡನೇ ಹಾಡು. 'ನಾನು ಹೋಗೋಕು ಮೊದ್ಲು...' ಸಾಲುಗಳು ಕೇಳಲು ಮಧುರವಾಗಿವೆ.

ಚಿತ್ರದ ನಿರ್ದೇಶಕ ಲಕ್ಷ್ಮೀ ರಮೇಶ್ ಹಾಡಿಗೆ ಸಾಹಿತ್ಯ ಬರೆದಿದ್ದಾರೆ. ವಿಜಯ್ ಪ್ರಕಾಶ್ ಹಾಗೂ ಮಾನಸ ಹೊಳ್ಳ ಧ್ವನಿಯಾಗಿದ್ದು, ವಿಕಾಸ್ ವಸಿಷ್ಠ ಸಂಗೀತ ನಿರ್ದೇಶನ ಮಾಡಿದ್ದಾರೆ. ಹಾಡಿಗೆ ಸಿನಿ ರಸಿಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಅಂದಹಾಗೆ ಇದು ಲಕ್ಷ್ಮೀ ರಮೇಶ್ ನಿರ್ದೇಶನದ ಮೊದಲ ಚಿತ್ರ.

ಪ್ರಕಾಶ್ ತೂಮಿನಾಡ್, ಮೋಹನ್ ಜುನೇಜಾ, ಕೋಟೆ ಪ್ರಭಾಕರ್, ಮೈಕೋ ನಾಗರಾಜ್, ಅರುಣಾ ಬಾಲರಾಜ್ ತಾರಾಗಣದಲ್ಲಿದ್ದಾರೆ.

ಎಸ್‌ಆರ್‌ಎಸ್ ಮೀಡಿಯಾ ಪ್ರೊಡಕ್ಷನ್ಸ್ ಮತ್ತು ನಂದಿ ಎಂಟರ್‌ಟೇನ್‌ಮೆಂಟ್ಸ್ ಬ್ಯಾನರ್ ಅಡಿಯಲ್ಲಿ ಈ ಸಿನಿಮಾ ನಿರ್ಮಾಣಗೊಂಡಿದೆ. ಹಾಲೇಶ್ ಅವರ ಛಾಯಾಗ್ರಹಣ, ವಿನಯ್ ಕೂರ್ಗ್ ಸಂಕಲನ ಧಮಾಕಾ ಸಿನಿಮಾದಲ್ಲಿದೆ.



ಆ. 26ಕ್ಕೆ 'ವಿಕಿಪೀಡಿಯ' ತೆರೆಗೆ



ಯಶವಂತ್ ನಟನೆಯ 'ವಿಕಿಪೀಡಿಯ' ಸಿನಿಮಾದ ಟ್ರೇಲರ್ ಬಿಡುಗಡೆ ಆಗಿದೆ. ಆ. 26ಕ್ಕೆ ಚಿತ್ರ ಬಿಡುಗಡೆ ಆಗಲಿದೆ. ಹಲವು ಧಾರಾವಾಹಿಗಳಲ್ಲಿ ಮಿಂಚಿದ ನಟ ಯಶವಂತ್ ಈ ಚಿತ್ರದ ನಾಯಕ. ಯಶವಂತ್ ಅವರಿಗೆ ಇದು ಬೆಳ್ಳಿತೆರೆಯ ಮೊದಲ ಹೆಜ್ಜೆ.

'ಜಗತ್ತಿನಲ್ಲಿ ಎರಡು ರೀತಿ ಜನ ಇದ್ದಾರೆ. ಒಂದು ವಿಕಿಪೀಡಿಯದಲ್ಲಿ ಕಾಣಿಸುವವರು. ಇನ್ನೊಂದು ಅಲ್ಲಿ ಇಲ್ಲದಿರುವವರು. ವಿಕಿಪೀಡಿಯದಲ್ಲಿ ಇಲ್ಲದೇ ಇರುವ ವಿಕಾಸ್ (ಯಶವಂತ್) ತನ್ನ ಕಥೆ ಹೇಳಲು ಈ ಚಿತ್ರದ ಮೂಲಕ ಬರುತ್ತಿದ್ದಾನೆ. ಯಶವಂತ್ ಅದ್ಭುತವಾಗಿ ನಟಿಸಿದ್ದು, ಇವರಿಗೆ ಜೋಡಿಯಾಗಿ ಆಶಿಕಾ ಸೋಮಶೇಖರ್ ಕಾಣಿಸಿಕೊಂಡಿದ್ದಾರೆ' ಎಂದರು ನಿರ್ದೇಶಕ ಸೋಮು ಹೊಯ್ಸಳ.

ಟ್ರೇಲರ್ ಬಗ್ಗೆ ಮಾತನಾಡಿದ ಯಶವಂತ್, 'ಪ್ರಪಂಚದಲ್ಲಿ ಎರಡು ರೀತಿ ಜನ ಅಲ್ಲ. ಮೂರು ರೀತಿ ಜನ ಇರ್ತಾರೆ. ಆ ಮೂರನೆಯವರೇ ನಾವು. 'ವಿಕಿಪೀಡಿಯ'ದಲ್ಲಿ ತಮ್ಮ ಹೆಸರು ಬರಲು ಹೊರಟವರ ಗುಂಪಿಗೆ ನಾನು ನನ್ನ ತಂಡ ಸೇರುತ್ತದೆ ಅನಿಸುತ್ತದೆ. ಮೂರು ವರ್ಷ ಕಷ್ಟಪಟ್ಟು ಸಿನಿಮಾ ಮಾಡಿದ್ದೇವೆ' ಬೆಂಬಲ ನೀಡಿ ಎಂದರು.

ಟ್ರೇಲರ್ ಮೂಲಕ ನಿರೀಕ್ಷೆ ಹೆಚ್ಚಿಸಿರುವ ವಿಕಿಪೀಡಿಯ ಸಿನಿಮಾಗೆ ಸೋಮು ಹೊಯ್ಸಳ ಆ್ಯಕ್ಷನ್ ಕಟ್ ಹೇಳಿದ್ದಾರೆ. ಇದು ಇವರಿಗೆ ಚೊಚ್ಚಲ ಸಿನಿಮಾ. ಡ್ರಾಮಾ, ಎಮೋಷನಲ್, ಲವ್, ಸೆಂಟಿಮೆಂಟ್ ಎಲ್ಲದರ ಮಿಶ್ರಣ ವಿಕಿಪೀಡಿಯ ಚಿತ್ರಕ್ಕೆ ಚಿದಾನಂದ್ ಎಚ್.ಕೆ. ಅವರ ಛಾಯಾಗ್ರಹಣ, ರಾಕೇಶ್ ಅವರ ಸಂಗೀತ, ರವಿಚಂದ್ರನ್ ಸಿ. ಸಂಕಲನವಿದೆ. ರಫ್ ಕಟ್ ಪ್ರೊಡಕ್ಷನ್ ಅಡಿ ನಿರ್ಮಾಣವಾಗಿರುವ ಸಿನಿಮಾಗೆ ಯು/ಎ ಪ್ರಮಾಣಪತ್ರ ಸಿಕ್ಕಿದೆ.

ಸಿನಿ ಮಾತು

'ಲವ್ 360' ಟ್ರೇಲರ್ ಬಿಡುಗಡೆ ಮಾಡಿದ ಶಿವಣ್ಣ



ಶಶಾಂಕ್ ನಿರ್ದೇಶನದ 'ಲವ್ 360' ಚಿತ್ರದ ಟ್ರೇಲರ್‌ನ್ನು ನಟ ಶಿವರಾಜಕುಮಾರ್ ಅವರು ಬಿಡುಗಡೆ ಮಾಡಿದರು. ಚಿತ್ರ ಆಗಸ್ಟ್ 19ರಂದು ರಾಜ್ಯದಾದ್ಯಂತ ತೆರೆ ಕಾಣುತ್ತಿದೆ. ಪ್ರವೀಣ್ ಈ ಚಿತ್ರದ ನಾಯಕ, ರಚನಾ ಇಂದರ್ ನಾಯಕಿ.

ಶಶಾಂಕ್ ನನ್ನ ಅಚ್ಚುಮೆಚ್ಚಿನ ನಿರ್ದೇಶಕರಲ್ಲಿ ಒಬ್ಬರು. ಅವರ ನಿರ್ದೇಶನದಲ್ಲಿ ನಾನು ನಟಿಸಬೇಕಿತ್ತು. ಕಾರಣಾಂತರದಿಂದ ಆಗಿಲ್ಲ. ಮುಂದೆ ನಮ್ಮಿಬ್ಬರ ಕಾಂಬಿನೇಶನ್‌ನಲ್ಲಿ ಚಿತ್ರ ಬರುತ್ತದೆ. 'ಲವ್ 360' ಚಿತ್ರದ ಟ್ರೇಲರ್ ಚೆನ್ನಾಗಿದೆ. ಅರ್ಜುನ್ ಜನ್ಯ ಸಂಗೀತ ನೀಡಿರುವ ಈ ಚಿತ್ರದ ಹಾಡುಗಳು ಸುಮಧುರವಾಗಿದೆ. ಅದರಲ್ಲೂ ಸಿದ್ ಶ್ರೀರಾಮ್ ಹಾಡಿರುವ 'ಜಗವೇ ನೀನು ಗೆಳತಿಯೆ' ಹಾಡಂತೂ ನನಗೆ ಬಹಳ ಇಷ್ಟ. ನಾಯಕ, ನಾಯಕಿ ಎಲ್ಲರೂ ಚೆನ್ನಾಗಿ ಅಭಿನಯಿಸಿದ್ದಾರೆ' ಎಂದರು ನಟ ಶಿವರಾಜಕುಮಾರ್.

'ಕೆ.ಆರ್.ಜಿ ಸ್ಟುಡಿಯೋಸ್ ಸಂಸ್ಥೆಯವರು ನಮ್ಮ ಚಿತ್ರವನ್ನು ವಿತರಿಸುತ್ತಿದ್ದಾರೆ. ನೂರೈವತ್ತಕ್ಕೂ ಅಧಿಕ ಚಿತ್ರಮಂದಿರಗಳಲ್ಲಿ ಚಿತ್ರ ಬಿಡುಗಡೆಯಾಗುತ್ತಿದೆ' ಎಂದರು ನಿರ್ದೇಶಕ ಶಶಾಂಕ್.

ರೈಲ್ವೆ ಪರೀಕ್ಷೆಗೆ 'ವಿಐ' ಉಚಿತ ಆ್ಯಪ್





ಹೊಸತು

ರೈಲ್ವೆ ಗ್ರೂಪ್ ಡಿ ಪರೀಕ್ಷೆಗೆ ನೆರವಾಗಲು ವೊಡಾಫೋನ್–ಐಡಿಯಾ ಕಂಪನಿಯು ಉಚಿತ 'Vi ಆ್ಯಪ್' ಅನ್ನು ಸಿದ್ಧಪಡಿಸಿದೆ. ಈ ಆ್ಯಪ್‌ನ ಮೂಲಕ ಅಭ್ಯರ್ಥಿಗಳು ಉಚಿತ ಪರೀಕ್ಷಾ ಸಾಮಗ್ರಿಗಳನ್ನು ಪಡೆಯಬಹುದಾಗಿದೆ.

2022ರ ಆಗಸ್ಟ್ 17ರಿಂದ ಆರಂಭವಾಗುವ ರೈಲ್ವೆ ಡಿ ಗ್ರೂಪ್ ಪರೀಕ್ಷೆಗಳಿಗೆ ಸಿದ್ಧತಾ ಪರೀಕ್ಷಾ ಸಾಮಗ್ರಿಗಳನ್ನು (ಸ್ಟಡಿ ಮೆಟೀರಿಯಲ್) Vi ಆ್ಯಪ್ ಒದಗಿಸುತ್ತಿದೆ. ಉದ್ಯೋಗದ ಆಕಾಂಕ್ಷಿಗಳು ಈ ಮೂಲಕ ಪರೀಕ್ಷೆಗೆ ಸಿದ್ಧತೆ ಮಾಡಿಕೊಳ್ಳಬಹುದಾಗಿದೆ.

ಈ ಆ್ಯಪ್‌ನಲ್ಲಿ ರೈಲ್ವೆ ಗ್ರೂಪ್ ಡಿ ಪರೀಕ್ಷಾ ಸರಣಿಗಳು ಲಭ್ಯವಿದೆ. ಟ್ರ್ಯಾಕ್ ನಿರ್ವಹಣೆದಾರರು(ಗ್ರೇಡ್-4), ಸಹಾಯಕರು, ಲೆವೆಲ್-1 ಹುದ್ದೆಗಳನ್ನು ಒಳಗೊಂಡಂತೆ ಒಂದು ಲಕ್ಷಕ್ಕೂ ಅಧಿಕ ಉದ್ಯೋಗಗಳ ನೇಮಕಾತಿಗೆ ತಯಾರಾಗಲು Vi ಆ್ಯಪ್ ಸಹಾಯ ಮಾಡಲಿದೆ.

Vi ಆ್ಯಪ್‌ನಲ್ಲಿ ಪರೀಕ್ಷಾ ಸಾಮಾಗ್ರಿಗಳನ್ನು ಪಡೆಯಲು ಮಾರ್ಗಸೂಚಿ

- 1ನೇ ಹಂತ: ನಿಮ್ಮ Vi ಸಂಖ್ಯೆ ಮೂಲಕ Vi ಆ್ಯಪ್‌ಗೆ ಲಾಗಿನ್ ಆಗಿ
- 2ನೇ ಹಂತ: `Vi Jobs and Education' ಆಯ್ಕೆ ಮೇಲೆ ಕ್ಲಿಕ್ ಮಾಡಿ.
- 3ನೇ ಹಂತ: 'Govt Jobs' ಆಯ್ಕೆ ಮೇಲೆ ಕ್ಲಿಕ್ಕಿಸಿ
- 4ನೇ ಹಂತ: ನಿಮ್ಮ ಪ್ರೊಫೈಲ್ ವಿವರಗಳನ್ನು ಭರ್ತಿ ಮಾಡಿ 'Railways' ಅನ್ನು ಆಯ್ಕೆ ಮಾಡಿ.
- 5ನೇ ಹಂತ: ನಿಮಗೆ ಅಗತ್ಯವಿರುವ ರೈಲ್ವೆ ಕೋರ್ಸ್‌ಗಳನ್ನು ಆಯ್ಕೆ ಮಾಡಿ.

ಸದ್ದು ಮಾಡುತ್ತಿದೆ 'ಧಮ್' ಟ್ರೇಲರ್



ಕಳೆದ ಕೆಲವು ವರ್ಷಗಳ ಹಿಂದೆ ಕಿಚ್ಚ ಸುದೀಪ್ ಅಭಿನಯದಲ್ಲಿ 'ಧಮ್' ಎನ್ನುವ ಚಿತ್ರ ಬಂದಿತ್ತು. ಈಗ ಮತ್ತೆ ಅದೇ ಹೆಸರಿನ ಚಿತ್ರ ತೆರೆಗೆ ಬರಲು ಸಿದ್ಧವಾಗಿದೆ. ಕನ್ನಡದ ಹುಡುಗ ಶ್ರೀಜಿತ್ ನಾಯಕನಾಗಿ ನಟಿಸಿರುವ ಈ ಚಿತ್ರವನ್ನು ವಿ.ಆರ್. ಆರ್. ನಿರ್ದೇಶಿಸಿದ್ದಾರೆ.

ಇತ್ತೀಚೆಗೆ ಈ ಚಿತ್ರದ ಟ್ರೇಲರ್ ಹಾಗೂ ಹಾಡುಗಳ ಬಿಡುಗಡೆ ನಡೆಯಿತು.

'ನಾನು ಬಾಲನಟನಾಗಿ 'ಹಾತಿ ಮೇರೆ ಸಾತಿ' ಸೇರಿದಂತೆ ಸುಮಾರು ನೂರೈವತ್ತಕ್ಕೂ ಅಧಿಕ ಚಿತ್ರಗಳಲ್ಲಿ ಅಭಿನಯಿಸಿದ್ದೇನೆ. ಹದಿನಾರು ಚಿತ್ರಗಳನ್ನು ನಿರ್ದೇಶಿಸಿದ್ದೇನೆ. ನನ್ನ ತಾಯಿ ಮೈಸೂರಿನವರು. ಅವರಿಗೆ ನಾನು ಕನ್ನಡ ಚಿತ್ರವೊಂದನ್ನು ನಿರ್ದೇಶಿಸಬೇಕೆಂಬ ಆಸೆಯಿತ್ತು. ಅದು ಈಗ ಈಡೇರಿದೆ. ಈ ಚಿತ್ರ ಕನ್ನಡ ಹಾಗೂ ತಮಿಳಿನಲ್ಲಿ ನಿರ್ಮಾಣವಾಗಿದೆ' ಎಂದರು.

'ಈ ಚಿತ್ರದ ನಾಯಕರಾಗಿ ಸಂಚಾರಿ ವಿಜಯ್ ಮಾಡಬೇಕಿತ್ತು. ಕಾರಣಾಂತರದಿಂದ ಅದು ಆಗಲಿಲ್ಲ. ನಂತರ ಶ್ರೀಜಿತ್ ಆಯ್ಕೆಯಾದರು. ಎರೀನ್ ಅಧಿಕಾರಿ ಈ ಚಿತ್ರದ ನಾಯಕಿ. ಶಯ್ಯಾಜಿ ಶಿಂಧೆ, ರವಿಕಾಳೆ, ನಾಗೇಶ್ವರ ರಾವ್, ಗುರುಚಂದ್ರನ್ ತಾರಾಬಳಗದಲ್ಲಿದ್ದಾರೆ. ರಿಹಾನ್ ಅಹಮದ್ ಈ ಚಿತ್ರವನ್ನು ನಿರ್ಮಿಸಿದ್ದಾರೆ. ಇಳಯರಾಜ ಅವರ ಬಳಿ ಕಾರ್ಯ ನಿರ್ವಹಿಸಿರುವ ಜೀವ ವರ್ಷಿಣಿ ಈ ಚಿತ್ರಕ್ಕೆ ಸಂಗೀತ ನೀಡಿದ್ದಾರೆ. ಸದ್ಯದಲ್ಲೇ ಚಿತ್ರವನ್ನು ಬಿಡುಗಡೆ ಮಾಡುತ್ತೇವೆ' ಎಂದರು ನಿರ್ದೇಶಕ ವಿ.ಆರ್.ಆರ್.

'ನನ್ನ ಸ್ನೇಹಿತನ ಮೂಲಕ ನಿರ್ದೇಶಕರ ಪರಿಚಯವಾಯಿತು. ವಿ.ಆರ್.ಆರ್. ಅವರಂತಹ ನಿರ್ದೇಶಕರ ಚಿತ್ರದಲ್ಲಿ ಅಭಿನಯಿಸಿದ್ದು ಸಂತೋಷವಾಗಿದೆ. ನಾನು ಈ ಹಿಂದೆ 'ರಂಗ್ ಬಿ ರಂಗಿ' ಚಿತ್ರದಲ್ಲಿ ನಾಯಕನಾಗಿ ನಟಿಸಿದ್ದೆ. ಇದು ಎರಡನೇ ಚಿತ್ರ. ಆ್ಯಕ್ಷನ್, ಥ್ರಿಲ್ಲರ್, ಸೆಂಟಿಮೆಂಟ್ ಎಲ್ಲಾ ಅಂಶಗಳು ನಮ್ಮ ಚಿತ್ರದಲ್ಲಿದೆ. ಸದ್ಯದಲ್ಲೇ ಬಿಡುಗಡೆಯಾಗಲಿದೆ. ನಿಮ್ಮೆಲ್ಲರ ಪ್ರೋತ್ಸಾಹವಿರಲಿ' ಎಂದರು ನಾಯಕ ಶ್ರೀಜಿತ್.

'ನಾನು ಮೂಲತಃ ಬಂಗಾಳದವಳು. ಬಂಗಾಳಿ, ತೆಲುಗು, ಹಿಂದಿ ಚಿತ್ರಗಳಲ್ಲಿ ನಟಿಸಿದ್ದೇನೆ. ಕನ್ನಡದಲ್ಲಿ ಮೊದಲ ಚಿತ್ರ' ಎಂದರು ನಾಯಕಿ ಎರೀನ್ ಅಧಿಕಾರಿ.

ಚಿತ್ರದಲ್ಲಿ ನಟಿಸಿರುವ ನಾಗೇಶ್ವರರಾವ್, ಸಂಗೀತ ನೀಡಿರುವ ಜೀವವರ್ಷಿಣಿ 'ಧಮ್' ಚಿತ್ರದ ಬಗ್ಗೆ ಮಾತನಾಡಿದರು.